
ಮಾರ್ಚ್ ೬, ೧೯೭೫
ಕಸ್ತೂರಿ
ಬೆಲೆ: ರೂ. ೧-೨೫

Statement about ownership and other particulars about newspaper **Kasturi**, *to be published in the first issue every year after the last day of February.*

FORM IV

(See Rule 8)

1. Place of publication	..	HUBLI
2. Periodicity of its publication	:	Monthly
3. Printer's name	..	M. H. Belgaumkar
Whether citizen of India?	...	Yes
If foreigner, state the country of origin	..	—
Address	..	Karnataka Patrika (Pri) Ltd Post Box No. 30, Hubli-20
4. Publisher's name	..	M. H. Belgaumkar
Whether citizen of India?	..	Yes
If foreigner, state the country of origin	..	—
Address	..	Same as above
5. Editor's name	..	Khadri Shamanna
Whether citizen of India?	..	Yes
If foreigner, state the country of origin	..	—
Address	..	Karnataka Patrika (Pri) Ltd 2, Residency Road, Bangalore-25
6. Names and addresses of individuals who own the newspaper and partners or share-holders holding more than one percent of the total capital.	..	Sri. T. Krishanamurty Journalist. Bellary Sri. K. S. Veerbhadrappa President T. D. B. Sandur

I, M. H. Belgaumkar, hereby declare that the particulars given above are true to the best of my knowledge and belief.

Hubli
Dated 1-3-1975

M. H. Belgaumkar
Signature of Publisher

ಕಸ್ತೂರಿ

ಪ್ರಕಟನೆ :
ಪ್ರತಿ ತಿಂಗಳ ೧ ನೇ ದಿನಾಂಕ

ವ್ಯವಸ್ಥಾಪಕ ಸಂಪಾದಕರು:
ರಂಗನಾಥ ದಿವಾಕರ

ಪ್ರಧಾನ ಸಂಪಾದಕರು :
ಪಾದ್ರಿ ಶಾವಣ್ಣ

ಸಹಸಂಪಾದಕರು :
ದ. ಲ. ಕೆರೂರ

ಪ್ರಕಾಶಕರು :
ಕರ್ನಾಟಕ ಪತ್ರಿಕಾ ಪ್ರೈ. ಲಿ.
ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ :
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಪುಟ :
ಅಲಂಕಾರ
ಎಂ. ಬಿ. ಪಾಟೀಲ

ಚಂದಾದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	"	ರೂ. ೨೫-೦೦
೧ ವರ್ಷ	"	ರೂ. ೧೪-೦೦
ಅರ್ಧ ವರ್ಷ	"	ರೂ. ೭-೫೦

KASTURI March 1975

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯ ಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು 'ಇದುವೆ ಜೀವ' ಮೊದಲಾದ ಚುಟುಕುಗಳನ್ನು ತಿರುಗಿ ಕಳಿಸಲು, ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವುದು. ಲೇಖಕರು ತಮ್ಮ ಲೇಖನಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವುದೊಳಿತು. ಲೇಖನಗಳು ಆಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖನ ಪ್ರಕಟವಾದರೆ, ಕಸ್ತೂರಿಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡುವುದು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ ಕಸ್ತೂರಿ ಆಯಾ ತಿಂಗಳ ೧ ನೇ ದಿನಾಂಕದೊಳಗೆ ಪ್ರಕಟವಾಗುವುದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲುಪುವುದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರ್ ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಸಹಚಿಂತನ

‘ಕಸ್ತೂರಿ’ ನಾಮಕರಣ

ಲೋಕ ಶಿಕ್ಷಣ ಟ್ರಸ್ಟಿನ ಪರವಾಗಿ ಒಂದು ಒಳ್ಳೇ ಮಾಸ ಪತ್ರಿಕೆಯನ್ನು ಹೊರಡಿಸುವದು ಗೊತ್ತಾಯಿತು. ಆಗ ‘ಸಂಯುಕ್ತ ಕರ್ನಾಟಕ’ ದಿನಪತ್ರಿಕೆ ಹಾಗೂ ‘ಕರ್ಮವೀರ’ ವಾರಪತ್ರಿಕೆ ಇವುಗಳ ವ್ಯವಸ್ಥಾಪಕ ಸಂಪಾದಕರಾದ ಹಾಗೂ ಭಾರತದ ಸಂಪಾದಕ ಜಗತ್ತಿನಲ್ಲಿ ಹೆಸರುವಾಸಿಯಾದ ಶ್ರೀ ಮೊಹರೇ ಹಣಮಂತರಾಯರು ಅದರ ಹೊಣೆಯನ್ನು ಹೊತ್ತರು. ತನ್ನದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಬರುವ ಸಾಮರ್ಥ್ಯವು ಆಯಾ ಪತ್ರಿಕೆಗೆ ಬರಬೇಕಾದರೆ ಅಂಥ ಸೃಜನಶೀಲ ಸಂಪಾದಕತ್ವವು ಅದಕ್ಕೆ ಬೇಕಾಗುವದು. ಶ್ರೀ ಪಾ. ವೆಂ. ಆಚಾರ್ಯರು ಆ ಮಾಸಪತ್ರಿಕೆಗೆ ದೊರೆತದ್ದು ಒಂದು ಮಹತ್ವದ ಘಟನೆ. ಈಗ ಸಿಂಹಾವಲೋಕನ ಮಾಡಿದರೆ ಈ ಮಾತು ಮನದಟ್ಟಾಗುವದು.

ಇನ್ನು ಈ ದಿನಗಳಲ್ಲಿ ಯಾವದೇ ಪತ್ರಿಕೆ ಲೋಕಪ್ರಿಯವಾಗಬೇಕಾದರೆ ತಜ್ಞ ಮಾರ್ಮಿಕ ಲೇಖಕರು ಅವಶ್ಯವಿರುವಷ್ಟು ಅಂದವಾದ ಮುದ್ರಣವೂ ಅವಶ್ಯ. ಆ ಕೆಲಸಕ್ಕೆ ಆಗ ಮುದ್ರಣ ವ್ಯವಸ್ಥಾಪಕರಾದ ಶ್ರೀ ಜಠಾರ ಅವರು ಒಳ್ಳೇ ಉತ್ಸಾಹದಿಂದ ಮುಂದರಿದರು.

ಇನ್ನು ಆ ಮಾಸಪತ್ರಿಕೆಯ ಹೆಸರಿನ ವಿಷಯ. ಮೊದಲು ಶ್ರೀ ಜಠಾರ ಅವರೇ ‘ಪರಾಗ’ ಎಂಬ ಹೆಸರನ್ನು ಸೂಚಿಸಿದರು. ಅದನ್ನೇ ಎಲ್ಲರೂ ಒಪ್ಪಿಕೊಂಡರು. ಇಷ್ಟೇ ಅಲ್ಲ, ಆ ಹೆಸರಿನ ಪ್ರಕಟನೆ ಕೂಡ ‘ಸಂಯುಕ್ತ ಕರ್ನಾಟಕ’ದಲ್ಲಿ ಪ್ರಸಿದ್ಧವಾಯಿತು. ಆಗ ನಾನು ಟ್ರಸ್ಟಿನ ಧರ್ಮದರ್ಶಿಯೂ, ಬಿಹಾರದ ರಾಜ್ಯಪಾಲನೂ ಆಗಿ ಪಾಟನಾದಲ್ಲಿ ಇರುತ್ತಿದ್ದೆ. ‘ಪರಾಗ’ ಎಂಬ ಹೆಸರು ಸ್ವಲ್ಪ ‘ಶಿಷ್ಟ’ (ಎಲಾಯಿಟಿಸ್ಟ್) ವಾದುದು. ಅದಕ್ಕಿಂತ ಒಮ್ಮೆಲೇ ಅರ್ಥವಾಗುವ ಹಾಗೂ ಲೋಕಪ್ರಿಯವಾದ ಹೆಸರು ಅವಶ್ಯ ಎಂದು ಅವರಿಗೆ ಎನಿಸಿತು. ಅವರು ಕೂಡಲೇ ತಂತಿಯ ಮೂಲಕ ಹೊಸ ಮಾಸ ಪತ್ರಿಕೆಗೆ ‘ಕಸ್ತೂರಿ’ ಎಂಬ ನಾಮಕರಣ ಹೆಚ್ಚು ಸಲ್ಲುವದು ಎಂದು ಸೂಚಿಸಿದರು. ಆಗ ಶ್ರೀ ಗೋರೇಬಿದನೂರ ಅನಂದತೀರ್ಥ ಆಚಾರ್ಯರೂ ಅಕಸ್ಮಾತ್ತಾಗಿ ಪಾಟನಾದಲ್ಲಿದ್ದರು. ಅವರಿಗೆ ಆ ‘ಕಸ್ತೂರಿ’ ಎಂಬ ಹೆಸರು ಹಿಡಿಯಿತು. ಆ ತಂತಿಯ ಮೂಲಕ ಬಂದ ಹೆಸರನ್ನು ಶ್ರೀ ಮೊಹರೇ, ಮುಂತಾದವರೆಲ್ಲರೂ ಒಪ್ಪಿಕೊಂಡರು!

ಅದೇ ಈಗ ‘ಕಸ್ತೂರಿ’ ಮಾಸ ಪತ್ರಿಕೆ! ಶ್ರೀ ಮೊಹರೇ ಇವರ ಸೇವೆ, ಶ್ರೀ ಪಾ. ವೆಂ ಆಚಾರ್ಯರ ನಿರ್ಮಾಣ ಶಕ್ತಿ, ಪ್ರಾರಂಭದಲ್ಲಿ ಅದರ ಮುದ್ರಣದ ಬಗ್ಗೆ ಶ್ರೀ ಜಠಾರ ಇವರ ಆಸಕ್ತಿ ಇವೆಲ್ಲವೂ ಈ ಅನುಪಮ ಮಾಸ ಪತ್ರಿಕೆಯ ಜೀವನದಲ್ಲಿ ನೆನೆಸಿಕೊಳ್ಳುವ ಮಾತುಗಳು. ಆ ಪತ್ರಿಕೆಯಿಂದ ಇನ್ನು ಅಧಿಕವಾದ ಸೇವೆ ಸಲ್ಲುತ್ತ ಹೋಗಲಿ ಎಂದೇ ಎಲ್ಲ ಹಿತಚಿಂತಕರು ಹರಕೆ ಹಾಕುವದೂ ಸಹಜ. ಕನ್ನಡ ಸರಸ್ವತಿ ಆ ಹರಕೆಯನ್ನು ಪೂರೈಸಬಲ್ಲಳಲ್ಲವೇ?

ಬೆಂಗಳೂರು — -ರಂಗನಾಥ ದಿವಾಕರ

“ಚಿರಋಣಿ”

‘ಕಸ್ತೂರಿ’ ಫೆಬ್ರುವರಿ ಸಂಚಿಕೆಯಲ್ಲಿ ಸಹಸಂಪಾದಕತ್ವದಿಂದ ಇದೀಗ ನಿವೃತ್ತನಾದ ನನ್ನ ಬಗ್ಗೆ ತುಂಬಾ ಉದಾರವಾದ ಮಾತುಗಳನ್ನಾಡಿದಕ್ಕೆ ನಾನು ಚಿರಋಣಿ. ಈ ಸಂದರ್ಭದಲ್ಲಿ ನಾನು ‘ಕಸ್ತೂರಿ’ಯಲ್ಲಿ ನನ್ನ ಸಹೋದ್ಯೋಗಿಯಾಗಿ ಬಹಳ ವರ್ಷ ದುಡಿದ ದಿವಂಗತ ಜಿ. ಜಿ. ಹೆಗಡೆಯವರ ಸಹಾಯವನ್ನು ಸ್ಮರಿಸದೆ ಇರಲಾರೆ. ‘ಕಸ್ತೂರಿ’ಯ ಪ್ರಾರಂಭಿಕ ವರ್ಷಗಳಲ್ಲಿ ಅವರು ನೀಡಿದ ಸಹಕಾರ, ಲೇಖನಗಳನ್ನು ಆರಿಸುವಲ್ಲಿ ಅವರ ಚಾತುರ್ಯ ಇವು ಬಹುಮಟ್ಟಿಗೆ ‘ಕಸ್ತೂರಿ’ಯನ್ನು ಜನಪ್ರಿಯಗೊಳಿಸಲು ಕಾರಣವಾದವು.

ಹುಬ್ಬಳ್ಳಿ — -ಪಾ. ವೆಂ. ಆಚಾರ್ಯ

ನಮ್ಮದು ಏಕೆ ಪ್ರಜಾಪ್ರಭುತ್ವವಲ್ಲ?

ಫೆಬ್ರುವರಿ ತಿಂಗಳ ‘ಕಸ್ತೂರಿ’ಯಲ್ಲಿ ಶ್ರೀ ಪಿ ವಿ. ಜೋಶಿಯವರ ‘ನಮ್ಮದು ಏಕೆ ಪ್ರಜಾ ಪ್ರಭುತ್ವವಲ್ಲ??’ ಎಂಬ ದೀರ್ಘ ಲೇಖನವು ಶ್ರೀ ಬರಗೂರು ರಾಮಚಂದ್ರಪ್ಪನವರ ಲೇಖನದ ಸತ್ಯಾಸತ್ಯತೆಗಳ ವಿಮರ್ಶೆ ಅಲ್ಲದಿದ್ದರೂ ಲೇಖನದ ಸೈದ್ಧಾಂತಿಕ ಹಿನ್ನೆಲೆಯನ್ನು ಸಾಕಷ್ಟು ಸಾಕ್ಷ್ಯಾಧಾರಗಳಿಂದ ಟೀಕಿಸುವ ಪ್ರಯತ್ನವಾಗಿರುವುದು ಗಮನಾರ್ಹ.

ಪಿ. ವಿ. ಜೋಶಿಯವರ ಅಭಿಪ್ರಾಯದಂತೆ ಧರ್ಮದ ಸಮಾಧಿಯ ಮೇಲೆ ಕಟ್ಟುವ ಸಮತಾವಾದವು ಕೇವಲ (ಹೊಟ್ಟೆಕಿಚ್ಚಿನ) ಆರ್ಥಿಕ ಸಿದ್ಧಾಂತವೇ ಹೊರತು ಮಾನವೀಯವಲ್ಲ ಎಂಬುದು ಸರ್ವಸಮ್ಮತವೆ. ಆರ್ಥಿಕವಾಗಿ ಬಲಹೀನವಾಗಿರುವ ಬಹು ಸಂಖ್ಯಾತ ಜನರನ್ನು ಕೆಲವೇ ಬಲಶಾಲಿಗಳ ಕೃಪಾ ಕಟಾಕ್ಷಕ್ಕೆ ಗುರಿಮಾಡುವ ಹಳೆಯ ಸಿದ್ಧಾಂತವನ್ನು ನಾವು ಒಪ್ಪುವುದಾದರೇ ಪ್ರಜಾಪ್ರಭುತ್ವಕ್ಕೂ ಶ್ರೀಮಂತ ಪ್ರಭುತ್ವಕ್ಕೂ ವ್ಯತ್ಯಾಸವೇ ಇರುವುದಿಲ್ಲ. ಜನರ ಮತಪಡೆದು ಅಧಿಕಾರಕ್ಕೆ ಬರುವ ಸರ್ಕಾರವು ಈ ಹಿಂದಿನ ಊಳಿಗಮಾನ್ಯ ಪದ್ಧತಿಯನ್ನು ತಪ್ಪಿಸಲು ಅಸಮರ್ಥವಾದಲ್ಲಿ ಅಂತಹ ಪ್ರಜಾಪ್ರಭುತ್ವ ಇರುವುದಾದರೂ ಏತಕ್ಕೆ? ಸಾಮಾಜಿಕ ಪರಿವರ್ತನೆಯನ್ನು ತರುವ ಸಾಧನವಾಗಿ ಪ್ರಜಾಪ್ರಭುತ್ವ ಸರ್ಕಾರಗಳು ಕೆಲಸ ಮಾಡಬೇಕೆ ಹೊರತು ಕೇವಲ ‘ಯಥಾ ಸ್ಥಿತಿ’ (Statusque) ಯನ್ನು ಕಾಯ್ದುಕೊಂಡು ಹೋಗುವ ಪ್ರತಿಗಾಮಿ ಪ್ರಜಾತಂತ್ರದಿಂದ ಏನೂ ಪ್ರಯೋಜನವಾಗಲಾರದು.

ಇಂದು ಅಧಿಕಾರದಲ್ಲಿರುವವರು ಹಣ ಗಳಿಸಲು ಸಾಧ್ಯವಾಗಿರುವುದು ಇಂತಹ ಕೇವಲ ತೋರಿಕೆಯ ಪ್ರಜಾ

ತಂತ್ರ ಮತ್ತು ಸಮಾಜವಾದಗಳಿಂದಾಗಿಯೇ ಹೊರತು ಆದರ ನಿಜವಾದ ಅರ್ಥದಲ್ಲಿ ಅಲ್ಲ.

ಮತ್ತೊಂದು ಸಂಗತಿ ಎಂದರೆ, ಜಾತಿ ಪದ್ಧತಿಯು ಒಂದು ದೈವ ನಿಯಾಮಕವೆಂದು ತಿಳಿಯುವ ಮಾನ್ಯ ಲೇಖಕರ ಅಭಿಪ್ರಾಯವು ತೀರಾ ವಿವಾದಾಸ್ಪದವಾಗಿದೆ. "ಚಾತುರ್ವರ್ಣ್ಯಂ ಮಯಾಸೃಷ್ಟಂ'' ಎಂದ ಭಗವಂತನು "ಗುಣ ಕರ್ಮ ವಿಭಾಗಶಃ'' ಎಂಬುದನ್ನು ಸೇರಿಸಲು ಮರೆಯಲಿಲ್ಲವೆಂಬುದು ಉಲ್ಲೇಖನೀಯವಲ್ಲವೇ? ಲೇಖಕರು ಹೇಳುವಂತೆ ಸಮಾಜ ಸುಧಾರಕರೂ, ಸಂತರೂ, ವಿಜ್ಞಾನಿಗಳೂ ಎಲ್ಲಾ ಉತ್ತಮ ಜಾತಿಯಲ್ಲೇ ಹುಟ್ಟುತ್ತಾರೆ ಎಂಬುದು ಒಂದು ಸಮಾಜ ರಚನೆಯ ದೋಷಯುಕ್ತ ಪರಂಪರೆಯೇ ಹೊರತು ಅಪೇಕ್ಷಿತ ಮುಕ್ತ ಸಮಾಜದ ವಸ್ತುಸ್ಥಿತಿಯಲ್ಲ. ಕೆಳ ಜಾತಿಯವರಲ್ಲಿ ಹೆಚ್ಚಿನ ಮೇಧಾವಿಗಳು ಏಕೆ ಸಂಭವಿಸಿಲ್ಲ ಅಥವಾ ಸಂಭವಿಸುತ್ತಿಲ್ಲ ಎಂಬುದಕ್ಕೆ ಆ ಜಾತಿಗಳವರಿಗೆ ನೀಡಿದ ಸೀಮಿತ ಅವಕಾಶ ಮತ್ತು ತಡೆ ಹಿಡಿಯಲಾಗುತ್ತಿರುವ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ-ಇವುಗಳೇ ಕಾರಣವಲ್ಲವೇ? ಆ ಸ್ಥಿತಿಯಲ್ಲೂ ಡಾ. ಅಂಬೇಡ್ಕರ್‌ರಂತಹ ಮೇಧಾವಿಗಳು ಅವರಲ್ಲಿ ಸಂಭವಿಸಬಹುದಾದರೆ ಕೀಳು ಜಾತಿಯವರಲ್ಲಿ ಹುಟ್ಟುವುದು ಪೂರ್ವ ಜನ್ಮದ ಪಾಪದ ಫಲ ಎಂದು ಭಾವಿಸುವುದು ಎಷ್ಟು ಹಾಸ್ಯಾಸ್ಪದ?

ಲೇಖಕರು ತಮ್ಮ ಲೇಖನದ ಹಲವೆಡೆ ತಮ್ಮಲ್ಲಿ ರೂಢಮೂಲವಾಗಿ ಬಂದ ನಂಬಿಕೆಗಳನ್ನೇ ಸರಿ ಎಂದು ನಂಬಿ ಪ್ರತಿಪಾದಿಸಲು ಹೋಗಿ ಒಬ್ಬ ಪ್ರತಿಗಾಮಿ ಹಾಗೂ ಸಂಪ್ರದಾಯವಾದಿಯಾಗಿ ತಮ್ಮನ್ನು ಅಭಿವ್ಯಕ್ತಗೊಳಿಸಿಕೊಂಡಿರುವುದು ವಿಷಾದನೀಯ!

ಭದ್ರಾವತಿ -ಕೆ. ಎಸ್. ಕೃಷ್ಣಮೂರ್ತಿ

ಫೆಬ್ರವರಿ ೭೫ ರ 'ಕಸ್ತೂರಿ'ಯಲ್ಲಿ ಶ್ರೀ ಪಿ. ವಿ ಜೋಶಿಯವರು ಪ್ರಸ್ತುತಪಡಿಸಿದ ಪ್ರಜಾಪ್ರಭುತ್ವದ ಬಗೆಗಿನ ಲೇಖನ ಶ್ರೀ ಬರಗೂರು ರಾಮಚಂದ್ರಪ್ಪನವರ ವಿಚಾರಧಾರೆಗೆ ['ಕಸ್ತೂರಿ': ಡಿಸೆಂಬರ್, ೭೪] ವ್ಯತಿರಿಕ್ತವಾಗಿದ್ದು, ಅವರ ಸಂದೇಹಗಳಿಗೆ ಸಮಾಧಾನ ಹೇಳುತ್ತದೆ.

ಧರ್ಮದಿಂದ ಬಾಳಿದವನಿಗೆ ಸ್ವರ್ಗ, ಮೋಕ್ಷಗಳು ಸಿಗುವುವೋ ಇಲ್ಲವೋ ಯಾರೂ ಕಂಡಿಲ್ಲ; ಆದರೆ. ಇಲ್ಲಿಯೇ ತನ್ನ ನೆರೆಯವರಿಗೆ ಬೇಕಾದವರಾಗಿ ಸಮಾಧಾನದ ಬಾಳು ನಡೆಸುವುದು ಕಾಣುತ್ತದೆ ಎನ್ನುವ ಶ್ರೀ ಜೋಶಿಯವರ ವಾದ ಇಂದು ಬಹುಮಟ್ಟಿಗೆ ಒಗ್ಗುವುದಿಲ್ಲ. ಲಂಚ, ಮೋಸ, ರುಷುವತ್ತು, ಭ್ರಷ್ಟಾಚಾರಗಳ ಮೂಟೆಯಾದ ಈ ರಾಷ್ಟ್ರದಲ್ಲಿ ಸತ್ಯ, ನ್ಯಾಯ ಧರ್ಮಗಳಿಗೆ ಸ್ಥಾನವೆಲ್ಲಿ? ರಕ್ತ ದಾನ ಮಾಡಿದರೆ, 'ರಕ್ತದ ಒತ್ತಡ ಹೆಚ್ಚಾಗಿತ್ತು, ಅದನ್ನು ಕಳೆದುಕೊಂಡ' ಎನ್ನುವ ಮೂರ್ಖರ ಕಾಲ ಇದು. 'ಹರಿಶ್ಚಂದ್ರ ನಾಟಕ' ನೋಡಿದ ಮೇಲೆ, ಅದರ ನೀತಿ ಏನು?- ಎಂದು ಕೇಳಿದರಂತೆ. 'ಸತ್ಯ ಹೇಳಿದವನಿಗೆ ಸುಡುಗಾಡೇ ಗತಿ' ಎಂದರಂತೆ ನಮ್ಮ ಕೈಲಾಸಂ.

ಶ್ರೀ ಜೋಶಿಯವರೆನ್ನುವಂತೆ ಚುನಾವಣೆಯ ಬಗೆಗೆ ನಮ್ಮ ಜನರ ನೀತಿ ಬದಲಾಗಬೇಕು. ಲಂಚ, ಋಷು ವತ್ತು, ಭ್ರಷ್ಟಾಚಾರಗಳಿಗೆ ಚುನಾವಣೆಯಲ್ಲಿ ಅವಕಾಶ ಇರಕೂಡದು.

ಕೂಡ್ಲಿಗಿ -ಯು. ಅನಂತೇಶರಾವ

ಮಾತಂಗಿ

ಜನವರಿ ೭೫, ರ ಸಂಚಿಕೆಯಲ್ಲಿ, ಪುಸ್ತಕ ವಿಭಾಗದ 'ಮಾತಂಗಿ' ಕಥಾ ಚೌಕಟ್ಟನಲ್ಲಿ ಒಳ್ಳೇ ಸಾಧನೆಯೆಂದು, ಎಸ್. ಎಲ್. ಭೈರಪ್ಪನವರ 'ದಾಟು' ಕಾದಂಬರಿಯನ್ನು ಕುಶಲತೆಯಿಂದ ಕಸುವಿನ ಶೈಲಿಯಿಂದ ಸಂಗ್ರಹಿಸಿದ- 'ಶ್ರೀ ಹಾ' ರವರು ಅಭಿನಂದನಾರ್ಹರು.

'ಕಾಮ' ಎಂತಹ ಆಚಾರವಂತರನ್ನು ಬಿಟ್ಟುದಲ್ಲವೆಂದು ದೃಢೀಕರಿಸಿ ನಿಲ್ಲುವ 'ವೆಂಕಟೇಶಯ್ಯ'ನವರ ಪಾತ್ರ ಬಹಳ ನವಿರಾದುದು-ಇನ್ನು ಒಳ್ಳೇ ಮೈಕಟ್ಟಿನ ಹೆಣ್ಣಾದ ಹೊಲೆಯರ 'ಮಾತಂಗಿ' ಗಂಡ ಸತ್ತದ್ದರಿಂದ 'ಕಾಮ'ದ ಹಸಿಯಲ್ಲಿಯೇ ಮೈಯೊಡ್ಡಿದವಳು. ಇತ್ತ ವೆಂಕಟೇಶಯ್ಯನವರ ಇಬ್ಬರು ಮಕ್ಕಳು-ವೆಂಕಟೇಶ, ಹಾಗೂ ಮಗಳಾದ 'ಸತ್ಯಾ' ವಿದ್ಯೆಯಲ್ಲಿ ಮುನ್ನಡೆದು, ವೆಂಕಟೇಶ ಬಿ. ಎ. ಪಾಸು ಮಾಡಿದ, ಸತ್ಯಳೋ ಎಂ ಎ. ಪಾಸು ಮಾಡಿ ಅಧ್ಯಾಪಕಿಯಾದಳು,.. ಆಚಾರವಂತ ವೆಂಕಟೇಶಯ್ಯ, ಹೊಲೆಯರ ಮಾತಂಗಿ ಇವರಿಬ್ಬರ ಲೈಂಗಿಕ ಸಂಗಮ ಮಾತಂಗಿಯ ಹೊಟ್ಟೆಯಲ್ಲಿ ಬಸುರಾಗಿ ಸಮಾಜಕ್ಕೆ ಹೆದರಿದ ಹೆಣ್ಣು ಮಾತಂಗಿ ಇದ್ದ ಹಳ್ಳಿಯಿಂದ ಅಗಲಿದಳು. ಅತ್ತ ಕಡೆ ಅಧ್ಯಾಪಕಿಯಾಗಿದ್ದ ಸತ್ಯಳು ಸಮಾಜದ ಜಾತಿ ಭೇದಗಳನ್ನು ಅನುಕರಿಸದೆ ಬ್ರಾಹ್ಮಣಿಕ ಕರ್ಮಾಚರಣೆಗಳನ್ನು ತ್ಯಜಿಸಿ ಅಂತರ್ಜಾತಿ ವಿವಾಹಕ್ಕೆ ನಾಂದಿ ಹಾಡಿದ್ದಳು. ಅಂತರ್ಜಾತಿ ವಿವಾಹದ ವಸ್ತುವನ್ನೇ ಹೆಣೆದ 'ದಾಟು' ಭೈರಪ್ಪನವರ ಮಹತ್ತರ ಸಾಧನೆ, ಅದೇ ಶೈಲಿಯ ಉಸಿರಹಸಿಯಲ್ಲಿ ಸಾಧನೆಯ ಗುರಿ ಸೇರಿದ್ದಾರೆ "ಶ್ರೀ ಹಾ"ರವರು.

ಚಿತ್ರದುರ್ಗ -ರಾ. ಶ್ಯಾ. ರವೀಂದ್ರ

ಮಾದಿಗಿತ್ತಿ ಹಾರುವಗಿತ್ತಿಯೂ ಆಗಬಹುದು, ಹಾರುವಗಿತ್ತಿ ಮಾದಿಗಿತ್ತಿಯೂ ಆಗಬಹುದು; ಇದು ಆಗದೆ ಇರುವುದು ಜಿಡ್ಡು ಹಿಡಿದಿರುವ ಲೇಖಕರ ಕಲೆಯಲ್ಲಿ, ಜಡವಾಗಿರುವ ಪರಂಪರೆಯ ತುಳಿತಕ್ಕೆ ಸಿಕ್ಕಿ ಬುದ್ಧಿಯನ್ನೂ, ಆತ್ಮವನ್ನೂ ಕಳೆದುಕೊಂಡು ಕಂಗಾಲಾಗಿರುವ ನತದೃಷ್ಟರ ಬಾಳಿನಲ್ಲಿ. ಅನುಕಂಪ, ಸಹಾನುಭೂತಿ, ಉದಾರತೆಗಳ ಸೋಗಿನಲ್ಲಿ ಪಟ್ಟಭದ್ರ ಹಿತಗಳು ನಡೆಸುತ್ತಿರುವ ಕಪ್ಪು ಸಂಚಿಗೆ 'ದಾಟು' (ಮಾತಂಗಿ) ಒಂದು ಸ್ಪಷ್ಟ ನಿದರ್ಶನ.

ಮೈಸೂರು -ಎಚ್. ಸಂಜೀವಯ್ಯ

ಕಸ್ತೂರಿ

ಸಂಚಿಕೆ : ೬ | ಕಸ್ತೂರಿ, ಮಾರ್ಚ್ ೧೯೭೫ | ವರ್ಷ: ೧೯

ಯೋಗಕ್ಷೇಮ

ಪಿ. ರಾಮಕೃಷ್ಣ ಶಾಸ್ತ್ರಿ

ಹಿಂದೆ ಕಾಶಿಯಲ್ಲಿದ್ದ ವಿಶ್ವಲೋಪಾಧ್ಯಾಯ ಬಹುಶ್ರುತರು ವೇದ ವೇದಾಂಗ ವಿಶಾರದರೂ ಶಾಸ್ತ್ರವೇತ್ತರೂ ಸಕಲ ಸಾಹಿತ್ಯ ಪಾರಂಗತರೂ ಆಗಿದ್ದರು. ಶ್ರೀಕೃಷ್ಣನ ಪರಮ ಭಕ್ತರಾದ ಅವರು ಭಗವದ್ಗೀತೆಯ "ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ! ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್" (ನನ್ನನ್ನೇ ನಂಬಿದವರನ್ನು ಕಾಪಾಡುವ, ಯೋಗಕ್ಷೇಮ ನೋಡಿಕೊಳ್ಳುವ ಹೊಣೆ ನಾನು ಹೊತ್ತುಕೊಳ್ಳುತ್ತೇನೆ) ಎಂಬ ಗೀತಾಚಾರ್ಯನ ವಾಕ್ಯದಲ್ಲಿ ಅನನ್ಯ ನಂಬಿಕೆಯಿರಿಸಿ, ದಿನವೂ ನೂರಾರು ಶಿಷ್ಯರಿಗೆ ಅನ್ನ ಹಾಕಿ ಪಾಠ ಹೇಳುತ್ತಿದ್ದರು, ಇದಕ್ಕಾಗಿ ಭಿಕ್ಷೆ ಬೇಡುತ್ತಿದ್ದರು. ಗೀತಾಚಾರ್ಯನ ಆಶ್ವಾಸನೆಯಲ್ಲಿ ವಿಶ್ವಾಸವಿರಿಸಿ, ಬಂದದ್ದೆಲ್ಲವನ್ನು ಅಂದೇ ವ್ಯಯಿಸುತ್ತಿದ್ದರು.

ಒಂದು ಸಲ ಬಹುಶ್ರುತರಿಗೆ ಒಂದು ಹಿಡಿ ಧಾನ್ಯವೂ ಭಿಕ್ಷೆ ಸಿಗಲಿಲ್ಲ. ಅಂದು ತಣ್ಣೀರು ಕುಡಿದೇ ದಿನಹರಣ ಮಾಡಿದರು. ಆದರೆ ಮತ್ತೆರಡು ದಿನಗಳಲ್ಲೂ ಉಪವಾಸವೇ ಇರಬೇಕಾಯಿತು. ಇದರಿಂದ ಅವರು ನೊಂದುಕೊಂಡು ಶಿಷ್ಯರನ್ನೆಲ್ಲ ಅವರವರ ಮನೆಗೆ ಕಳಿಸಿದರು. ಭಗವಂತ ಹೇಳಿದ ಮಾತಿನಲ್ಲಿ ಅವರಿಗೆ ಕೊಂಚವೂ ನಂಬಿಗೆ ಉಳಿಯಲಿಲ್ಲ. ತಾಡವಾಲೆಯ ಭಗವದ್ಗೀತೆ ಗ್ರಂಥವನ್ನೆತ್ತಿಕೊಂಡವರೇ "ಅನನ್ಯಾಶ್ಚಿಂತಯಂತೋ .." ಶ್ಲೋಕದ ಮೇಲೆ ಕಂಠದಿಂದ ಒತ್ತಿ ಗೆರೆಯೆಳೆದು ಸ್ನಾನಕ್ಕಾಗಿ

ಹೊರಟು ಹೋದರು.

ಕೊಂಚ ಹೊತ್ತಿನಲ್ಲಿ ಬಹುಶ್ರುತರ ಪತ್ನಿಗೆ ಯಾರೋ ಕರೆದಂತೆ ಕೇಳಿಸಿತು. ಅವಳು ಅಂಗಳಕ್ಕೆ ಬಂದು ನೋಡಿದಾಗ ದೃಢಕಾಯನಾದ ಆಳೊಬ್ಬ ಅಂಗಳದಲ್ಲಿ ನಿಂತಿದ್ದ. ಅವನ ಬಳಿಯಲ್ಲಿ ಒಂದು ಹೆಡಿಗೆ ತುಂಬಾ ಅಕ್ಕಿ, ಬೇಳೆ ಮುಂತಾದ ವಿವಿಧ ಆಹಾರ ಸಾಮಗ್ರಿಗಳಿದ್ದವು. ಅವನು ಅದನ್ನು ತೋರಿಸುತ್ತಾ "ತಾಯೀ, ನಿಮ್ಮ ಯಜಮಾನರು ಇವನ್ನು ಕಳುಹಿಸಿಕೊಟ್ಟಿದ್ದಾರೆ. ಬೇಗ ಅಡಿಗೆ ಮಾಡಿ ಶಿಷ್ಯರನ್ನು ಕರೆದು ಬಡಿಸಿ ಬಿಡಿ," ಎಂದ. ಅವನ ಮಾತು ತೊದಲುತ್ತಿತ್ತು.

ಬಹುಶ್ರುತರ ಪತ್ನಿಗೆ ತಬ್ಬಿಬ್ಬಾಯಿತು. ಸ್ನಾನಕ್ಕಾಗಿ ನದಿಗೆ ಹೋದ ಗಂಡ ಇವನ್ನೆಲ್ಲ ಹೇಗೆ ಕಳುಹಿಸುವುದು ಎಂದುಕೊಂಡು, "ನಮ್ಮ ಯಜಮಾನರು ಇವನ್ನೆಲ್ಲ ಕಳುಹಿಸಿರಲಿಕ್ಕಿಲ್ಲಪ್ಪ. ಯಾರೋ ಬೇರೆಯವರು ಕಳುಹಿಸಿರಬೇಕು, ವಿಚಾರಿಸಿ ನೋಡು," ಎಂದಳು.

"ಅಲ್ಲಮ್ಮ, ನಿಮ್ಮ ಯಜಮಾನರು—ವಿಠ್ಠಲೋಪಾಧ್ಯಾಯ ಬಹುಶ್ರುತರೇ. ನದಿಗೆ ಸ್ನಾನಕ್ಕೆ ಹೋಗಿದ್ದಾರಲ್ಲ; ನಾನು ಬರುವುದು ಸ್ವಲ್ಪ ತಡವಾಯಿತೆಂದು ಅವರು ಸಿಟ್ಟಿನಿಂದ ಕಂಠದಿಂದ ನನ್ನ ನಾಲಗೆಯ ಮೇಲೆ ಗೀರಿ ಬಿಟ್ಟರು," ಎಂದು ಅವನು ನಾಲಗೆಯನ್ನು ಹೊರಚಾಚಿದ. ಅದರ ಮೇಲೆ ರಕ್ತಮಯವಾದ ಗೀರುಗಳಿರುವುದನ್ನು ನೋಡಿ ಆ ಸಾಧ್ವಿ ನೊಂದುಕೊಂಡು, "ಛೇ ಅವರೇಕೆ ಹೀಗೆ ಮಾಡಿದರೋ!" ಎಂದು ಕನಿಕರದಿಂದ ಒಳಗೆ ಹೋಗಿ ಅವನಿಗೆ ಬಾಯಾರಿಕೆಗಾದರೂ ಕೊಡೋಣವೆಂದು ಸ್ವಲ್ಪ ಮಜ್ಜಿಗೆಯೊಂದಿಗೆ ಹೊರಗೆ ಬಂದಾಗ ಅವನು ಹೊರಟೇಹೋಗಿದ್ದ.

ಬಹುಶ್ರುತರು ಮನೆಗೆ ಬಂದಾಗ ಅಡಿಗೆಯ ಪರಿಮಳ ಮೂಗಿಗೆ ಬಡಿಯುತ್ತಿತ್ತು. ಜೊತೆಗೆ ಅವರ ಹೆಂಡತಿ, "ನಮಗಾಗಿ ಸಾಮಾನುಗಳನ್ನೆಲ್ಲ ಹೊತ್ತು ತಂದ ಆ ಬಡಪಾಯಿಯ ನಾಲಗೆಯ ಮೇಲೆ ಯಾಕಾದರೂ ಕಂಠದಿಂದ ಗೀರಿದಿರೋ?" ಎಂದು ತರಾಟೆಗೆ ತೆಗೆದುಕೊಂಡಳು. ಮೊದಲು ಅವರಿಗೆ ಈ ಘಟನೆಯ ತಲೆಬುಡವೇ ತಿಳಿಯಲಿಲ್ಲ. ಆದರೆ ನಡೆದುದನ್ನೆಲ್ಲ ಬಿಡಿಸಿ ಹೇಳಿದಾಗ ಆಳಿನ ರೂಪದಲ್ಲಿ ಬಂದಾತ ಯೋಗಕ್ಷೇಮದ ಹೊಣೆ ಹೊತ್ತ ಭಗವಂತನೇ ಎಂಬುದವರಿಗೆ ಖಚಿತವಾಯಿತು. ಭಗವದ್ಗೀತೆಯ ಶ್ಲೋಕದ ಮೇಲೆ ತಾನು ಕಂಠದಿಂದ ಗೆರೆ ಎಳೆದನೆಂದರೆ ಪರಮಾತ್ಮನ ನಾಲಗೆಯನ್ನು ಗೀರಿದಂತೆಯೇ ಎಂಬುದೂ ಹೊಳೆಯದಿರಲಿಲ್ಲ. ಅದರಿಂದ ಅವರಿಗೆ ಪಶ್ಚಾತ್ತಾಪವಾಯಿತು. ಭಗವಂತನ ಲೀಲಾಮಾನುಷತೆಗೆ ಅವರು ಶಿರವಾಗಿದರು. ✡

ದೇವರು ಸಮಗ್ರವಾಗಿ ಒಳ್ಳೆಯವನು. ಆತನಲ್ಲಿ ಕೆಡುಕು ಎಂಬುದೇ ಇಲ್ಲ. ತನ್ನ ಪ್ರತಿರೂಪವಾಗಿ ದೇವರು ಮಾನವನನ್ನು ಸೃಷ್ಟಿಸಿದ. ದುರ್ದೈವದಿಂದ ಮಾನವನು ದೇವರನ್ನು ತನ್ನ ಕಲ್ಪನೆಯಂತೆ ರೂಪಿಸಿದ. ಈ ಉದ್ಧಟತನವೇ ಆತನನ್ನು ದುಃಖ ಸಾಗರದಲ್ಲಿ ಮುಳುಗಿಸಿದೆ. ದೇವರು ಶ್ರೇಷ್ಠ ಪುರುಷಮಣಿ ಆತನ ಸನ್ನಿಧಾನದಲ್ಲಿ ಎಲ್ಲ ಲೋಹವೂ ಚಿನ್ನವಾಗುತ್ತದೆ. —ಮಹಾತ್ಮಾ ಗಾಂಧಿ

*

ಶತಮಾನದಲ್ಲೊಬ್ಬರೊ ಇಬ್ಬರೊ ಅತಿಯಾದ ಪ್ರಶಂಸೆಯಿಂದ ಹಾಳಾಗುತ್ತಾರೆ. ಆದರೆ ಅದರ ಅಭಾವದಿಂದ ಪ್ರತಿ ನಿಮಿಷವೂ ಒಂದಿಲ್ಲೊಂದೆಡೆ ಪ್ರತಿಭೆಯ ಕುಡಿ ಕಮರಿಹೋಗುತ್ತದೆ. —ಜಾನ್ ಮೆಸ್‌ಫೀಲ್ಡ್

ಪಿ. ಆರ್. ತಿಪ್ಪೇಸ್ವಾಮಿ


ಮೇಧಾವಿ ಕಲಾವಿಮರ್ಶಕ ವೆಂಕಟಾಚಲಂ

ಜಿ. ವೆಂಕಟಾಚಲಂ ಭಾರತದ ಕಲಾಕ್ಷೇತ್ರದಲ್ಲಿ ಬಹು ದೊಡ್ಡ ಹೆಸರು. ಲಲಿತಕಲೆಯ ನಾನಾ ಪ್ರಕಾರಗಳಲ್ಲಿ ಅನುಭವಿಯೂ ಪರಿಣತರೂ ಎನಿಸಿದ ವೆಂಕಟಾಚಲಂ ಅನೇಕ ಕಲಾವಿದರನ್ನು ಅವರ ಎಳೆತನದಲ್ಲೇ ಗುರುತಿಸಿ ಪ್ರೋತ್ಸಾಹಿಸುತ್ತಾ ಬಂದ ಕಲಾಭಿಮಾನಿ. ಉತ್ತಮ ಕಲಾವಿಮರ್ಶಕರೂ ಬರಹಗಾರರೂ ಆಗಿ ಕಲೆಗಾಗಿ ಬದುಕಿ ಬಾಳಿದ ಕುತೂಹಲಕಾರಿ ಜೀವನ ಇವರದು. ಇಂಥ ವ್ಯಕ್ತಿಯನ್ನು ಕೇಂದ್ರ ಲಲಿತಕಲಾ ಅಕಾಡೆಮಿಯವರು ಪುರಸ್ಕರಿಸಿದ್ದು ಅವರ ಕೊನೆ ಕೊನೆಯ ದಿನಗಳಲ್ಲಿ ಎಂಬುದು ಮಾತ್ರ ನಮ್ಮವರ ಗುಣಗ್ರಹಣ ಶಕ್ತಿಗೆ ಹಿಡಿದ ಕನ್ನಡಿಯಂತಿದೆ.

ವೆಂಕಟಾಚಲಂ ಹುಟ್ಟಿದ್ದು ಶ್ರೀರಂಗಪಟ್ಟಣದ ಬಳಿಯ ಫ್ರೆಂಚ್ ರಾಕ್ಸ್ (ಈಗ ಪಾಂಡವಪುರ). ಇವರ ಬಾಲ್ಯ ನೀಲಗಿರಿಯಲ್ಲಿ ಕಳೆಯಿತು. ತಂದೆ ಪ್ರಮುಖ ಕಂಟ್ರಾಕ್ಟರ್. ಬಾಲಕನ ವಿದ್ಯಾಭ್ಯಾಸವು ಕೂಡ್ಲೂರು, ಊಟಕಮಂಡ್ ಮತ್ತು ಮದರಾಸಿನಲ್ಲಾಯಿತು.

ಶ್ರೀಯುತರು ಲಗ್ನವಾಗದೆ ಉಳಿದರು. ಇದು ತಂದೆ ತಾಯಿಗಳ ತಾತ್ಸಾರದಿಂದಲ್ಲ. ಮಗನ ಲಗ್ನದ ಏರ್ಪಾಡು ನಡೆಯಿತು. ಬೇಕೆಂದೇ ಮಗ ಒಪ್ಪಲಿಲ್ಲ. ಬಹುಮಾಗಿ ತನ್ನ ಲಗ್ನಕ್ಕೆ ಪ್ರತಿಭಟಿಸಿದ. ಇದರಿಂದಾಗಿ ಹೆಣ್ಣಿನ ಕಡೆಯವರು ಮದುವೆಯ ವ್ಯವಹಾರವನ್ನೇ ಕೈಬಿಟ್ಟರು. ಅಂದಿನಿಂದ ಶ್ರೀಯುತರು ಲಗ್ನದ ಕಟ್ಟಿನಿಂದ ಹೊರಬಂದು ಸ್ವಚ್ಛಂದ ಮನೋವೃತ್ತಿಯಲ್ಲಿ ಸಂತೋಷವಾಗಿ ಕಾಲ ಕಳೆಯುತ್ತಾ ಬಂದರು.

ವೆಂಕಟಾಚಲಂ ಪ್ರಥಮ ಮಹಾಯುದ್ಧದ ಸಂದರ್ಭದಲ್ಲಿ ಮಿಲಿಟರಿಗೆ ಸೇರಿದರು ಎಂದರೆ



ಖ್ಯಾತಶಿಲ್ಪಿ ಡಿ. ಪಿ. ರಾಯ್ ಚೌಧುರಿಯವರು ರಚಿಸಿದ ವೆಂಕಟಾಚಲಂ ಪುತ್ಥಳಿ.

ಕೆಲವರಿಗೆ ಆಶ್ಚರ್ಯವಾದೀತು! ಇದಕ್ಕೂ ಮುಂಚೆ ಇವರು ಧರ್ಮ ಹಾಗೂ ತತ್ತ್ವಜ್ಞಾನದಲ್ಲಿ ಅಪಾರ ಆಸಕ್ತಿ ತೋರಿದ್ದರು. ಇವರು ಥಿಯಾಸಫಿಕಲ್ ಸೊಸೈಟಿಗೂ ಸೇರಿದ್ದರು. ತತ್ತ್ವಪ್ರಚಾರಕರಾಗಿ ಅನೇಕ ತತ್ತ್ವ ಸಂಸ್ಥೆಗಳನ್ನು ರೂಪಿಸುವುದರಲ್ಲಿ ಕೆಲವು ವರ್ಷ ಶ್ರೀಯುತರ ಪಾತ್ರ ಪ್ರಮುಖವಾಗಿತ್ತು.

ವೆಂಕಟಾಚಲಂ ಅವರು ಪುಣೆಯಲ್ಲಿ ಮಿಲಿಟರಿ ಶಾಖೆಯಲ್ಲಿದ್ದಾಗ ಸ್ವಾರಸ್ಯದ ಘಟನೆಯೊಂದು ಜರುಗಿತು. ಅವರು ಮತ್ತು ಅವರ ಮಿತ್ರ ಫ್ರೆಡ್ ಹಾರ್ವೆಯವರು ಒಟ್ಟಿಗೆ ಸೇರಿ ತಮ್ಮ ಸೈನಿಕ ಪೋಷಾಕನ್ನು ಕಳಚಿಟ್ಟು ಸಾಮಾನ್ಯ ನಾಗರಿಕ ಉಡುಪನ್ನು ಧರಿಸಿ ತಲೆ ತಪ್ಪಿಸಿಕೊಂಡು ಮುಂಬಯಿಗೆ ಬಂದರು. ಅಲ್ಲಿ ನಡೆಯುತ್ತಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ಭೇಟಿ ಕೊಟ್ಟರು. ಅಲ್ಲಿ ಡಾ. ಬೆಸೆಂಟರ ಭಾಷಣವಿದ್ದಿತು. ಗಾಂಧೀಜಿಯವರಿಗೂ ಈಕೆಗೂ ಕೆಲವು ವಿಷಯದಲ್ಲಿ ಇದ್ದ ಭಿನ್ನಾಭಿಪ್ರಾಯದ ಕಾರಣ ಆ ಸಭೆಯಲ್ಲಿ ಜನ ಆಕೆಯ ಮೇಲೆ ತಿರುಗಿಬಿದ್ದರು. ಭಾಷಣಕ್ಕೆ ಅಡ್ಡಿ ಮಾಡಿದರು. ಲಾಠಿಯ ಪೆಟ್ಟನ್ನೂ ತಿನ್ನಬೇಕಾಯಿತು ಬೆಸೆಂಟರು. ಅಲ್ಲಿದ್ದ ವೆಂಕಟಾಚಲಂ ಮತ್ತು ಅವರ ಮಿತ್ರವೃಂದ ಆ ಗಲಭೆಯನ್ನು ತಡೆಗಟ್ಟಿ ಬೆಸೆಂಟರನ್ನು ದೊಡ್ಡ ಗಂಡಾಂತರದಿಂದ ಪಾರು ಮಾಡಿದರು.

ಇದಾದ ಕೆಲವು ದಿನಗಳಲ್ಲಿ ವೆಂಕಟಾಚಾಲಂ ಮಿಲಿಟರಿಯಿಂದ ಹೊರಬಂದು ಸ್ವತಂತ್ರ ಪತ್ರಿಕೋದ್ಯಮದಲ್ಲಿ ಕೈಹಾಕಿದರು. ಅನೇಕ ಲೇಖನಗಳನ್ನು ಬರೆದರು. ಭಾರತಾದ್ಯಂತ ಎಡೆಬಿಡದೆ ಪ್ರವಾಸ ಮಾಡಿದರು. ಭಾರತೀಯ ಸಂಸ್ಕೃತಿ, ಕಲೆಯ ಬಗ್ಗೆ ಅವರಲ್ಲಿ ಪ್ರೀತಿ ಆಸಕ್ತಿ ವೃದ್ಧಿಸಿತು. ಇದರಿಂದಾಗಿ ಭಾರತದ ಪ್ರಮುಖ ವಿದ್ವಾಂಸರ, ರಾಜಕಾರಣಿಗಳ, ಧಾರ್ಮಿಕ ವ್ಯಕ್ತಿಗಳು ಕಲಾವಿದರ ಪರಿಚಯದ ಲಾಭವಾಯಿತು, ಆತ್ಮೀಯತೆ ಬೆಳೆಯಿತು.

ಮದರಾಸಿನ ಅಡಿಯಾರ್ ಬಳಿ ಇದ್ದ ಥಿಯಾಸಫಿಕಲ್ ಪ್ರಧಾನ ಸಂಸ್ಥೆಯ ಅಂಗವಾಗಿ 'ಬ್ರಹ್ಮವಿದ್ಯಾಶ್ರಮ' ಎಂಬ ನೂತನ ಸಂಸ್ಥೆಯನ್ನು ಬೆಸೆಂಟರು ತೆರೆದಾಗ ತಮಗೆ ನೆರವಾಗಲು ಅವರು ವೆಂಕಟಾಚಲಂ ಅವರನ್ನು ಕರೆದರು. ವೆಂಕಟಾಚಲಂ ಆ ಸಂಸ್ಥೆಯ ಕಾರ್ಯದರ್ಶಿಯಾಗಿ ಅಮೋಘ ಸೇವೆ ಸಲ್ಲಿಸಿದರು. ಈ ಮೂಲಕ ಇವರು ಅಂತಾರಾಷ್ಟ್ರೀಯ ವಿದ್ಯಾರ್ಥಿವೃಂದದಲ್ಲಿ ಜನಪ್ರಿಯತೆ ಗಳಿಸಿಕೊಳ್ಳಲು ಅವಕಾಶವಾಯಿತು.

೧೯೨೩ ರಲ್ಲಿ ವೆಂಕಟಾಚಲಂ ಅವರು ಬೆಂಗಳೂರಿಗೆ ಬಂದರು. ಈ ವೇಳೆಗೆ ಭಾರತೀಯ ಕಲಾಕ್ಷೇತ್ರದಲ್ಲಿಯ ನಾನಾ ಪ್ರಕಾರದ ಕಲಾವಿದರನ್ನು ಗುರುತಿಸಿ ಪರಿಚಯವಿದ್ದ ಇವರು ಬೆಂಗಳೂರಿಗೆ ಬಂದೊಡನೆ ಕಲಾಸಂಸ್ಥೆಯೊಂದನ್ನು ಸ್ಥಾಪಿಸಿ ಅದಕ್ಕೆ ಟಿ. ಎಸ್. ಆರ್ಟ್ಸ್ ಗ್ರೂಪ್ ಎಂದು ನಾಮಕರಣ ಮಾಡಿದರು. ಅದು ಅನೇಕ ವರ್ಷಗಳ ಕಾಲ ಭಾರತೀಯ ಕಲಾ–ಪುನರುಜ್ಜೀವನ ಚಳವಳಿಗೆ ಉತ್ತಮ ಸಾಧನವಾಯಿತು. ಈ ಮೂಲಕ ವೆಂಕಟಾಚಲಂ ಅವರು ಅನೇಕ ಚಿತ್ರ, ಶಿಲ್ಪ, ನೃತ್ಯ, ನಾಟಕ, ಸಂಗೀತ ಮತ್ತು ಕುಶಲ ಕಲೆಗಳಲ್ಲಿ ಉತ್ತಮ ಭವಿಷ್ಯ ತೋರುವ ಪ್ರಭಾವಿ ಯುವ ಕಲಾವಿದರನ್ನು ಗುರುತಿಸಿ ಅವರನ್ನು ಉತ್ತಮ ಸಲಹೆಗಳೊಡನೆ ಹಾಗೂ ಆರ್ಥಿಕ ನೆರವಿನೊಡನೆ ಪ್ರೋತ್ಸಾಹಿಸುತ್ತಾ ಬಂದರು. ಅಷ್ಟೇ ಅಲ್ಲ, ಇವೆಲ್ಲಕ್ಕಿಂತ ಮುಖ್ಯವಾಗಿ ಲೇಖನಗಳ ಮೂಲಕ, ಪುಸ್ತಕಗಳ ಮೂಲಕ, ಉಪನ್ಯಾಸಗಳ ಮೂಲಕ, ಪ್ರದರ್ಶನಗಳ ಮೂಲಕ ಅವರನ್ನು ಜನತೆಗೆ ಪರಿಚಯಿಸುತ್ತಾ ಬಂದರು.

ಇವರ ಈ ಎಲ್ಲ ಕಲಾ ಚಟುವಟಿಕೆಗಳು ಭಾರತದಾದ್ಯಂತ ಬೆಳಕಿಗೆ ಬಂದು ಇವರನ್ನು ಸರಕಾರ ಬಹು ಬೇಗ ಗುರುತಿಸಿತು. ಭಾರತೀಯ ಕಲೆಯನ್ನು ಪ್ರಸಾರ ಮಾಡುವಲ್ಲಿ ಆ ಸರಕಾರ ಇವರಿಗೆ ಬೆಂಬಲವಾಗಿ ನಿಂತು ಉತ್ತೇಜನ ನೀಡಿತು. ಅನಂತರ ೧೯೪೭ರಲ್ಲಿ ಅಖಿಲ ಭಾರತ ಲಲಿತಕಲಾ ಸಂಸ್ಥೆಯ ಪ್ರಪ್ರಥಮ ಅಧ್ಯಕ್ಷರಾಗಿ ಚುನಾಯಿತರಾದರು. ಭಾರತ ಸರಕಾರ ೧೯೫೧ ರಲ್ಲಿ ಇವರನ್ನು ಹೈದರಾಬಾದಿನ ಸಾಲರ್'ಜಂಗ್ ಕಲಾಸಂಗ್ರಹಾಲಯದ ಕೃತಿಗಳನ್ನು ಓರಣವಾಗಿ ಜೋಡಿಸಲು

ಮುಖ್ಯಸ್ಥರನ್ನಾಗಿ ನೇಮಿಸಿತು. ನೆಹರೂ ಅವರು ಅದರ ಉದ್ಘಾಟನೆಯನ್ನು ನೆರವೇರಿಸಿದರು. ೧೯೨೧ ರಲ್ಲಿ ಮೈಸೂರಿನ ಜಗನ್ಮೋಹನ ಚಿತ್ರಶಾಲೆ (ಈಗ ಜಯಚಾಮರಾಜೇಂದ್ರ ಚಿತ್ರಶಾಲೆ)ಯನ್ನು ಓರಣಗೊಳಿಸುವ ಹೊಣೆಯನ್ನೂ ಇವರೇ ಹೊತ್ತರು. ಮದರಾಸು ಮತ್ತು ಅಣ್ಣಾಮಲೆ ವಿಶ್ವವಿದ್ಯಾನಿಲಯಗಳ ಬೋರ್ಡ್ ಆಫ್ ಸ್ಟಡೀಸ್ ಸದಸ್ಯರಾಗಿ, ಮೈಸೂರು ಮತ್ತು ಆಂಧ್ರ ವಿಶ್ವವಿದ್ಯಾಲಯಗಳ ಲಲಿತ ಕಲಾಭ್ಯಾಸ ಮಂಡಳಿಗಳ ಸದಸ್ಯರಾಗಿ ಕೆಲಸ ಮಾಡಿದರು. ೧೯೪೮ ರಲ್ಲಿ ಮುಂಬಯಿಯ ತಾಜಮಹಲ್ ಹೋಟೆಲ್‌ನಲ್ಲಿ ಜರುಗಿದ ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದಲ್ಲಿ ಭಾಷಣ ಮಾಡಿದರು. ಕೇಂದ್ರ ಸರಕಾರದ ಕಲಾ ಸಲಹೆಗಾರರಾಗಿ ದುಡಿದರು. ೧೯೪೨ ರಲ್ಲಿ ಕಲಕತ್ತದಲ್ಲಿ ಜರುಗಿದ ಅಖಿಲ ಭಾರತ ಲಲಿತಕಲಾ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ೧೯೫೦ ರಲ್ಲಿ ಯುನೆಸ್ಕೋದ ಭಾರತೀಯ ಆಯೋಗದ ಕಾರ್ಯಕಾರಿ ಮಂಡಳಿದ ಸದಸ್ಯರಾಗಿದ್ದರು.

೧೯೩೦ ರಷ್ಟು ಹಿಂದೆಯೆ ಸಂದರ್ಶಕ ಭಾಷಣಕಾರರೆಂದು ಇಂಡೋನೇಶಿಯಕ್ಕೆ ಹೋಗಿ ಬಂದರು. ಮುಂದೆ ಚೀನ, ಜಪಾನ್, ಕೋರಿಯಗಳಿಗೆ, ಮತ್ತು ೧೯೫೫ ರಲ್ಲಿ ಯುರೋಪಿಗೆ ಸಂದರ್ಶನವಿತ್ತು, ಭಾರತೀಯ ಕಲೆಯ ಬಗ್ಗೆ ಭಾಷಣ ನೀಡಿದರು. ನೆಹರು ಕುಟುಂಬದವರೊಡನೆ ಆ ಮೊದಲೇ ಸಿಲೋನ್ ಮುಂತಾದ ದೇಶಗಳ ಪ್ರವಾಸವನ್ನೂ ಮಾಡಿ ಬಂದಿದ್ದರು.

ಈ ಬಹುಮುಖ ಕಾರ್ಯವ್ಯಾಪ್ತಿಯ ಉತ್ಸಾಹಶಾಲಿಗೆ ೧೯೫೪ ರಲ್ಲಿ ಅರವತ್ತು ತುಂಬಿತು. ವೆಂಕಟಾಚಲಂ ಅವರ ಮೂರು ನಾಲ್ಕು ದಶಕಗಳ ಅವಿರತ ಕಲಾಸೇವೆಯನ್ನು ಗಮನಿಸಿದ ಇವರ ಆತ್ಮೀಯ ಮಿತ್ರರಾದ ನಂದಲಾಲ್ ಬೋಸ್, ಮುಲ್ಕರಾಜ್ ಆನಂದ್, ಹರೀಂದ್ರನಾಥ ಚಟ್ಟೋಪಾಧ್ಯಾಯ ಮುಂತಾದವರು ತುಂಬ ಆಕರ್ಷಕವಾಗಿ ಕಲಾತ್ಮಕವಾಗಿ ಸಂಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಿದರು.

ಭಾರತದ ಅತ್ಯುತ್ತಮ ಕಲಾವಿಮರ್ಶಕರಾಗಿ ವೆಂಕಟಾಚಲಂ ಅವರು ಸುಮಾರು ಹದಿನೆಂಟಕ್ಕೂ ಹೆಚ್ಚು ಕಲಾ ಸಂಬಂಧವಾದ ಕೃತಿಗಳನ್ನು ಹೊರತಂದಿದ್ದಾರೆ. ಅನ್ನಿ ಬೆಸೆಂಟರ ಪತ್ರಿಕೆ 'ನ್ಯೂ ಇಂಡಿಯಾ'ದ ಕಲಾ ವಿಭಾಗದ ಸಂಪಾದಕರಾಗಿದ್ದ ವೆಂಕಟಾಚಲಂ 'ಶಮಾ' ಎಂಬ ಅಂತಾರಾಷ್ಟ್ರೀಯ ತ್ರೈಮಾಸಿಕದ ಸಹ ಸಂಪಾದಕರಾಗಿದ್ದರು. ಮುಂದೆ ಸಂಗೀತ, ನೃತ್ಯ, ನಾಟಕಗಳಿಗೆ ಮೀಸಲಾಗಿದ್ದ ತ್ರೈಮಾಸಿಕ 'ಥಿಯೇಟರ್'ನ ಸಹಸಂಪಾದಕತ್ವವನ್ನು ಕೂಡ ನಿರ್ವಹಿಸಿದರು. ಅಸಂಖ್ಯ ಲೇಖನಗಳನ್ನು ಬರೆದಿದ್ದಾರೆ. ಇವರ ಬರವಣಿಗೆ ಬಹು ಸುಂದರ, ಅಷ್ಟೇ ಅಚ್ಚುಕಟ್ಟು. ತಮ್ಮದೇ ಆದ ಸ್ವತಂತ್ರ ವಿಮರ್ಶಾಮಾರ್ಗ ಇವರದಾಗಿತ್ತು. ಸಹಜ ವಿಮರ್ಶಕನಲ್ಲಿ ಇರಬೇಕಾದ ಪ್ರಾಮಾಣಿಕತೆ ನಿಷ್ಪಕ್ಷತೆಗಳು ಇವರ ಬರಹಗಳಲ್ಲಿ ವ್ಯಕ್ತವಾಗುತ್ತವೆ. ಯಾವ ಪೂರ್ವಾಗ್ರಹಗಳಿಗೂ ಒಳಗಾಗುವ ಕಲುಷಿತ ಮನೋಭಾವ ಇವರದಾಗಿರಲಿಲ್ಲ. ಎಂತಲೇ ಅವರ ಬರವಣಿಗೆಯಲ್ಲಿ ದ್ವೇಷಾರೋಪಣೆಯನ್ನಾಗಲೀ, ವ್ಯಕ್ತಿನಿಂದೆಯನ್ನಾಗಲೀ ಕಾಣಲು ಸಾಧ್ಯವಿಲ್ಲ. ವಿಮರ್ಶೆಯಲ್ಲಿ ಹೇಗೆ ನಿಷ್ಣಾತರೋ ಹಾಗೆಯೇ ವ್ಯಾಸಂಗನಿಷ್ಠರೂ ಆಗಿದ್ದರು

ವೆಂಕಟಾಚಲಂ ಅವರ ಒಂದು ವೈಶಿಷ್ಟ್ಯವೆಂದರೆ ವ್ಯಕ್ತಿಗಳನ್ನು ಅವರ ಕಲೆಯನ್ನು ಬಹು ಬೇಗ ಗುರುತಿಸುವ ಸೂಕ್ಷ್ಮತೆ. ಅಲ್ಲದೆ ತಮ್ಮ ಸ್ನೇಹಮಯತೆ ಹಾಗು ಮುಕ್ತ ಮನಸ್ಸಿನ ವರ್ತನೆಯಿಂದಾಗಿ ಒಮ್ಮೆ ಪರಿಚಿತರಾದ ವ್ಯಕ್ತಿಗಳನ್ನು ಬಹು ಬೇಗ ಆತ್ಮೀಯರಾಗಿಸಿಕೊಂಡುಬಿಡುತ್ತಿದ್ದರು. ಆತ್ಮೀಯರೆನಿಸಿದವರಿಗೆ ತಮ್ಮದೇ ಆದ ಒಂದು ಪ್ರೀತಿಯ ಹೆಸರನ್ನು ಆರೋಪಿಸಿ ಕರೆಯುವಂಥ ನಿರ್ಮಲ ಮನಸ್ಸು ಅವರದಾಗಿತ್ತು. ಅವರ ವಿಶ್ವಾಸಿ ಮಿತ್ರರೆಲ್ಲ ಅವರನ್ನು ಪ್ರೀತಿಯಿಂದ 'ವೆಂಕಾ' ಎಂದೇ ಕರೆಯುತ್ತಿದ್ದರು.

ವೆಂಕಟಾಚಲಂ ಸದಾ ಸಂಚಾರಿ. ಇಂದು ಮುಂಬಯಿ, ನಾಳೆ ಕಲ್ಕತ್ತ, ನಾಡಿದ್ದು ದಿಲ್ಲಿ, ಮದರಾಸು, ಹೈದರಾಬಾದು, ಮತ್ತೆ ಬೆಂಗಳೂರು... ಇಂತು ಅವರ ಅವಿರತ ಪ್ರವಾಸ ನಡೆದೇ ಇರುತ್ತಿತ್ತು. ತಮ್ಮ ವಿದೇಶ ಪ್ರವಾಸಗಳಲ್ಲಿ ಭಾರತೀಯ ಕಲಾವಿದರ ಸಾಧನ ಸಿದ್ಧಿಗಳ ಕುರಿತು ಇವರಷ್ಟು ಪ್ರಚಾರ ಮಾಡಿದವರು ಇನ್ನೊಬ್ಬರಿರಲಿಕ್ಕಿಲ್ಲ.

ವೆಂಕಟಾಚಲಂ ತಮ್ಮ ಬಳಿ ಇದ್ದ ಕಲಾವಸ್ತುಗಳನ್ನೆಲ್ಲಾ ಒಂದೆಡೆ ಸೇರಿಸಿ ತಮ್ಮ ಪರಮ ಮಿತ್ರ ಫ್ರೆಡ್ ಹಾರ್ವೆಯವರ ಸವಿ ನೆನಪಿಗಾಗಿ ಬೆಂಗಳೂರಿನ ಥಿಯಾಸಫಿಕಲ್ ಲಾಡ್ಜ್ ಸಭಾಂಗಣದಲ್ಲಿ ಒಂದು ಗ್ರಂಥಾಲಯವನ್ನು ತೆರೆದಿದ್ದಾರೆ. ಎಪ್ಪತ್ತಾರರ ಗಡಿಯಲ್ಲೂ ಇಪ್ಪತ್ತಾರರ ಉತ್ಸಾಹ ಇವರಲ್ಲಿತ್ತು. ಕೇಂದ್ರ ಹಾಗೂ ವಿವಿಧ ರಾಜ್ಯಗಳ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಅವಿಶ್ರಾಂತವಾಗಿ ದುಡಿದರು.

ಹೀಗೆ ಬಹುಮುಖ ವ್ಯಕ್ತಿತ್ವವನ್ನು ಗಳಿಸಿಕೊಂಡಿದ್ದ ದಿ. ವೆಂಕಟಾಚಲಂ ಅವರ ಹೆಸರು ಆನಂದ ಕುಮಾರಸ್ವಾಮಿ, ಹ್ಯಾವೆಲ್, ಕಜಿನ್ಸ್, ಗಂಗೂಲಿ, ಪರ್ಸಿ ಬ್ರೋನಿ, ಮೆಹತಾ, ಕ್ಯಾಬ್ರಿಷ್ ಮುಂತಾದ ಅಗ್ರಗಣ್ಯ ಕಲೋಪಾಸಕರ ಸಾಲಿಗೆ ಸೇರಬೇಕಾದುದು. ಇವರು ನಮ್ಮನ್ನಗಲಿ ಐದು ವರ್ಷಗಳಾದುವು. ಆದರೆ ಕಲಾಲೋಕದಲ್ಲಿ ಇವರ ಹೆಸರು ಎಂದೆಂದೂ ನೆನಪಿನಲ್ಲುಳಿಯುವಂತಹುದು. ✿



ವಿಶ್ವಶಾಂತಿಗೆ ದಾರಿ...

ಚಿತ್ತ ಬುದ್ಧಿ ಅಹಂಕಾರಗಳನ್ನು ಜಯಿಸದೆ ಪ್ರಸನ್ನತೆ ಪ್ರಾಪ್ತವಾಗುವದಿಲ್ಲ. ಪಾಶವೀ ಜೀವನದಿಂದ ಪ್ರಾಸಾದಿಕ ಜೀವನ ಪ್ರಾಪ್ತವಾಗಲಾರದು. ಮಾನಸಿಕ ಚಪಲತೆಯಿಂದ ಮಾನವತೆ ಉಳಿಯದು. ಬೌದ್ಧಿಕ ಬಾಳೊಂದೇ ಶಾಂತಿಗೆ ಸಾಧನವಾಗಲಾರದು. ಜತೆಗೆ ನಿರಹಂಕತೆ ವಿನಮ್ರತೆಗಳು ನೆಲೆಗೊಳ್ಳಬೇಕು.

ಮಾನವನ ಪಶುವೃತ್ತಿಯು ಶಾಂತಿಭಂಗಕ್ಕೆ ಮೂಲ. ಕಾಳಗದ ಕಾಳ್ಗಿಚ್ಚು ಹಬ್ಬಿದರೆ ಆಗುವ ಅನರ್ಥ, ಕೈಗೂಡುವ ಕಷ್ಟ ಅಷ್ಟಿಷ್ಟಲ್ಲ. ಮದ-ಮತ್ಸರ, ಆಸೆ-ಲಾಲಸೆ, ಲೋಭ-ಮೋಹಗಳು ಮಾನವನಲ್ಲಿ ಕೆಂಳೆನಿಂತರೆ ಆಗುವ ಅಶಾಂತಿಗೆ ತುದಿಮೊದಲಿರುವದಿಲ್ಲ. ಕಾಮಕ್ರೋಧಗಳು ಉದ್ಭವಿಸಿದರೆ ಅಣುಬಾಂಬು ಬೇಕಿಲ್ಲ. ಹೊಲಬುದಪ್ಪಿ ನಡೆದರೆ ಹೈಡ್ರೋಜನ್ ಬಾಂಬೇಕೆ? ವ್ಯಕ್ತಿಯಿಂದ ಕುಟುಂಬ, ಕುಟುಂಬದಿಂದ ಸಮಾಜ, ಸಮಾಜದಿಂದ ಸರ್ವಜನತೆಗೆ ಅಲೆ ಅಲೆಯಾಗಿ ಹಬ್ಬಿ ವಿಶ್ವಶಾಂತಿಯನ್ನು ಮಣ್ಣುಗೂಡಿಸುತ್ತವೆ. ಆದ್ದರಿಂದ ಮಾನವನಲ್ಲಿ ಪಶುವೃತ್ತಿ ತೊಲಗಬೇಕು. ಬರಿಯ ಭೌತಿಕ ಹೆಬ್ಬಯಕೆ ಜೊರಟುಹೋಗಬೇಕು. ಆಧ್ಯಾತ್ಮಿಕ, ನೈತಿಕ, ಧಾರ್ಮಿಕ ತಳಹದಿಯ ಮೇಲೆ ಭೌತಿಕವಾದ ನಿರ್ಮಾಣವಾಗಿ ನಿಲಯವಾಗಿ ನಿಲ್ಲಬೇಕು. ಆಗ ಸ್ವಾರ್ಥಭೋಗವೆಂಬ ಭೋಗಿ ಹೆಡೆಯೆತ್ತದು. ಗರ್ವದಿಂದಾಗುವ ಘರ್ಷಣೆ ಘಟಿಸದು. ಅಸಹನೆ, ಅನ್ಯಾಯ, ಅತಿ ಆಸೆಗಳು ತಲೆಯೆತ್ತವು. ಹಗೆತನದ ಹೊಗೆ ಆಡದು. ಬಳಲಿಕೆಯ ಬಿಸಿ ತಗಲದು. ವಿಷಮ ಭಾವದ ವಿಷ ಸೂಕ್ಷ್ಮಾಂಗಕ್ಕೂ ಸೋಂಕದು. ಇಷ್ಟಾದ ಬಳಿಕ ಮಾನವನಿಗೆ ಪ್ರಸನ್ನ ಭಾವ ಪ್ರಾಪ್ತವಾಗದೇನು? ಪ್ರಪಂಚ ಶಾಂತಿ ಸಮನಿಸದೇನು?

— 'ಜನನಿ'



ಗೋಡೆಯ ಮೇಲಿನ ನೆರಳು

ಮೂಲ: ಇ. ವಿ. ಲ್ಯೂಕಾಸ್
ರೂಪಾಂತರ: ಎಂ. ವೀಣಾ

ಹಿಂದಿನ ದಿನದ ಘಟನೆಯನ್ನು ನೆನೆಸಿಕೊಂಡಾಗ ನಗಬೇಕೋ ಅಳಬೇಕೋ ತಿಳಿಯುವುದಿಲ್ಲ. ನಡೆದ ಘಟನೆಯೇ ಅಂತಹದು. ಸಂಜೆಯ ಮುಂದೆ ನಾವೆಲ್ಲ ವಾಡಿಕೆಯಂತೆ ಹರಟುತ್ತಾ ಇದ್ದಾಗ ವಿಷಯ ದೆವ್ವ ಭೂತಗಳ ಬಗೆಗೂ ಅನಂತರ ಅತೀಂದ್ರಿಯ ಜ್ಞಾನ, ಹಿಪ್ನಾಟಿಜಮ್ ಮುಂತಾದ ಅತಿಭೌತಿಕ ವಿಷಯಗಳ ಬಗೆಗೂ ತಿರುಗಿತು. ಈ ವಿಷಯದಲ್ಲಿ ಆಸಕ್ತಿಯಿಲ್ಲದವರು ಪ್ರಪಂಚದಲ್ಲಿ ಎಲ್ಲಿಯಾದರೂ ದೊರಕುವುದುಂಟೆ?

ಹರಟೆ ತುಂಬಾ ಸ್ವಾರಸ್ಯವಾಗಿತ್ತು. ಪ್ರತಿಯೊಬ್ಬನೂ ತಾನು ಕೇಳಿದ ಅಲೌಕಿಕ ಘಟನೆಗಳನ್ನು ಒಳ್ಳೇ ರಸವತ್ತಾಗಿ ವರ್ಣಿಸುತ್ತಿದ್ದ. ಘಟನೆಗಳು ರಸವತ್ತಾಗೇನೋ ಇದ್ದುವು. ಆದರೆ ಅವು ಸ್ವಂತ ಅನುಭವಿಸಿದ್ದಲ್ಲ. ಎರಡನೆಯವರಿಂದ ಕೇಳಿ ತಿಳಿದದ್ದು. ಎಷ್ಟೇ ರುಚಿಕರವಾದರೂ ಎಂಜಲನ್ನವನ್ನು ಯಾರಾದರೂ ಬಯಸುವುದುಂಟೆ? ಒಂದು ರೀತಿಯಲ್ಲಿ ನಮ್ಮ ಪರಿಸ್ಥಿತಿಯೂ ಹಾಗೇ ಆಗಿತ್ತು.

ಆದರೆ ಮಿತ್ರ ರಡ್ಸನ್‌ವೈಟ್ ತನ್ನೊಂದಿಗೆ ಕರೆದುಕೊಂಡು ಬಂದ ಆ ಕೃಶಕಾಯದ ಕುಳ್ಳ ಮಾತ್ರ ಇದೆಲ್ಲವನ್ನು ಒಳ್ಳೇ ಆಸಕ್ತಿಯಿಂದ ಕೇಳುತ್ತಿದ್ದ. ನಾವೆಲ್ಲ ಗಂಟೆಗಟ್ಟಳೆ ಹರಟೆ ಹೊಡೆಯುತ್ತಿದ್ದರೂ ಒಮ್ಮೆಯೂ ಬಾಯಿ ಬಿಡದ ಆತ ಅಕಸ್ಮಾತ್ತಾಗಿ ಮಾತಿನ ಮಧ್ಯೆ ಪ್ರವೇಶಿಸಿ, "ಮಿತ್ರರೇ, ಕಲ್ಪನೆಗಿಂತಲೂ ಸತ್ಯ ವಿಚಿತ್ರವಾಗಿರುತ್ತದೆ ಎನ್ನುವುದನ್ನು ನೀವೆಲ್ಲ ಕೇಳಿದ್ದೀರಿ. ಆದರೆ ಅದೆಷ್ಟು ವಿಚಿತ್ರವಾಗಿರಬಲ್ಲದೆಂಬುದು, ಅನೇಕ ದಿನಗಳಿಂದ ನಡೆಯುತ್ತ ಬಂದ ಘಟನೆಯೊಂದು ಈ ದಿನ ಮಧ್ಯಾಹ್ನ ಕೊನೆಗಂಡ ನಂತರವೇ ನನ್ನ ಪ್ರತೀತಿಗೆ ಬಂತು." ಎಂದು ಮಾತನ್ನು ಪ್ರಾರಂಭಿಸಿದ.

ನಮಗೆಲ್ಲಾ ತಡೆಯಲಾಗದ ಕುತೂಹಲ. "ಎಂಥದಪ್ಪಾ: ಅದು?" ಎಂದು ಕೇಳಿಯೇ ಬಿಟ್ಟೆವು. ಆತ ಪ್ರಾರಂಭಿಸಿದ:

"ಸುಮಾರು ಎರಡು ವರ್ಷಗಳಿಂದ ನಾನು ಓರ್‌ಮಂಡ್ ಸ್ಟ್ರೀಟಿನ ಒಂದು ಮನೆಯಲ್ಲಿನ ಕೋಣೆಯನ್ನು ಬಾಡಿಗೆ ಹಿಡಿದಿದ್ದೇನೆ. ಮನೆ ತುಂಬಾ ಹಳೆಯದು. ಗೋಡೆಯ ತುಂಬಾ ತೇಪೆಗಳು, ಅಲ್ಲಲ್ಲಿ ಬಿರುಕುಗಳು. ಮಳೆಗಾಲದಲ್ಲಂತೂ ಅಲ್ಲಿನ ನಿವಾಸಿಗಳನ್ನು ದೇವರೇ ರಕ್ಷಿಸಬೇಕು. ಮೇಲೆ ಮಾಡಿನಿಂದ ನೀರು ಧಾರಾಕಾರವಾಗಿ ಸುರಿಯುತ್ತದೆ. ಕೆಳಗಿಟ್ಟ ಪಾತ್ರೆ– ಪಡಗಗಳನ್ನೂ, ಅರಿವೆ, ಅಂಚಡಿಗಳನ್ನೂ ಪುಸ್ತಕ ಪೇಪರುಗಳನ್ನೂ ರಕ್ಷಿಸಲಾಗದೆ ನಮ್ಮೆಲ್ಲರ ಕಣ್ಣಿನಿಂದಲೂ, ಆಗ ನೀರು ಧಾರಾಕಾರವಾಗಿ ಸುರಿಯುತ್ತದೆ. ಹಳೆಯ ಮಾಲಕ ಗೋಡೆಗಳಿಗೆ ಡಿಸ್‌ಟೆಂಪರ್ ಬಳಿಸಿದ್ದರೂ ತೇವದಿಂದಾಗಿ ಗೋಡೆಯ ತುಂಬಾ ಕಲೆಗಳು ಹಬ್ಬಿಕೊಂಡಿವೆ.

"ಒಂದು ದಿನ ಏನನ್ನೋ ಯೋಚಿಸುತ್ತ ಮಂಚದ ಮೇಲೆ ಮಲಗಿದಾಗ ಆಕಸ್ಮಾತ್ತಾಗಿ ಗೋಡೆಯ ಮೇಲೆ ದೃಷ್ಟಿ ಹೋಗಿ ಮಾನವ ಮುಖವನ್ನು ಹೋಲುವ ಒಂದು ತೇಪೆ ಕಾಣಿಸಿತು. ಏನಾಶ್ಚರ್ಯ! ಕಿವಿ, ಮೂಗು ಕಣ್ಣು, ಬಾಯಿ, ಮುಂತಾದದ್ದೆಲ್ಲವೂ ಅಲ್ಲಿ ಯಥಾವತ್ತಾಗಿ ಚಿತ್ರಿತವಾಗಿದ್ದವು. ನಿಜವಾಗಿಯೂ ಇದು ಪ್ರಕೃತಿಯ ಲೀಲೆಯೆ ಸರಿ ಅಂದುಕೊಂಡೆ.

ತೇವ ಆರಿದಂತೆಲ್ಲ ಗೋಡೆಯ ಮೇಲಿನ ಕಲೆಗಳೂ ಆರಿಹೋಗುವುದು ಸ್ವಾಭಾವಿಕ. ಆದರೆ ಈ ಕಲೆ ಮಾತ್ರ ಏಕೋ ಹಾಗೇ ಉಳಿದುಕೊಂಡಿತ್ತು.

ಒಮ್ಮೆ ಇನ್‌ಫ್ಲುಯೆಂಜಾ ತಗಲಿದ್ದರಿಂದ ಹಾಸಿಗೆಯ ಮೇಲೆ ಮಲಗಿಕೊಂಡೇ ಕಾಲ ಕಳೆಯುವ ಪ್ರಮೇಯ ಬಂತು. ಆಗ ಕಥೆಯೇನ್ನೋ ಕಾದಂಬರಿಯನ್ನೋ ಇಲ್ಲವೆ ಇನ್ನಾವುದೆ ಪುಸ್ತಕವನ್ನೋ ಓದುತ್ತಾ ಕಾಲ ತಳ್ಳುತ್ತಿದ್ದೆ. ಓದಿ ಓದಿ ಬೇಸರವಾದಾಗ ಯಾವುದಾದರೂ ವಿಷಯವನ್ನು ಆಳವಾಗಿ, ಗಂಭೀರವಾಗಿ ಯೋಚಿಸಲಾರಂಭಿಸುತ್ತಿದ್ದೆ. ಈ ಸಮಯದಲ್ಲಿ ನನಗೆ ಆ ಚಿತ್ರದ ಗೀಳು ಹಿಡಿದು ಕೊಂಡಿದ್ದು. ನೋಡಿ ನೋಡಿದಂತೆಲ್ಲ ಗೋಡೆಯ ಮೇಲಿನ ಆಕೃತಿ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ನೀಳ ಮೂಗು, ಉಬ್ಬಿದ ಹಣೆ, ಬರಬರುತ್ತಾ ಆಕೃತಿ ಎಷ್ಟು ಮೂರ್ತಿಮಂತವಾಗಿ ಕಾಣತೊಡಗಿತ್ತೆಂದರೆ ಅದನ್ನು ಹೋಲುವ ಮನುಷ್ಯ ಈ ಜಗತ್ತಿನಲ್ಲೆಲ್ಲೊ ಇದ್ದಾನೆ: ನಾನೂ ಅವನೂ ನಿಯತಿಯಿಂದ ಯಾವುದೋ ಅವ್ಯಕ್ತ ಸೂತ್ರದಲ್ಲಿ ಬಂಧಿಸಲ್ಪಟ್ಟಿದ್ದೇವೆ ಎಂಬ ಭಾವನೆ ನನ್ನಲ್ಲಿ ಬಲಿಯತೊಡಗಿತು.

ಇನ್‌ಫ್ಲುಯೆಂಜಾದಿಂದ ಗುಣಮುಖವಾದೆ. ಆದರೆ ಆ ಆಕೃತಿಯ ಪ್ರಭಾವದಿಂದ ಮಾತ್ರ ಮುಕ್ತನಾಗಿರಲಿಲ್ಲ. ನನ್ನ ಮೇಲೆ ಅದರ ಪ್ರಭಾವ ದಿನೇ ದಿನೇ ಬೆಳೆಯುತ್ತಲೆ ಇತ್ತು. ಗೋಡೆಯ ಮೇಲಿನ ಆಕೃತಿಯನ್ನು ಹೋಲುವ ಮನುಷ್ಯನನ್ನು ಹುಡುಕಲು ನಾನು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಸಭೆ ನಡೆಯುತ್ತಿರುವಲ್ಲಿ, ನಾಟಕ ನಡೆಯುತ್ತಿರುವಲ್ಲಿ, ಸಿನೆಮಾ ನಡೆಯುತ್ತಿರುವಲ್ಲಿ, ಪ್ರದರ್ಶನ ನಡೆಯುತ್ತಿರುವಲ್ಲಿ ಹೀಗೆ ನಾನು ಹೋದ ಸ್ಥಳಗಳಿಗೆ ಲೆಕ್ಕವೇ ಇಲ್ಲ. ಆದರೆ ನನಗೆ ಬೇಕಾದ ಮನುಷ್ಯ ಸಿಗಲೇ ಇಲ್ಲ. ಹಾಗೆಯೆ, ಆತ ಎಂದಿಗಾದರೂ ಸಿಗಬಹುದೆಂಬ ಆಶೆ ನನ್ನನ್ನು ಬಿಟ್ಟು ಹೋಗಲೂ ಇಲ್ಲ. ಈಗ ನಾನವನನ್ನು ಜವಳಿ ಅಂಗಡಿಗಳಲ್ಲಿ, ಸ್ಟೇಶನರಿ ಅಂಗಡಿಗಳಲ್ಲಿ, ರೆಸ್ಟೋರೆಂಟುಗಳಲ್ಲಿ ಹೀಗೆ ಎಲ್ಲೆಂದರಲ್ಲಿ ಹುಡುಕತೊಡಗಿದೆ. ಆದರೆ ಆತ ಸಿಗಲಿಲ್ಲ. ಇನ್ನೇನು, ಅವನು ಇನ್ನು ಸಿಗುವ ಸಂಭವ ಇಲ್ಲವೆ ಇಲ್ಲ ಎಂದು ಅಂದುಕೊಳ್ಳುವಷ್ಟರಲ್ಲಿ ಗೋಡೆಯ ಮೇಲಿನ ಆ ಆಕೃತಿಯನ್ನು ಯಥಾವತ್ತಾಗಿ ಹೋಲುವ ಮನುಷ್ಯ ಅಕಸ್ಮಾತ್ತಾಗಿ ಕಾಣಸಿಕ್ಕಿದ..."

"ಹಾಂ! ಏನಂದಿ! ಕಾಣಸಿಕ್ಕಿದನೆ? ನಿಜವಾಗಿಯೂ ಕಾಣಸಿಕ್ಕಿದನೆ? ಎಲ್ಲಿ?" ನಾವೆಲ್ಲ ಉತ್ಸಾಹದಿಂದ, ಕುತೂಹಲದಿಂದ ಪುಟಿದೆದ್ದವು.

ಆ ಮನುಷ್ಯ ತನ್ನ ಕಿಸೆಯಿಂದ ಕರವಸ್ತ್ರವನ್ನು ಹೊರತೆಗೆದು ಹಣೆ ಒರೆಸಿಕೊಂಡು ಮುಂದುವರಿಸಿದ, "ತಾಳ್ಮೆಗೆಡಬೇಡಿ ಮಿತ್ರರೆ, ತಾಳ್ಮೆಗೆಡಬೇಡಿ. ನಾನೆಲ್ಲವನ್ನು ನಿಮಗೆ ಹೇಳು

ತ್ತೀನೆ. ಒಮ್ಮೊಮ್ಮೆ ಸತ್ಯ ಕಲ್ಪನೆಗಿಂತಲೂ ವಿಚಿತ್ರವಾಗಿರುತ್ತದೆಂದು ಮೊದಲೆ ಹೇಳ ಲಿಲ್ಲವೆ ?

"ಆ! ಅಂದ ಹಾಗೆ ನಾನು ಏನು ಹೇಳು ತ್ತಿದ್ದೆನೆಂಬುದನ್ನೆ ಮರೆತುಬಿಟ್ಟೆನಲ್ಲ. ಹೌದು, ಪೇಟೆಯಲ್ಲಿ ನಿಂತು ಓಡಾಡುವ ಜನರನ್ನು ಹುಚ್ಚನ ಹಾಗೆ ನೋಡುವುದೆ ನನ್ನ ಹವ್ಯಾಸ ವಾಗಿಬಿಟ್ಟಿತು. ಹವ್ಯಾಸವೇನು, ಒಂದು ರೀತಿಯಲ್ಲಿ ಗೀಳೇ ಹಿಡಿದಿತ್ತು ಎನ್ನಿ ಬೇಕಾದರೆ. ಹೀಗೆಒಂದು ದಿನ ಪೇಟೆಯಲ್ಲಿ ನಿಂತು ನೋಡು ತ್ತಿರುವಾಗ ಗೋಡೆಯ ಮೇಲಿನ ಆಕೃತಿ ಯನ್ನೆ ಯಥಾವತ್ತಾಗಿ ಹೋಲುವ ವ್ಯಕ್ತಿ ಯೊಬ್ಬ ಟ್ಯಾಕ್ಸಿಯಲ್ಲಿ ಹೋಗುತ್ತಿದ್ದುದನ್ನು ಕಂಡೆ. ಕಂಡವನೆ ಅದರ ಹಿಂದೆ ಹುಚ್ಚನಂತೆ ಓಡ ತೊಡಗಿದೆ. ಆದರೆ ಟ್ಯಾಕ್ಸಿಯ ವೇಗವೆಲ್ಲಿ! ನನ್ನ ವೇಗವೆಲ್ಲಿ! ಮುಂದೆ ಒಂದು ಟ್ಯಾಕ್ಸಿ ಖಾಲಿಯಾಗಿ ನಿಂತದ್ದು ಕಾಣಿಸಿತು. ಕೂಡಲೆ ಅದರೊಳಗೆ ನುಗ್ಗಿ ಆ ಟ್ಯಾಕ್ಸಿಯನ್ನು ಬೆನ್ನಟ್ಟುವಂತೆಯೂ ಅದಕ್ಕಾಗಿ ಸಾಮಾನ್ಯ ವಾಗಿ ಕೊಡುವುದಕ್ಕಿಂತ ಎರಡು ಪಟ್ಟು ಹಣ ಕೊಡುವುದಾಗಿಯೂ ಹೇಳಿ ಡ್ರೈವರನನ್ನು ಪುಸಲಾಯಿಸಿದ.

ಐದೇ ನಿಮಿಷಗಳಲ್ಲಿ ಟ್ಯಾಕ್ಸಿ ಚಾರಿಂಗ್ ಕ್ರಾಸನ್ನು ತಲುಪಿತು. ಅದಕ್ಕಿಂತ ಕೆಲವೆ ಕ್ಷಣಗಳ ಮೊದಲು ಆತ ಟ್ಯಾಕ್ಸಿಯಿಂದ ಬಂದು ಕೆಳಗಿಳಿದು ತನ್ನ ಹೆಂಡತಿ ಮಕ್ಕಳ ಸಮೇತ ನಾಗಿ ಸ್ಟೇಶನ್ನಿಗೆ ಹೋಗಿ ಫ್ಲೋಕ್‌ಸ್ಟೋನಿಗೆ ಹೋಗುವ ಗಾಡಿ ಹಿಡಿದ. ಗಾಡಿ ಬಿಡುವ ಸಮಯ ಸಮೀಪಿಸುತ್ತಿತ್ತು ಕಿಸೆಗೆ ಕೈ ಹಾಕಿ ಸಿಕ್ಕಷ್ಟು ಹಣ ತೆಗೆದು ಅವಸರವಸರವಾಗಿ ಕೌಂಟರಿನ ಮೇಲಿಟ್ಟು ಟಿಕೇಟು ಪಡೆದವನೆ ಗಾಡಿಯಲ್ಲಿ ನುಗ್ಗಿದೆ. ಫ್ಲೋಕ್‌ಸ್ಟೋನ್ ಬಂತು. ಆಗಲಾದರೂ ಅವನನ್ನು ಸಂಧಿಸ ಬೇಕೆಂದರೆ ಅವನ ಸುತ್ತ ಮುತ್ತಲೂ ಒಂಥು ಬಳಗದವರು ತುಂಬಿಕೊಂಡಿದ್ದರಿಂದ ಸಾಧ್ಯ ವಾಗಲಿಲ್ಲ.

ಸ್ಟೇಶನ್ನಿನಲ್ಲಿಳಿದವನೆ ಆತ ಸಮುದ್ರತೀರ ದೆಡೆಗೆ ಸಾಗಿದ. ಒಂದು ಹಡಗು ಫ್ರಾನ್ಸಿಗೆ ಹೋಗಲು ತಯಾರಾಗಿ ನಿಂತಿತ್ತು. ಅದರಲ್ಲಾತ ಪರಿವಾರ ಸಮೇತನಾಗಿ ಏರಿದ. ಎಲ ಎಲಾ! ಈ ಆಸಾಮಿ ನನ್ನ ಕೈ ಬಿಟ್ಟು ಹೋಗುತ್ತಾ ದಲ್ಲಾ ಅಂದುಕೊಂಡೆ. ಆದರೆ ಗೋಡೆಯ ಮೇಲಿನ ಮುಖವನ್ನು ಹೋಲುವ ಆ ಮನುಷ್ಯನನ್ನು ಸಂಧಿಸುವ ಆಕಾಂಕ್ಷೆ ನನ್ನಲ್ಲಿ ಎಷ್ಟು ಅದಮ್ಯವಾಗಿತ್ತೆಂದರೆ ಕಿಸೆಯಲ್ಲಿ ಹಣವಿತ್ತೋ ಇಲ್ಲವೋ ಎಂಬುದನ್ನು ಲೆಕ್ಕಿಸದೆ ಹಡಗವನ್ನೇರಿದೆ.

ಒಳಗೆ ಆತ ಒಂದು ಪ್ರೈವೇಟ್ ಸಲೂನಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದ. ಸಲೂನನ್ನೆ ಬಾಡಿಗೆ ಹಿಡಿದಿದ್ದಾನೆಂದ ಮೇಲೆ ಆತ ಸಿರಿವಂತನೆ ಆಗಿರಬೇಕು. ಅವನು ಒಮ್ಮೆಯಾದರೂ ಹವಾ ಸೇವನೆಗೆಂದು ಡೆಕ್ಕಿನ ಮೇಲೆ ಬರಬಹುದಲ್ಲ, ಆಗ ಆತನನ್ನು ಸಂಧಿಸಿದರಾಯಿತು ಅಂದು ಕೊಂಡು ಸಲೂನಿನ ಮುಂದೆ ಸುತ್ತಾಡತೊಡ ಗಿದೆ.

ಸೂರ್ಯಾಸ್ತವಾಗುತ್ತಿತ್ತು. ಸಂಜೆಯ ಹೊಂಗಿರಣಗಳು ತೆರೆಗಳ ಮೇಲೆ ನರ್ತಿಸಿ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿದ್ದವು. ಪಶ್ಚಿಮದಿಂದ ಮಂದಮಾರುತ ಬೀಸುತ್ತಿತ್ತು. ಇಂಥ ವೇಳೆಯಲ್ಲಿ ಹೊರಬೀಳದಿದ್ದರೆ ಎಂಥಾ ಅರಸಿಕನಪ್ಪಾ ಅವನು. ಅವನಲ್ಲಿ ಇಷ್ಟೆಲ್ಲಾ ಐಶ್ವರ್ಯವಿದ್ದರೂ ವ್ಯರ್ಥ ಅಂದುಕೊಂಡೆ. ಏನಾಶ್ಚರ್ಯ ಈ ವಿಚಾರ ನನ್ನ ತಲೆಯಲ್ಲಿ ಬರುವುದಕ್ಕೂ ಆತ ಒಬ್ಬ ಚಿಕ್ಕ ಹುಡುಗಿ ಯೊಡನೆ ಸಲೂನಿನಿಂದ ಹೊರಬೀಳುವುದಕ್ಕೂ ಸರಿ ಹೋಯಿತು.

ಆ ಹುಡುಗಿ ಬಹುಶಃ ಅವನ ಮಗಳಿರ ಬೇಕೆಂದು ಕಾಣುತ್ತದೆ ಆತನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಿತ್ತು. ನಾನು ಈ ಸುಸಂಧಿಯನ್ನು ಕಳೆದುಕೊಳ್ಳಬಾರದೆಂದು ನಿರ್ಧರಿಸಿ ಸರಕ್ಕನೆ ಅವನ ಮುಂದೆ ನಿಂತು, "ರಾಯರೆ, ಸ್ವಲ್ಪ ನಿಮ್ಮ ವಿಜಿಟಿಂಗ್ ಕಾರ್ಡನ್ನು ಕೊಡುತ್ತೀರಾ ?" ಎಂದು ಕೇಳಿದೆ. ನನ ಆತುರವನ್ನು ಆಕಾರವನ್ನು ನೋಡಿ ಆತ ನನ್ನನ್ನು ಹುಚ್ಚನೆಂನು ಭಾವಿಸಿದನೋ ಏನೋ ಒಂದು ವಿಧವಾಗಿ ನನ್ನನ್ನು

ನೋಡಿ ವಿಜಿಟಿಂಗ್ ಕಾರ್ಡನ್ನು ಕೈಯಲ್ಲಿರಿಸಿ ಅವಸರವಸರವಾಗಿ ಆ ಹುಡುಗಿಯೊಡನೆ ಪುನಃ ಸಲೂನಿನಲ್ಲೇ ಹೊರಟು ಹೋದ.

ಉತ್ಸಾಹ ಕುತೂಹಲಗಳಿಂದ ನಿರ್ಜನವಾದ ಡೆಕ್ಕಿನ ಮೂಲೆಗೆ ಹೋಗಿ ವಿಜಿಟಿಂಗ್ ಕಾರ್ಡನ್ನು ನೋಡಿದರೆ 'ಎಂ. ಓರ್‌ಮಂಡ್ ವಾಲ್, ಪಿಟ್ಸ್‌ಬರ್ಗ್, ಯು. ಎಸ್. ಎ.' ಎಂದಿಷ್ಟು ಅದರಲ್ಲಿತ್ತು. ಎದೆ ಡವಡವ ಬಡಿದುಕೊಳ್ಳತೊಡಗಿತ್ತು. ಕಣ್ಣಿಗೆ ಕತ್ತಲು ಕವಿದಂತಾಯಿತು. ಮುಂದೇನಾಯಿತೋ ಗೊತ್ತಾಗಲಿಲ್ಲ. ಕಣ್ಣು ತೆರೆದಾಗ ಚಾರ್ಲೋನಿನ ಆಸ್ಪತ್ರೆಯಲ್ಲಿದ್ದೆ, ಕಳೆದ ತಿಂಗಳು ತಾನೆ ಅಲ್ಲಿಂದ ಬಿಡುಗಡೆಯಾಗಿ ಬಂದೆ," ಎಂದು ಹೇಳಿ ಆ ಕುಳ್ಳ ಮನುಷ್ಯ ಸುಮ್ಮನಾದ.

ನಮಗೆ ಕುತೂಹಲವನ್ನು ತಡೆಯಲಾಗಲಿಲ್ಲ. "ಏನಪ್ಪಾ, ಒಮ್ಮೆಲೆ ಹೀಗೆ ಸುಮ್ಮನಾಗಿಬಿಟ್ಟೆ! ಮುಂದೆ ಏನೂ ಘಟಿಸಲೇ ಇಲ್ಲವೆ? ಗೋಡೆಯ ಮೇಲಿನ ಆಕೃತಿಯನ್ನು ಹೋಲುವ ಮನುಷ್ಯನನ್ನು ಇಷ್ಟೆಲ್ಲಾ ಬವಣೆಪಟ್ಟು ಹುಡುಕಿದ ಭಾಗ್ಯವೆ ಇದು!" ಎಂದೆವು.

ಆತ ಮುಂದುವರಿಸಿದ. 'ಏನು ಸ್ವಾಮಿ? ಇಷ್ಟಕ್ಕೆ ಕಥೆ ಮುಗಿಯಿತೆಂದು ನಾನೇನಾದರೂ ಹೇಳಿದೆನೆ? ಒಮ್ಮೊಮ್ಮೆ ಕಲ್ಪನೆಗಿಂತಲೂ ಸತ್ಯ ವಿಚಿತ್ರವಾಗಿರುತ್ತದೆಂದು ಮೊದಲೆ ಹೇಳಲಿಲ್ಲವೆ ನಿಮಗೆ? ನಡೆದದ್ದನ್ನು ಪೂರ್ಣ ಹೇಳುವ ವರೆಗಾದರೂ ಸ್ವಲ್ಪ ತಾಳ್ಮೆವಹಿಸಿರಲ್ಲ!

'ಅಂದ ಹಾಗೆ ನಾನು ಮಾತನ್ನು ಎಲ್ಲಿ ನಿಲ್ಲಿಸಿದೆನೆಂಬುದನ್ನೇ ಮರೆತು ಬಿಟ್ಟೆ ನೋಡಿ, ಮಾತಿನ ಮಧ್ಯೆ ಅಡ್ಡ ಬಂದರೆ ಆಗುವುದೇ ಹೀಗೆ.

'ಹಾಂ! ನೆನಪಾಯಿತು. ಲಂಡನ್ನಿಗೆ ಬಂದ ನಂತರ ಓರ್‌ಮಂಡ್ ವಾಲ್‌ನ ಬಗೆಗೆ ಮಾಹಿತಿಯನ್ನು ಕಲೆಹಾಕತೊಡಗಿದೆ. ಅದಕ್ಕಾಗಿ ಲಂಡನ್ನಿನಲ್ಲಿ ವಾಸಿಸುತ್ತಿದ್ದ ಅಮೇರಿಕನ್ನರ ಸ್ನೇಹ ಬೆಳಸಿದೆ. ಅಮೇರಿಕನ್ ಸಂಸ್ಥೆಗಳ ಸಮಾರಂಭಗಳಲ್ಲಿ ನಿಯಮಿತವಾಗಿ ಭಾಗವಹಿಸತೊಡಗಿದೆ. ಆತನ ಜೀವನದ ಬಗೆಗೆ ಕೆಲ ಸಂಗತಿಗಳನ್ನು ಕೇಳಿ ಪಿಟ್ಸ್‌ಬರ್ಗಿನ ಕೆಲ ಸ್ನೇಹಿತರಿಗೆ ಪತ್ರ ಬರೆದೆ. ಇದೆಲ್ಲದರಿಂದಾಗಿ ಓರ್ಮಂಡ್ ವಾಲ್ ಒಬ್ಬ ಕೋಟ್ಯಧೀಶನೆಂದೂ ಆತನ ತಂದೆ ತಾಯಿಗಳು ಲಂಡನ್ನಿನಲ್ಲಿ ವಾಸಿಸುತ್ತಿದ್ದಾರೆಂದೂ ತಿಳಿದುಬಂತು. ಆದರೆ ಅವನ ಲಂಡನ್ನಿನ ವಿಳಾಸ ಮಾತ್ರ ಎಷ್ಟು ಪ್ರಯತ್ನಿಸಿದರೂ ದೊರಕಲಿಲ್ಲ.

ನನ್ನ ಕೋಣೆಯ ಗೋಡೆಯ ಮೇಲಿನ ಆಕೃತಿಗೂ ಓರ್ಮಂಡ್ ವಾಲ್‌ನಿಗೂ ನನಗೂ ಏನೋ ಅವ್ಯಕ್ತ ಸಂಬಂಧವಿದೆ; ನಾವಿಬ್ಬರೂ ರಹಸ್ಯಮಯವಾದ ಅದಾವುದೋ ಸೂತ್ರದಿಂದ ಬಂಧಿಸಲ್ಪಟ್ಟಿದ್ದೇವೆ ಎಂಬ ಭಾವನೆ ದಿನ-ದಿನಕ್ಕೆ ಬಲಿಯುತ್ತಿತ್ತು. ಇತ್ತೀಚಿಗಂತೂ ನನಗೆ ಓರ್ಮಂಡ್ ವಾಲ್‌ನ ಬಗ್ಗೆ ಒಂದು ಬಗೆಯ ಗೀಳೇ ಹಿಡಿದುಕೊಂಡಿತ್ತು. ಎದ್ದರೂ ವಾಲ್, ಕೂತರೂ ವಾಲ್, ಎಲ್ಲೆಂದರಲ್ಲಿ ಅಲ್ಲಿ ವಾಲ್‌ನನ್ನು ಕುರಿತೇ ವಿಚಾರ. ಮಲಗಿಕೊಂಡರೂ ಸಹ ನನಗೆ ಬೀಳುತ್ತಿದ್ದುದು ಓರ್ಮಂಡ್ ವಾಲ್‌ನ ಕನಸುಗಳೆ.

"ನಿನ್ನೆ ತುಂಬಾ ದಣಿವಾಗಿದ್ದರಿಂದ ಬೇಗನೆ ಮಲಗಿದೆ. ಹಾಸಿಗೆ ಬಿಟ್ಟೆದ್ದಾಗ ಮುಂಜಾನೆ ಹತ್ತು ಗಂಟೆಯಾಗಿತ್ತು. ಸೂರ್ಯಪ್ರಕಾಶ ಕೋಣೆಯಲ್ಲೆಲ್ಲಾ ಬಿದ್ದಿತ್ತು. ಒಮ್ಮೆ ಆಕಳಿಸಿ ವಾಡಿಕೆಯಂತೆ ಗೋಡೆಯತ್ತ ನೋಡಿದೆ. ಆಶ್ಚರ್ಯ! ದಿನಾಲು ಎದ್ದು ಕಾಣುತ್ತಿದ್ದ ವಾಲ್‌ನ ಆಕೃತಿ ಅದೇಕೋ ಮಸುಕಾಗಿ ಹೋಗಿತ್ತು. ಎಲಾ ಇವನ! ಗೋಡೆಯ ಮೇಲಿನ ಎಲ್ಲ ಕಲೆಗಳು ಮಸುಕಾದರೂ ಇದು ಮಾತ್ರ ಎಂದೂ ಮಸುಕಾಗಿರಲಿಲ್ಲ. ಆದರೆ ಈ ದಿನವೇಕಪ್ಪಾ ಇದು ಇಷ್ಟು ಮಸುಕಾದದ್ದು?" ಅಂದುಕೊಂಡೆ.

"ಮುಖ ತೊಳೆದುಕೊಂಡು ಚಹ ಕುಡಿಯಲು ಹೋಟೆಲಿನತ್ತ ನಡೆದೆ. 'ಕೋಟ್ಯಧೀಶನಿಗೆ ಅಪಘಾತ' ಎಂದು ಪೇಪರು ಮಾರುವ ಹುಡುಗರು ಬೀದಿಯಲ್ಲಿ ಕೂಗುತ್ತಿದ್ದುದನ್ನು ಕಂಡು ಕುತೂಹಲದಿಂದ ಒಂದು ಪ್ರತಿ ತೆಗೆದುಕೊಂಡು ಪೇಪರನ್ನು ತೆರೆದು ನೋಡಿದಾಗ, ಸ್ಪಿಚಾದಿಂದ ತೀಸಾದತ್ತ ಓರ್ಮಂಡ್ ವಾಲ್

ಪ್ರಯಾಣಿಸುತ್ತಿದ್ದಾಗ ಕಾರು ಟ್ರಕ್ಕಿಗೆ ಹಾಯ್ದದ್ದರಿಂದ ಅವನು ಗಾಯಗೊಂಡಿದ್ದಾನೆಂದೂ ಪರಿಸ್ಥಿತಿ ಚಿಂತಾಜನಕವಾಗಿದೆಯೆಂದೂ ಅದರಲ್ಲಿ ಬರೆಯಲಾಗಿತ್ತು.

"ಆತನಿಗೂ ನನಗೂ ಏನು ಸಂಬಂಧ? ಆದರೂ 'ಪಾಪ?' ಎಂಬ ಉದ್ಗಾರ ನನ್ನ ಬಾಯಿಂದ ತಂತಾನೇ ಹೊರಬಿತ್ತು. ಚಹವನ್ನು ಹೇಗೋ ಗಂಟಲಿಗಿಳಿಸಿ ಮನೆಗೆ ಬಂದು ಹಾಸಿಗೆಯ ಮೇಲುರುಳಿದೆ. ಅಕಸ್ಮಾತ್ತಾಗಿ ಗೋಡೆಯತ್ತ ದೃಷ್ಟಿ ಹರಿಸಿದಾಗ ವಾಲನ ಆಕೃತಿ ಮಾಯವಾಗಿತ್ತು. ಗಡಿಯಾರ ಠಣ್ ಠಣ್ ಎಂದು ಮೂರು ಬಾರಿ ಬಡಿದುಕೊಂಡಿತು. ಮತ್ತೆ ನಿದ್ದೆಯ ಮಂಪರು. ಆ ಮಂಪರಿನಲ್ಲೆ ಏನೇನೋ ಕನಸುಗಳು, ಭಯಾನಕ ಕನಸುಗಳು. ಎಲ್ಲಾ ಓವರ್‌ಲ್ಯಾಂಡ್ ವಾಲ್‌ನಿಗೆ ಸಂಬಂಧಿಸಿದವುಗಳೇ.

"ಸಂಜೆ ಆರು ಗಂಟೆಗೆ ರೇಡಿಯೋದಲ್ಲಿ ಓವರ್‌ಲ್ಯಾಂಡ್ ವಾಲ್ ಅಪಘಾತದಲ್ಲಿ ತೀರಿಕೊಂಡ ಸುದ್ದಿಯನ್ನು ಕೇಳಿದೆ. ಅವನು ಅಂದು ಮಧ್ಯಾಹ್ನ ಸರಿಯಾಗಿ ಮೂರು ಗಂಟೆಗೇ ತೀರಿಕೊಂಡಿದ್ದ." ಎಂದು ಹೇಳಿ ಆತ ಸುಮ್ಮನಾದ.

"ಗೋಡೆಯ ಮೇಲೆ ಜೀವಂತ ಮನುಷ್ಯನ ಆಕೃತಿ ಮೂಡುವುದೆಂದರೇನು? ಅದು ಆತನ ಜೀವನಕ್ಕೆ ಸಂಬಂಧಿಸಿರುತ್ತದೆಂದರೇನು? ನಿಜಕ್ಕೂ ಇದು ಅದ್ಭುತ! ಅತ್ಯದ್ಭುತ!' ರಷ್ಯನ್ ವೈಟ್ ಉದ್ಗರಿಸಿದ.

ಆ ಕುಳ್ಳನ್ನ ಮನುಷ್ಯ ಮತ್ತೆ ಪ್ರಾರಂಭಿಸಿದ. "ಹೌದು ನಾನು ಹೇಳಿದ್ದು ಅದ್ಭುತವೆಂಬುದರಲ್ಲಿ ಸಂಶಯವೇ ಇಲ್ಲ. ಆದರೆ ಈ ಘಟನೆಯಲ್ಲಿ ಒಂದಲ್ಲ, ಮೂರು ಅದ್ಭುತಗಳು ಒಂದಕ್ಕೊಂದು ಬೆಸೆದುಕೊಂಡಿವೆಯೆಂಬುದನ್ನು ನೀವು ಯಾರಾದರೂ ಗಮನಿಸಿದ್ದೀರಾ? ಮೊದಲನೇ ಅದ್ಭುತವೆಂದರೆ ಲಂಡನ್ನಿನ ಮುರುಕು ಕೋಣೆಯೊಂದರ ಗೋಡೆಯ ಮೇಲೆ ತೇವ ಕಾಣಿಸಿಕೊಂಡು ಅದರ ಮೇಲೆ ಅಮೇರಿಕನ್ನನೊಬ್ಬನ ಚಿತ್ರ ಒಡಮೂಡುವುದು ಮತ್ತು ಆ ಚಿತ್ರಕ್ಕೂ ಅಮೇರಿಕನ್ನನ ಜೀವನಕ್ಕೂ ಏನೋ ಒಂದು ಬಗೆಯ ಸಂಬಂಧವಿರುವುದು. ಎರಡನೆಯ ಅದ್ಭುತವೆಂದರೆ ಆ ವ್ಯಕ್ತಿಯ ಹೆಸರೂ ಆ ವ್ಯಕ್ತಿಯ ಚಿತ್ರ ಮೂಡಿದ ಸ್ಥಳದ ಹೆಸರೂ ಒಂದೇ ಆಗಿರುವುದು. ಇಂಗ್ಲೀಷಿನಲ್ಲಿ ವಾಲ್ ಎಂದರೆ ಗೋಡೆ ಎಂದು ತಾನೇ ಅರ್ಥ?"

ಅಷ್ಟರಲ್ಲಿ ನಮ್ಮ ಮಿತ್ರನೊಬ್ಬ ಮತ್ತಾವುದೋ ವಿಷಯದ ಬಗ್ಗೆ ಪ್ರಸ್ತಾಪವೆತ್ತಿದ್ದರಿಂದ ನಮ್ಮ ಗಮನವೆಲ್ಲವೂ ಅತ್ತ ಕೇಂದ್ರೀಕೃತವಾಯಿತು. ಆಗಲೇ ರಾತ್ರಿ ಹತ್ತು ಗಂಟೆಯಾಗಿತ್ತು. ಆ ಕುಳ್ಳ ಗುಡ್ ನೈಟ್ ಹೇಳಿ ಹೊರನಡೆದ.

"ಅಲ್ಲಯ್ಯಾ, ಮೂರು ಅದ್ಭುತಗಳಿವೆಯೆಂದು ಹೇಳಿ ಎರಡೇ ಅದ್ಭುತಗಳನ್ನು ಹೇಳಿದೆಯಲ್ಲ. ಇನ್ನೊಂದನ್ನೂ ಹೇಳಿ ಬಿಡಬಾರದೇ?" ಸ್ಪೆಂಟನ್ ತಾನು ಕುಳಿತಲ್ಲಿಂದಲೇ ಕೂಗಿದ.

ಈ ವೇಳೆಗೆ ಹೊಸ್ತಿಲನ್ನು ದಾಟಿದ್ದ ಕುಳ್ಳ ಹೊರ ನಿಂತು, "ಹೌದು. ಅದನ್ನೂ ನಿಮಗೆ ಹೇಳಬೇಕಾಗಿತ್ತು. ಹೇಳಲು ಮರೆತೇಬಿಟ್ಟೆ. ಮೂರನೇ ಅದ್ಭುತವೆಂದರೆ ಕೇವಲ ಒಂದು ಗಂಟೆಯ ಹಿಂದೆ ಕಟ್ಟಿದ ಈ ಕಲ್ಪನಾತೀತವಾದ ಕಥೆಯನ್ನು ಇದುವರೆಗೆ ನೀವೆಲ್ಲ ನಿಜವೆಂದೇ ನಂಬಿದ್ದು." ಎಂದು ಹೇಳಿ ಕತ್ತಲಲ್ಲಿ ಕಣ್ಮರೆಯಾದ. ✿

ಕ್ಯಾನರಿ ಎಂಬ ಜಾತಿಯ ಹಾಡುವ ಹಕ್ಕಿಗಳು ಸಾಮಾನ್ಯವಾಗಿ ಹಾಡುವುದೇ ಇಲ್ಲ. ಆದರೆ ಹೆಣ್ಣು ಹಕ್ಕಿಯನ್ನು ಪಂಜರದಲ್ಲಿಟ್ಟು ಅದಕ್ಕೆ ಗಂಡು ಹಕ್ಕಿಯ ವೀರ್ಯಾಣುವಿನ ಚುಚ್ಚು ಮದ್ದು ಕೊಟ್ಟಲ್ಲಿ ಆಗ ಅದು ಹಾಡುತ್ತದೆ. ಡಚ್ ಪಶು ವೈದ್ಯರುಗಳು ಇದನ್ನು ಸಂಶೋಧಿಸಿದ್ದಾರೆ.

— ಅಶಾಮಿಳ

ಕೆ. ಎಲ್. ದತ್ತ

ಇದು ಬ್ರೆಡ್ಡಿನ ಪುರಾಣ

ಸರ್ವಾಕರ್ಷಕವಾದ
ಬ್ರೆಡ್ಡಿನ ಪುರಾಣ
ತಿಳಿದಿಲ್ಲವೆ?

ಅಂಧಾನುಕರಣದ ಶಾಪ ಭಾರತೀಯರನ್ನು ಇನ್ನೂ ಬಿಟ್ಟಿಲ್ಲ. ಅದೇಕೆ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅದರ ಪರಿಣಾಮ ಮತ್ತಷ್ಟು ತೀವ್ರತರವಾಗಿ ಕಂಡು ಬರಹತ್ತಿದೆ. ಉಡಿಗೆ ತೊಡಿಗೆಗಳಲ್ಲಿ ಪಾಶ್ಚಾತ್ಯರನ್ನು ಅನುಸರಿಸಲು ಪ್ರಾರಂಭಿಸಿದ ನಮ್ಮವರು ಈಗ ತಿಂಡಿ- ತೀರ್ಥಗಳಲ್ಲಿಯೂ ಅವರನ್ನೇ ಮಾದರಿಯನ್ನಾಗಿ ಇಟ್ಟುಕೊಳ್ಳಹತ್ತಿದ್ದಾರೆ. ಆರೋಗ್ಯಭಾಗ್ಯಕ್ಕೆ ಹಾನಿಕರವಾದ ಮದ್ಯಪಾನ ಇಂದು ಒಂದು ಫ್ಯಾಶನ್ ಆಗಿ ಪರಿಣಮಿಸಿದೆ. ಇದರಲ್ಲಿ ಸಹಕರಿಸದಿದ್ದವನನ್ನು ಅನಾಗರಿಕನೆಂದು ಪರಿಗಣಿಸಲಾಗುತ್ತಿದೆ. ತತ್ತಿಯಂತೂ ಸಸ್ಯಾಹಾರದಲ್ಲಿ ಬಂದು ಬಿಟ್ಟಿದೆ. ಹಿಂದಿನ ಕಾಲದಲ್ಲಿ ಔಷಧವೆಂದು ಇದನ್ನು ಸೇವಿಸಬೇಕಾದಾಗ ಹಿಂದುಮುಂದು ನೋಡುತ್ತಿದ್ದ ನಮ್ಮವರು ಈಗ ಇದನ್ನು ಮೆಚ್ಚಿಕೊಂಡು ಬಾಯಿ ಚಪ್ಪರಿಸುತ್ತಿದ್ದಾರೆ. ಶಾಕಾಹಾರಿಗಳಿಗೆ ಸಿದ್ಧ ಮಾಂಸಾಹಾರವನ್ನು ಮನೆಗೆ ರಹಸ್ಯವಾಗಿ ಮುಟ್ಟಿಸುವ ಹೋಟೇಲುಗಳೂ ಈಗ ಹುಟ್ಟಿಕೊಂಡಿವೆ. ಸಂಪ್ರದಾಯಪ್ರಿಯರಾದ ಹಿರಿಯರು "ಕಾಲಾಯತಸ್ಮೈನಮಃ" ಎಂದು ತೆಪ್ಪಗೆ ಕುಳಿತುಕೊಳ್ಳುವಂತಾಗಿದೆ.

ಮಾಂಸಾಹಾರ— ಮದ್ಯಪಾನಗಳು ನಮಗೆ ತ್ಯಾಜ್ಯವಾಗಿರುವಂತೆ ಬ್ರೆಡ್ಡು ಕೂಡ ತ್ಯಾಜ್ಯ ಎಂದು ಹೇಳಿದರೆ ಯಾರೂ ಬೆಚ್ಚಬೇಕಾಗಿಲ್ಲ. ಬೀದಿ ಬೀದಿಗಳಲ್ಲಿ, ಕೈಗಾಡಿಗಳಲ್ಲಿ, ಮನೆ ಮನೆಗೂ ನಿರಾಯಾಸವಾಗಿ ದೊರೆಯುವ, ಅತ್ಯಂತ ಸುಲಭ ರುಚಿಕರ ಆಹಾರವಾದ ಬ್ರೆಡ್ಡಿನ ಬಗ್ಗೆ ಈ ಆಕ್ಷೇಪಣೆ ಏಕೆ ಎಂದು ಕೇಳುವವರಿಗೆ ಈ ಬ್ರೆಡ್ಡಿನ ನಿಜಸ್ವರೂಪ ಗೊತ್ತಾಗಿಲ್ಲವೆಂದೇ ಹೇಳಬೇಕಾಗುತ್ತದೆ.

ಬೆಳಿಗ್ಗೆ ಎದ್ದ ಕೂಡಲೆ ಚಹದ ಜೊತೆ ಬ್ರೆಡ್ಡು. ಮಧ್ಯಾಹ್ನ ಉಪಹಾರಕ್ಕೆ ಬ್ರೆಡ್ಡು. ರಾತ್ರಿ ಊಟಕ್ಕೆ ರೊಟ್ಟಿ— ಚಪಾತಿ ಇಲ್ಲದಂತಾದಾಗ ಬ್ರೆಡ್ಡು ಎಂದು ತಮ್ಮ ಆಹಾರದ ಬಹುಪಾಲಿಗಾಗಿ ಬ್ರೆಡ್ಡನ್ನೇ ಅವಲಂಬಿಸಿರುವ ಕುಟುಂಬಗಳ ಸಂಖ್ಯೆ ಸಾಕಷ್ಟಿದೆ. ಹೊಲದಲ್ಲಿ ದುಡಿಯಲು ಹೋಗುವ ರೈತ ಬಗಲಿಗೆ ಟ್ರಾನ್ಸಿಸ್ಟರ್ ನೇತು ಹಾಕಿದ್ದರೆ ಆತನ ಕೈಚೀಲದಲ್ಲಿ ಬ್ರೆಡ್ಡೇ ಇರುತ್ತದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಮೊದಲಿನಂತೆ ನೀವು ರೊಟ್ಟಿಗಂಟು ಏಕೆ ಒಯ್ಯುವದಿಲ್ಲ ಎಂದು ಆತನನ್ನು ಪ್ರಶ್ನಿಸಿದರೆ ದೊರೆಯುವ ಉತ್ತರ ನಿಮ್ಮನ್ನು ಚಕಿತಗೊಳಿಸುತ್ತದೆ. "ನಾನೇನು ಸುಧಾರಿಸಬಾರದೇನ್ರಿ. ಅವರೆಲ್ಲ ಇಂಗ್ಲಂಡ ಅಮೇರಿಕಾದಾಗ ಬ್ರೆಡ್ ತಿಂದೇ ಟೊಣಪರ್ಹಂಗ ಇರಾತರಲ್ರಿ. ಗೋದೀದೇ ಬ್ರೇಡ್ ತಯಾರಾಗತದ ಅದ

ಮೇಲೆ ಟಾನಿಕ್ ಅಲ್ಲೇನ್ರಿ ಇದು" ಎಂದು ಅಬ್ಬರಿಸುತ್ತಾನೆ. ಅಂದ ಬಳಿಕ ಇನ್ನು ಸುಧಾರಿಸಿದವರು ಎಂದುಕೊಳ್ಳುವವರು ತಮ್ಮ ಆಹಾರದಲ್ಲಿ ಬ್ರೆಡ್ಡನ್ನು ರೂಢಿಸಿಕೊಳ್ಳುವದರಲ್ಲಿ ಅಚ್ಚರಿ ಏನಿದೆ.

ಬ್ರೆಡ್ ತಿನ್ನುವದು ಸುಧಾರಿಸಿದವರ ಲಕ್ಷಣ- ಅದು ರುಚಿಕರ, ಪುಷ್ಟಿಕರ ಆಹಾರ ಎಂದಿರುವ ಇವರ ಮೂಲಭೂತ ನಂಬಿಕೆಯೇ ತಪ್ಪು ಎಂದು ಆ ವಿದೇಶಗಳ ವೈದ್ಯಕ ಸಂಸ್ಥೆಗಳು ನಡೆಸಿದ ಸಂಶೋಧನೆ ಸಾದರ ಪಡಿಸಿದ ವರದಿಗಳಿಂದ ಸಿದ್ಧವಾಗಿದೆ. ಕರುಳಿನ ರೋಗ, ಹಲ್ಲಿನ ರೋಗ, ಹೃದಯವಿಕಾರ, ಮಧುಮೇಹ ಮುಂತಾದ ವಿಕಾರಗಳು ಆ ಮುಂದುವರಿದ ದೇಶಗಳಲ್ಲಿಯೇ ಹೆಚ್ಚಾಗಿವೆ ಎಂಬುದನ್ನೂ ಆ ವರದಿಗಳು ತಿಳಿಸುತ್ತವೆ. ಅಲ್ಲಿ ವೈದ್ಯರ ಶಾಸ್ತ್ರ ಮುಂದುವರಿದಿರುವಷ್ಟೇ ರೋಗಗಳ ಸಂಖ್ಯೆಯೂ ಹೆಚ್ಚಿದೆ-

ಮೈದಾದಿಂದ ಬ್ರೆಡ್ ತಯಾರಿಸಲಾಗುತ್ತಿದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಗೋಧಿ ಸಂಸ್ಕರಿಸಿ ಮೈದಾ ಪಡೆಯುವಾಗ ಜೀವನ ಸತ್ವಗಳೆಲ್ಲ ತೌಡು, ಕಣಕಗಳಲ್ಲಿ ಉಳಿದುಹೋಗಿ ಮೈದಾ ನಿಸ್ಸತ್ವ ಹಿಟ್ಟಾಗಿ ಬಿಡುತ್ತದೆ. ನಾಲ್ಕು ದಿನ ಇಟ್ಟರೂ ಬ್ರೆಡ್ಡು ಕೆಡಬಾರದೆಂದು ಅದಕ್ಕೆ ಮತ್ತೆ ಕೆಲವು ವಸ್ತುಗಳನ್ನು ಸೇರಿಸುತ್ತಾರೆ. ಮೊದಲೇ ನಿಸ್ಸತ್ವವಾಗಿರುವ ಮೈದಾದಲ್ಲಿ ತಯಾರಕರು ಅಲ್ಪ ಸ್ವಲ್ಪವಾಗಿ ಜೀವಸತ್ವಗಳನ್ನು ಸೇರಿಸಿದರೂ, ಮೈದಾ ಮುದ್ದಿ ಕುಲಿಮೆಯಲ್ಲಿ ಬೆಂದು ಹೂವಿನಂತೆ ಹಗುರಾದ ಬ್ರೆಡ್ಡಾಗಿ ಹೊರಬರುವಾಗ ಅದರಲ್ಲಿಯ ಜೀವಸತ್ವಗಳೆಲ್ಲ ಸುಟ್ಟು ನಾಶವಾಗಿ ಹೋಗಿರುತ್ತವೆ. ಆಹಾರವನ್ನು ಹೆಚ್ಚೆಚ್ಚು ಸಂಸ್ಕರಿಸಿದಷ್ಟೂ ಅದರಲ್ಲಿಯ ಜೀವಸತ್ವಗಳು ಹಾಳಾಗಿ ಹೋಗುತ್ತವೆ ಎಂಬುದು ಸ್ವತಸ್ಸಿದ್ಧ ಮಾತು.

ಗೋಧಿಯ ಸತ್ವವನ್ನೆಲ್ಲ ದನಕರುಗಳಿಗೆ ಹಾಕಿ ಮೈದಾದ ಬ್ರೆಡ್ಡು ತಿನ್ನುವ ಅಮೇರಿಕನ್ ನಾಗರಿಕರ ಸ್ಥಿತಿ ಶೋಚನೀಯ ಎಂದು ಅಲ್ಲಿಯ ತಜ್ಞರೇ ಹೇಳುತ್ತಿದ್ದಾರೆ.

ನಿಸರ್ಗದತ್ತ ಆಹಾರವನ್ನು ಬೇಯಿಸಿ, ಕುದಿಸಿ, ಅದನ್ನು ಸಂಹಾರ ಮಾಡಿ, ಮತ್ತೆ ರುಚಿಗೆಂದು ಮಸಾಲೆ ಸೇರಿಸಿ ಸತ್ತ ಆಹಾರ ಸೇವಿಸುವದೆಂದರೆ ಶರೀರಕ್ಕೆ ಅಪಾಯಕರ, ರೋಗಗಳಿಗೆ ಆಮಂತ್ರಣ ಇತ್ತಂತೆ ಎಂದು ಭಾರತದ ನಿಸರ್ಗ ಚಿಕಿತ್ಸಕರ ಅಭಿಮತ. ಸಾತ್ವಿಕ ಆಹಾರ ಪಥ್ಯಕರ ಎಂದು ಆಯುರ್ವೇದ ಪಂಡಿತರ ಅಭಿಪ್ರಾಯ. ಬ್ರೆಡ್ಡು ನಾಲ್ಕು ದಿನ ಬಾಳಬೇಕೆಂದು ತಯಾರಕರು ಉಪಯೋಗಿಸುವ (ಆ್ಯಂಟಿಸ್ಟೇಲಿಂಗ ಏಜಂಟ್) ವಸ್ತುವನ್ನು ಆಹಾರದಲ್ಲಿ ಬೆರಸಿ ಇಲಿಗಳಿಗೆ ಕೊಡಲಾಗಿ ಹತ್ತು ದಿನಗಳಲ್ಲಿ ಅನೇಕ ಇಲಿಗಳು ಸತ್ತು ಹೋದವು ಎಂಬ ದೃಷ್ಟಾಂತ ಆ ವರದಿಯಲ್ಲಿದೆ. ಮೈದಾದ ಬ್ರೆಡ್ಡಿಗಿಂತ ಕಣಕದ ಬ್ರೆಡ್ಡು ಅಷ್ಟು ಅಪಾಯಕರವಲ್ಲ ಆದರೆ ಅದು ತಡೆಯುವದಿಲ್ಲ. ಕಣಕದ ಬ್ರೆಡ್ (ಬ್ರೌನ್ ಬ್ರೆಡ್)ನ್ನು ಅಂದಂದಿಗೇ ತಿಂದು ಮುಗಿಸಬೇಕಾಗುತ್ತದೆ. ಹೀಗಾಗಿ ಅದು ಅಷ್ಟು ಜನಪ್ರಿಯವಾಗಿಲ್ಲ.

ಮೈದಾದ ಬ್ರೆಡ್ಡು ದೇಹಕ್ಕೆ ಹಿತಕಾರಿಯಲ್ಲ ಎಂದು ಅಮೇರಿಕೆಯಲ್ಲಿ ಆಗಾಗ ಪ್ರತಿಭಟನೆಗಳು ಕಂಡು ಬಂದರೂ ಅದನ್ನು ಪ್ರತ್ಯಕ್ಷವಾಗಿ ಸಿದ್ಧಮಾಡಿ ತೋರಿಸಲು ಸಾಧ್ಯವಾಗದ್ದರಿಂದ ಆ ವಿರೋಧ ಅಲ್ಲಲ್ಲೇ ಸೆಟೆದು ಹೋದವು. ಮುಂದೆ ಒಂದೊಂದಾಗಿ ಜೀವ ಸತ್ವಗಳ ಶೋಧವಾಗತೊಡಗಿದಂತೆ ಬ್ರೆಡ್ಡನ್ನು ಪರೀಕ್ಷೆಗೆ ಒಳಪಡಿಸಿ ಅದರ ನಿಸ್ಸತ್ವ ಅಪಾಯಕಾರಿ ಸ್ವರೂಪವನ್ನು ಬಯಲಿಗೆಳೆಯಲು ಸಾಧ್ಯವಾಯಿತು. ಅಂದರೂ ಬ್ರೆಡ್ಡಿನ ಜನಪ್ರಿಯತೆ ಕುಗ್ಗಲಿಲ್ಲ; ಇನ್ನೂ ಹೆಚ್ಚುತ್ತಲೇ ಇದೆ.

ಚಹಾ, ಕಾಫಿ, ಸಕ್ಕರೆ, ವನಸ್ಪತಿ ತುಪ್ಪ, ಸಿದ್ಧ ಆಹಾರಗಳು ದೇಹಕ್ಕೆ ಅಪಾಯಕರ ಎಂದು ಎಲ್ಲರೂ ತಿಳಿದಿದ್ದರೂ ಅವನ್ನು ಸಂಪೂರ್ಣವಾಗಿ ತ್ಯಜಿಸಲು ಎಲ್ಲರಿಗೆ ಸಾಧ್ಯವಾಗಿಲ್ಲ. ಹಾಗೇ ಬ್ರೆಡ್ಡು ಕೂಡ ಉಳಿದು ಬಂದಿದೆ. ಹಾಗಾದರೆ ಈ ವಾದವೇಕೆ? ಪ್ರಮಾಣವರಿತು ಕೊಟ್ಟಾಗ ವಿಷವೂ ಔಷಧವಾಗುತ್ತದೆ; ಅಳತೆ ತಪ್ಪಿದಾಗ ನೀರೂ ವಿಷ-

ವಾಗುತ್ತದೆ. ಆದ್ದರಿಂದ ಬ್ರೆಡ್ಡಿನ (ಗುಣ) ದೋಷಗಳನ್ನು ಅರಿತುಕೊಂಡು ಜನ ತಮ್ಮ ಆರೋಗ್ಯಕ್ಕೆ ಬೇಕಾದಷ್ಟು ಪ್ರಮಾಣದಲ್ಲಿ ಹಾನಿ ಮಾಡಿಕೊಳ್ಳಲಿ ಎಂಬ ಉದ್ದೇಶವೇ ಇಲ್ಲಿದೆ ಹೊರತು ಇನ್ನೇನಿಲ್ಲ

ಬ್ರೆಡ್ಡನ್ನು ಬಹಿಷ್ಕರಿಸಿದರೆ ಮುಂದೇನು? ನಮ್ಮ ತಾತ ಮುತ್ತಾತಂದಿರೆಲ್ಲ ಬ್ರೆಡ್ಡು ತಿಂದೇ ಬಾಳಿದರೆ? ಇಂದಿನವರಿಗಿಂತ ಅವರು ಅಧಿಕ ಸದೃಢರಾಗಿರಲಿಲ್ಲವೇ ಎಂದು ಮರುಪ್ರಶ್ನಿಸ ಬೇಕಾಗುವದು. ಅರಳಿಟ್ಟು, ಹೆಸರಿಟ್ಟುಗಳ ಬರಿ ಹೆಸರುಗಳನ್ನೇ ಈಗ ಕೇಳಬೇಕಾಗಿ ಬಂದಿದೆ. ಅವುಗಳಷ್ಟು ರುಚಿಕರ, ಆರೋಗ್ಯಕರ ಆಹಾರ ಬೇರೆ ಇಲ್ಲವೆಂದರೆ ನಿಜವನ್ನೇ ನುಡಿದಂತಾದೀತು. ಇಡ್ಲಿಯಂತೂ ಜನರಿಗೆ ಒಂದು ವರದಾನ ಇದ್ದಂತಿದೆ. ಸಾವಕ್ಕಿ, ನವಣಕ್ಕಿ, ನರೇದಕ್ಕಿಗಳಿಂದಲೂ ಒಳ್ಳೆಯ ಆಹಾರ ಪದಾರ್ಥಗಳನ್ನು ಮಾಡಿ ಮಕ್ಕಳಿಗೆ ನೀಡಬಹುದು. ಹಿರಿಯರೂ ಸವಿಯಬಹುದು. ರೊಟ್ಟಿ, ಚಪಾತಿಗಳನ್ನು 'ನ್ಯಾರಿ'ಗಾಗಿ ಬಳಸಬಹುದು. ತಂಗಳ ತಿನ್ನುವದು ಹೇಗೆ ಎಂಬ ಮಾತು ಬರಬಾರದು. ಬ್ರೆಡ್‌ನ್ನೂ ತಂಗಳ ಮಾಡಿಯೆ ತಿನ್ನುವದಿಲ್ಲವೆ! ಹಾಲು, ಮೊಸರು, ವ್ಯಂಜನ ಪದಾರ್ಥಗಳಿದ್ದರೆ ರೊಟ್ಟಿ ಚಪಾತಿಗಳು ಹೊಟ್ಟೆಗೆ ಹಿತಕರವೇ ಆಗಬಲ್ಲವು. ಆ ಗುಣ ಬ್ರೆಡ್ಡಿನಲ್ಲಿಲ್ಲ! ಆದರೆ ಅದು ಹೇಗೊ ರೊಟ್ಟಿ ಬಡವರ ಆಹಾರವೆಂದು ಮುದ್ರೆ ಹೊತ್ತು ಬಲ್ಲವರಿಗೆ ಅಪ್ರಿಯವೆನಿಸಿದೆ.

ಹೆಸರು, ಮಡಿಕೆ ಮುಂತಾದವುಗಳನ್ನು ನೆನಿಸಿ ಮೊಳಕೆಯೊಡೆಸಿ ಹಾಗೇ ತಿನ್ನುವದಂತೂ ಶ್ರೇಷ್ಠ ಆಹಾರವೆನಿಸುತ್ತದೆ. ಗೋದಿ, ಜೋಳಗಳನ್ನು ನೆನೆಸಿ ತಿನ್ನುವ ಸಾಧಕರು ತುಂಬ ಸದೃಢರಾಗಿರುವುದನ್ನು ನೋಡುತ್ತೇವೆ. ಪೌಷ್ಟಿಕ ಆಹಾರದ ವಿಚಾರದಲ್ಲಿ ತಿಳಿದುಕೊಳ್ಳಬೇಕಾದದು ಬೇಕಾದಷ್ಟಿದೆ. ಬ್ರೆಡಿನ ಪುರಾಣ ಇಷ್ಟೇ ಸಾಕು! ✡

ಪತ್ರಿಕಾ ಸ್ವಾತಂತ್ರ್ಯ

ಭಾರತೀಯ ವೃತ್ತ ಪತ್ರಿಕೆಗಳ ನೈತಿಕ ಸ್ಥೈರ್ಯ ಇಂದು ಎಷ್ಟು ಮಟ್ಟಿಗೆ ಕುಗ್ಗಿದೆಯೆಂದರೆ, ರಾಜಕೀಯ ಧುರೀಣರಿಂದ ಅಪರಾಧ ಸಂಭವಿಸಿದರೆ ಅದನ್ನು ಪ್ರಕಟಿಸುವ ಮಾತಂತೂ ದೂರ ಉಳಿಯಿತು. ಅಪರಾಧಕ್ಕೂ ಅವರಿಗೂ ಸಂಬಂಧವಿದೆಯೆಂದು ಶಂಕಿಸಲಾದ ಸುದ್ದಿಗಳನ್ನು ಪ್ರಕಟಿಸುವ ಧೈರ್ಯವೂ ಅವುಗಳಿಗೆ ಆಗುತ್ತಿಲ್ಲ. ತಮಗೆ ಆಸಕ್ತಿಯಿದ್ದ ಯಾವುದೊಂದು ಸುದ್ದಿಯನ್ನು ವರ್ಣರಂಜಿತವಾಗಿ ಪ್ರಕಟಿಸಬೇಕೆಂದೋ ಅವುಗಳನ್ನು ನಿಸ್ಸಾರವಾಗಿ ಪ್ರಕಟಿಸಬೇಕೆಂದೋ ರಾಜಕೀಯ ರಂಗದಲ್ಲಿನ ವ್ಯಕ್ತಿಗಳು ಪತ್ರಿಕಾಲಯಗಳಿಗೆ ಫೋನ್ ಮಾಡುವುದು ಇಂದು ದಿಲ್ಲಿ-ಕಲಕತ್ತಗಳಲ್ಲಿ ಸಾಮಾನ್ಯವಾಗಿದೆ.

-ಡಿ. ಆರ್. ಮಂಕೇಕರ್

ಮಾನವರೆಲ್ಲರೂ ಎಲ್ಲ ವಿಧದಲ್ಲಿ ಸಮಾನರಾಗಿರುತ್ತಾರೆನ್ನುವುದರಲ್ಲಿ ಹುರುಳಿಲ್ಲದಿರಬಹುದು. ಆದರೆ ಎಲ್ಲರೂ ಸಮಾನವಾಗಿ ಮಾನವರಾಗಿರುತ್ತಾರೆನ್ನುವುದನ್ನು ಮಾತ್ರ ನಿರಾಕರಿಸಲಿಕ್ಕಾಗದು.

ಹ್ಯೂ ಗೇಟ್‌ಸ್ಕೆಲ್

ಲಕ್ಷಾಂತರ ವರ್ಷಗಳ ನಂತರ ವಾತಾವರಣ ಹೇಗಿದ್ದೀತು?

ಡಾ. ನಾರಾಯಣ ಮಹಿಷಿ

ವಿಜ್ಞಾನದ ಪ್ರಗತಿಯಿಂದಾಗಿ, ಜನಸಂಖ್ಯೆಯು ಮಿತಿಮೀರಿದ ಹೆಚ್ಚಳದಿಂದಾಗಿ ಜಗತ್ತಿನಲ್ಲಿ ಅನೇಕ ಬದಲಾವಣೆಗಳನ್ನು ನಾವು ಕಾಣಬಹುದು. ಪರಮಾಣು ಬಾಂಬ್‌ನ್ನು ಆಸ್ಫೋಟಗೊಳಿಸಿದಾಗ, ಬೆಳೆಗಳ ಮೇಲೆ ಡಿ. ಡಿ. ಟಿ. ಯನ್ನು ವಿಪರೀತವಾಗಿ ಸಿಂಪಡಿಸಿದಾಗ, ಯುದ್ಧದಲ್ಲಿ ಬೆಳೆ, ಮರಗಳನ್ನು ರಾಸಾಯನಿಕಗಳ ಮೂಲಕ ನಾಶ ಮಾಡಿದಾಗ, ಅರಣ್ಯಗಳು ಕಾಲಕ್ರಮೇಣ ನಾಶಹೊಂದುತ್ತಿರುವಾಗ, ಪಟ್ಟಣಗಳಲ್ಲಿ ಜನಸಾಂದ್ರತೆ ಬಹಳ ಹೆಚ್ಚಿದಾಗ, ಉದ್ದಿಮೆಗಳು, ಕಾರುಗಳ ಸಂಖ್ಯೆ ಹೆಚ್ಚಿದಂತೆಲ್ಲ ಹವೆಯ ಮೇಲೆ ದುಷ್ಪರಿಣಾಮಗಳಾಗುವುದನ್ನು ನಾವು ನೋಡುತ್ತಲೇ ಇದ್ದೇವೆ. ಸಮಯಕ್ಕೆ ಸರಿಯಾಗಿ ಮಳೆ ಬರದಿದ್ದರೆ ಅದರ ಕಾರಣವನ್ನು ಮೇಲಿನವುಗಳ ಜೊತೆಗೆ ಗಂಟು ಹಾಕಿದ್ದೇವೆ. ಇವೆಲ್ಲ ಬದಲಾವಣೆಗಳನ್ನು ನಾವು ವಾತಾವರಣದಲ್ಲಿಯೇ ನೋಡಬಹುದು. ಆದರೆ ಭೂಗರ್ಭದಲ್ಲಿಯೂ ನಮ್ಮ ದೃಷ್ಟಿಗೆ ಬೀಳದ ಬದಲಾವಣೆಗಳು ನಡೆದೇ ಇವೆ. ಭೂಕಂಪನ ಒಂದು ಉದಾಹರಣೆ ಮಾತ್ರ. ಖಂಡಗಳೂ ಸ್ಥಳಾಂತರ ಹೊಂದುವ ವಿಷಯವನ್ನು ಮಾತ್ರ ನಾವು ಓದಿ ತಿಳಿದಿದ್ದೇವೆ. ಇಂಥ ಬದಲಾವಣೆ ಒಬ್ಬ ಮನುಷ್ಯನ ಜೀವಮಾನದಲ್ಲಿ ನಡೆಯುತಕ್ಕಂಥ ಘಟನೆಯಲ್ಲ. ಲಕ್ಷಾವಧಿ ವರುಷಗಳು ಇವಕ್ಕೆ ಬೇಕೆಂದಾಗ ಬದಲಾವಣೆ ನಮ್ಮ ಇಂದ್ರಿಯಗಳಿಗೂ ಗೋಚರವಾಗದಷ್ಟು ಸೂಕ್ಷ್ಮಪ್ರಮಾಣದಲ್ಲಿರುತ್ತದೆ.


ಭೂಖಂಡ ಚಲನವಲನಗಳಿಗೆ ಸಂಬಂಧಿಸಿದಂತೆ ಜರ್ಮನ್ ಶಾಸ್ತ್ರಜ್ಞ ವೇಜನರ್‌ನ ಸಿದ್ಧಾಂತ (Continental Drift Theory) ಒಂದಿದ್ದು ಅದರಲ್ಲಿಯ ಸತ್ಯಾಂಶವನ್ನು ವೈಜ್ಞಾನಿಕವಾಗಿ ನೋಡಲೂ ಅವಕಾಶವಿದೆ. ಉದಾಹರಣೆಗೆ ಹೇಳುವುದಾದರೆ ಎರಡು ವಿಭಿನ್ನ ಖಂಡಗಳಲ್ಲಿ ಸಸ್ಯ-ಸಾಮ್ಯ, ಸಸ್ಯ-ಮತ್ತು ಪ್ರಾಣಿಮೂಲ ಉರುವಲುಗಳಲ್ಲಿ ಸಾಮ್ಯ, ಭೂಗರ್ಭದಲ್ಲಿಯ ಕಲ್ಲು ಪದರುಗಳಲ್ಲಿ ಸಾಮ್ಯ-ಮುಂತಾದವುಗಳು ಕೋಟ್ಯವಧಿ ವರುಷಗಳ ಹಿಂದೆ ಅವು ಅಖಂಡವಾಗಿದ್ದವು ಎನ್ನುದನ್ನು ಸೂಚಿಸುತ್ತವೆ. ಇಂಥ ಖಂಡಗಳು ಧ್ರುವ ವೃತ್ತಗಳಿಗೆ ಸರಿದಂತೆಲ್ಲ, ಅಕ್ಷಾಂಶದಲ್ಲಿ ವ್ಯತ್ಯಾಸವಾಗಿ ಹವಾಗುಣದಲ್ಲಿಯೂ ಬದಲಾವಣೆಯಾಗುತ್ತದೆ.

ಇದೂ ಅಲ್ಲದೆ ಇನ್ನೂ ಅನೇಕ ಕಾರಣಗಳು ಸೇರಿ ಭವಿಷ್ಯತ್ತಿನಲ್ಲಿ ಪೃಥ್ವಿಯ ವಾತಾವರಣ ಗಣನೀಯವಾಗಿ ಬದಲಾಗಬಹುದು. ಅಂತಹ ಲಕ್ಷಣಗಳು ಈಗಲೆ ಗೋಚರಿಸುತ್ತಿವೆ. ಉದಾಹರಣೆಗೆ ಕಾರ್ಬನ್ ಡೈ ಆಕ್ಸೈಡ್‌ನಲ್ಲಿ ಹೆಚ್ಚಳ. ತಾಂತ್ರಿಕ ಕ್ಷೇತ್ರದಲ್ಲಿ ಪ್ರಗತಿಯಾದಂತೆಲ್ಲ,

ಉರುವಲದ ಉಪಯೋಗ ಅತಿಯಾಗಿ ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಹೆಚ್ಚಾದ್ದರಿಂದ ಭೂಮಿ-ಮೂಲ ವಿಕಿರಣ ಕಾವು ಅದರಿಂದ ಹೀರಲ್ಪಡುತ್ತದೆ. ಈ ಕಾರಣದಿಂದಾಗಿ ಕಾವು ಅಂತರಿಕ್ಷವನ್ನು ಮುಟ್ಟದೆ ಭೂಮಿಯ ಮೇಲಿನ ವಾತಾವರಣವನ್ನು ಹೆಚ್ಚು ಉಷ್ಣವಾಗಿ ಮಾಡುತ್ತದೆ. ನೂರಾರು ವರುಷಗಳಲ್ಲಿ ೨.೨ ಡಿಗ್ರಿಗಳಷ್ಟು ವಾತಾವರಣ ಬಿಸಿಯೇರಿದಾಗ ನಮ್ಮ ಆಹಾರ ಧಾನ್ಯದಲ್ಲಿ ಶೇಕಡಾ ಒಂದರಷ್ಟು ಉತ್ಪಾದನೆ ಕಡಿಮೆಯಾಗಿರುತ್ತದೆಂದು ಅಂದಾಜು ಮಾಡಲಾಗಿದೆ. ಇದರರ್ಥ ನಮಗೆ ಅವಶ್ಯವಿದ್ದ ೧೧ ಕೋಟಿ ಟನ್ ಆಹಾರದಲ್ಲಿ ಹನ್ನೊಂದು ಲಕ್ಷದಷ್ಟು ಕಡಿಮೆಯಾಗಿ-ಜನಸಂಖ್ಯೆ ಬೆಳೆದಂತೆಲ್ಲ ಈ ಅನಿಷ್ಟವೂ ಮೇಲೇರುತ್ತ ಹೋಗುತ್ತದೆ. ಶತಮಾನದ ಕೊನೆಗೆ ಸಮಸ್ಯೆಯು ಹೆಚ್ಚು ಗಂಭೀರವಾಗುತ್ತದೆಂದು ಹೇಳಲಾಗಿದೆ.

ಮನುಷ್ಯನು ಆರೋಗ್ಯವಂತನಾಗಿರುವದಕ್ಕೆ, ಲವಲವಿಕೆಯುಳ್ಳವನಾಗಿರುವದಕ್ಕೆ ಹವೆಯೂ ಒಂದು ಮಹತ್ವದ ಕಾರಣ ಎಂದು ಧಾರಾಳವಾಗಿ ಹೇಳಬಹುದು. ಹೆಚ್ಚು ಉಷ್ಣತೆಯ, ಆರ್ದ್ರ ಹವೆಯಲ್ಲಿ ಜನರು ಸರಿಯಾಗಿ ಕೆಲಸ ಮಾಡಲಾರರು. ಅತಿಯಾದ ಉಷ್ಣತೆ, ಚಳಿ ಇರುವದರಿಂದಲೂ ಮನುಷ್ಯನಲ್ಲಿ ಆಲಸ್ಯ ಹೆಚ್ಚಾಗುತ್ತದೆ. ಎಷ್ಟೋ ಸಲ ಬೇನೆಗಳು ಹವಾಗುಣವನ್ನೇ ಅವಲಂಬಿಸುತ್ತವೆಂಬುದನ್ನು ಡಾಕ್ಟರರು ಆಗಾಗ ರೋಗಿಗಳಿಗೆ ಕೊಡುವ ಸಲಹೆಯ ಮೇಲಿಂದ ನೋಡುತ್ತೇವೆ. ಹವೆ ಬದಲಾವಣೆ-ಜನರ ಪ್ರತಿಕ್ರಿಯೆ, ಎಲ್ಲವೂ ನಿರ್ದಿಷ್ಟವಾಗಿ ಹೀಗೇ ಎಂದು ಹೇಳುವದು ಕಷ್ಟ.

ಇನ್ನೊಂದು ಅಭಿಪ್ರಾಯದಂತೆ ವಾತಾವರಣದಲ್ಲಿ ಕಾವು ಹೆಚ್ಚಾಗುವದರಿಂದ ಬಾಷ್ಪೀಭವನ ಕ್ರಿಯೆಯು ತ್ವರಿತವಾಗುತ್ತದೆ. ಎಂದರೆ,



ಶೇಕಡ ಮೂರರಷ್ಟು ಹೆಚ್ಚು ಪ್ರಮಾಣದಲ್ಲಿ ಮೋಡಗಳಾಗಿ ಮಳೆಯೂ ಹೆಚ್ಚಾಗುತ್ತದೆ;

ಆದರೆ ಇದಕ್ಕೆ ತೀರ ಭಿನ್ನವಾಗಿರುವ ಆಧಾರವನ್ನು ಶಿಕಾಗೊ ವಿಶ್ವವಿದ್ಯಾಲಯದ ಮೂವರು ಸಂಶೋಧಕರು ಕಂಡುಹಿಡಿದಿದ್ದಾರೆ. ಇದೆಂದರೆ ಖಂಡಗಳ ಸರಿಯುವಿಕೆ. ಈ ಹಿನ್ನೆಲೆಯಲ್ಲಿ ಅವರು ಈಗಿನಿಂದ ಐವತ್ತು ದಶಲಕ್ಷಗಳ ನಂತರ ಹವೆ ಹೇಗಿರಬಹುದೆಂಬುದನ್ನು ಹೇಳುತ್ತಾರೆ.

ಗ್ರೆಗ್ ಫೋರ್ಬ್ಸ್ ಹವಾಮಾನಶಾಸ್ತ್ರದಲ್ಲಿ ಪ್ರಥಮ ಪದವಿಗಾಗಿ ಅಭ್ಯಾಸದಲ್ಲಿ ನಿರತನಾದ ವಿದ್ಯಾರ್ಥಿ. ಅವನಿಗೆ ಮಾರ್ಗದರ್ಶನ ಮಾಡುವ ಹಿರಿಯ ಸಂಶೋಧಕರೆಂದರೆ ಹವಾಮಾನ ಶಾಸ್ತ್ರಜ್ಞ ಡಾಕ್ಟರ್ ಥಿಯೋಡೋರ್ ಫ್ಯುಜಿಟ ಮತ್ತು ಭೂಗರ್ಭಶಾಸ್ತ್ರಜ್ಞ ಡಾಕ್ಟರ್ ಆಲ್ಫ್ರೆಡ್ ಜೀಗ್ಲರ್. ಸುದೂರ ಭವಿಷ್ಯದಲ್ಲಿ, ಎಂದರೆ ಐವತ್ತು ಲಕ್ಷ ವರ್ಷಗಳ ನಂತರ ಖಂಡಗಳು ಚಲನವಲನದಿಂದಾಗಿ ಎಲ್ಲಿರಬಹುದೆಂಬ ಆಧಾರದ ಮೇಲೆ ಭೂಮಿಯ ವಾತಾವರಣ ಹೇಗಿರಬಹುದೆಂಬುದನ್ನು ಫೋರ್ಬ್ಸ್ ಸೂಚಿಸಿದ.

ಈ ಮೂವರು ಸಂಶೋಧಕರು ಒಂದು ಹೊಸ ನಕ್ಷೆಯನ್ನು ತಯಾರಿಸಿ ಖಂಡಗಳ ಚಲನವಲನದಿಂದಾಗಿ ಹವೆಯ ಮೇಲೆ ಆಗುವ ಪರಿಣಾಮಗಳನ್ನು ಅದು ತೋರಿಸುವಂತೆ ಮಾಡಿದ್ದಾರೆ. ಆಫ್ರಿಕ ಖಂಡವು ಉತ್ತರದತ್ತ ಸರಿಯುವುದರಿಂದ ಮೆಡಿಟರೇನಿಯನ್ ಅಗಲವು ಕಡಿಮೆಯಾಗುತ್ತದೆ. ಇದೇ ಕಾರಣದಿಂದಾಗಿ ಪಶ್ಚಿಮದಲ್ಲಿಯ ತಣ್ಣಗಿನ ಹವೆಯ ಒತ್ತಡಕ್ಕೆ ಪ್ರತಿಯಾಗಿ ತಡೆದುಕೊಳ್ಳುವ (Buffer) ವಲಯದ ಮಹತ್ವ ಕುಗ್ಗಿ ಹೋಗುತ್ತದೆ. ಪರಿಣಾಮವಾಗಿ, ದಕ್ಷಿಣ ಯುರೋಪದ ದೇಶಗಳಲ್ಲೇ ಹೆಚ್ಚು ಸೂರ್ಯಪ್ರಕಾಶ ಪಡೆಯುವ ಇಟಲಿ ಗಣನೀಯ ಪ್ರಮಾಣದಲ್ಲಿ ತಣ್ಣನೆಯ ಹವೆ ಪಡೆಯತೊಡಗುತ್ತದೆ. ಡಾ. ಫ್ಯುಜಿಟರ ಅಭಿಪ್ರಾಯದಂತೆ, ಖಂಡಗಳ ಸರಿಯುವಿಕೆಯಿಂದ ಏಶಿಯ–ಯುರೋಪಗಳ ನಡುವಿರುವ ಭೂಮಿಯ ಮಧ್ಯಭಾಗದಲ್ಲಿ ಸುಂಟರಗಾಳಿಯ ಕ್ಷೇತ್ರ ನಿರ್ಮಾಣವಾಗುತ್ತದೆ. ಅಮೇರಿಕದ ಮಧ್ಯ–ಪಶ್ಚಿಮದಲ್ಲಿಯ ಸುಂಟರಗಾಳಿಯನ್ನೇ ಅದು ಹೋಲುತ್ತದೆ. ಈಗ ಬಿರುಗಾಳಿಗಳು ಉತ್ಪನ್ನವಾಗುವಂಥ ಮಹಾಸಾಗರದಲ್ಲಿ ಉತ್ತರಕ್ಕೆ ಆಸ್ಟ್ರೇಲಿಯವು ಸರಿಯುವುದರಿಂದ ಪ್ಯಾಸಿಫಿಕ್‌ನಲ್ಲಿ ಬಿರುಗಾಳಿಗಳ ಸಂಖ್ಯೆ ಕಡಿಮೆಯಾಗುವದು. ಸಂಶೋಧಕರ ಇನ್ನೂ ಕೆಲವು ಮಹತ್ವದ ಊಹೆಗಳೆಂದರೆ– ಅಟ್ಲಾಂಟಿಕ್ ಮಹಾಸಾಗರ ಇನ್ನೂ ಅಗಲವಾಗುತ್ತದೆ, ಉತ್ತರಕ್ಕೆ ಅಟ್ಲಾಂಟಿಕ್‌ನ್ನು ಸೇರುವ ಉಷ್ಣೋದಕ ಪ್ರವಾಹಸಂಗಮ ವಿಸ್ತಾರಗೊಳ್ಳುತ್ತದೆ. ಉತ್ತರ ಧ್ರುವದಲ್ಲಿರುವ ಹಿಮರಾಶಿ ನೀರಾಗುವದರಿಂದ ಗ್ರೀನ್‌ಲ್ಯಾಂಡ್ ಪೂರ್ವಕ್ಕೆ ಸರಿಯುತ್ತದೆ. ಐಸ್‌ಲ್ಯಾಂಡ್, ಮತ್ತು ಉತ್ತರ ಯುರೋಪಿನಲ್ಲಿ ಹವೆಯು ಹೆಚ್ಚು ಉಷ್ಣವಾಗುತ್ತದೆ.

ವಿಜ್ಞಾನಿಗಳು ಸುಮಾರಾಗಿ ಇನ್ನೂ ಒಂದು ಎರಡು ದಶಕದ ಕೊನೆಗೆ ಅಥವಾ ಹೆಚ್ಚೆಂದರೆ ಈ ಶತಮಾನದ ಕೊನೆಗೆ ಏನೆಲ್ಲ ಆಗಬಹುದೆಂಬುದನ್ನು ಸಾಧಾರವಾಗಿ ಊಹಿಸುತ್ತಾರೆ. ಆದರೆ ಫೋರ್ಬ್ಸ್ ಹೇಳಿದಂತಹ ಪರಿಣಾಮವಾಗಬೇಕಾದರೆ ಲಕ್ಷಾಂತರ ವರ್ಷಗಳು ಬೇಕಷ್ಟೇ.

ಈ ವಿಜ್ಞಾನಿಗಳ ಭವಿಷ್ಯವಾಣಿಯಲ್ಲಿ ಸತ್ಯಾಸತ್ಯತೆಗಳನ್ನು ಸಮಯವೇ ನಿರ್ಧರಿಸಬೇಕು. ✡



ವೈದ್ಯಕೀಯ ವರದಿಗಳು

ತಲೆನೋವಿನ ರಹಸ್ಯ ಬಯಲಾಯಿತು !

ಆಸ್ಪಿರಿನ್ ಹಾಗೂ ಅದೇ ಜಾತಿಗೆ ಸೇರಿದ ನೋವುಕೊಲ್ಲುವ ಔಷಧಿಗಳನ್ನು ಮಾನವ ಸುಮಾರು ಇನ್ನೂರು ವರ್ಷಗಳಿಂದ ಉಪಯೋಗಿಸುತ್ತ ಬಂದಿದ್ದರೂ ಅವು ನೋವನ್ನು ಹೇಗೆ ನಿವಾರಿಸುವವೆಂಬುದು ಇತ್ತೀಚಿನ ವರೆಗೂ ರಹಸ್ಯಾತ್ಮಕವಾಗಿಯೇ ಇತ್ತು. ಬ್ರಿಟನ್ನಿನ ಪ್ರೊ. ಜಾನ್ ವೇನರು ಈ ಬಗ್ಗೆ ಸಂಶೋಧನೆ ನಡೆಸಿ, ಶರೀರದಲ್ಲಿ ಆಗ ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಯಾಗುವ ಪ್ರೋಸ್ಟಾಗ್ಲಾಂಡಿನ್ನುಗಳನ್ನು ಪ್ರತಿಬಂಧಿಸುವ ಮೂಲಕ ಇವು ನೋವನ್ನು ನಿವಾರಿಸುವವೆಂದು ಹೇಳಿ ವೈದ್ಯಕೀಯ ಸಮಸ್ಯೆಯೊಂದನ್ನು ಪರಿಹರಿಸಿದ್ದಾರೆ.

ಪ್ರೋಸ್ಟಾಗ್ಲಾಂಡಿನ್ನುಗಳೆಂದರೆ ಶರೀರದ ವಿವಿಧ ಭಾಗಗಳು ಉತ್ಪಾದಿಸುವ ಒಂದು ವಿಶಿಷ್ಟ ವರ್ಗದ ರಾಸಾಯನಿಕ ಘಟಕಗಳು. ಆಸ್ತಮಾದಂತಹ ಅಲರ್ಜಿಯಿಂದ ಬರುವ ರೋಗಗಳು ಉಲ್ಬಣಿಸಿದಾಗ ಪುಪ್ಪುಸಗಳ ಕೋಶಜಾಲದಲ್ಲಿ ಯಾವಾವ ಪದಾರ್ಥಗಳು ಕಾಣಿಸುತ್ತವೆಂಬುದನ್ನು ಪ್ರೊ. ಜಾನ್‌ವೇನರು ಪರಿಶೀಲಿಸುತ್ತಿದ್ದರು. ಈ ಅವಸ್ಥೆಯಲ್ಲಿ ಪುಪ್ಪುಸದ ಕೋಶಜಾಲದಿಂದ ಹೊರಸೂಸುವ ದ್ರವದಲ್ಲಿ ಕಂಡ ಅನೇಕ ಪದಾರ್ಥಗಳ ಪೈಕಿ ಎರಡು ಬಗೆಯ ಪ್ರೋಸ್ಟಾಗ್ಲಾಂಡಿನ್ನುಗಳು ಇರುವುದೂ ಜಾನ್‌ವೇನರ ಗಮನಕ್ಕೆ ಬಂತು. ಈ ಪುಪ್ಪುಸ ದ್ರವದಲ್ಲಿ ಆಸ್ಪಿರಿನ್ನನ್ನು ಅಥವಾ ವೈಜ್ಞಾನಿಕ ಹೆಸರು ಹೇಳಬೇಕೆಂದರೆ ಸ್ಯಾಲಿಸಿಲಿಕ್ ಆ್ಯಸಿಡ್ಡನ್ನು ಬೆರೆಸಿದಾಗ ಪ್ರೋಸ್ಟಾಗ್ಲಾಂಡಿನ್ನಿನ ಉತ್ಪಾದನೆ ನಿಂತು ಹೋಯಿತು.

ಅದೇ ರೀತಿ ಜ್ವರ ಬಂದಾಗ ಮಿದುಳಿನ ಸುತ್ತ ಇರುವ ದ್ರವದಲ್ಲಿ ಪ್ರೋಸ್ಟಾಗ್ಲಾಂಡಿನ್ನಿನ ಪ್ರಮಾಣದಲ್ಲಿ ವೃದ್ಧಿಯಾಗುತ್ತದೆ. ಪ್ರಯೋಗ ಪಶುಗಳಿಗೆ ಪ್ರೋಸ್ಟಾಗ್ಲಾಂಡಿನ್ನನ್ನು ಚುಚ್ಚುಮದ್ದಿನ ರೂಪದಲ್ಲಿ ಕೊಟ್ಟಾಗ ಶರೀರದ ಉಷ್ಣತೆ ಹೆಚ್ಚಿತು. ಆದರೆ ಆಸ್ಪಿರಿನ್ನನ್ನು ಕೊಟ್ಟಾಗ ಉಷ್ಣತೆ ಮತ್ತೆ ಸಾಮಾನ್ಯ ಮಟ್ಟಕ್ಕೆ ಬಂತು. ಹಾಗಾದರೆ ಅಧಿಕ ಪ್ರಮಾಣದಲ್ಲಿ ಉತ್ಪನ್ನವಾದ ಪ್ರೋಸ್ಟಾಗ್ಲಾಂಡಿನ್ನನ್ನು ಆಸ್ಪಿರಿನ್ ಪ್ರತಿಬಂಧಿಸಿದ್ದರಿಂದಲೆ ಜ್ವರ ಇಳಿದಂತಾಯಿತು.

ಆದರೆ ಇತರ ವೇದನಾಹರ ಔಷಧಿಗಳ ಹಾಗೆ ಆಸ್ಪಿರಿನ್ನಿನ ಕ್ಷೇತ್ರವೂ ಪರಿಮಿತವಾಗಿದೆ. ಪ್ಲೀಹ ಊದಿಕೊಂಡಾಗ ಅಲ್ಲಿ ಪ್ರೋಸ್ಟಾಗ್ಲಾಂಡಿನ್ನು ಸಾಮಾನ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಉತ್ಪನ್ನವಾಗುತ್ತದೆ. ಆಸ್ಪಿರಿನ್ನು ಮಿದುಳಿನಲ್ಲೂ ಪ್ಲೀಹದಲ್ಲೂ ಪ್ರೋಸ್ಟಾಗ್ಲಾಂಡಿನ್ ಜೈವಿಕವಾಗಿ ಸಂಶ್ಲೇಷಣೆಗೊಳ್ಳುವುದನ್ನು ತಪ್ಪಿಸುತ್ತದೆ. ಆದರೆ ಇದೇ ಜಾತಿಗೆ ಸೇರಿದ ಇಂಡೋಮೇಥಾಸಿನ್ ಪ್ಲೀಹದ ಮೇಲೆ ಆಸ್ಪಿರಿನ್ನಿಗಿಂತ ಹೆಚ್ಚು ಪ್ರಭಾವ ಬೀರುತ್ತದೆ.

ಅಷ್ಟೆ ಅಲ್ಲ. ಮಿದುಳಿನ ಕೋಶಜಾಲದ ಮೇಲೆ ಅದರ ಪ್ರಭಾವ ಆಸ್ಪಿರಿನ್ನಿಗಿಂತ ಹತ್ತು ಪಟ್ಟು ಗಾಢವಾಗಿದೆಂಬುದೂ ಇತ್ತೀಚೆ ವ್ಯಕ್ತವಾಗಿದೆ. ಪೆರಾಸಿಟಮೋಲ್ ಎಂಬ ಇನ್ನೊಂದು ಬಗೆಯ ವೇದನಾಹರ ಔಷಧ ಮಿದುಳಿನ ಕೋಶಜಾಲದಲ್ಲಿ ಉತ್ಪಾದನೆಗೊಳ್ಳುವ ಪ್ರೋಸ್ಟಾಗ್ಲಾಂಡಿನ್ನಿನ ಸಂಶ್ಲೇಷಣೆಯನ್ನು ಆಸ್ಪಿರಿನ್ನಿನಷ್ಟೆ ಪ್ರಭಾವಶಾಲಿಯಾಗಿ ಪ್ರತಿಬಂಧಿಸುತ್ತದಾದರೂ ಪ್ಲೀಹದ ಮೇಲೆ ಅದು ಯಾವ ರೀತಿಯಲ್ಲೂ ಪ್ರಭಾವ ಬೀರುವುದಿಲ್ಲ.

ಪ್ರೋಸ್ಟಾಗ್ಲಾಂಡಿನ್ನುಗಳು ಅಸಂಖ್ಯ ದೈಹಿಕ ಕ್ರಿಯೆಗಳಲ್ಲಿ ಭಾಗವಹಿಸುವವಾದರೂ ಪ್ರತಿಯೊಂದರ ಕಾರ್ಯ ಕ್ಷೇತ್ರ ಅವು ಉತ್ಪನ್ನಗೊಂಡ ಭಾಗಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆಯಾ ಭಾಗ ಅಥವಾ ಅಂಗಗಳಲ್ಲಿನ ಪ್ರೋಸ್ಟಾಗ್ಲಾಂಡಿನ್ನನ್ನು ಪ್ರತಿಬಂಧಿಸಬೇಕಾದಾಗ ಅದರ ಮೇಲೆ ಮಾತ್ರ ವಾಂಛಿತ ಪರಿಣಾಮವುಂಟುಮಾಡುವಂತಹ ಔಷಧಿಯನ್ನು ಆಯ್ದು ಉಪಯೋಗಿಸಬೇಕು. ಇದರ ಉಪಯೋಗ ಶರೀರದ ಒಂದು ವಿಶಿಷ್ಟ ಭಾಗಕ್ಕೆ ಮಾತ್ರ ಪರಿಮಿತವಾಗಿರುವುದರಿಂದ ಇಡೀ ದೇಹದ ಮೇಲೆ ಔಷಧದಿಂದ ಅವಾಂಛಿತ ಉಪ-ಪರಿಣಾಮಗಳುಂಟಾಗುವ ಸಾಧ್ಯತೆ ತೀರಾ ಕಡಿಮೆಯಾಗುತ್ತದೆ. ಮುಂದೊಂದು ದಿನ ಉಪ-ಪರಿಣಾಮಗಳಿಂದ ವಿರಹಿತವಾದ ಔಷಧಿಗಳನ್ನು ಉತ್ಪಾದಿಸಲೂ ಸಾಧ್ಯವಾಗಬಹುದು. ವೈದ್ಯಕೀಯ ತಜ್ಞರ ಚರಮ ಗುರಿಯೂ ಇದೇ.

ವೈರಸ್‌ದಾಳಿಗೆ ಇಂಟರ್‌ಫೆರಾನ್ ರಕ್ಷಣೆ

ವೈರಸ್ಸುಗಳು ದೇಹದ ಮೇಲೆ ದಾಳಿ ನಡೆಸಿದಾಗ ಶರೀರದಲ್ಲಿ ಉತ್ಪನ್ನವಾಗುವ ಇಂಟರ್‌ಫೆರಾನ್ ಎಂಬ ಒಂದು ಬಗೆಯ ರಾಸಾಯನಿಕ ದ್ರವ್ಯ ಅವುಗಳನ್ನು ವಿರೋಧಿಸುವುದು. ಇದೊಂದು ಪ್ರೋಟೀನ್. ವೈರಸ್ ದಾಳಿ ಮಾಡಿದಾಗ ಶರೀರದಲ್ಲಿ ಇದು ತಾತ್ಕಾಲಿಕವಾಗಿ ಉತ್ಪನ್ನವಾಗುತ್ತದೆ. ಆಗ ಇದರೊಟ್ಟಿಗೆ ಆ್ಯಂಟಿಬಾಡಿ ಎಂಬ ರೋಗಾಣು ಪ್ರತಿರೋಧಕ ವಸ್ತುವನ್ನೂ ಶರೀರ ಉತ್ಪಾದಿಸುತ್ತದೆ. ಆದರೆ ಈ ರೋಗಾಣು ಪ್ರತಿರೋಧಕ ವಸ್ತು ರೂಪುಗೊಳ್ಳಲು ಕೆಲವಾರಗಳೇ ಬೇಕಾಗುವವು. ವೈರಸ್ಸುಗಳು ಶರೀರದ ಮೇಲೆ ಆಕ್ರಮಣ ಮಾಡಿದಾಗ ಅವುಗಳನ್ನು ಪ್ರತಿರೋಧಿಸುವಷ್ಟು ಸಾಕಷ್ಟು ಪ್ರಮಾಣದಲ್ಲಿ ಆ್ಯಂಟಿಬಾಡಿಯು ಸಂಗ್ರಹ ಯಾವಾಗಲೂ ಇರುವುದು ಅಸಾಧ್ಯ. ಮೇಲಾಗಿ ಈ ರೋಗನಿರೋಧಕ ವಸ್ತು ಎಲ್ಲ ಬಗೆಯ ವೈರಸ್ಸುಗಳನ್ನು ನಿರೋಧಿಸುವುದಿಲ್ಲ. ಆದ್ದರಿಂದ ಇಂಟರ್‌ಫೆರಾನ್‌ನನ್ನು ಕೃತಕವಾಗಿ ತಯಾರಿಸಲು ಸಾಧ್ಯವಾದರೆ, ಅದನ್ನು ಶರೀರದಲ್ಲಿ ಸಂಗ್ರಹಿಸಿಟ್ಟುಕೊಂಡು ಎಂತಹ ರೋಗವನ್ನಾದರೂ ನಿರೋಧಿಸಬಹುದು.

ಈ ದಿಶೆಯಲ್ಲಿ ಅನೇಕ ವಿಜ್ಞಾನಿಗಳು ಅಹರ್ನಿಶಿಯಾಗಿ ಪ್ರಯತ್ನಿಸುತ್ತಿದ್ದಾರೆ. ಇತ್ತೀಚೆಗೆ ಪೆನಿಸಿಲ್ವೇನಿಯಾದ ಕೆಲ ಸಂಶೋಧಕರು ರೈಬೋ ನ್ಯೂಕ್ಲಿಯಿಕ್ ಆಸಿಡ್ ಅಥವಾ ಆರ್. ಎನ್. ಎ. ಶರೀರದಲ್ಲಿಯ ಇಂಟರ್‌ಫೆರಾನ್ ಉತ್ಪಾದನೆಯನ್ನು ಹೆಚ್ಚಿಸುವುದೆಂಬುದನ್ನು ಕಂಡು ಹಿಡಿದಿದಾರೆ. ಜೀವಕೋಶಗಳಲ್ಲಿ ಆರ್ ಎನ್. ಎ. ದ್ರವ್ಯವು ಉಪಸ್ಥಿತವಿದ್ದರೂ ವೈರಸ್ಸುಗಳು ಶರೀರದಲ್ಲಿ ಪ್ರವೇಶಿಸಿದಾಗ ಸಾಕಷ್ಟು ಪ್ರಮಾಣದಲ್ಲಿ ಇಂಟರ್


ಫೆರಾನ್‌ನನ್ನು ತಯಾರಿಸುವಷ್ಟು ಅದು ಇರುವದಿಲ್ಲ. ಆದ್ದರಿಂದ ಆರ್. ಎನ್. ಎ ಯನ್ನು ಪ್ರಯೋಗ ಶಾಲೆಗಳಲ್ಲಿ ತಯಾರಿಸಿ ಅದನ್ನು ಸೂಕ್ಷ್ಮಪ್ರಮಾಣದಲ್ಲಿ ಶರೀರಕ್ಕೆ ಒದಗಿಸಿದಲ್ಲಿ, ಶರೀರವು ತನಗೆ ಅಗತ್ಯವಿದ್ದ ಪ್ರಮಾಣದಲ್ಲಿ ಇಂಟರ್‌ಫೆರಾನ್‌ನನ್ನು ಉತ್ಪಾದಿಸಿಕೊಳ್ಳಲು ಸಾಧ್ಯವಾಗುವುದು. ಇತ್ತೀಚೆಗೆ ಡಾ. ಹಿಲಮನ್‌ರವರ ನೇತೃತ್ವದಲ್ಲಿ ಸಂಶೋಧಕರ ಒಂದು ತಂಡ ಪೆನ್ಸಿಲಿನ್ ತಯಾರಿಕೆಯಲ್ಲಿ ಉಪಯೋಗಿಸಲಾಗುವ ಬೂಷ್ಟಿನ ಜಾತಿಗೆ ಸೇರಿದ ಒಂದು ವಸ್ತುವಿನಿಂದ ಮತ್ತು ಒಂದು ಪ್ರಕಾರದ ವೈರಸ್ಸಿನಿಂದ ಆರ್. ಎನ್. ಎ. ಯನ್ನು ತಯಾರಿಸಿ ಈ ದಿಶೆಯಲ್ಲಿ ಮೈಲುಗಲ್ಲನ್ನು ಸ್ಥಾಪಿಸಿದ್ದಾಗಿದೆ. ಈ ರಾಸಾಯನಿಕ ದ್ರವ್ಯವನ್ನು ಕಾರಖಾನೆಗಳು ಮಿತವ್ಯಯಕರವಾಗಿ ಶುದ್ಧವಾಗಿ ಹಾಗೂ ಬೃಹತ್ಪ್ರಮಾಣದಲ್ಲಿ ತಯಾರಿಸುವ ಕಾಲ ದೂರವಿಲ್ಲ. ಆಗ ಕೇವಲ ಚಿಕ್ಕಪುಟ್ಟ ರೋಗಗಳನ್ನಷ್ಟೆ ಅಲ್ಲ, ಭಯಂಕರವಾದ ರೋಗಗಳನ್ನೂ ನಿರೋಧಿಸಲು ಸಾಧ್ಯವಾಗಬಹುದು.

ಹಲ್ಲು ಕೀಳಿಸಲು ಭಯಪಡಬೇಕಾಗಿಲ್ಲ

ಹಲ್ಲು ರೋಗಗಳಿಂದ ನರಳುತ್ತಿರುವವರ ಸಂಖ್ಯೆ ಇಂದು ಅತಿಶಯವಾಗಿ ಬೆಳೆದಿದೆ. ನಿಮ್ಮಲ್ಲಿ ಅನೇಕರಿಗೆ ಹಲ್ಲುಗಳನ್ನು ಕೀಳಿಸಿಕೊಳ್ಳುವ ಪ್ರಸಂಗ ಬಂದಿರಬಹುದು. ಆಗ ನೀವು ಅನುಭವಿಸಿದ ಯಾವುಯಾತನೆಯನ್ನು ಇನ್ನೂ ಮರೆತಿರಲಿಕ್ಕಿಲ್ಲ. ಆದರೆ ಇನ್ನು ಮುಂದೆ ಹಲ್ಲು ಕೀಳಿಸಿಕೊಳ್ಳುವ ಪ್ರಸಂಗ ಬಂದರೆ ಅದಕ್ಕಾಗಿ ನೀವು ಭಯಪಡಬೇಕಾಗಿಲ್ಲ. ಡಾಕ್ಟರರು ಅನೇಕ ಬಗೆಯ ನೋವು ನಿವಾರಕ ಔಷಧಿಗಳನ್ನು ಉಪಯೋಗಿಸುತ್ತಿರುವದರಿಂದ ನೋವಿನ ಅನುಭವ ನಿಮಗಾಗದು. ಕೆಲ ಡಾಕ್ಟರರು ಮೆಥೋಕ್ಸಿಟಲ್ ಸೋಡಿಯಮ್‌ವನ್ನು ಉಪಯೋಗಿಸುತ್ತಿದ್ದಾರೆ. ಇದನ್ನು ಉಪಯೋಗಿಸಿದಾಗ ನೀವು ಅರ್ಧ ಪ್ರಜ್ಞಾವಸ್ಥೆಯಲ್ಲಿರುವದರಿಂದ ಹಾಗೂ ಅದು ನೋವು ನಿವಾರಕವೂ ಆಗಿರುವದರಿಂದ ಭಯಪಡಬೇಕಾದ ಪ್ರಮೇಯವಿಲ್ಲ. ಹಲ್ಲು ಕೀಳುವ ಕೆಲಸ ನೋವಿಲ್ಲದೆ ಮಾಯಾಜಾಲವಾಗಿ ಸ್ವಪ್ನಲೋಕದಲ್ಲಿ ನಡೆದುಹೋದಂತೆ ಅನಿಸುವದು.

ದಂತ ವೈದ್ಯರು ರೋಗಿಗಳನ್ನು ಕೆಲ ವೇಳೆ ಸಮ್ಮೋಹಿನಿಗೊಳಪಡಿಸಬಹುದು, ಹಲ್ಲು ಕೊರೆದು ತೇ ಬುವ ಕಾರ್ಯಕ್ಕಾಗಿ ವಿವಿಧ ಬಗೆಯ ಡ್ರಿಲ್‌ಗಳನ್ನು ಈಗ ಉಪಯೋಗಿಸಲಾಗುತ್ತದೆ. ಇವುಗಳ ಬದಲು ಲೇಸರ್ ಕಿರಣಗಳನ್ನು ಉಪಯೋಗಿಸುವ ಕಾಲ ದೂರವಿಲ್ಲ.

ಇತ್ತೀಚೆಗೆ ಅಮೇರಿಕದ ಮನೋವಿಜ್ಞಾನಿಗಳು ಮನಸ್ಸನ್ನು ಒಂದೇ ಕಾಲಕ್ಕೆ ಎರಡು ವಿಧದ ಪ್ರಕ್ರಿಯೆಗಳಿಗೊಳಪಡಿಸಿದಾಗ ಅದು ಆ ಪ್ರಕ್ರಿಯೆಗಳನ್ನು ಅಷ್ಟು ಪರಿಣಾಮಕಾರಿಯಾಗಿ ವ್ಯಕ್ತಪಡಿಸುವದಿಲ್ಲವೆಂದು ಕಂಡು ಹಿಡಿದ್ದಾರೆ. ಈ ತತ್ವವನ್ನಾಧರಿಸಿಯೇ ದಂತ ರೋಗಿಗಳಿಗೆ ಹಲ್ಲಿನ ಆಪರೇಶನ್ನಿನ ನಂತರ ಕರ್ಣಮಧುರವಾದ ಸಂಗೀತವನ್ನು ಒದಗಿಸುವರು. ರೋಗಿಯ ಮಿದುಳು ನೋವಿನ ಯಾತನೆ ಹಾಗೂ ಸಂಗೀತದ ಬಗೆಗೆ ಒಂದೇ ಕಾಲಕ್ಕೆ ಪ್ರಕ್ರಿಯೆಗಳನ್ನು ವ್ಯಕ್ತಪಡಿಸುವದರಿಂದ ಅದು ಕೇವಲ ನೋವಿನ ಬಗೆಗೆ ವ್ಯಕ್ತಪಡಿಸುವ ಪ್ರಕ್ರಿಯೆಗಿಂತ ತೀವ್ರತರವಾಗಿರುವುದಿಲ್ಲ. ಹೀಗಾಗಿ ರೋಗಿಗೆ ಕಡಿಮೆ ನೋವನ್ನು ಅನುಭವಿಸುತ್ತಿರುವಂತೆ ಭಾಸವಾಗುತ್ತದೆ. ★



ಮಲ್ಲವಿದ್ಯೆಯ ಅಪೂರ್ವ ವೈಖರಿ

ಟೇಕವೊಂಡೊ

ಕೊರಿಯಾದ ಅಪೂರ್ವ ಮಲ್ಲ ವಿದ್ಯಾವೈಖರಿಗೆ ಇನ್ನೊಂದು ಹೆಸರು ಟೇಕ್‌ವೊಂಡೋ. ಕ್ರಿಸ್ತಪೂರ್ವ ೩೭ ನೇ ವರ್ಷದಲ್ಲಿ ಆ ದೇಶವನ್ನಾಳಿದ ಕೊಗುರ್ಯೊ ರಾಜವಂಶದವರು ಈ ಮಲ್ಲವಿದ್ಯೆಯನ್ನು ಬೆಳೆಸಿ ಪೋಷಿಸಿಕೊಂಡು ಬಂದರು ಎಂದು ದಾಖಲೆಗಳಿಂದ ತಿಳಿಯುತ್ತದೆ. ಇಪ್ಪತ್ತು ಶತಮಾನಗಳ ವರೆಗೆ ಬೆಳೆದುಕೊಂಡು ಬಂದ ಟೇಕ್‌ವೊಂಡೋ ಮಲ್ಲ ವಿದ್ಯೆಯನ್ನು ಕೊರಿಯಾವು ಕಾಪಾಡಿಕೊಂಡು ಬಂದಿದೆ. ಇತ್ತೀಚೆಗೆ, ಕೋರಿಯಾದ ರಾಜಧಾನಿ ಸಿಯೋಲ'ದಲ್ಲಿ ನಡೆದ ಜಾಗತಿಕ ಟೇಕ್‌ವೊಂಡೋ ಸ್ಪರ್ಧೆಯಲ್ಲಿ ಕೋರಿಯಾವು ಅಮೇರಿಕವನ್ನು ೩.೧ ಆಟಗಳಿಂದ ಸೋಲಿಸಿ ವಿಶ್ವ ಚಾಂಪಿಯನ್ ಪಟ್ಟ ಉಳಿಸಿಕೊಂಡಿತು. ಮೂರನೆಯ ಸ್ಥಾನವು ಚೀನ ಪ್ರಜಾರಾಜ್ಯ ಹಾಗೂ ಮೆಕ್ಸಿಕೋಕ್ಕೆ ಸಂಯುಕ್ತವಾಗಿ ದೊರೆತಿತು. ವೈಯಕ್ತಿಕ ಬಹುಮಾನಗಳೂ ಕೊರಿಯಾಕ್ಕೇ ಲಭಿಸಿದವು. ಈ ಪಂದ್ಯಗಳಲ್ಲಿ ಹದಿನೈದು ರಾಷ್ಟ್ರಗಳ ೧೬೦ ಟೇಕ್‌ವೊಂಡೊ ಪಟುಗಳು ಸ್ಪರ್ಧಿಸಿದ್ದರು. ಹೀಗಾಗಿ ಕೋರಿಯಾದ ಈ ಮಲ್ಲ ವಿದ್ಯೆ ಈಗ ವಿಶ್ವದ ಇತರ ದೇಶಗಳಿಗೂ ಹಬ್ಬತೊಡಗಿದೆ.

ಟೇಕ್‌ವೊಂಡೊ ವಿದ್ಯೆ ಅರಗಿಸಿಕೊಂಡವರು— ಸ್ತ್ರೀಯರೇ ಆಗಲಿ, ಪುರುಷರೇ ಆಗಲಿ— ಆತ್ಮವಿಶ್ವಾಸಪೂರ್ಣರಾಗಿರುತ್ತಾರೆ. ಅವರ ದೈಹಿಕ ಸಾಮರ್ಥ್ಯದ ಜೊತೆಗೆ ಮಾನಸಿಕ ಸಾಮರ್ಥ್ಯವೂ ವಿಲಕ್ಷಣವಾಗಿ ಬೆಳೆದು ಬಂದಿರುತ್ತದೆ ಎಂಬ ಕೋರಿಯನ್ನರ ವಿಶ್ವಾಸ ಸಾಧುವಾದುದು. ಈ ವಿದ್ಯಾಪಟುಗಳಿಗೆ ಇಡೀ ಶರೀರವೇ ಒಂದು ಅಸ್ತ್ರವಾಗಿರುತ್ತದೆ. ಈತ ಬರಿಗೈಯಿಂದ ಶತ್ರುವಿನ ಮೇಲೆ ದಾಳಿ ಮಾಡಿದರೂ ಮುಷ್ಟಿಗಳಿಂದ ಗುದ್ದಿ, ಕಾಲುಗಳಿಂದ ಒದೆದು, ಮೊಣಕೈಗಳಿಂದ ತಿವಿದು ಇಲ್ಲವೇ ಇಡೀ ತನ್ನ ದೇಹವನ್ನೇ ಶತ್ರುವಿನ ಮೇಲೆಸೆದು ಆತನನ್ನು ಗಾಸಿಗೊಳಿಸಬಲ್ಲವನಾಗಿರುತ್ತಾನೆ.

'ಟೇಕ್‌ವೊಂಡೊ'ದಲ್ಲಿಯ ಪಟ್ಟುಗಳೆಂದರೆ ತಿವಿಯುವದು, ಮುಷ್ಟಿಘಾತ, ಹಠಾತ್ತಾಗಿ ಎರಗುವದು, ಶತ್ರುವಿನ ಬೆನ್ನೇರುವದು ಹೀಗೆ

ನಾನಾ ಪ್ರಕಾರದವಾಗಿರುತ್ತವೆ. ಭಾರತೀಯ ಮಲ್ಲಯುದ್ಧದಲ್ಲಿ ಹಿಡಿತಗಳು ಪಟ್ಟುಗಳು ಖಚಿತವಾಗಿದ್ದು ಎದುರಾಳಿಗೆ ಅವುಗಳ ಕಲ್ಪನೆ ಉಂಟಾಗಬಲ್ಲದು. ಆದರೆ ಈ ಟೇಕವೊಂಡೊ "ಫ್ರೀ ಸ್ಟೈಲ್" ಕುಸ್ತಿಯ ಮಾದರಿಯದು. ಮುಷ್ಟಿಘಾತವನ್ನು ನಿರೀಕ್ಷಿಸುತ್ತಿರುವಾಗ ಎದುರಾಳಿಯು ಪದಾಘಾತವನ್ನೇ ನೀಡಬಹುದು ಅಥವಾ ತನ್ನ ಇಡೀ ದೇಹವನ್ನೇ ಶತ್ರುವಿನ ಮೇಲೆ ತೂರಿ ಗಾಸಿಗೊಳಿಸಬಹುದು. ಹೀಗಾಗಿ ಟೇಕವೊಂಡೊ ಮಲ್ಲವಿದ್ಯೆ ಶಾಸ್ತ್ರಕ್ಕಿಂತ ಹೆಚ್ಚಾಗಿ ಒಂದು ಅದ್ಭುತ ಕಲೆ ಆಗಿದೆ ಎನ್ನುವದೇ ಹೆಚ್ಚು ಸರಿಯಾದೀತು. ಅದಕ್ಕೆ ತಕ್ಕ ತರಬೇತಿ ಅತ್ಯಗತ್ಯ.

'ಫ್ರೀಸ್ಟೈಲ್' ಕುಸ್ತಿಯಂತೆ ಟೇಕವೊಂಡೊ ಒಮ್ಮೊಮ್ಮೆ ಪ್ರಾಣಾಂತಿಕವೂ ಆಗಬಹುದಾದ್ದರಿಂದ ಅಂಥ ದುರಂತ ಸಂಭವಿಸದಂತೆ ನೋಡಿಕೊಳ್ಳುವ ಏರ್ಪಾಡೂ ಈ ವಿದ್ಯೆಯಲ್ಲಿದೆ. ಈ ಮಲ್ಲವಿದ್ಯೆಯ ಶಿಕ್ಷಣ ಒಂದು ಘಟ್ಟ, ಇದರಲ್ಲಿಯ ಸ್ಪರ್ಧೆಗಳು ಎರಡನೆಯ ಘಟ್ಟ ಮತ್ತು ಗಂಡಾಂತರ ಸಮಯದಲ್ಲಿ ಸ್ಪರ್ಧೆ ನಿಲ್ಲಿಸುವದೂ ಮೂರನೆಯ ಘಟ್ಟ ಎಂದು ವ್ಯವಸ್ಥೆ ಇದೆ.

ಟೇಕವೊಂಡೊ ಸ್ಪರ್ಧಾಳುಗಳು ಬಿಳಿ ಉಡುಪನ್ನೇ ಧರಿಸಿರಬೇಕೆಂದೂ ನಿಯಮವಿದೆ. ಪಾವಿತ್ರ್ಯದ ಸಂಕೇತ ಅದು. ಇನ್ನೂ ವಿದ್ಯಾರ್ಥಿಗಳಾಗಿದ್ದವರು ಬಿಳಿ ನಡುಪಟ್ಟಿ ಧರಿಸಬೇಕು. ಈ ವಿದ್ಯೆ ಕಲಿತು ೧ ರಿಂದ ೩ ನೇ ತರಗತಿ ಪ್ರಾವೀಣ್ಯ ಪಡೆದವರು ಕೆಂಪು ನಡುಪಟ್ಟಿಯನ್ನೂ ೪ ರಿಂದ ೬ ತರಗತಿಯವರು ನೀಲೀ ನಡುಪಟ್ಟಿಯನ್ನೂ ಧರಿಸಬೇಕು. ಈ ಟೇಕವೊಂಡೊ ವಿದ್ಯೆಯಲ್ಲಿ ನಿಷ್ಣಾತನಾದವನು ಕಪ್ಪು ನಡುಪಟ್ಟಿ ಧರಿಸಬೇಕು ಎಂಬ ನಿಯಮಗಳಿವೆ. ಈ ಕಪ್ಪು ನಡುಪಟ್ಟಿ ಗೌರವದ ಸಂಕೇತವೂ ಹೌದು.

ಕೋರಿಯಾದ ಸುಮಾರು ಮೂರೂವರೆ ಕೋಟಿ ಜನಸಂಖ್ಯೆಯಲ್ಲಿ ಟೇಕವೊಂಡೊ ವಿದ್ಯಾಪರಿಣತರು ಸದ್ಯ ಹದಿಮೂರುಲಕ್ಷ ಜನರಿದ್ದಾರೆ ಎಂದು ಲೆಕ್ಕಿಸಲಾಗಿದೆ. ಇಂಥದೊಂದು ವೈಶಿಷ್ಟ್ಯಪೂರ್ಣ ಮಲ್ಲ ವಿದ್ಯೆಯನ್ನು ಇಪ್ಪತ್ತು ಶತಮಾನಗಳ ಕಾಲ ಬೆಳೆಸಿ ಪೋಷಿಸಿಕೊಂಡು ಬಂದಿರುವುದು ಪ್ರಶಂಸನೀಯ. ಪ್ರಪಂಚದ ಎಲ್ಲೆಡೆಯೊಲ್ಲಿಯೂ ಇದು ಹಬ್ಬುತ್ತಿದ್ದರೂ ಕೋರಿಯನ್ನರು ತಮ್ಮ ಮೇಲ್ಮೆ ಕಾಪಾಡಿಕೊಂಡಿರುವದು ಇನ್ನೂ ಅಭಿನಂದನಾರ್ಹ. ✿



ಒಂದು ಪದ್ಧತಿಯನ್ನು ರೂಢಿಗೊಳಿಸುವ ನಿತ್ಯಾಭ್ಯಾಸ, ಒಂದು ಪ್ರಯತ್ನದ ಪುನರಾವೃತ್ತಿ ಮತ್ತು ಸ್ವತಃ ಪಡೆಯುವ ಅನುಭವ-ಇವೆಲ್ಲ ಒಂದು ಮಹತ್ತರ ಪ್ರಭಾವಶಾಲಿ ಸಂಗತಿಗಳೇ ಸೈ. ಆದರೆ ಇದಕ್ಕಿಂತ ಮಿಗಿಲಾದದ್ದು ಜ್ಞಾನವೇ. ಈ ಜ್ಞಾನವು ವಿಚಾರವನ್ನು ಯಶಸ್ವಿಯಾಗಿ ಮತ್ತು ದೇದಿಪ್ಯಮಾನವಾಗಿ ಮಾರ್ಪಡಿಸುತ್ತ ಸಂಗತಿಗಳ ಹಿಂದಿರುವ ಮಹಾ-ಸತ್ಯವನ್ನು ಪಡೆಯುತ್ತದೆ.

ನಮ್ಮ ಹೃತ್-ಪ್ರಜ್ಞೆ. ಚಿತ್-ಪ್ರಜ್ಞೆ, ಸರ್ವಗತ ಪ್ರಜ್ಞೆ ಇವು ಮೂರೂ ಮುಪ್ಪುರಿಗೊಂಡು ಶಾಶ್ವತವಾಗಿ ನೆಲೆನಿಂತಾಗಲೇ ಶಾಶ್ವತ ಭಗವಂತನೊಡನೆ ನಾವು ಪಡೆಯುವ ಏಕತೆಯ ಅನುಭವ ಉಂಟಾಗುವದು.

—ಶ್ರೀ ಅರವಿಂದರು

ನೋಡಲು ವಾಮನ ಗಾತ್ರ
ಆಹಾರ ಕಬಳಿಸುವಲ್ಲಿ ಬಕಾಸುರ
ಸರ್ವಾಂತರ್ಯಾಮಿಯೂ ಹೌದು
ಹೀಗಿದೆ ಮಿಡತೆಯ ನಿಜಜೀವನ

ಎಂ. ಪಿ. ರಾವ್

ಕೀಟಪ್ರಪಂಚದ ಪ್ರಚಂಡ

ಮಿಡತೆಗಳು ಬಹು ಪುರಾತನ ಕಾಲದಿಂದಲೂ ಮಾನವನಿಗೆ ಪರಿಚಿತವಾಗಿವೆಯೆಂಬುದಕ್ಕೆ ಅವುಗಳಿಂದೊದಗಿದ ಅವಾಂತರಗಳ ವೃತ್ತಾಂತಗಳು ಇತಿಹಾಸದುದ್ದಕ್ಕೂ ಹರಡಿಕೊಂಡಿರುವುದೇ ಸಾಕ್ಷಿ. ಇವುಗಳ ವಿನಾಶ ಕೃತ್ಯವನ್ನು ಹೇಳಲಾಸಲ್ಲ. ಲಕ್ಷಾಂತರ ಸಂಖ್ಯೆಯಲ್ಲಿ ರೆಕ್ಕೆಗಳನ್ನು ಝೇಂಕರಿಸುತ್ತಾ ಹಸಿರು ಹಸಿರಾದ ಹೊಲದ ಮೇಲೆ ಕುಳಿತು ಕ್ಷಣಮಾತ್ರದಲ್ಲೇ ಬೆಳೆಯನ್ನು ನಿಶ್ಶೇಷಗೊಳಿಸುವ ಇವುಗಳ ವಿನಾಶಕರ ಪ್ರವೃತ್ತಿಯನ್ನು ಕಂಡೇ ಬಹುಶಃ ಕವಿಯೊಬ್ಬ ನಾದಿರಶಹನ ಸೈನ್ಯವನ್ನು ಮಿಡತೆಗಳ ಸೈನ್ಯಕ್ಕೆ ಹೋಲಿಸಿದ್ದಾನೆ. ಈ ಮಿಡತೆಗಳು ಒಂದು ಪ್ರದೇಶಕ್ಕೆ ಹಾರುವಾಗ ಆಕಾಶ ಮೋಡ ಕವಿಯುವ ಹಾಗೆ ಕವಿಯುತ್ತದೆ ಎನ್ನುವುದರ ಮೇಲಿನಿಂದ ಇವುಗಳ ಸೈನ್ಯದ ಗಾತ್ರವನ್ನು ಊಹಿಸಬಹುದು.

ಸಾಮಾನ್ಯವಾಗಿ ಮರುಭೂಮಿಯಲ್ಲಿ ಕಾಣಸಿಗುವ ಪ್ರಭೇದಕ್ಕೆ ಸ್ಕಿಸ್ಟೋಸಿರ್ಕಾ ಗ್ರೆಗೇರಿಯಾ ಎಂಬ ವೈಜ್ಞಾನಿಕ ಹೆಸರಿದೆ. ಮಿಡತೆಗಳಲ್ಲಿ ಲೋಕಸ್ಟಾ ಮೈಗ್ರೇಟೋರಿಯಾ ಹಾಗೂ ನಾಮೇಟಾಕಾರಿಸ್ ಸೆಪ್ಟೆಂಫಾಶಿಟಾ ಎಂಬ ಇನ್ನೆರಡು ಜಾತಿ ಪ್ರಭೇದಗಳು ಕಂಡುಬರುವವಾದರೂ ಸಂಖ್ಯಾತ್ಮಕವಾಗಿ ಅವು ಮರುಭೂಮಿ ಮಿಡತೆಗಿಂತ ಅಷ್ಟು ವಿಶೇಷವಾಗಿಲ್ಲವೆಂದೇ ಹೇಳಬೇಕು.

ಈ ಮಿಡತೆಗಳಿಗೆ ಅಂತಾರಾಷ್ಟ್ರೀಯ ಗಡಿಯೆಂಬುದಿಲ್ಲ. ಒಂದು ದೇಶದಲ್ಲಿ ಹುಟ್ಟಿ ಇನ್ನೂರೋ ಮುನ್ನೂರೋ ಮೈಲು ದೂರವಿರುವ ಇನ್ನೊಂದು ದೇಶಕ್ಕೆ ಹಾರಿ ಅಲ್ಲಿನ ಬೆಳೆಗಳನ್ನು ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಉಧ್ವಸ್ತಗೊಳಿಸಬಲ್ಲವು.

ಕೀಟಪ್ರಪಂಚದಲ್ಲಿ ಪತಂಗವನ್ನುಳಿದರೆ ಬಹುಶಃ ಮಿಡತೆಯಷ್ಟು ಹೊಟ್ಟೆಬಾಕ ಜೀವಿ ಇನ್ನೊಂದಿರಲಾರದು. ಪತಂಗ ತನ್ನ ಶರೀರದ ತೂಕದಷ್ಟೇ ಆಹಾರವನ್ನು ಒಂದು ದಿನದಲ್ಲಿ ಕಬಳಿಸಿದರೆ ಮಿಡತೆ ತನ್ನ ತೂಕದ ಅರ್ಧದಷ್ಟು ಅಥವಾ ಅದಕ್ಕೂ ಸ್ವಲ್ಪ ಹೆಚ್ಚು ಆಹಾರವನ್ನು ಇಪ್ಪತ್ತುನಾಲ್ಕು ಗಂಟೆಗಳ ಅವಧಿಯಲ್ಲಿ ಕಬಳಿಸುತ್ತದೆ. ಈ ಮಿಡತೆಗಳ ಕೊಂಡಿ ಬಲು ಬಲಶಾಲಿಯಾಗಿದ್ದು ಅದರ ಸಹಾಯದಿಂದ ಧಾನ್ಯಗಳನ್ನಲ್ಲದೆ, ಎಲೆ, ದಂಟು, ಕಾಂಡಗಳನ್ನೂ ಸಿಗಿದು ಒಳಗಿನ ಸತ್ವವೆಲ್ಲವನ್ನು ಹೀರಿ ಒಗೆಯುತ್ತದೆ. ಹೀಗಾಗಿ ಮಿಡತೆಯ ಸೈನ್ಯ ಹೊಲದ ಮೇಲೆ ಬಂದಿಳಿದರೆ ಅದು ಅಲ್ಲಿಂದ ನಿರ್ಗಮಿಸಿದಾಗ ಈ ಮೊದಲು ಸಸಿಗಳು ನಿಂತ ಸ್ಥಳದಲ್ಲಿ ಒಂದೆರಡು ವಿನಾ ಮತ್ತೇನೂ ಕಂಡುಬರುವುದಿಲ್ಲ.

ಮಿಡತೆಗಳು ಒಮ್ಮೊಮ್ಮೆ ವಾಹನ ಸಂಚಾರವನ್ನೂ ವ್ಯತ್ಯಸ್ತಗೊಳಿಸುವುದುಂಟು. ಡಡ್ಲೆ ಸ್ಟ್ಯಾಂಪ್ ಎಂಬ ಸುಪ್ರಸಿದ್ಧ ಭೂಗೋಲ

ಶಾಸ್ತ್ರಜ್ಞ ಮೊರೆಕ್ಕೊದಲ್ಲಿ ಸಂಚರಿಸುತ್ತಿದ್ದಾಗ ಕಂಡ ದೃಶ್ಯ ಸ್ವಾರಸ್ಯಕರವಾಗಿದೆ. "ನಾನು ಕೆಲ ವರ್ಷಗಳ ಹಿಂದೆ ಮೊರೆಕ್ಕೊದಲ್ಲಿ ಸಂಚರಿಸುತ್ತಿದ್ದಾಗ ಮಿಡತೆಗಳ ಹಾವಳಿ ಪ್ರಾರಂಭವಾಯಿತು. ಅವುಗಳ ಸಂಖ್ಯೆ ಎಷ್ಟು ವಿಪರೀತವಾಗಿತ್ತೆಂದರೆ ಟ್ರೇನುಗಳು ಚಲಿಸುವುದೂ ಕಠಿಣವಾಗಿತ್ತು. ಚಾಲಕ ಟ್ರೇನನ್ನು ಸಾವಕಾಶವಾಗಿ ಓಡಿಸಿದರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಮಿಡತೆಗಳು ರೈಲಿನ ಚಕ್ರಗಳ ಅಡಿಯಲ್ಲಿ ಸಿಕ್ಕಿಬಿದ್ದು ಗಾಡಿ ಅಲ್ಲಲ್ಲಿ ನಿಂತುಹೋಗುತ್ತಿತ್ತು. ಸ್ಕೂಟಾದಿಂದ ಸೇನಿನಲ್ಲಿರುವ ಅಲ್ಜೆರಿಕಾಸ್‌ಗೆ ಸ್ಟೀಮರಿನಿಂದ ಹೋಗುವಾಗ ಕೆಲ ಮಿಡತೆಗಳು ಒಳಸೇರಿಕೊಂಡವು. ಅವುಗಳೆಲ್ಲವನ್ನು ಕೊಂದು ಸ್ಟೀಮರನ್ನು ಸ್ವಚ್ಛಗೊಳಿಸುವ ವರೆಗೆ ಸ್ಟೀಮರನ್ನು ದಡ ಮುಟ್ಟಗೊಡುವುದಿಲ್ಲವೆಂದು ಅಲ್ಜೆರಿಕಾಸ್‌ನಲ್ಲಿ ಹೇಳಲಾಯಿತು," ಎಂದಾತ ಒಂದೆಡ ಬರೆದಿದ್ದಾನೆ.

ಮಿಡತೆಯೊಂದು ದೊಡ್ಡ ಹುಳು. ಅದರ ತೂಕ ಸುಮಾರು ಮೂರು ಗ್ರಾಮಿನಷ್ಟು. ರೆಕ್ಕೆಗಳನ್ನಗಲಿಸಿದಾಗ ಎರಡೂ ರೆಕ್ಕೆಗಳ ತುದಿಗಳ ನಡುವಿನ ಅಂತರ ಹತ್ತರಿಂದ ಹದಿನೈದು ಸೆಂಟಿಮೀಟರಿನಷ್ಟು ಇರುವುದುಂಟು. ಒಂದು ಮಿಡತೆ ಒಂದು ಸಲಕ್ಕೆ ಮೂವತ್ತರಿಂದ ಮೂನ್ನೂರರ ವರೆಗೆ ತತ್ತಿಗಳನ್ನಿಡುವುದು. ಮಿಡತೆಯು ಈ ತತ್ತಿಗಳಲ್ಲಿನ ನೀರಿನ ಪ್ರಮಾಣ ಮಿಡತೆಯ ಶರೀರದಲ್ಲಿರುವುದರ ಅರ್ಧದಷ್ಟು ಮಾತ್ರ ಇರುವುದರಿಂದ, ನೆಲದ ನೀರಿನ ಕೆಲಂಶ ತತ್ತಿಯಲ್ಲಿ ಸೇರಿಕೊಳ್ಳಲೆಂದು ಉಸುಕು ಅಥವಾ ಮಣ್ಣು ಆರ್ದ್ರವಾಗಿರುವಲ್ಲಿ ಮಾತ್ರ ಮಿಡತೆಗಳು ತತ್ತಿಗಳನ್ನಿಡುತ್ತವೆ.

ಮಿಡತೆಗಳನ್ನು ನಿಯಂತ್ರಿಸುವ ಬಗೆಗೆ ಮೂಲಭೂತವಾದ ಸಂಶೋಧನೆಗಳನ್ನು



ಆಫ್ರಿಕದ ವಿಮಾನ ನಿಲ್ದಾಣವನ್ನು ಮಿಡತೆಗಳು ಆಕ್ರಮಿಸುತ್ತಿರುವ ದೃಶ್ಯ

ಕೈಕೊಳ್ಳಲು ೧೯೩೨ ರಲ್ಲಿ ಲಂಡನ್ನಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈದೀಗ ಸಂಯುಕ್ತ ರಾಷ್ಟ್ರ ಸಂಸ್ಥೆಯ ಆಧೀನ ಸಂಘಟನೆಯಾದ ಜಾಗತಿಕ ಕೃಷಿ ಹಾಗೂ ಆಹಾರ ಸಂಸ್ಥೆಯ ಸಹಕಾರದೊಡನೆ ಕಾರ್ಯ ಮಾಡುತ್ತಿದೆ. ಯಾವ ದೇಶಗಳಲ್ಲಿ ಮಿಡತೆಯ ಹಾವಳಿ ತಲೆದೋರಬಹುದೆಂಬ ಬಗ್ಗೆ ಈ ಸಂಸ್ಥೆ ಜಾಗತಿಕ ಕೃಷಿ ಹಾಗೂ ಆಹಾರ ಸಂಸ್ಥೆಗೆ ಮುನ್ಸೂಚನೆಯನ್ನು ಕೊಡುವುದು. ಜಾಗತಿಕ ಹವಾಮಾನ ಸಂಸ್ಥೆಯೂ ಇತ್ತಿತ್ತಲಾಗಿ ಈ ಬಗ್ಗೆ ಆಸಕ್ತಿ ತೋರುತ್ತಿದ್ದು, ಮಿಡತೆಗಳ ನಿಯಂತ್ರಣದ ಬಗ್ಗೆ ಸಂಶೋಧನೆ ನಡೆಸುತ್ತಿರುವ ಮಿಡತೆಗಳಿಂದ ತ್ರಸ್ತವಾದ ದೇಶಗಳ ವಿಜ್ಞಾನಿಗಳಿಗೆ ತಾಂತ್ರಿಕ ನೆರವು ನೀಡುತ್ತದೆ.

ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಮಳೆಗಾಲದಲ್ಲಿ ಮಿಡತೆಗಳ ಹಾವಳಿ ತಲೆದೋರುವುದು. ನಮ್ಮ ದೇಶದಲ್ಲಿ ಅವು ಪ್ರಥಮತಃ ಕಂಡುಬರುವುದು ರಾಜಸ್ಥಾನ ಹಾಗೂ ಕಚ್ಛಗಳಲ್ಲಿ. ಭಾರತ ಸರಕಾರದ ಕೃಷಿ ಹಾಗೂ ಆಹಾರ ಖಾತೆಯ ಒಂದು ವಿಭಾಗ ಮಿಡತೆಗಳ ನಿಯಂತ್ರಣಕ್ಕಾಗಿ ಮೀಸಲಾಗಿದೆ. ಅದರ ಅಧಿಕಾರಿಗಳು ಮಿಡತೆಗಳ ಹಾವಳಿ ಎಲ್ಲೆಲ್ಲಿ ಹಾಗೂ ಯಾವ ಯಾವ ಕಾಲದಲ್ಲಿ ಉಂಟಾಗುತ್ತದೆಂಬುದನ್ನು ಮುಂಚಿತವಾಗಿಯೇ ಊಹಿಸಿ ಆ ಬಗ್ಗೆ ಸಂಬಂಧಿಸಿದ ರಾಜ್ಯಗಳಿಗೆ ಮುನ್ನೆಚ್ಚರಿಕೆಯನ್ನು ಕೊಡುತ್ತಾರೆ.

೧೯೬೫ರಲ್ಲಿ ಆಫ್ರಿಕದ ಕೆನ್ಯಾದಲ್ಲಿ ಮಿಡತೆಗಳ ಹಾವಳಿಯುಂಟಾದಾಗ ಅಲ್ಲಿನ ಸರಕಾರ ತೀವ್ರವಾದ ಕೀಟನಾಶಕಗಳನ್ನು ಪ್ರಯೋಗಿಸಿ ಹಾವಳಿಯನ್ನು ನಿಯಂತ್ರಿಸಿತು. ಬಳಿಕ ಹಾವಳಿಗೀಡಾದ ಪ್ರದೇಶವನ್ನು ವೀಕ್ಷಿಸಿದಾಗ ಇಪ್ಪತ್ತು ಚದರ ಕಿಲೋಮೀಟರುಗಳಷ್ಟು ಕ್ಷೇತ್ರವನ್ನು ಮುಚ್ಚುವಷ್ಟು ಸಂಖ್ಯೆಯಲ್ಲಿ ಮಿಡತೆಗಳು ನೆಲದ ಮೇಲೆ ಹರಡಿಕೊಂಡಿದ್ದವು. ಮಿಡತೆಗಳ ಈ ಮಾರಣ ಹೋಮದಲ್ಲಿ ಕನಿಷ್ಠಪಕ್ಷ ೧,೦೦೦,೦೦೦,೦೦೦ ಮಿಡತೆಗಳಾದರೂ ಕೊಲ್ಲಲ್ಪಟ್ಟಿರಬೇಕೆಂದು ಲೆಕ್ಕಹಾಕಲಾಗಿದೆ. ಈ ಎಲ್ಲ ಸತ್ತ ಮಿಡತೆಗಳನ್ನು ತೂಗಿದಾಗ ಒಟ್ಟು ತೂಕ ೨,೫೦೦,೦೦೦ ಕಿಲೋಗ್ರಾಮುಗಳಿಗಿಂತ ಸ್ವಲ್ಪ ಹೆಚ್ಚಾಗಿಯೇ ಇತ್ತು. ೧೯೬೦ ರ ಅಗಸ್ಟ್ ಮೂರರಂದು ಸೋಮಾಲಿ ರಿಪಬ್ಲಿಕ್‌ನ ಹರ್ಗೀಸಾದಲ್ಲಿ ೧೩೦ ಚದುರ ಕಿಲೋಮೀಟರುಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ಮಿಡತೆಗಳು ಹರಡಿಕೊಂಡವು. ಸಾವಿರ ಚದರ ಕಿಲೋಮೀಟರುಗಳಷ್ಟು ವಿಸ್ತೃತವಾದ ಪ್ರದೇಶದಲ್ಲಿ ಹಾಗೂ ನೆಲದಿಂದ ನೂರು ಮೀಟರುಗಳಷ್ಟು ಎತ್ತರದ ವರೆಗೆ ಮಿಡತೆಗಳು ಹತ್ತಿರ ಹತ್ತಿರವಾಗಿ ಹರಡಿಕೊಂಡ ಉದಾಹರಣೆಗಳೂ ದೊರೆಯುತ್ತವೆ.

ತತ್ತಿಯಿಂದ ಹೊರ ಬಂದ ಮರಿ ಹೆಚ್ಚು ದೂರ ಹಾರಲಾರದು. ಆದರೆ ತತ್ತಿಯಿಂದ ಹೊರಬಂದ ಹದಿನೈದು ದಿನಗಳಲ್ಲೇ ಅದರ ನರಗಳು ಬಲಗೊಳ್ಳುತ್ತವಲ್ಲದೆ ಆರ್ದ್ರವಾದ ಅದರ ರೆಕ್ಕೆಗಳು ಒಣಗಿ ಗಟ್ಟಿಯಾಗಿ ಮಿಡತೆ ತಾಸಿಗೆ ಹದಿನೈದರಿಂದ ಇಪ್ಪತ್ತು ಕಿಲೋಮೀಟರುಗಳಷ್ಟು ವೇಗದಿಂದ ಹಾರಲು ಶಕ್ತವಾಗುತ್ತದೆ. ಅದರ ಹಾರಾಟವಾಗಲಿ ಅದು ನೆಲದಿಂದ ಮೇಲೇರುವ ಅಥವಾ ಮೇಲಿನಿಂದ ನೆಲಕ್ಕಿಳಿಯುವ ರೀತಿಯಾಗಲಿ ವಿಮಾನವನ್ನೇ ಹೋಲುತ್ತದೆ.

ಈ ಮಿಡತೆಗಳು ಎಷ್ಟು ದೂರ ಹಾರುವವೆಂಬುದನ್ನು ಗಮನಿಸಿದರೆ ಆಶ್ಚರ್ಯವಾದೀತು. ವೈಜ್ಞಾನಿಕರು ಒಮ್ಮೆ ಮಿಡತೆಗಳ ಪಥವನ್ನು ನಿರೀಕ್ಷಿಸಿದಾಗ ಅಟ್ಲಾಂಟಿಕ್ ಮಹಾಸಾಗರದಲ್ಲಿರುವ ಕ್ಯಾನರಿ ಹಾಗೂ ಮದಿರಾ ದ್ವೀಪದಿಂದಲೂ ಆಫ್ರಿಕದ ಪಶ್ಚಿಮದ ತುದಿಯಲ್ಲಿರುವ ಮೊರಕ್ಕೊದಿಂದಲೂ ಹೊರಟ ಮಿಡತೆಗಳು ತಮ್ಮ ಪ್ರಯಾಣದಲ್ಲಿ ಆಫ್ರಿಕವನ್ನು ಹಾಯ್ದವು. ಕೆಂಪು ಸಮುದ್ರವನ್ನು ಉಲ್ಲಂಘಿಸಿದವು. ಅರೇಬಿಯ, ಇರಾಣ, ಪಾಕಿಸ್ತಾನಗಳ ಮೂಲಕ ಭಾರತದಲ್ಲಿ ಪ್ರವೇಶಿಸಿ ಇಲ್ಲಿಯೂ ಅನಾಹುತವನ್ನುಂಟುಮಾಡಿದವು.

ಭಾರತದ ವಾಯುವ್ಯ ಭಾಗದಲ್ಲಿ, ಅದರಲ್ಲೂ ವಿಶೇಷವಾಗಿ ರಾಜಸ್ಥಾನದಲ್ಲಿ ಮಿಡತೆಗಳ ಹಾವಳಿ ಬಹಳ. ಇವುಗಳನ್ನು ನಿಯಂತ್ರಿಸಲು ಸಾಕಷ್ಟು ಪರಿಣಾಮಕರವಾದ ಕ್ರಮಗಳನ್ನು

ಅಲ್ಲಿ ಕೈಕೊಳ್ಳಲಾಗುತ್ತಿದೆ. ವಾತಾವರಣ ವೈಪರೀತ್ಯದಿಂದಾಗಿ ಅವು ನೈಸರ್ಗಿಕವಾಗಿಯೂ ನಿಯಂತ್ರಿಸಲ್ಪಡುವ ಪ್ರಸಂಗಗಳೂ ಇಲ್ಲದಿಲ್ಲ. ಮಿಡತೆಗಳ ತಂಡವೊಮ್ಮೆ ಕಾಶ್ಮೀರದತ್ತ ಸಾಗುತ್ತಿದ್ದಾಗ ಹಿಮಪಾತದಿಂದಲೂ ಅಸಾಧ್ಯವಾದ ಚಳಿಯಿಂದಲೂ ಅವು ಮಾರ್ಗಮಧ್ಯದಲ್ಲೆ ಕೊಲ್ಲಲ್ಪಟ್ಟವು ಸಾಗರತಟದಿಂದ ೧೧,೪೦೦ ಅಡಿ ಎತ್ತರದಲ್ಲಿರುವ ಪೀರ ಪಿಂಜಾಲ್ ಕಣಿವೆಯಲ್ಲಿ ಈ ಮಿಡತೆಗಳು ಲಕ್ಷಗಟ್ಟಳೆಯಲ್ಲಿ ಸತ್ತು ಬಿದ್ದದ್ದು ಕಂಡುಬಂತು.

ದಕ್ಷಿಣ ಭಾರತದಲ್ಲಿ ಅವು ಎಲ್ಲಿಯವರೆಗೆ ಹಾವಳಿಯೆಬ್ಬಿಸಬಹುದೆಂಬುದೂ ಒಂದು ಜಿಜ್ಞಾಸೆಯ ಪ್ರಶ್ನೆ. ೧೯೫೨ ರ ಅಕ್ಟೋಬರಿನಲ್ಲಿ ಮಿಡತೆಗಳ ತಂಡವೊಂದು ಕಚ್ಛಪ್ರದೇಶವನ್ನು ಬಿಟ್ಟು ಸೀದಾ ಮಂಗಳೂರು, ಕ್ವಿಲೋನುಗಳತ್ತ ಹಾರಿದವು. ಇವು ಸಾಗರದ ಮೇಲಿನಿಂದ ಹಾರಿ ಹೋಗುವುದನ್ನು ಆಗ ಮುಂಬಯಿ ನಿವಾಸಿಗಳು ಕಂಡರು. ಭೂಮಾರ್ಗವನ್ನವಲಂಬಿಸಿ ಕಚ್ಛದಿಂದ ಮಂಗಳೂರು, ಕ್ವಿಲೋನುಗಳನ್ನು ತಲುಪಲು ೮೦೦ ಕಿಲೋಮೀಟರುಗಳ ಅಂತರವನ್ನು ಕ್ರಮಿಸಬಹುದಾಗಿದ್ದಾಗ ಈ ಮಿಡತೆಗಳು ಸಾಗರದ ಮೇಲೆ ಸುತ್ತು ಹಾಕಿ ೪೦೦ ಕಿಲೋಮೀಟರುಗಳಷ್ಟು ಹೆಚ್ಚು ಅಂತರವನ್ನು ಕ್ರಮಿಸಿ ಮಂಗಳೂರನ್ನು ಏಕೆ ತಲುಪಿದವು? ಸುಲಭವಾದ ಮಾರ್ಗವನ್ನು ಏಕೆ ಆರಿಸಿಕೊಳ್ಳಲಿಲ್ಲ? ಎಂಬ ಬಗ್ಗೆ ವಿಜ್ಞಾನಿಗಳು ಪರಿಶೀಲಿಸಿದಾಗ ವಾತಾವರಣದ ಮೇಲಿನಸ್ತರದಲ್ಲಿನ ವಾಯು ಪ್ರವಾಹವನ್ನು ಅವು ಅವಲಂಬಿಸಿದ್ದವೆಂಬುದು ಕಂಡುಬಂತು. ವಾಯುಪ್ರವಾಹದಗುಂಟ ತೇಲಿಕೊಂಡೆ ಹೋಗಬಹುದಾದ್ದರಿಂದ ಈ ಮಾರ್ಗ ಸುಲಭವೂ ಆಗಿತ್ತು. ಕಚ್ಛದಲ್ಲಿ ಮಳೆಯಾಗದೆ ಅಲ್ಲಿರುವುದು ಅಸಾಧ್ಯವಾದಾಗ ಮಿಡತೆಗಳು ಮಂಗಳೂರು, ಕ್ವಿಲೋನಿನತ್ತ ಹಾರಿದ್ದವು. ಆದರೆ ದೀರ್ಘಪ್ರಯಾಣದ ಶ್ರಮವನ್ನು ತಾಳಲಾರದೆ ಅವುಗಳ ಪೈಕಿ ಅನೇಕವು ಮಾರ್ಗಮಧ್ಯದಲ್ಲೆ ಬಿದ್ದು ಪ್ರಾಣ ಕಳೆದುಕೊಂಡವು. ಇನ್ನು ಕೆಲವು ಸುರಕ್ಷಿತವಾಗಿ ಭೂಮಿಗಿಳಿದವೇನೋ ನಿಜ. ಆದರೆ ಆ ವೇಳೆಗೆ ಅವೆಷ್ಟು ನಿರ್ವಿಣ್ಣವಾಗಿ ಹೋಗಿದ್ದವೆಂದರೆ ನೆಲ ಮುಟ್ಟುತ್ತಲೇ ಪಕ್ಷಿಗಳಿಗೆ ಆಹುತಿಯಾದವು. ಒಟ್ಟಿನಲ್ಲಿ, ಆ ವರ್ಷ ಈ ಮಿಡತೆಗಳಿಂದ ದಕ್ಷಿಣ ಭಾರತದಲ್ಲಿ ವಿಶೇಷ ಹಾನಿಯಾಗಲಿಲ್ಲ.

ಮೊರೊಕ್ಕೊ, ಅಲ್ಜೀರಿಯ, ಇಥಿಯೋಪಿಯ, ಸಹರಾ, ಮಾರಿಟಾನಿಯಾ, ಸೇನೆಗಾಲ್, ಚಾಡ್, ಸುಡಾನ್, ಇಸ್ರೇಲ್, ಜೋರ್ಡಾನ್, ಅರೇಬಿಯದ ಪಶ್ಚಿಮ ಹಾಗೂ ಮಧ್ಯಭಾಗ, ಇರಾಕ್' ಇರಾಣ, ಪಾಕಿಸ್ತಾನ, ಹಾಗೂ ಭಾರತದ ರಾಜಸ್ತಾನಗಳಲ್ಲಿ ಮಿಡತೆಗಳು ಹುಟ್ಟಿ ವರ್ಧಿಸುತ್ತವೆ. ದಕ್ಷಿಣ ಆಫ್ರಿಕದಲ್ಲಿ ಇನ್ನೊಂದು ಬಗೆಯ ಮಿಡತೆ ಹುಟ್ಟಿಕೊಳ್ಳುವುದಾದರೂ ಅದು ವಲಸೆ ಹೋಗುವುದಿಲ್ಲ.

ದಕ್ಷಿಣ ಹಾಗೂ ಉತ್ತರ ಗೋಲಾರ್ಧಗಳಲ್ಲಿ ಹುಟ್ಟಿಕೊಳ್ಳುವ ಗಾಳಿಗಳು ಒಂದನ್ನೊಂದು ಸಂಧಿಸುವ ಸ್ಥಾನಕ್ಕೆ ಹವಾಮಾನ ಶಾಸ್ತ್ರದಲ್ಲಿ 'ಅಂತರ್ ವಿಷುವೃತ್ತದ ಏಕಮುಖ ವಲಯ' (Inter tropical Convergence Zone) ವೆಂಬ ಹೆಸರು. ಋತುಮಾನಕ್ಕನುಸಾರವಾಗಿ ಇದು ಉತ್ತರಕ್ಕೂ ದಕ್ಷಿಣಕ್ಕೂ ಸರಿಯುವುದು. ಈ ವಲಯದ ಅಕ್ಷವನ್ನು ಪವನಶಾಸ್ತ್ರೀಯ ವಿಷುವೃತ್ತವೆಂದು ಕರೆಯುವುದೂ ಇದೆ. ಮಿಡತೆಗಳ ಚಲನೆ ಹೆಚ್ಚು ಮಟ್ಟಿಗೆ ಈ ವಲಯವನ್ನೆ ಅವಲಂಬಿಸಿರುವುದು. ಮಿಡತೆಗಳು ಮಳೆಗಾಲದಲ್ಲಿ, ಅಂದರೆ ಜೂನ್‌ದಿಂದ ಸೆಪ್ಟೆಂಬರಿನ ವರೆಗಿನ ಅವಧಿಯಲ್ಲಿ ವೃದ್ಧಿಸುವವು.

ಮಿಡತೆಗಳ ಹಾರಾಟದ ಬಗೆಗೆ ವಿಶೇಷ ಅಧ್ಯಯನ ಕೈಕೊಳ್ಳಲು ಇತ್ತೀಚೆ ರಾಡಾರುಗಳನ್ನೂ ಬಳಸಲಾಗುತ್ತಿದೆ. ರಾಷ್ಟ್ರೀಯ ಭೌತಶಾಸ್ತ್ರ ಪ್ರಯೋಗಾಲಯದ ಅಂಗ ಸಂಸ್ಥೆಯೊಂದು ಮೋಡ ಹಾಗೂ ಮಳೆಗಳ ಬಗೆಗಿನ ಸಂಶೋಧನೆಗಾಗಿಯೆ ಮೀಸಲಾಗಿದ್ದು ಅದು ದೆಹಲಿಯಲ್ಲಿ ಮೈಕ್ರೋವೇವ್ ರಾಡಾರುಗಳನ್ನುಪಯೋಗಿಸಿ ವೈಜ್ಞಾನಿಕ ಪರ್ಯವೇಕ್ಷಣೆಗಳನ್ನು ಕೈಕೊಂಡಿತು. ೧೯೬೭

ಜುಲೈ ೨೫ ರಂದು ಸಾಧಾರಣ ಗಾತ್ರದ ಮಿಡತೆಯ ಗುಂಪೊಂದು ದೆಹಲಿಯತ್ತ ಹಾರಿ ಬರುತ್ತಿದ್ದಾಗ ಬಹುದೂರದಿಂದ ರಾಡಾರು ಅದನ್ನು ಗುರುತಿಸಿ ಫೋಟೋ ತೆಗೆದುಕೊಂಡಿತು. ಭಾರತದಲ್ಲಿ ರಾಡಾರಿನ ಸಹಾಯದಿಂದ ಮಿಡತೆಗಳ ಫೋಟೋ ತೆಗೆದುಕೊಂಡದ್ದು ಅದೇ ಮೊದಲ ಸಲ.

ಸಂಯುಕ್ತರಾಷ್ಟ್ರ ಸಂಸ್ಥೆಯ ವಿಶೇಷ ನಿಧಿಯ ಸಹಾಯದಿಂದ ವರ್ಷಂಪ್ರತಿ ಮಿಡತೆಗಳಿಂದ ಪೀಡಿತವಾದ ದೇಶಗಳಲ್ಲಿ ಮಿಡತೆಗಳ ನಿಯಂತ್ರಣವನ್ನು ಕುರಿತು ತಜ್ಞರಿಂದ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ. ಮೊರಕ್ಕೊದಷ್ಟು ಮತ್ಯಾವ ದೇಶವೂ ಮಿಡತೆಗಳಿಂದ ಪೀಡಿತವಾಗಿಲ್ಲ, ಆದ್ದರಿಂದ ಮೊದಲನೆ ಶಿಬಿರವನ್ನು ೧೯೬೦ರಲ್ಲಿ ಮೊರಕ್ಕೊದಲ್ಲೂ ಆನಂತರ ಕ್ರಮವಾಗಿ ಇಥಿಯೋಪಿಯ, (೧೯೬೨), ಪಾಕಿಸ್ತಾನ (೧೯೬೩), ಸಂಯುಕ್ತ ಅರಬ ಸಂಸ್ಥಾನಗಳು (೧೯೬೫), ಸೆನೆಗಾಲ್ (೧೯೬೫) ಹಾಗೂ ಇರಾನಿನಲ್ಲೂ (೧೯೬೭) ಇಂತಹ ತರಬೇತಿ ಶಿಬಿರಗಳನ್ನು ನಡೆಸಲಾಯಿತು.

ಮಿಡತೆಗಳನ್ನು ನಾಲ್ಕು ವಿಧವಾಗಿ ನಿಯಂತ್ರಿಸಬಹುದು. ಅವುಗಳಲ್ಲಿ ಮೊದಲನೆಯದೆಂದರೆ, ಮಿಡತೆ ತತ್ತಿಯಿಟ್ಟ ಕೂಡಲೆ ಅವುಗಳನ್ನು ನಾಶಪಡಿಸುವುದು. ಉದಾಹರಣೆಗೆ ಹೇಳುವುದಾದರೆ ೧೮೮೧ರಲ್ಲಿ ಸೈಪ್ರಸ್‌ವೊಂದರಲ್ಲಿಯೇ ಹದಿಮೂರುನೂರು ಟನ್ನುಗಳಷ್ಟು ಮಿಡತೆ ತತ್ತಿಗಳನ್ನು ನಾಶಪಡಿಸಲಾಯಿತು. ಕಳೆದ ಶತಮಾನದ ಉತ್ತರಾರ್ಧದಲ್ಲಿ ನಮ್ಮ ದೇಶದಲ್ಲಿ ಮಿಡತೆಗಳ ಹಾವಳಿ ತಲೆದೋರಿದಾಗ, ಒಂದು ಪೌಂಡಿನಷ್ಟು ಸತ್ತ ಅಥವಾ ಜೀವಂತ ಮಿಡತೆಗಳನ್ನು ಸಂಗ್ರಹಿಸಿದರೆ, ಅದಕ್ಕೆ ಪ್ರತಿಯಾಗಿ ಒಂದು ಆಣೆಯನ್ನು ಬಹುಮಾನವಾಗಿ ಕೊಡುವುದಾಗಿ ಸರಕಾರ ಘೋಷಿಸಿತು. ಆದರೆ ಇದರಿಂದ ಮಿಡತೆಗಳನ್ನು ನಿಯಂತ್ರಿಸುವುದು ಸಾಧ್ಯವಾಗಲಿಲ್ಲ. ಆ ಕಾಲದಲ್ಲಿ ಅನೇಕ ಜನರು ಮಿಡತೆಗಳನ್ನು ಹಿಡಿದು ಚೀಲಗಳಲ್ಲಿ ತುಂಬಿ ನಾಶಪಡಿಸಿದರು. ಆದರೆ ಅವು ಎಷ್ಟು ಅಸಂಖ್ಯವಾಗಿದ್ದವೆಂದರೆ ಈ ವಿಧಾನದಿಂದಲೂ ಅವುಗಳ ನಿಯಂತ್ರಣ ಸಾಧ್ಯವಾಗಲಿಲ್ಲ.

ಹಾಪರ್ ಡೋಜರುಗಳನ್ನುಪಯೋಗಿಸುವುದು ಎರಡನೆಯ ವಿಧಾನ. ಹಾರುವ ಮಿಡತೆಗಳು ಡೋಜರಿನ ಗಾಲಿಗಳಿಗೆ ಬಡಿದು ಕೆಳಗೆ ಸೀಮೆಎಣ್ಣೆ ನೀರಿನ ಮಿಶ್ರಣದಲ್ಲಿ ಬಿದ್ದು ನಾಶವಾಗುತ್ತವೆ. ಮೂರನೆಯ ವಿಧಾನವೆಂದರೆ ಅಂಟು ಪದಾರ್ಥವನ್ನು ಗಿಡದ ಎಲೆಗಳಿಗೋ ರೆಂಬೆಗಳಿಗೋ ಇಲ್ಲವೆ ಮಿಡತೆ ಕುಳಿತುಕೊಳ್ಳುವ ಇನ್ನಾವುದೆ ಸ್ಥಳದಲ್ಲಿಯೊ ಅಂಟಿಸಿ ಮಿಡತೆಗಳು ಅಲ್ಲಿ ಸಿಕ್ಕಿ ಬೀಳುವಂತೆ ಮಾಡುವುದು ಅಥವಾ ಆಕರ್ಷಕವಾದ ವಾಸನೆ ಸೂಸುವ, ಅಥವಾ ಮನಮೋಹಕವಾಗಿ ಕಾಣುವ ವಿಷ ಪದಾರ್ಥಗಳನ್ನುಪಯೋಗಿಸುವುದು. ಆದರೆ ಈ ವಿಧಾನವೂ ಅಷ್ಟು ಪರಿಣಾಮಕಾರಿಯಾಗಿಲ್ಲ.

ನಾಲ್ಕನೆಯ ವಿಧಾನವೆಂದರೆ ಮಿಡತೆಗಳು ವಾಸಿಸುವ ಹಾಗೂ ಸಂವರ್ಧಿಸುವ ಸ್ಥಳದಲ್ಲಿ ವಿಮಾನದ ಮೂಲಕ ಕೀಟ ನಾಶಕಗಳನ್ನು ಸಿಂಪಡಿಸುವುದು. ಮಿಡತೆಗಳನ್ನು ನಿಯಂತ್ರಿಸುವಲ್ಲಿ ಉಳಿದ ಮೂರು ವಿಧಾನಗಳಿಗಿಂತ ಇದು ಪ್ರಭಾವಶಾಲಿಯಾಗಿದೆ. ಈ ಉದ್ದೇಶಕ್ಕಾಗಿಯೆ ಮೀಸಲಾದ ಒಟ್ಟು ಹತ್ತು ವಿಮಾನಗಳು ನಮ್ಮ ದೇಶದಲ್ಲಿವೆ. ಮಿಡತೆಗಳ ಹಾವಳಿ ತಲೆದೋರಿದಾಗಲೆಲ್ಲ ಸಂಬಂಧಿಸಿದ ಅಧಿಕಾರಿಗಳು ಸಿಂಚನಕ್ಕೆ ಅಗತ್ಯವಾದ ವಿಶೇಷ ಸಾಧನಗಳಿಂದ ಸಜ್ಜಿತವಾದ ಈ ವಿಮಾನುಗಳನ್ನುಪ-ಯೋಗಿಸಿ ಮಿಡತೆಗಳನ್ನು ಯಶಸ್ವಿಯಾಗಿ ನಿಯಂತ್ರಿಸಿದ್ದಾರೆ. ಹೀಗಾಗಿ ಮಿಡತೆಗಳಿಂದ ಬೆಳೆಗಳಿಗೊದಗುತ್ತಿರುವ ಹಾನಿ ಪ್ರತಿ ವರ್ಷವೂ ಕ್ರಮೇಣವಾಗಿ ಕಡಿಮೆಯಾಗುತ್ತಿದೆ. ✡

ನಿಜವಾದ ಚಿರಂಜೀವಿ

ಜಗತ್ತಿನಲ್ಲಿ ಇಂದು ಅತಿ ಪ್ರಾಚೀನ ಪುರುಷನು ಯಾರು? ಸೋವಿಯತ್ ವರದಿಗಳ ಪ್ರಕಾರ ಶಿರಾಲಿ ಬಾಬಾ ಮುಸ್ಲಿಮೋವ್. ಅವನು ಕಳೆದ ವರ್ಷ ತನ್ನ ೧೬೮ ನೇ ಜನ್ಮದಿನವನ್ನು ಆಚರಿಸಿದನೆಂದು 'ನೆದೆಲ್ಯಾ' ಎಂಬ ಮಾಸ್ಕೋ ವಾರಪತ್ರಿಕೆ ಬರೆದಿದೆ.

ಶಿರಾಲಿ ಬಾಬಾ ಸೋವಿಯತ್ ಗಣರಾಜ್ಯವಾದ ಅಜರ್‌ಬೈಜಾನ್‌ನ ತಲ್ಯಶ್ ಪರ್ವತದ ತಪ್ಪಲಲ್ಲಿರುವ ಬರ್ಜವೂ ಗ್ರಾಮದ ನಿವಾಸಿ. ಅವನು ವೃತ್ತಿಯಿಂದ ಕುರುಬ. ಈಚೆಗೆ ತಾನೆ ಅದರಿಂದ ನಿವೃತ್ತನಾಗಿ ತನ್ನ ಹಳ್ಳಿಯಲ್ಲಿ ಹಣ್ಣಿನ ತೋಟವನ್ನು ನೋಡಿಕೊಳ್ಳುತ್ತಿದ್ದಾನೆ. ಅವನ ಮಕ್ಕಳು ಮೊಮ್ಮಕ್ಕಳು ಮರಿ ಮಕ್ಕಳ ಸಂಖ್ಯೆ ಈಗ ೨೦೦ ಮಿಕ್ಕಿದ್ದು ಅವರಲ್ಲಿ ಅನೇಕರು ಅಲ್ಲೇ ಸುತ್ತಮುತ್ತ ಬೇರೆ ಬೇರೆ ಕಡೆ ಇರುವುದರಿಂದ ಆಗಾಗ್ಗೆ ಅವರಲ್ಲಿಗೆ ಹೋಗಿಬರುತ್ತಾನೆ.

ಮುಸ್ಲಿಮೋವನದು ನಿಜಕ್ಕೂ ಬೆಟ್ಟದ ಜೀವನವೇ. ಬೆಟ್ಟದಲ್ಲಿರುವ ತನ್ನ ಗ್ರಾಮದಿಂದ ಅವನು ಪಟ್ಟಣಗಳಿಗೆ ಹೋದದ್ದು ಎರಡೇ ಸಲ. ಒಂದು ಸಲ ಯಾವುದೋ ಕೆಲಸಕ್ಕಾಗಿ ಅಜರ್‌ಬೈಜಾನ್ ರಾಜ್ಯದ ರಾಜಧಾನಿಯಾದ ಬಾಕುಗೆ ಹೋಗಿದ್ದ. ಅದರ ಬಗ್ಗೆ ಅವನೇನೂ ಸದಭಿಪ್ರಾಯ ಪ್ರಕಟಿಸಲಿಲ್ಲ. ಎಲ್ಲಿ ನೋಡಿದರಲ್ಲಿ ಜನವೇ ಜನ ಅಂತ ದೂರಿದ. ಎರಡನೇ ಸಲ ಅವನು ಹೋದದ್ದು ೧೯೬೨ ರ ಸುಮಾರಿಗೆ ತನ್ನ ಜಿಲ್ಲಾ ಪಟ್ಟಣಕ್ಕೆ. ಅವನಿಗೆ ಸ್ವಲ್ಪ ನ್ಯೂಮೋನಿಯಾ ಆಗಿತ್ತು (ಜೀವನದಲ್ಲಿ ಮೊದಲ ಸಲ ಅವನಿಗೆ ಅಸ್ವಸ್ಥವಾದದ್ದು ಅದೇ ಮೊದಲು.) ಆದರೆ ಆಸ್ಪತ್ರೆಯ ಸ್ವರೂಪ, ಅದರಲ್ಲಿರುವ ಕುಂಗೆಡಿಸುವ ಉಪಕರಣಗಳು ಇವೆಲ್ಲವನ್ನೂ ನೋಡಿ ಇದೊಂದು ನರಕವೇ ಅನ್ನಿಸಿತು. ಕೂಡಲೇ ತನ್ನನ್ನೂ ತನ್ನ ನ್ಯೂಮೋನಿಯಾವನ್ನೂ ಬಿಡುಗಡೆ ಮಾಡಿರೆಂದು ಆತ ಹಟ ತೊಟ್ಟನಂತೆ! ಕೆಲ ದಿನಗಳ ನಂತರ ಅವನ ಶ್ವಾಸಕೋಶಗಳನ್ನು ಡಾಕ್ಟರರು ಪರೀಕ್ಷಿಸಿದರು. ಮಾಸ್ಕೋದಲ್ಲಿ ಸಿಗರೇಟ್ ಸೇದುವ ಚಟ ಹಿಡಿಸಿಕೊಂಡ ಹದಿನೆಂಟರ ತರುಣನ ಶ್ವಾಸಕೋಶಗಳಿಗಿಂತ ಸುಸ್ಥಿತಿಯಲ್ಲಿವೆ ಎಂಬುದಾಗಿ ಅವರು ತೀರ್ಪು ಕೊಟ್ಟರು.

ಅವನ ಹೆಂಡತಿ ಖಾತುನಾಳಿಗೆ ಈಗ ೧೦೮ ವರ್ಷ ಮಾತ್ರ ವಯಸ್ಸು. ೭೫ ವರ್ಷಗಳ ಹಿಂದೆ ಅವರ ಮದುವೆಯಾಯಿತು. ಅವಳು ಇಂದಿಗೂ ಮನೆವಾರ್ತೆ ಕೆಲಸ ನೋಡಿಕೊಳ್ಳುತ್ತಿದ್ದಾಳೆ.

ಅವನ ದೀರ್ಘಾಯುಷ್ಯದ ಗುಟ್ಟೇನೆಂದು ಕೇಳಿದರೆ ಅವನು ಹೇಳುವುದಿದು:

"ಕೆಲಸವೇ ಆಯುಷ್ಯ ಆರೋಗ್ಯಗಳಿಗೆ ಅಮೃತಪ್ರಾಯವಾದದ್ದು."

ಮುಸ್ಲಿಮೋವನ ಆಹಾರ ಮುಖ್ಯವಾಗಿ ಹಾಲು, ಗಿಣ್ಣು, ಜೇನು ಮತ್ತು ತರಕಾರಿ.

ಅವನಿಗೆ ಕೆಟ್ಟ ಚಟಗಳು ಇಲ್ಲವೇ ಇಲ್ಲವೆ?

ಉಂಟು— ಅಥವಾ ಇದ್ದವು ಅನ್ನಿ.

ಸುಮಾರು ನೂರೈವತ್ತು ವರ್ಷಗಳ ಹಿಂದೆ ಒಂದು ಸಲ ಗೆಳೆಯರ ಪುಸಲಾವಣೆಯಿಂದ ಹೊಗೆಬತ್ತಿ ಸೇದಿದ. ಹೊಟ್ಟೆ ತಳಮಳಿಸಿ ಓಕರಿಕೆ ಬಂದದ್ದರಿಂದ ಅನಂತರ ಅವನು ಸೇದುವ ತಂಟೆಗೆ ಹೋಗಲಿಲ್ಲ.

ಒಂದು ನೂರು ವರ್ಷಗಳ ಹಿಂದೆ ಒಂದು ಸಲ ಮುಸ್ಲಿಮೋವ್ ಮದ್ಯಪಾನವನ್ನೂ ಮಾಡಿದ. ಅದರ ರುಚಿಯೂ ಅವನಿಗೆ ಹಿಡಿಸಲಿಲ್ಲ. ಆಮೇಲೆ ಅದನ್ನು ಅವನು ಮುಟ್ಟಿಲ್ಲ. ✡

ನೆಲೆತಪ್ಪಿದ ಮಕ್ಕಳಿಗೊಂದು ನೆಲೆ

ಯುದ್ಧೋಧ್ವಸ್ತ ರಾಷ್ಟ್ರಗಳಲ್ಲಿಯ ಅನಾಥ ಮಕ್ಕಳನ್ನು ಅಮೇರಿಕ- ಯುರೋಪುಗಳಲ್ಲಿಯ ಕುಟುಂಬಗಳು ದತ್ತು ತೆಗೆದುಕೊಳ್ಳುವ ಪರಿಪಾಠ ಇತ್ತೀಚೆ ಬೆಳೆದುಬಂದಿದೆ.

ಯುದ್ಧೋಧ್ವಸ್ತ ರಾಷ್ಟ್ರಗಳಲ್ಲಿ ಅನಾಥ ಮಕ್ಕಳ ಸಮಸ್ಯೆ ಅಧಿಕ ವಿಮಂಚನಕಾರಿಯಾಗಿರುತ್ತದೆ. ದಕ್ಷಿಣ ಕೋರಿಯಾವೂ ಇದಕ್ಕೆ ಹೊರತಿಲ್ಲ. ಅದರ ರಾಜಧಾನಿ ಸಿಯೋಲ್ ನಗರ ಒಂದರಲ್ಲಿಯೇ ಪ್ರತಿತಿಂಗಳು ಕನಿಷ್ಠ ನೂರೈವತ್ತು ಅನಾಥ ಮಕ್ಕಳು ಅಧಿಕಾರಿಗಳ ಕೈಗೆ ಬೀಳುತ್ತಾರೆ. ನಗರದ ಅನಾಥಾಲಯಗಳ ಬಾಗಿಲುಗಳ ಬಳಿ ಇವರನ್ನು ಬಿಟ್ಟು ಹೋಗಿದ್ದು ಹೆಚ್ಚಾಗಿ ಕಂಡುಬರುತ್ತದೆ. ಸಿಯೋಲ್‌ನ ಅನಾಥಾಲಯಗಳಲ್ಲಿ 'ಹೋಲ್ಟ್ ಚಿಲ್ಡ್ರನ್ ಸರ್ವೀಸ್' ಎಂಬ ಅನಾಥಾಲಯ ಹೆಸರುವಾಸಿಯಾದುದು. ಅಮೇರಿಕದ ಓರೆಗಾನ್ ಸಂಸ್ಥಾನದ ಹ್ಯಾರಿ ಹೋಲ್ಟ್ ಎಂಬ ಮಾನವತಾವಾದಿಯು ಈ ಅನಾಥಾಲಯ ಸ್ಥಾಪಿಸಿದ್ದರಿಂದ ಆತನ ಹೆಸರನ್ನೇ ಇದಕ್ಕೆ ಇಡಲಾಗಿದೆ. ಅನಾಥ ಮಕ್ಕಳನ್ನು ಬರಮಾಡಿಕೊಂಡು ಪೋಷಿಸಿ ಅವನ್ನು ಸರಿ ದಾರಿಗೆ ಹಚ್ಚುವದನ್ನಷ್ಟೇ ಈ ಹೋಲ್ಟ್ ಸರ್ವೀಸ್ ಸಂಸ್ಥೆ ಮಾಡುವದಿಲ್ಲ. ಆದರೆ ಇಲ್ಲಿಯ ಅನಾಥ ಮಕ್ಕಳಿಗೆ ಯುರೋಪ್, ಅಮೇರಿಕಗಳಲ್ಲಿ ಸಾಕು ತಂದೆತಾಯಿಗಳನ್ನು ಶೋಧಿಸಿ ಅವರ ಪೋಷಣೆಗೆ ಈ ಕೋರಿಯಾದ ಮಕ್ಕಳನ್ನು ಒಪ್ಪಿಸುತ್ತದೆ. ಹೊಸ ಪರಿಸರದಲ್ಲಿ ಹೊಸ ಕುಟುಂಬಗಳಲ್ಲಿ ಈ ಅನಾಥ ಮಕ್ಕಳು ಹೊಂದಿಕೊಂಡು ಬೆಳೆದು ತಮ್ಮ ಭವಿತವ್ಯ ಉಜ್ವಲಗೊಳಿಸಿಕೊಳ್ಳಬಲ್ಲವು ಎಂಬುದೇ ಈ ಸಾಹಸಮಯ ಸೇವೆಯ ಆಶಯ.

ಹೋಲ್ಟ್ ಚಿಲ್ಡ್ರನ್ ಸರ್ವೀಸ್ ಸಂಸ್ಥೆಯು ಇಂದಿಗೂ ಪ್ರತಿ ವಾರ ೨೦–೩೦ ಮಕ್ಕಳನ್ನು ಕೋರಿಯಾದಿಂದ ಹೊರಗೆ ಯುರೋಪ್, ಅಮೇರಿಕೆಗಳಿಗೆ ಸಾಗಿಸಿ ಅಲ್ಲಿ ಅವರಿಗೆ ಬೇರೆ ಬೇರೆ ಕುಟುಂಬಗಳಲ್ಲಿ ಆಶ್ರಯ ಕಲ್ಪಿಸಿಕೊಡುತ್ತದೆ. ಈ ಸಂಸ್ಥೆ ಜನ್ಮತಳೆದ ನಂತರದ ಹದಿನೆಂಟು ವರ್ಷಗಳಲ್ಲಿ ಅಂದರೆ ಇಂದಿನ ವರೆಗೆ ಸುಮಾರು ಹತ್ತು ಸಾವಿರ ಅನಾಥ ಕೋರಿಯನ್ ಮಕ್ಕಳಿಗೆ ವಿದೇಶಗಳಲ್ಲಿ ನೆಲೆ ಕಲ್ಪಿಸಿಕೊಟ್ಟಿದೆ.

ತಮ್ಮ ತಂದೆ ತಾಯಿಗಳು ಯಾರು ಎಂಬುದನ್ನೇ ಅರಿಯದ ಈ ಅನಾಥ ಮಕ್ಕಳು ದೇಶವನ್ನೇ ತ್ಯಜಿಸಿ ಕಂಡರಿಯದ ವಿದೇಶಗಳಿಗೆ ಹೋಗಿ ಅಲ್ಲಿ ತಮ್ಮ ಪಾಲಿಗೆ ಬಂದ ಸಾಕು ತಾಯ್ತಂದೆಯರ ಜೊತೆ ಹೊಂದಿಕೊಂಡು ಜೀವನವನ್ನು ರೂಪಿಸಿಕೊಳ್ಳಬೇಕಾದುದು ಅವರ ಪಾಲಿನ ಭಾಗ್ಯವಾಗಿರುವಾಗ ಪಾಲಿಗೆ ಬಂದದ್ದು ಪಂಚಾಮೃತ ಎಂದು ಅವು ತೆಪ್ಪಗಿರಬೇಕಾಗುತ್ತದೆ. ಅವರನ್ನು ವಿದೇಶಗಳಲ್ಲಿಯ ಅವರವರ ನೆಲೆಗಳಿಗೆ ತಲುಪಿಸಬೇಕಾದ ಏರ್ಪಾಡನ್ನು ಚನ್ನಾಗಿಯೇ ಮಾಡಿರಲಾಗು

ತ್ತಿದೆ. ಇತ್ತೀಚೆಗೆ ಸಿಯೋಲ್‌ನಿಂದ ಯುರೋಪಿನಲ್ಲಿಯ ಬೆಲ್ಜಿಯಂನ ರಾಜಧಾನಿ ಬ್ರುಸೆಲ್ಸಿಗೆ ತೆರಳಿದ ಹತ್ತು ಮಕ್ಕಳ ಸ್ಥಾನಾಂತರದ ಕಥೆಯನ್ನು ತಿಳಿದುಕೊಳ್ಳೋಣ.

ಅಮೇರಿಕದ ಶಾಂತಿದಳದ ಸ್ವಯಂಸೇವಕ ಹ್ಯಾರಿ ಸ್ಟಿಕ್ಲರ್‌ನ ನೇತೃತ್ವದಲ್ಲಿ ಈ ಹತ್ತು ಮಕ್ಕಳನ್ನು ಸಿಯೋಲ್‌ನಿಂದ ಬ್ರುಸೆಲ್ಸಿಗೆ



ವಿಮಾನಮಾರ್ಗವಾಗಿ ಸ್ಥಳಾಂತರಿಸಲಾಯಿತು. ದಾರಿಯಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಈತನಿಗೆ ಸಹಾಯಕಳೆಂದು ಶ್ರೀಮತಿ ಮೂನ್ ಸೂಕ್ ಚುಂಗ್ ಎಂಬಾಕೆಯನ್ನು ಕೊಡಲಾಗಿತ್ತು. ಇಂಥದೇ ಕೆಲಸಕ್ಕಾಗಿ ಎರಡು ಸಲ ಯುರೋಪಿಗೆ ಹೋಗಿ ಬಂದ ಅನುಭವ ಈಕೆಗೆ ಇದ್ದಿತು.

ಈ ಹತ್ತರಲ್ಲಿ ಮೂವರು ಹೆಣ್ಣು, ಏಳು ಗಂಡು ಮಕ್ಕಳಿದ್ದರು. ಇವರ ವಯಸ್ಸು ಎರಡರಿಂದ ಏಳು ವರ್ಷಗಳ ವರೆಗೆ. ಇವರಲ್ಲಿ ಎರಡು ವರ್ಷದ ಒಂದು ಮಗುವನ್ನು ಕಳುಹಿಸುವುದು ಕೊನೆ ಗಳಿಗೆಯಲ್ಲಿ ರದ್ದಾದ್ದರಿಂದ ಅವರು ಕೇವಲ ಒಂಬತ್ತೇ ಮಕ್ಕಳನ್ನು ಕರೆದೊಯ್ಯಬೇಕಾಯಿತು.

ಇವರಲ್ಲಿಯ ಎರಡು ವರ್ಷದ ಬಾಲಕ ಯೂನ್‌ಸೂ ಅಚ್ಚುಕಟ್ಟಾದ ಉಡುಪು ಧರಿಸಿದ್ದ. ಆದರೆ ಮುಖಮುದ್ರೆ ಮಾತ್ರ ಗಂಭೀರ. ಇನ್ನೊಬ್ಬ ಎರಡು ವರ್ಷದ ಬಾಲಕ ಕ್ಯುಂಗ್ ಸೂ ತುಂಬ ಚಟುವಟಿಕೆಯುವನಾಗಿದ್ದ. ಆತನನ್ನು ತುಂಬ ಕಣ್ಣಿಟ್ಟು ನೋಡಿಕೊಳ್ಳಬೇಕಾಗುತ್ತಿತ್ತು. ಐದು ವರ್ಷದ ಹುಡುಗ ದೊಹಾನ್ ನೋಡಲು ಅಂದವಾಗಿದ್ದ. ತುಂಬ ತಿಳಿವಳಿಕೆಯುಳ್ಳವ. ಮಾರ್ಗದರ್ಶಕರ ಸೂಚನೆಗಳನ್ನೆಲ್ಲ ಚಾಚೂ ತಪ್ಪದೆ ಅನುಸರಿಸುತ್ತಿದ್ದ. ಆದರೆ ಅವರ ಬೇರಾವ ಪ್ರಶ್ನೆಗಳಿಗೆ ಉತ್ತರ ಕೊಡುವ ಗೋಜಿಗೆ ಹೋಗುತ್ತಿರಲಿಲ್ಲ. ಪ್ರಯಾಣದುದ್ದಕ್ಕೂ ಆತ ಮೌನ ವ್ರತ ಸ್ವೀಕರಿಸಿದಂತಿದ್ದ.

ಈ ಒಂಬತ್ತೂ ಮಕ್ಕಳು ಕೋರಿಯನ್ ವಿಮಾನದಲ್ಲಿ ಕುಳಿತೊಡನೆ ಕೂಡಲೆ ಆ ವಿಮಾನ ಪರಿಚಾರಿಕೆಯರು ಗಾಬರಿಯಾದರು. ಇವರ ಹುಡುಗಾಟಕ್ಕೆ ಅವರು ಸಿದ್ಧರಿರಲಿಲ್ಲ. ಶ್ರೀಮತಿ ಚುಂಗ್‌ಳು ಯೂನ್‌ಸೂ, ಕ್ಯುಂಗ್ ಸೂ ಹಾಗೂ ದೊಹಾನ್‌ರಿಗೆ ವಿಮಾನದ ನಡು ಪಟ್ಟಿ ಬಿಗಿದಳು. ಉಳಿದ ಆರು ಮಕ್ಕಳಿಗೆ ಸ್ಟಿಕ್ಲರ್ ಪಟ್ಟಿ ಬಿಗಿದ. ಪರಿಚಾರಿಕೆಯರಿಗೆ ಅಷ್ಟೇ ಸಮಾಧಾನ. ಈ ಎಲ್ಲ ಮಕ್ಕಳಿಗೆ ಅವರು ಸಿಹಿ ತಿಂಡಿ ತಂದುಕೊಟ್ಟರು. ಬರಿ ಅನ್ನ ಗಂಜಿ ಪಲ್ಲೆ ತಿಂದು ಬೆಳೆದ ಆ ಮಕ್ಕ

ಳಿಗೆ ಸಿಹಿ ತಿಂಡಿ ಸಿಕ್ಕೊಡನೆ ಎಲ್ಲವನ್ನೂ ಗಪಗಪನೆ ತಿಂದು ಮುಗಿಸಿದವು. ಜೇಬುಗಳಲ್ಲಿಯೂ ತುಂಬಿಕೊಂಡವು. ಪೆಪ್ಪರ್‌ಮಿಂಟುಗಳು ಒಂದೊಂದಾಗಿ ಅವರ ಬಾಯಿಗೆ ಸೇರತೊಡಗಿದವು. ಯಾರು ಗದರಿಸಿದರೂ ಕೇಳಲಿಲ್ಲ. ಕ್ಯುಂಗ್ ಸೂ ಪೆಪ್ಪರ್‌ಮಿಂಟ್ ಚೀಪುತ್ತಲೇ ಕಣ್ಣು ಮುಚ್ಚಿದ. ಎಲ್ಲಿಯಾದರೂ ಗಂಟಲಿಗೆ ಹತ್ತಿ ತೊಂದರೆ ಆದೀತೆಂದು ಆತನ ಬಾಯಲ್ಲಿನ ಪೆಪ್ಪರ್‌ಮಿಂಟನ್ನು ತೆಗೆಯಹೋದಾಗ ಆತ ತನ್ನ ಮೋರೆ ಇನ್ನಷ್ಟು ಕಿವುಚಿದ. ಮಾರ್ಗದರ್ಶಕ ಸ್ಟಿಕ್ಲರ್ ಆತನನ್ನು ತನ್ನ ಪಕ್ಕದ ಆಸನದಲ್ಲಿಯೇ ಕುಳ್ಳಿರಿಸಿಕೊಂಡು, ಒಂದು ದಿಂಬು ನೀಡಿದ. ಆ ಮಗು ಹಾಯಾಗಿ ನಿದ್ದೆಹೋಯಿತು.

ತುಸು ಆರಾಮವೆನಿಸಲೆಂದು ಸ್ಟಿಕ್ಲರ್ ಆ ಮಗುವಿನ ಬೂಟುಗಳನ್ನು ಕಳಚಿದ. ಆಗ ಆತ ಕಿಟಾರನೆ ಕಿರಚಿ ಎದ್ದು ಅಳಹತ್ತಿದ. ಎಷ್ಟೇ ಸಮಾಧಾನಪಡಿಸಿದರೂ ಅವನ ಅಳು ಹೆಚ್ಚಿತೇ ಹೊರತು ತಗ್ಗಲಿಲ್ಲ. ಸ್ಟಿಕ್ಲರ್‌ನಿಗೆ ಏನೂ ತೋಚದಂತಾಯಿತು. ನೋಡೋಣ ಎಂದು ಬೂಟುಗಳನ್ನು ಆತ ಪುನಃ ಮಗುವಿನ ಕಾಲಿಗೆ ತೊಡಿಸಿದ. ಅಳು ತಕ್ಷಣ ನಿಂತಿತು. ಆತ ಬೂಟು ಹಾಕಿಕೊಂಡಿದ್ದು ಅದೇ ಮೊದಲ ಸಲ; ಎಲ್ಲಿ ಅವನ್ನು ಕಿತ್ತುಕೊಳ್ಳುವರೋ ಎಂಬ ಭಯದಿಂದ ಅಳಹತ್ತಿದ್ದ ಎಂಬುದು ಸ್ಟಿಕ್ಲರ್‌ನಿಗಾದರೂ ಹೇಗೆ ಗೊತ್ತಾಗಬೇಕು?

ಟೋಕಿಯೋನಲ್ಲಿ ಅವರು ವಿಮಾನ ಬದಲಿಸಬೇಕಾಗಿತ್ತು. ಹೀಗಾಗಿ ಅವರೆಲ್ಲ ಟೋಕಿಯೋ ವಿಮಾನ ನಿಲ್ದಾಣದಲ್ಲಿ ಹನ್ನೆರಡು ಗಂಟೆ ಕಾಲ ಕುಳಿತಿರಬೇಕಾಯಿತು. ಮಕ್ಕಳ ಸ್ನಾನ ಊಟ ಎಲ್ಲ ಮುಗಿಸಿ ಅವರನ್ನು ಒಂದು ಕೋಣೆಯಲ್ಲಿ ಕೂಡಿಸಲಾಯಿತು. ಟೆಲಿವಿಜನ್ ತೋರಿಸಿ ಮನೋರಂಜನೆ ಒದಗಿಸಲಾಯಿತು. ಆ ಮಕ್ಕಳು ಟೆಲಿವಿಜನ್ನಿನ ಗಾಜುಪರದೆಯನ್ನು ಮುಟ್ಟಿ ಮುಟ್ಟಿ, ಅಲ್ಲಿ ಕಂಡುಬರುವವರ ಮುಖ ಸ್ಪರ್ಶಿಸಲು ಯತ್ನಿಸುತ್ತಿದ್ದರು. ಅವರು ಟೆಲಿವಿಜನ್ನನ್ನು ಕಂಡವರೇ ಅಲ್ಲ. ರಾತ್ರಿ ಹತ್ತೂವರೆ ಗಂಟೆಗೆ ಡಚ್ ವಿಮಾನದಲ್ಲಿ ಈ ಮಕ್ಕಳನ್ನು ಹತ್ತಿಸಿದೊಡನೆ ಅವರೆಲ್ಲ ಗಡದ್ದಾಗಿ ನಿದ್ದೆಹೋದರು.

ಮರುದಿನ ಮಧ್ಯಾಹ್ನದ ಊಟದ ಹೊತ್ತಿಗೆ ಅವರಿಗೆಲ್ಲ ಮತ್ತೆ ಸ್ವಲ್ಪ ತೊಂದರೆ ಆಯಿತು. ಮಾರ್ಗದುದ್ದಕ್ಕೂ ಸಿಹಿ ತಿಂಡಿ ತಿಂದು ಹೊಟ್ಟೆ ಕೆಡಿಸಿಕೊಂಡಿದ್ದ ಮಕ್ಕಳಿಗಾಗಿ ಬರಿ ಅನ್ನ, ಮೀನಿನ ಸಾರಿನ ಊಟ ಸಿದ್ಧವಿತ್ತು. ಆದರೆ ಪರಿಚಾರಿಕೆಯರು ದುಡುಕಿಬಿಟ್ಟರು. ಮಕ್ಕಳಿಗೆ ಮೊದಲು ಊಟ ಕೊಡುವುದನ್ನು ಬಿಟ್ಟು ದೊಡ್ಡವರಿಗೆ ಊಟ ನೀಡಹತ್ತಿದರು. ಮಕ್ಕಳೆಲ್ಲ ಸ್ಟಿಕ್ಲರ್‌ನ ಸುತ್ತಲೂ ನೆರೆದು ಆತ ಉಣ್ಣುವುದನ್ನೇ ಮಿಕಿಮಿಕಿ ನೋಡುತ್ತ ನಿಂತವು. ನಂತರ ನಿಮಗೂ ಊಟ ಬರುವುದೆಂದು ಮಕ್ಕಳಿಗೆ ಮಾರ್ಗದರ್ಶಕ ಸ್ಟಿಕ್ಲರ್ ಹೇಳಿದರೂ ಅವರಿಗೆ ನಂಬಿಕೆ ಹುಟ್ಟಲಿಲ್ಲ. ಅಡಿಗೆಯವರು ತಟ್ಟೆಗಳನ್ನು ಹೆಚ್ಚು ಬಿಸಿ ಮಾಡಿದ್ದರಿಂದ ಅವು ತಣಿಯುವ ವರೆಗೆ ದಾರಿ ಕಾಯಬೇಕಾಯಿತು. ಅಂತೂ ಮಕ್ಕಳಿಗೆ ಊಟ ದೊರೆಯಲು ಇನ್ನಷ್ಟು ತಡವಾಯಿತು. ಊಟ ಬಂದ ನಂತರ ಕೂಡ ದೋಹಾನ್ ತನ್ನ ತಟ್ಟೆಯಲ್ಲಿಯ ಅನ್ನವನ್ನೆಲ್ಲ ಗಬಗಬನೆ ಮುಕ್ಕಿ ತಟ್ಟೆ ಬರಿದು ಮಾಡಿ ಕುಳಿತ. ಒಂದು ಲೋಟ ಹಾಲನ್ನೂ ಆತನಿಗೆ ಕೊಡಲಾಯಿತು. ಒಂದೇ ಗುಟುಕಿಗೆ ಆ ಲೋಟವನ್ನು ಆತ ಬರಿದು ಮಾಡಿದ. ನಿಂತಲ್ಲಿಯೇ ಆತನ ಕಣ್ಣು ಮುಚ್ಚಹತ್ತಿದವು. ಆಸೀನನಾದವನೇ ಕುಂಭಕರ್ಣನಂತೆ ಗೊರಕೆ ಹೊಡೆಯಹತ್ತಿದ.

ಈ ತಂಡ ಆ್ಯಮಸ್ಟರ್ಡಮಿನಲ್ಲಿ ಇಳಿಯುವ ಒಂದೆರಡು ಕ್ಷಣ ಪೂರ್ವದಲ್ಲಿ ಒಂದು ಸಂತಸದ ಘಟನೆ ನಡೆಯಿತು. ವಿಮಾನವೇರಿದಾಗಿನಿಂದಲೂ ೩೦ ಗಂಟೆಗಳ ಪ್ರಯಾಣದಲ್ಲಿ ಬಿಗು ಮೋರೆಯಿಂದಲೇ ಇದ್ದ ಯೂನ್‌ಸೂ ಪರಿಚಾರಿಕೆ ಕೊಟ್ಟಿದ್ದ ಎರಡು ಪ್ಲಾಸ್ಟಿಕ್ ಗೊಂಬೆಗಳೊಡನೆ ಆಡುತ್ತಿದ್ದ. ಬಾಯಲ್ಲಿ ಪೆಪ್ಪರ್‌ಮಿಂಟು ಕರಗುತ್ತಿತ್ತು. ಸ್ಟಿಕ್ಲರ್ ಆತನನ್ನು ದೃಷ್ಟಿಸಿದಾಗ ಆ ಮಗು ಸಂತೋಷದಿಂದ ಮುಖ ಅರಳಿಸಿ ನಗಹತ್ತಿತು. ಗೊಂಬೆಗಳ ಸಹವಾಸದ ಫಲ ಇರಬೇಕು; ಅಂತೂ ಯೂನ್‌ಸೂ ಮತ್ತೆ ಮಗುವಾಗಿದ್ದ. ಎಳೆ

ಮೊಗದ ಮೇಲೆ ಮಂದಹಾಸ ಮಿನುಗುತ್ತಿತ್ತು. ಆಗ ಶ್ರೀಮತಿ ಚುಂಗ್ ಕೂಡ ಆತನನ್ನು ಕಂಡು ಹರ್ಷಿಸಿದಳು.

ಆ್ಯಮ್‌ಸ್ಟರ್‌ಡಮ್ ವಿಮಾನ ನಿಲ್ದಾಣದಲ್ಲಿ ಈ ಮಕ್ಕಳಿಗೆಲ್ಲ ಸ್ನಾನ ಊಟ ಆದ ನಂತರ ಸಾಕಷ್ಟು ವಿಶ್ರಾಂತಿಯೂ ದೊರೆಯಿತು. ಉಲ್ಲಸಿತರಾದ ಅವರ ತುಂಟಾಟ ತಡೆಯುದ ಡಚ್ ಪರಿಚಾರಿಕೆಯರಿಗೆ ಕಡು ಕಷ್ಟವಾಯಿತು. ಹೊಟೆಲ್‌ನಲ್ಲಿ ನುಗ್ಗುವುದು, ಸ್ಟೇಶನರಿ ಅಂಗಡಿಗಳಿಗೆ ಲಗ್ಗೆ ಹತ್ತುವದು, ಹೊರಗಿನ ಕಟಾಂಜನಗಳನ್ನೇರುವದು ಮುಂತಾದ ಇವರ ಮುಂಗಾಟದಿಂದಾಗಿ ಪರಿಚಾರಿಕೆಯರು ಬೇಸತ್ತುಹೋದರು.

ಅಲ್ಲಿಂದ ಬ್ರುಸೆಲ್ಸ್ ೩೫ ನಿಮಿಷಗಳ ಪ್ರಯಾಣ. ಅಷ್ಟು ಚಿಕ್ಕಪ್ರಯಾಣಕ್ಕೂ ಮಕ್ಕಳು ಬೇಸತ್ತಿದ್ದವು. ಪುನಃ ಅವರನ್ನು ವಿಮಾನದ ಆಸನಗಳಲ್ಲಿ ಕುಳ್ಳಿರಿಸಿ ಬೆಲ್ಟ್ ಬಿಗಿದಾಗ ಜೋಲು ಮೋರೆ ಹಾಕಿ ತೆಪ್ಪಗೆ ಕುಳಿತವು.

ಬ್ರುಸ್ಸೆಲ್ಸ್ ವಿಮಾನ ನಿಲ್ದಾಣದಲ್ಲಿ ಇಳಿದಾಗ ಹೋಲ್ಟ್ ಸಂಸ್ಥೆಯ ಅಲ್ಲಿಯ ಸಂಪರ್ಕಾಧಿಕಾರಿ ಶ್ರೀಮತಿ ಬೋರ್ನ್ ಈ ತಂಡದವರನ್ನು ಬರಮಾಡಿಕೊಂಡಳು. ನಂತರ ಮಕ್ಕಳನ್ನು ಅವರವರ ಸಾಕು ತಾಯ್ತಂದೆಗಳಿಗೆ ಪರಿಚಯ ಮಾಡಿಕೊಡಲಾಯಿತು.

ಯೂನ್‌ಸೂ ಹಾಗೂ ಕ್ಯುಂಗ್‌ಸೂ ಮೊದಲು ತಮ್ಮ ದತ್ತಕ ಕುಟುಂಬಗಳೊಡನೆ ತೆರಳಿದರು. ಆ ಮಕ್ಕಳ ಭಾಷೆ ಆ ತಾಯಿಗೆ ಅರ್ಥವಾಗುತ್ತದೆಯೇ? ಹಸಿವಾದಾಗ ಯೂನ್ ತನ್ನ ತಾಯಿಯನ್ನು ಏನೆಂದು ಕೇಳಬಹುದು? ನೀರಡಿಸಿದಾಗ ಕ್ಯುಂಗ್ ತನ್ನ ತಾಯಿಗೆ ನೀರನ್ನು ಹೇಗೆ ಕೇಳಬಹುದು? ಆಯಿತು, ತಾಯ್ನಾಡನ್ನು ಬಿಟ್ಟುಬಂದ ಈ ಅನಾಥ ಮಕ್ಕಳು ಹೊಸ ತಾಯ್ತಂದೆಗಳೊಡನೆ ಹೊಂದಿಕೊಂಡು ಹೋಗಲೇಬೇಕಲ್ಲವೆ?

ಉಳಿದ ಮಕ್ಕಳನ್ನೂ ಅವರವರ ಹೊಸ ಕುಟುಂಬಗಳಿಗೆ ಒಪ್ಪಿಸಲಾಯಿತು. ಕೆಲವರು ತಮ್ಮ ಸಾಕುಮಕ್ಕಳೊಡನೆ ಫೋಟೊ ತೆಗೆಸಿಕೊಂಡರು. ಮಕ್ಕಳಿಗಿಂತ ತಾಯ್ತಂದೆಯರೇ ಹೆಚ್ಚು ಭಾವನಾವಶರಾಗಿದ್ದರು.

ಎಲ್ಲ ಮಕ್ಕಳು ತಮ್ಮ ಹೊಸ ಪಾಲಕರೊಡನೆ ತೆರಳಿದರೂ ಮುದ್ದಾದ ದೋಹಾನ್ ಇನ್ನೂ ಉಳಿದುಕೊಂಡಿದ್ದ. ಆತನನ್ನು ಪಡೆದುಕೊಂಡವರು ಇನ್ನೂ ಬಂದಿರಲಿಲ್ಲ. ಬರುವರೋ ಇಲ್ಲವೋ ಎಂಬ ಆತಂಕ ಬೇರೆ. ದೋಹಾನ್ ಶಿಲಾಪ್ರತಿಮೆಯಂತೆ ನಿಂತಿದ್ದ. ಒಬ್ಬೊಬ್ಬರಾಗಿ ಹೊರಟುಹೋದ ತನ್ನ ಸಂಗಾತಿಗಳನ್ನು ನೋಡುತ್ತ. ಅಷ್ಟರಲ್ಲಿ ಆತನ ದತ್ತು-ತಾಯ್ತಂದೆಯರೂ ಬಂದರು. ಆ ತಾಯಿ ಬಂದವಳೇ ದೋಹಾನ್‌ನನ್ನು ಅಪ್ಪಿಕೊಂಡು ಕೆನ್ನೆಯನ್ನು ಮುದ್ದಿಸಿದಳು. ತನಗೂ ಪಾಲಕರ ದೊರೆತರಲ್ಲಾ ಎಂದು ಅವರನ್ನು ಅಪ್ಪಿಕೊಂಡು ಕಣ್ಣೀರು ಸುರಿಸಬೇಕೆಂದಿದ್ದ ದೋಹಾನ್. ಆತನ ಈ ಸ್ಥಿತಿ ಕಂಡು ಮಾರ್ಗದರ್ಶಕ ಸ್ಟಿಕ್ಲರ್‌ನ ಕಣ್ಣುಗಳೇ ತುಂಬಿನಿಂತವು. ಆತ ಧೈರ್ಯದಿಂದ ಅವರ ಬೆನ್ನ ಹಿಂದೆ ಹೊರಟುಹೋದ.

ಸ್ಟಿಕ್ಲರ್ ಮತ್ತು ಶ್ರೀಮತಿ ಚುಂಗ್ ತಮ್ಮ ಕಾರ್ಯಭಾರ ಪೂರೈಸಿ ಸಿಯೋಲಿಗೆ ಹಿಂತಿರುಗಲೆಂದು ಅಲ್ಲಿಂದ ಹೊರಟರು. ಈ ರೀತಿಯ ದತ್ತು ವಿಧಾನವು ಯುದ್ಧೋಧ್ವಸ್ತ ರಾಷ್ಟ್ರಗಳ ಅನಾಥ ಮಕ್ಕಳ ಸಮಸ್ಯೆ ನಿವಾರಿಸಲು ಅತ್ಯುತ್ತಮ ಉಪಾಯವಾದರೂ ಆ ಸಮಸ್ಯೆಗೆ ಸಂಪೂರ್ಣ ಪರಿಹಾರವಲ್ಲ ಎಂಬುದೂ ಸ್ಪಷ್ಟ. ಇಂಥ ಅನಾಥ ಮಕ್ಕಳು ಸ್ವದೇಶದಲ್ಲಿಯೇ ದತ್ತು ಹೋಗುವುದಕ್ಕಿಂತ ವಿದೇಶಗಳಲ್ಲಿ ದತ್ತು ಹೋದರೆ ಅವರಲ್ಲಿ ಮಾನಸಿಕವಾಗಿ ಸಂಪೂರ್ಣ ಬದಲಾವಣೆ ಕಂಡುಬರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಂಥ ದತ್ತು ಪದ್ಧತಿಗೆ ಸ್ವಾಗತ ಅಧಿಕವಾಗಿದೆ. ✡





ಬಲೂನು ಪ್ರಯಾಣದ ರಮ್ಯ ಕಥೆ

'ಕಸ್ತೂರಿ ಮೃಗ'

೧೯೭೦ ರಲ್ಲಿ ಹಾಲೆಂಡಿನ ಸುಪ್ರಸಿದ್ಧ ಬಲೂನಿಸ್ಟ್ ಡಾ. ಜಾನ್ ಬೋಸಮನ್ ದೆಹಲಿಯ ಬಲೂನಿಂಗ್ ಕ್ಲಬ್ ಉದ್ಘಾಟಿಸಿ

ದರು. ಮಾನವನ ಸಾಹಸಪ್ರಿಯತೆಗೆ ದ್ಯೋತಕವಾದ ಬಲೂನ್ ಪ್ರಯಾಣ ಇಂದು ಪಾಶ್ಚಾತ್ಯ ದೇಶಗಳಲ್ಲಿನಂತೆ ನಮ್ಮಲ್ಲೂ ಸಾಕಷ್ಟು ಹವ್ಯಾಸಿಗಳನ್ನು ಆಕರ್ಷಿಸುತ್ತಿದೆ. ನಮ್ಮ ದೇಶದಲ್ಲಿ ಬಲೂನಿಂಗ್ ಕ್ಲಬ್ ಸ್ಥಾಪನೆಗೊಂಡದ್ದು ಇತ್ತೀಚೆಗಾದರೂ ಬಲೂನಿನಲ್ಲಿ ಪ್ರಯಾಣಿಸಿದ ದಾಖಲೆಗಳು ಎರಡು ನೂರು ವರ್ಷಗಳಷ್ಟು ಹಳೆಯದಾಗಿವೆ.

ಭಾರತದಲ್ಲಿ ಬಲೂನ್‌ಯಾನ ಪ್ರಾರಂಭವಾದದ್ದು ರಾಬರ್ಟ್‌ಸನ್ ಎಂಬ ಓರ್ವ ಫ್ರೆಂಚ್ ಮನುಷ್ಯನಿಂದ. ಸಾಹಸ ಪ್ರದರ್ಶನಕ್ಕಿಂತಲೂ ಪ್ರೇಕ್ಷಕರನ್ನು ದಂಗು ಬಡಿಸುವುದೇ ಈತನ ಮುಖ್ಯ ಉದ್ದೇಶವಾಗಿತ್ತು. ೧೮೩೬ರ ಮಾರ್ಚ್ ೨೧ ರಂದು ಕಲಕತ್ತೆಯ ಗಾರ್ಡನ್ ರೀಚ್‌ದಿಂದ ಬಲೂನಿನಲ್ಲಿ ಪ್ರಯಾಣಿಸಿದಾಗ ಪ್ರೇಕ್ಷಕರಿಗೆ ವಿಸ್ಮಯವೇ ವಿಸ್ಮಯ. ಬಲೂನು ಐದು ಸಾವಿರ ಅಡಿಗಳವರೆಗೆ ಯಾವ ಅಡೆ-ತಡೆಯೂ ಇಲ್ಲದೆ ಏರಿತು. ಆದರೆ ಅದು ಒಮ್ಮಿಂದೊಮ್ಮೆಲೆ ಕೆಳಗಿಳಿಯತೊಡಗಿದಾಗ ಬಲೂನ್ ನೆಲಕ್ಕೆ ಅಪ್ಪಳಿಸಿ ರಾಬರ್ಟ್‌-ಸನ್ ಎಲ್ಲಿ ಸತ್ತು ಹೋಗುತ್ತಾನೋ ಎಂದು ಜನ ದಿಗಿಲುಗೊಂಡರು. ಆದರೆ ಹವೆಯ ನಿರೋಧಕ ಶಕ್ತಿಯಿಂದಾಗಿ ಇಳಿತ ಕ್ಷೀಣಗೊಂಡಿತು. ಬಲೂನು ನೆಲ ತಲುಪಲು ಕೆಲ ಅಡಿಗಳಿರುವಾಗ ರಾಬರ್ಟ್‌ಸನ್ ಕೆಳಕ್ಕೆ ಹಾರಿದ. ಎರಡನೆ ಸಲ ಆತ ಲಖನೌದಿಂದ ಹಾರಬೇಕೆಂದು ನಿಶ್ಚಯಿಸಿದ. ಆದರೆ ಅದನ್ನು ಸಾಧಿಸುವುದರೊಳಗಾಗಿ ಆತ ಸತ್ತು ಹೋದ.

ಅನಂತರ ಕೈಟ್ ಎಂಬ ಇಂಗ್ಲೀಷ್ ಸದ್ಗೃಹಸ್ಥನೊಬ್ಬ ಬಲೂನನ್ನು ಸ್ವತಃ ತಯಾರಿಸಿ ೧೮೫೩ರ ಡಿಸೆಂಬರ್ ೧೦ ರಂದು ಮುಂಬಯಿಯ ಆಲ್ಬರ್ಟ್ ಮ್ಯೂಜಿಯಂ ಬಳಿ ಹಾರಿದ. ಬಲೂನು ಕೆಲ ಕಿಲೋಮೀಟರು ದೂರ ಚಲಿಸಿ ಕೆಳಗಿಳಿಯಿತು. ಮುಂದೆ ಸುಮಾರು ನಲವತ್ತು ವರ್ಷಗಳ ವರೆಗೆ ಭಾರತದಲ್ಲಾರೂ ಬಲೂನಿನಲ್ಲಿ ಪ್ರಯಾಣಿಸಿದ ಹಾಗೆ ಕಾಣುವದಿಲ್ಲ. ೧೮೯೦ ರಲ್ಲಿ ಪರ್ಸಿವಲ್ ಸ್ಪೆನ್ಸರ್ ಎಂಬ ಬ್ರಿಟಿಶ್ ಮನುಷ್ಯ ಬಲೂನಿನಲ್ಲಿ ಪ್ರಯಾಣಿಸಲು ನಿಶ್ಚಯಿಸಿ ಎರಡು ಸಲ

ಪ್ರಯತ್ನಿಸಿ, ವಿಫಲನಾದ. ಮೂರನೆ ಸಲ ಜಯವನ್ನು ಸಂಪಾದಿಸಿಯೇ ತೀರುವೆನೆಂಬ ಆತ್ಮವಿಶ್ವಾಸದಿಂದ ಕಲಕತ್ತೆಯ ರೇಸ್-ಕೋರ್ಸಿನ ಮೈದಾನದಿಂದ ಹಾರಿದ. ಇದು ಸಾಕಷ್ಟು ಜನರ ಮನ ಸೆಳೆದಿತ್ತು. ಸ್ಪೆನ್ಸರನ ಪ್ರಯಾಣವನ್ನು ನೋಡಲು ಸ್ವತಃ ವೈಸ್-ರಾಯ ಲಾರ್ಡ್ ಲ್ಯಾನ್ಸ್‌ಡೌನರೂ ಅಲ್ಲಿಗೆ ಬಂದಿದ್ದರು. ಹಗುರಾದ ವಾಯುತುಂಬಿದ 'ಚಾರ್ಲಿ' ಬಲೂನ ಸೂರ್ಯಾಸ್ತವಾಗುತ್ತಿದ್ದಂತೆ ಮೆಲ್ಲನೆ ಆಕಾಶದಲ್ಲೇರತೊಡಗಿತು. ಅದರ ಕೆಳಗೆ ಕಟ್ಟಿದ್ದ ಹಗ್ಗವನ್ನು ಗಟ್ಟಿಯಾಗಿ ಸ್ಪೆನ್ಸರ್ ಹಿಡಿದುಕೊಂಡಿದ್ದರು. ಬಲೂನು ಭರಭರನೆ ಮೇಲೆ ಏರಿ ಕಣ್ಮರೆಯಾದಾಗ, ಎಷ್ಟೋ ಜನ, "ಪಾಪ, ಸ್ಪೆನ್ಸರ್ ಬಹು ದೂರ ಹೊರಟುಹೋದ. ಅವನೇನೂ ಇನ್ನು ಹಿಂದಿರುಗಲಾರ" ಎಂದುಕೊಂಡರು. ನಾಲ್ಕು ದಿನಗಳ ನಂತರವೂ ಸ್ಪೆನ್ಸರ್ ಹಿಂದಿರುಗದಾಗ ಜನರು ಆತನ ಕಥೆ ಮುಗಿದಂತೆಯೆ ಎಂದು ಭಾವಿಸಿದರು. ಆದರೆ ಐದನೆ ದಿನ ಆತ ಕಲಕತ್ತೆಯಿಂದ ಮೂವತ್ತು ಮೈಲು ದೂರದಲ್ಲಿ ಪ್ರತ್ಯಕ್ಷನಾದಾಗ ಜನರ ಆಶ್ಚರ್ಯಕ್ಕೆ ಎಣೆಯೆ ಇಲ್ಲದಾಯಿತು. "ಬಲೂನು ಮೇಲೇರುತ್ತಾ ಮುಂದೆ ಸಾಗಿ ಸುಂದರವನದ ಬಳಿ ಬಂದಾಗ ಇಳಿಯತೊಡಗಿತು. ನರಭಕ್ಷಕರು ವಾಸಿಸುತ್ತಿದ್ದ ಸುಂದರವನದಲ್ಲಿಳಿದರೆ ಪಾರಾಗುವುದು ಆಗಿನ ಕಾಲದಲ್ಲಿ ಅಸಾಧ್ಯವಾಗಿತ್ತು. ಬಲೂನು ಸುಂದರವನದಲ್ಲಿಳಿದಾಗ ಸ್ಪೆನ್ಸರ್ ಪ್ರಯಾಸದಿಂದ ನರಭಕ್ಷಕರಿಂದ ಪಾರಾಗಿ ಬಸೀರ ಹಟಕ್ಕೆ ಬಂದು ಈ ಬಗ್ಗೆ ಕಲಕತ್ತೆಗೆ ಒಂದು ಸಂದೇಶ ಕಳಿಸಿದೆ" ಎಂದಾತ ಹೇಳಿದ್ದಾನೆ.

ಹತ್ತೊಂಭತ್ತನೆ ಶತಮಾನದ ಕೊನೆಗೆ ಬಲೂನಿನ ಆಕರ್ಷಣೆ ವಿಶೇಷವಾಗಿ ಬೆಳೆದ ಕಾಲದಲ್ಲಿ ಇಂಗ್ಲೀಷರ ಕೈ ಮೇಲಾಗಿತ್ತು. ಸ್ವದೇಶಾಭಿಮಾನದಿಂದ ಓತಪ್ರೋತರಾದ ಕೆಲವರು ಇಂಗ್ಲೀಷರನ್ನು ಈ ದಿಶೆಯಲ್ಲಿ ಹಿಂದೆ ಹಾಕಲೇಬೇಕೆಂದು ನಿಶ್ಚಯಿಸಿದರು. ಅವರಲ್ಲಿ ರಾಮಬಾಬೂ ಎಂಬ ತರುಣನೂ ಒಬ್ಬ. ಗೋಪಾಲ ಮುಕರ್ಜಿ ಎಂಬ ಶ್ರೀಮಂತನ ಮನೆಯಲ್ಲಿ ರೇಶಿಮೆಯ ಬಟ್ಟೆಯಿಂದ ಬಲೂನುಗಳನ್ನು ತಯಾರಿಸಲಾಗುತ್ತಿತ್ತು. ರಾಮುಬಾಬು ದೊಡ್ಡದಾದ ಬಲೂನನ್ನು ತಯಾರಿಸಿ ಅದಕ್ಕೆ ಗಾಳಿಪಟಕ್ಕೆ ಕಟ್ಟುವ ಹಾಗೆ ಹಗ ಕಟ್ಟಿ ನಂತರ ಅದರಲ್ಲಿ ಆಕಾಶಕ್ಕೆ ಹಾರಬೇಕು ಎಂದು ನಿಶ್ಚಯಿಸಿದ್ದ. ಅದರಂತೆ ಹಾರಿದ ಕೂಡ. ಆದರೆ ಇಂಗ್ಲೀಷರು ಹಗ್ಗ ಕಟ್ಟದೇನೆ ಆಕಾಶಕ್ಕೆ ಹಾರಿ ರಾಮುಬಾಬುವಿನ ಸಾಹಸ ಕ್ಷುಲ್ಲಕವಾಗಿ ಕಾಣುವಂತೆ ಮಾಡಿದರು.

ರಾಮುಬಾಬುವಿನ ಸ್ವಾಭಿಮಾನ ಜಾಗ್ರತವಾಯಿತು. ಇಂಗ್ಲೀಷರಿಗಿಂತಲೂ ಹೆಚ್ಚು ಎತ್ತರಕ್ಕೆ ಹಾರಬೇಕೆಂಬ ನಿರ್ಧಾರದಿಂದ ಒಂದು ದೊಡ್ಡ ಬಲೂನನ್ನು ತಯಾರಿಸಿದ. ಬಲೂನಿನ ಕೆಳಗೆ ಕುಳಿತುಕೊಳ್ಳುವ ಪೆಟ್ಟಿಗೆಯಿತ್ತು. ಅದರಲ್ಲಿ ಒಂದು ಪ್ಯಾರಾಶ್ಯೂಟನ್ನು ಇಡಲಾಗಿತ್ತು. ನಿಶ್ಚಿತದಿನದಂದು ಆತ ಗ್ಯಾಸ್ ಫ್ಯಾಕ್ಟರಿಯಿರುವ ನರಕೇಲಡಂಗಾಕ್ಕೆ ಬಲೂನನ್ನು ತೆಗೆದುಕೊಂಡು ಹೋದ. ಸಾವಿರಾರು ಜನ ಈ ಅದ್ಭುತ ದೃಶ್ಯವನ್ನು ವೀಕ್ಷಿಸಲು ನೆರೆದಿದ್ದರು. ಸಮಯಕ್ಕೆ ಸರಿಯಾಗಿ ರಾಮುಬಾಬು ಬಲೂನಿನಲ್ಲಿ ಹಾರಿದ. ಬಲೂನು ಮೇಲೆ ಏರತೊಡಗಿದಾಗ ಮೊದಲೇ ಗೊತ್ತುಪಡಿಸಿದಂತೆ ಕರವಸ್ತ್ರ ಬೀಸಿ ಬಲೂನು ಹಿಡಿದಿದ್ದ ಹಗ್ಗವನ್ನು ಕತ್ತರಿಸಲು ಸೂಚಿಸಿದ. ಬಲೂನು ಬಹು ವೇಗವಾಗಿ ಏರತೊಡಗಿತು. ಪ್ಯಾರಾಶ್ಯೂಟಿನಿಂದ ಕೆಳಗೆ ಇಳಿಯುತ್ತಾನೆಂದು ಭಾವಿಸಿದ ಜನ ರಾಮುಬಾಬು ಹಾಗೆ ಮಾಡದಾಗ ನಿರಾಶರಾದರು. ಅಲ್ಲಿಯೆ ಇದ್ದ ಬ್ರಿಟಿಶ್ ವಿಜ್ಞಾನಿಯೊಬ್ಬ, ರಾಮುಬಾಬು ಈಗಾಗಲೆ ಶೀತಪ್ರದೇಶವನ್ನು ಸೇರುವಷ್ಟು ಮೇಲೇರಿರಬೇಕು; ಅಷ್ಟು ಎತ್ತರಕ್ಕೆ ಏರಿ ತಿರುಗಿ ಬರುವುದು ಅಸಾಧ್ಯವೇ ಸರಿ ಎಂದ. ರಾಮುಬಾಬುವಿನ ಪ್ರಾಣವೂ ಹೋಯಿತು, ಅದರೊಂದಿಗೆ ಬಲೂನು ತಯಾರಿಸಲು ಅಪಾರ ಧನ ಸಹಾಯ ಮಾಡಿದ ಅವನೀಂದ್ರನಾಥ ಮುಕರ್ಜಿಯ ಹಣವೂ ಹೋಯಿತು ಎಂದು ಅಲ್ಲಿ ನೆರೆದಿದ್ದ ಜನ ಅಂದುಕೊಂಡರು.

ಅಷ್ಟರಲ್ಲಿ ರಾಮುಬಾಬು ಪೆಟ್ಟಿಗೆಯಿಂದ


ಕೆಳಕ್ಕೆ ಹಾರಿದ. ದುರ್ದೈವಕ್ಕೆ ಪ್ಯಾರಾಶ್ಯೂಟು ಕೂಡಲೆ ತೆರೆದುಕೊಳ್ಳದೆ ಎರಡು ಮೂರು ಸಲ ಆತ ಆಕಾಶದಲ್ಲೆ ತಿಪ್ಪರಲಾಗ ಹಾಕಿದ ಮೇಲೇ ತೆರೆದುಕೊಂಡಿತು. ರಾಮುಬಾಬು ನೆಲಕ್ಕಿಳಿದಾಗ ಅಲ್ಲಿ ನೆರೆದ ಜನಕ್ಕೆ ಸಂಭ್ರಮವೋ ಸಂಭ್ರಮ. ಸಾವಿರಾರು ಜನ ಆತನತ್ತ ಕರವಸ್ತ್ರವನ್ನು ಬೀಸಿದರು; ಹುಚ್ಚರಂತೆ ಆನಂದಾತಿರೇಕದಿಂದ ಕುಣಿದರು. ಅವನೀಂದ್ರನಾಥ ತನ್ನ ಸ್ನೇಹಿತರ ಜೊತೆ ರಾಮುಬಾಬುವಿನ ಬಳಿ ಹೋಗಿ ಪ್ಯಾರಾಶ್ಯೂಟನಿಂದ ಬಿಡಿಸಿ, ದಣಿವಾರಿಸಿಕೊಳ್ಳಲು ಶರಬತ್ತು ಕೊಟ್ಟ. "ಪ್ಯಾರಾಶ್ಯೂಟಿನಿಂದ ಕೆಳಗೆ ಹಾರಲು ಅಷ್ಟೇಕೆ ತಡ ಮಾಡಿದೆ ? ಆಗ ಏನು ಮಾಡಬೇಕೆಂಬುದನ್ನೇ ಮರೆತುಬಿಟ್ಟೆಯಾ ?" ಎಂದು ಕೆಲವರು ಕೇಳಿದಾಗ, "ಹಾಗೇನೂ ಇಲ್ಲ; ಪ್ರತಿ ಸಲ ಕೆಳಗೆ ಹಾರಬೇಕೆನ್ನುವಾಗ ಭಯವಾಗುತ್ತಿತ್ತು. ಮತ್ತೊಮ್ಮೆ ಪ್ರಯತ್ನಿಸಬೇಕೆನ್ನುವಾಗ ಬಲೂನು ಇನ್ನೂ ಮೇಲೆ ಏರಿರುತ್ತಿತ್ತು. ಕೆಳಗೆ ಏನೂ ಕಾಣದಷ್ಟು ಎತ್ತರಕ್ಕೇರಿದಾಗ, ಬೇರೆ ದಾರಿಯೇ ಇಲ್ಲವೆಂದು ದೇವರ ಮೇಲೆ ಭಾರಹಾಕಿ, 'ಜೈ ಮಾ' ಎನ್ನುತ್ತ ಪ್ಯಾರಾಚ್ಯೂಟಿನಿಂದ ಕೆಳಗೆ ಧುಮುಕಿದೆ" ಎಂದು ಹೇಳಿದ.

ಒಮ್ಮೆಯಂತೂ ರಾಮುಬಾಬು ಪ್ರಸಿದ್ಧನಾದ. ಪಥರಿಯಾಗಢದ ರಾಜನ ಪ್ರಾಂಗಣದಲ್ಲಿ ಆತ ಹುಲಿಯೊಂದನ್ನು ನಿರಾಯುಧನಾಗಿ ಸಂಹರಿಸಿದ ಮೇಲಂತೂ ಆತನ ಕೀರ್ತಿ ದಿಗ್‌ದಿಗಂತಗಳಲ್ಲಿ ಹಬ್ಬಿತು. ಆದರೆ ಅಷ್ಟು ಹೊತ್ತಿಗೆ ರಾಮುಬಾಬುವಿಗೆ ವೈರಾಗ್ಯ ಬಂದು, ತಪಸ್ಸಿಗಾಗಿ ಹಿಮಾಲಯಕ್ಕೆ ಹೊರಟುಹೋದ.

ಇತ್ತೀಚೆ ಭಾರತದಲ್ಲಿ ಅಷ್ಟು ಹೇಳಿಕೊಳ್ಳುವಂತಹ ಬಲೂನ್ ಪ್ರಯಾಣ ನಡೆದಂತೆ ಕಾಣುವುದಿಲ್ಲ. ಸಾಹಸಪ್ರಿಯರಿಗೆ ತಕ್ಕುದಾದ ಈ ಆಟವನ್ನು ಊರ್ಜಿತಕ್ಕೆ ತರಬೇಕೆಂಬ ಉದ್ದೇಶದಿಂದ ಸುಮಾರು ನಾಲ್ಕೂವರೆ ವರ್ಷಗಳ ಹಿಂದೆ ದೆಹಲಿಯಲ್ಲಿ ಬಲೂನಿಂಗ್ ಕ್ಲಬ್ ಸ್ಥಾಪನೆಗೊಂಡಾಗ ಪ್ರಾತ್ಯಕ್ಷಿಕೆಯನ್ನು ನೀಡಲು ಬೋಸ್‌ಮನ್ ದಂಪತಿಗಳನ್ನು ಆಮಂತ್ರಿಸಲಾಯಿತು.

ಏಳುನೂರಕ್ಕೂ ಹೆಚ್ಚು ಸಲ ಬಲೂನಿನಲ್ಲಿ ಹಾರಿದ ಈ ಡಚ್ ದಂಪತಿಗಳು ಬಲೂನಿಂಗ್‌ನಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದಿದ್ದಾರೆ. ಅವರು ತಮ್ಮೊಂದಿಗೆ 'ನಿಂಬಸ್' ಬಲೂನನ್ನು ತಂದಿದ್ದರು. ಭೀಮಕಾಯದ ಈ ಬಲೂನನ್ನು ಕಳೆದ ಆರು ವರ್ಷಗಳಿಂದಲೂ ಉಪಯೋಗಿಸುತ್ತಿದ್ದಾರೆ. ಅದರಲ್ಲಿ ಹಾರುವ ಮುನ್ನ ೧೧೫ ಹೈಡ್ರೋಜನ್ ಸಿಲಿಂಡರುಗಳಷ್ಟು ವಾಯುವನ್ನು 'ನಿಂಬಸ್'ನಲ್ಲಿ ತುಂಬಲಾಯಿತು. ಇದೇನೂ ಕಡಿಮೆ ವೆಚ್ಚದ ಕೆಲಸವಾಗಿರಲಿಲ್ಲ. ಅದಕ್ಕೆ ತಗಲಿದ ಆರೂವರೆ ಸಾವಿರ ರೂಪಾಯಿಗಳನ್ನು ಕಲಕತ್ತೆಯಲ್ಲೊಬ್ಬ ದಾನಿ ಕೊಟ್ಟಿದ್ದರಿಂದ ಇದು ಸುಲಭಸಾಧ್ಯವಾಯಿತು.

೧೯೭೦ರ ನವಂಬರ್ ೨೩ ರಂದು ದೆಹಲಿಯ ಸಫದರಜಂಗ್ ವಿಮಾನನಿಲ್ದಾಣದಿಂದ ಬೋಸ್‌ಮನ್ ದಂಪತಿಗಳು ಗ್ಲೈಡಿಂಗ್ ಕ್ಲಬ್ಬಿನ ಕಾರ್ಯದರ್ಶಿ ಬಿ. ಎ. ಗುಪ್ತರೊಡನೆ 'ನಿಂಬಸ್'ನಿಂದ ಹಾರಿದರು. ಎರಡು ಎರಡೂವರೆ ತಾಸು ಹಾರುವುದೆಂದು ಮೊದಲು ನಿಶ್ಚಯಿಸಿದ್ದರೂ ಕೆಳಗಿನ ದೃಶ್ಯ ಚೇತೋಹಾರಿಯಾದುದರಿಂದ ಬೋಸಮನ್ನರು ಐದುಗಂಟೆ ಕಾಲ ಹಾರಿ ರೋಟಕದ ಬಳಿ ಕಿಲಾಜರಫರಗಢದಲ್ಲಿ ಇಳಿದರು. ಇತ್ತೀಚೆ ಹೀಗೆ ಬಲೂನಿನಲ್ಲಿ ಹಾರಿದ ಭಾರತೀಯರಲ್ಲಿ ಬಿ. ಎ. ಗುಪ್ತರೆ ಪ್ರಥಮ ವ್ಯಕ್ತಿಯೆಂದು ಕಾಣುತ್ತದೆ. ✡



ಪ್ರಾಯು ಕೂಸಾದೊಡಂ ಅಭಿ।
ಪ್ರಾಯಂ ಕೂಸಕ್ಕುಮೆ

— ಕೇಶಿರಾಜ


ಅವಳ
ಸೌಂದರ್ಯ ರಹಸ್ಯ
ಐಟೆಕ್ಸ್
ಸೌಂದರ್ಯ ಸಾಧನಗಳು
ಐಟೆಕ್ಸ್– ಮೂರು ದಶಕಗಳಿಂದಲೂ ಪ್ರಖ್ಯಾತವಾಗಿದೆ. ಇದು ಉನ್ನತ ಗುಣಮಟ್ಟ, ನಂಬಿಕೆ ಹಾಗೂ ವಿಶ್ವಾಸನೀಯತೆಯ ಭರವಸೆ ನೀಡುತ್ತದೆ.
EYETEX
REGD.
EYETEX
BINDI
ARAVIND LABORATORIES MADRAS-33

ಶಿಖರಗಳ ಇಳುಕಲುಗಳು

ಕೇಕಣಾಜೆ ಗೋವಿಂದಭಟ್ಟ

ಕಾರು ನಿಧಾನವಾಗಿ ಖಂಡಾಳಾದ ಘಟ್ಟವನ್ನು ಏರುತ್ತಿತ್ತು.

ಇಳುಕಲುಗಳ ದಟ್ಟವಾದ ನೆರಳು ಕೆಳಗಿನ ಪ್ರಪಾತವನ್ನು ಕವಿದಿತ್ತು. ಕಳೆಗುಂದುತ್ತಿದ್ದ ಮುಚ್ಚಂಜೆಯ ಬೆಳಕಿನಲ್ಲಿ ಖಂಡಾಳಾದ ಶಿಖರಗಳು ಮಸುಕು ಮಸುಕಾಗಿ ಗೋಚರಿಸುತ್ತಿದ್ದುವು. ಕಡಿದಾದ ಇಳುಕಲುಗಳು ಅಂಜಿಸುವಂತಿದ್ದುವು.

ಅವ್ಯಕ್ತ ಭೀತಿಯಿಂದ ಉದ್ಭವಿಸಿದ ಒಂದು ಸಂವೇದನೆಯಿಂದ ರಜನಿ ಮಗಳನ್ನು ಬರಸೆಳೆದುಕೊಂಡಳು.

“ಉಂ...ಬೇಡ...” ಮುನಿಸಿನ ಧ್ವನಿಯೊಂದು ಕಾರಿನಲ್ಲಿ ಪ್ರತಿಧ್ವನಿಸಿತು.

ಜಾಗರೂಕನಾಗಿ ಕಾರನ್ನು ನಡೆಸುತ್ತಿದ್ದ ಅನಂತ ತಟಕ್ಕನೆ ಬ್ರೇಕನ್ನು ಒತ್ತಿ ಹಿಂತಿರುಗಿ ನೋಡಿದ. ತನ್ನನ್ನು ಬಳಸಿದ ಆ ಕೈಗಳನ್ನು ರಭಸದಿಂದ ಕಿತ್ತೊಗೆದು ಅನಿತಾ ರಜನಿಯನ್ನು ಒಂದು ಕ್ಷಣ ದುರುದುರನೆ ನೋಡಿದಳು. ನಂತರ, “ಅಪ್ಪಾ...” ಎಂದು ಬಿಕ್ಕಳಿಸಿ ತಂದೆಯ ಕತ್ತಿನಲ್ಲಿ ಮುಖವನ್ನು ಹುದುಗಿಸಿದಳು

ಮೃದುವಾಗಿ ಮಗಳನ್ನು ತನ್ನ ಬಳಿಗೆ ಎಳೆದುಕೊಂಡ ಅನಂತ ಭರವಸೆ ಕೊಡುವಂತಿದ್ದ ತಂದೆಯ ಆ ಅಪ್ಪುಗೆಯಲ್ಲಿ ಒಮ್ಮೆಲೇ ಸಿಡಿದ ಆ ತಿರಸ್ಕಾರದ ಕಿಡಿಗಳು ಕರಗತೊಡಗಿದವು

ಈ ನಿರಾಕರಣೆಯನ್ನು ಅಸಹಾಯಕಳಾಗಿ ನೋಡುತ್ತಿದ್ದ ರಜನಿ ನಿಡುಸುಯ್ದಳು. ಮಗಳನ್ನು ಬಳಿಯಲ್ಲಿ ಕುಳ್ಳಿರಿಸಿಕೊಳ್ಳಲು ಅವಳು ಮಾಡಿದ್ದ ಯುಕ್ತಿಗಳು ಕಡೆಗೂ ವಿಫಲವಾದುವು. ಅವಳು ದೃಷ್ಟಿಯನ್ನು ಪ್ರಪಾತದತ್ತ ತಿರುಗಿಸಿದಳು. ಆದರೆ ಅವಳಿಗೀಗ ಏನೂ ಕಾಣಿಸಲಿಲ್ಲ. ಅವಳ ಕಣ್ಣುಗಳು ತುಂಬಿದ್ದುವು. ಹಂಬಲಗಳು ಶಿಖರದೆತ್ತರದಿಂದ ಪ್ರಪಾತದ ಗರ್ಭಕ್ಕೆ ಉರುಳತೊಡಗಿದಂತೆ ಅವಳಿಗೆ ಅನಿಸತೊಡಗಿತು

ಹೊಗೆಯ ಮೋಡಗಳನ್ನು ಎಬ್ಬಿಸುತ್ತಾ ಕಾರು ಚಲಿಸಿತು. ಆ ಕಣಿವೆಯ ಪ್ರಚಂಡ ಪ್ರಪಾತಗಳು ಮತ್ತು ಇಳುಕಲುಗಳು ಅನಂತನ ಕಣ್ಣ ಮುಂದೆ ಸುಳಿದವು ಹೌದು. ಅವನು ತುಂಬಾ ಏಕಾಗ್ರಚಿತ್ತನಾಗಿರಬೇಕು.

*

ಕೆಲಸಕ್ಕೆ ಸೇರುತ್ತೇನೆ ಎಂದು ರಜನಿ ದೃಢವಾಗಿ ಹೇಳಿದಾಗ “ನಾನ್‌ಸೆನ್ಸ್”–ಎಂದು ಗುಡುಗಿದ್ದ ಅನಂತ. ಕೆಲಸಕ್ಕೆ ಸೇರುವ ಅಗತ್ಯವಾದರೂ ಏನು? ಮುಂಬಯಿಯ ಹೆಸರಾಂತ ರಾಸಾಯನಿಕ ಕಂಪೆನಿಯೊಂದರಲ್ಲಿ ಅನಂತ ಉನ್ನತ ಹುದ್ದೆಯಲ್ಲಿದ್ದಾನೆ. ಸಾಲದುದಕ್ಕೆ ತಲೆತಲಾಂತರದಿಂದ ಬಂದ ಆಸ್ತಿ ಸಾಕಷ್ಟಿದೆ. ಹೇರಳ ಸುಖಸಂಪದ ಬಿದ್ದಿದೆ. ಇನ್ನು ಹೆಂಡತಿ ದುಡಿದು ಯಾವ

ಸುಖವನ್ನು ತರಬೇಕಾಗಿದೆ ?

ಅವನು ಹೇಗೆ ಅರ್ಥಮಾಡಿಕೊಂಡಾನು ? ಅವಳ ತಂದೆಯ ಪ್ರಯೋಗಶಾಲೆಯಲ್ಲಿ ಇರುತ್ತಿದ್ದ ಆ ಜಟಿಲ ಸಾಧನಗಳಲ್ಲಿ ವಿದ್ಯುತ್ಕಿರಣಗಳು ಚಿತ್ರ ವಿಚಿತ್ರವಾಗಿ ಕುಣಿದು ಮಾಯವಾಗುತ್ತಿದ್ದಾಗ ಅವಳಿಗೆ ಎಷ್ಟು ರೋಮಾಂಚನವಾಗುತ್ತಿತ್ತು! ಅವೇ ಚಿತ್ರಗಳಲ್ಲವೇ ಅವಳನ್ನು ಮರುಳುಗೊಳಿಸಿದುದು! ಅವೇ ಚಿತ್ರಗಳಲ್ಲವೇ ಅವಳನ್ನು ಇಲೆಕ್ಟ್ರಾನಿಕ್ಸ್‌ನಲ್ಲಿ ಎಂ. ಎಸ್ಸಿ. ವರೆಗೆ ಕಲಿಯುವಂತೆ ಪ್ರಚೋದಿಸಿದುದು! ಅಂತಹ ಸಂಶೋಧನೆಗಳ ಮೇಲೆ ಚಿಕ್ಕಂದಿನಿಂದಲೇ ಅದೆಂತಹ ಮೋಹ ಅವಳ ಹೃದಯದಲ್ಲಿ ಬೆಳೆದುಬಂದಿತ್ತೆಂದು ಅನಂತನಿಗೆ ತಿಳಿಯುವುದಾದರೂ ಹೇಗೆ ? ಅವನಿಗೆ ತಿಳಿಯುವಂತೆ ವಿವರಿಸುವುದಾದರೂ ಹೇಗೆ ?



"ಮೋಹ ದುಃಖಕರವಾದುದು, ರಜನಿ." ಎಂದು ಅನಂತ ಎಚ್ಚರಿಸಿದುದನ್ನು ಅವಳು ಗಮನಿಸಲೇ ಇಲ್ಲ. ಟಾಟಾ ಮೂಲಭೂತ ಸಂಶೋಧನಾಲಯದಲ್ಲಿ ರಜನಿ ಸೇರಿಕೊಂಡಳು. ತನ್ನ ಕನಸು ನನಸಾಯಿತೆಂದು ಅವಳು ಸಂತಸಗೊಂಡಳು.

ಆದರೆ, ಪ್ರತಿಯೊಂದು ಆಶೆಗೂ ಅದರ ಬೆಲೆ ತೆರಬೇಕಾಗುತ್ತದೆ ಎಂದು ಅವಳಿಗೆ ತಿಳಿದಿರಲೇ ಇಲ್ಲ !

ಅನಿತಾ–ಅವರ ಮುದ್ದಿನ ಮಗಳು ಅನಿತಾ !

ಅವಳನ್ನು ರಜನಿ ಕಳೆದುಕೊಂಡಳೇ ? ಮಗಳು ಇನ್ನು ಮರಳಿ ಅವಳಿಗೆ ಸಿಗಲಾರಳೇ?

ರಜನಿಯ ಮೈ ನಡುಗಿತು. ಮುಂದೆ ಯೋಚಿಸಲು ಅವಳಿಂದ ಸಾಧ್ಯವಾಗಲಿಲ್ಲ. ಸೀಟಿಗೆ ಒರಗಿ ಕಣ್ಣು ಮುಚ್ಚಿಕೊಂಡಳು ರಜನಿ

ನಿಜ. ಮೋಹ ತುಂಬಾ ದುಃಖದಾಯಕ.

ಎರಡು ವರ್ಷಗಳ ಅವರ ವೈವಾಹಿಕ ಜೀವನದ ದ್ಯೋತಕವಾಗಿ ಅನಿತಾ ಬಂದಳು. ಪ್ರಯೋಗಗಳಲ್ಲಿ ಮತ್ತು ಸಂಶೋಧನೆಯಲ್ಲಿ ಮುಳುಗುತ್ತಿದ್ದ ರಜನಿ ತಡವಾಗಿ ಬರುವುದು ಅನಿವಾರ್ಯವಾಗುತ್ತಿತ್ತು. ಆದುದರಿಂದ ಅನಿತಾಳನ್ನು ನೋಡಿಕೊಳ್ಳಲು ದಾದಿ ಬರುವುದೂ ಅನಿವಾರ್ಯವಾಯಿತು.

ದಾದಿಯ ತೋಳುಗಳಲ್ಲಿಯೇ ಬೆಳೆಯತೊಡಗಿದಳು ಅನಿತಾ. ರಜನಿ ಕೊಡಲಾರದ ತಾಯಿಯ ಪ್ರೇಮವನ್ನು, ಮಮತೆಯನ್ನು ದಾದಿ ಕೊಟ್ಟಳು. ಇಂತಹ ದಾದಿ ಸಿಕ್ಕಿದುದು ತನ್ನ ಪುಣ್ಯ ಎಂದು ರಜನಿ ಅಂದುಕೊಂಡಳು. ಆದರೆ ಆ ಪುಣ್ಯ ಎಂತಹದು ಎಂದು ತಿಳಿಯುವಾಗ ಕಾಲ ಮೀರಿತ್ತು.

ಕಾಲ ಮೀರಿದಾಗ ಅವಳ ಆಸೆಯೆಂಬ ಕಣ್ಣುಗಳು ದಾದಿಯತ್ತ ತಿರುಗುವುದನ್ನು ಅನಂತ ಗಮನಿಸಿದ. ಚಿಕ್ಕ ಪುಟ್ಟ ತಪ್ಪುಗಳನ್ನು, ಅಥವಾ ತಪ್ಪೇ ಅಲ್ಲದವುಗಳನ್ನು ಬೆಟ್ಟದಷ್ಟು ಹಿಗ್ಗಿಸಿ ರಜನಿ ದಾದಿಯನ್ನು ಗದರಿಸುವಾಗ ಅನಂತ ತಡೆಯುತ್ತಿದ್ದ. ರಜನಿ

ಇನ್ನಷ್ಟು ಕೆರಳುತ್ತಿದ್ದಳು; ದಾದಿ ಮರಗುತ್ತಿದ್ದಳು. ಅನಿತಾ ದಾದಿಯ ಎದೆಯಲ್ಲಿ ಮತ್ತಷ್ಟು ಹುದುಗಿಕೊಂಡು ತಾಯಿಯನ್ನು ಬೆದರು ಕಣ್ಣುಗಳಿಂದ ನೋಡುತ್ತಿದ್ದಳು.

ಹೀಗಿದ್ದರೂ ದಾದಿ ಮನೆಯನ್ನು ಬಿಡದೇ ಇದ್ದುದು ಅನಂತನಿಗೆ ಆಶ್ಚರ್ಯವನ್ನು ಉಂಟುಮಾಡುತ್ತಿತ್ತು. ಬಹುಶಃ ಅನಿತಾ ಮತ್ತು ದಾದಿಯರೊಳಗೆ ಬೆಳೆದುಬಂದ ಆ ವಿಲಕ್ಷಣ ಸಂಬಂಧವೇ ಇದಕ್ಕೆ ಕಾರಣವೇನೋ?

*

ತಂದೆ ಆಫೀಸಿನಿಂದ ಬರುವ ಘಳಿಗೆ ಅನಿತಳಿಗೊಂದು ಸಂಭ್ರಮದ ಸಮಯ. ಆತನ ಎದೆಯಲ್ಲಿ ಮುಖ ಹುದುಗಿಸುವಳು ಅನಿತಾ. ತಂದೆಯ ತೋಳುಗಳು ತುಂಬಾ ಬಲಿಷ್ಠವಾಗಿವೆ ಎಂದು ಹೆಮ್ಮೆ ಪಡುವಳು. ಅವನ ನಗೆ ಅವಳಿಗೆ ಆಪ್ಯಾಯಮಾನವಾಗಿ ಕಾಣುವುದು. ರಜನಿ ಬರುವಾಗ ಇನ್ನೂ ತಡವಾಗುವುದು. ಬಳಲಿ ಬಂದು ರಜನಿ ಮಗಳತ್ತ ಧಾವಿಸುವಾಗ ಮಾತ್ರ ಅನಿತಾಳ ವರ್ತನೆ ಹಠಾತ್ತನೆ ಬದಲಾಗುವುದು. ದುಡಿಯುವ ತಂದೆಗೆ ಅನಿತಾ ಒಲಿದಿದ್ದಳು; ಆದರೆ ದುಡಿಯುವ ತಾಯಿಗೆ ಒಲಿದಿದ್ದಿಲ್ಲ!

ರಜನಿ ಸಿಡಿಮಿಡಿಗೊಳ್ಳುವುದು ಹೆಚ್ಚುಗತೊಡಗಿತು; ಮತ್ಸರ ಅವಳನ್ನು ಮತ್ತಷ್ಟು ದಹಿಸೀತೆಂದಾಗಲೀ, ಮತ್ಸರದಿಂದ ಪ್ರೇಮವನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲವೆಂದಾಗಲೀ ಅವಳಿಗೆ ತಿಳಿಯಲಿಲ್ಲ. ಹೆಚ್ಚೇಕೆ? ಮತ್ಸರ ಅವಳ ಗರ್ಭದಲ್ಲಿ ಬೆಳೆಯುತ್ತಿದೆಯೆಂದೇ ರಜನಿಗೆ ತಿಳಿದಿರಲಿಲ್ಲ! ಒಂದು ವಿಚಿತ್ರ ವೃತ್ತದಲ್ಲಿ ಸುತ್ತುತ್ತಿರುವ ಈ ವ್ಯಕ್ತಿಗಳನ್ನು ಕಾಲ ಗಮನಿಸಲೇ ಇಲ್ಲ.

ಅನಿತಾಳಿಗೆ ಐದು ವರ್ಷಗಳು ತುಂಬಿದುವು. ದಾದಿ ಮಗಳನ್ನು ತನ್ನಿಂದ ಕಸಿದುಕೊಳ್ಳುತ್ತಾಳೆ ಎಂದೇ ರಜನಿಗೆ ದೃಢವಾಗತೊಡಗಿತು. ದಾದಿಗೆ ಹೊರಟುಹೋಗುವಂತೆ ಅವಳು ಆಜ್ಞಾಪಿಸಿದಳು. ಆಗ ದಾದಿ ಹರಿಸಿದ ಕಣ್ಣೀರನ್ನು ಅನಿತಾ ಎಂದಿಗೂ ಮರೆಯಲಾರದಾದಳು.

ದಾದಿ ನಿರ್ಗಮಿಸಿದ ದಿನ ರಜನಿ ಒಂದು ವಿಚಿತ್ರ ಸಮಾಧಾನದಿಂದ ಉಸಿರು ಬಿಟ್ಟಳು. ಇಂದಿನಿಂದ ಸಮಸ್ಯೆಗಳೆಲ್ಲವೂ ಪರಿಹಾರವಾಗಬೇಕು ಎಂದು ಅವಳು ನೆಮ್ಮದಿಗೊಂಡಳು. ಆದರೆ ಅದು ಭ್ರಮೆ ಎಂದು ತಿಳಿಯಲು ಅವಳಿಗೆ ಸಮಯವೇ ಹಿಡಿಯಲಿಲ್ಲ. ತಾಯಿ ಬಡಿಸಿದ ಊಟ ಅನಿತಾಳಿಗೆ ರುಚಿಸದಾಯಿತು. ಸ್ನಾನ, ಬಟ್ಟೆ ಬರೆಗಳು ಬೇಡಾದುವು. ತಾಯಿ ಹತ್ತಿರ ಬರುವುದೂ ಅವಳಿಗೆ ಸಹಿಸಲಸಾಧ್ಯವಾಯಿತು. ಬಾಲ್ಕನಿಯಲ್ಲಿ ನಿಂತುಕೊಂಡು ಶೂನ್ಯವಾಗಿ ಆಕಾಶವನ್ನು ನೋಡುವಳು ಅನಿತಾ.

ಬಹುಶಃ ಆ ಹಸುಳೆ ಮನಸ್ಸು ಹಿಂದಿನ ದಿನಗಳನ್ನು ನೆನೆಯುತ್ತಿರಬೇಕು. ದಾದಿಯ ಮಮತೆಯ ತೋಳುಗಳನ್ನು, ಅವಳ ವಾತ್ಸಲ್ಯದ ಸವಿಯನ್ನು, ಅವಳ ಅನುರಾಗವನ್ನು ನೆನೆದು ಬಹುಶಃ ಆ ಎಳೆಯ ಹೃದಯ ಹಲುಬುತ್ತಿರಬೇಕು.

ಆದರೆ ಈಗ ದಾದಿ ಇರಲಿಲ್ಲ. ಅನಿತಾ ತಂದೆಯನ್ನು ಅವಲಂಬಿಸತೊಡಗಿದಳು— ಆದರೆ ಮಗಳನ್ನು ಒಪ್ಪಿಸಬೇಕಾದರೆ ಅನಂತನಿಗೆ ಸಾಕು ಸಾಕಾಗುತ್ತಿತ್ತು. ಈ ವಾತಾವರಣದಿಂದ ಕೆಲವು ದಿನಗಳವರೆಗಾದರೂ ಮಗಳನ್ನು ದೂರವಿಡದಿದ್ದರೆ ಅವಳು ಉಳಿಯುವುದಿಲ್ಲ ಎಂದು ನಿರ್ಧರಿಸಿದ ಅನಂತ. ರಜನಿ ಖಂಡಾಲಾದಲ್ಲಿರುವ ಅವಳ ಗೆಳತಿ ಶಾಲಿನಿಯ ಮನೆಯನ್ನು ಸೂಚಿಸಿದಳು.

“ಏನು ಮುಖ ಬಡಿದಂತೆ ಕುಳಿತಿರುವೆ ರಜನಿ!” ಎಂದು ಶಾಲಿನಿ ಗೆಳತಿಯ ಭುಜಗಳನ್ನು ಅದುಮಿ ಕುಲುಕಿಸಿದಾಗಲೇ ರಜನಿ ಕಣ್ಣು ತೆರೆದು ನೋಡಿದುದು! ಗೆಳತಿಯ ಮನೆಯ ಎದುರು ಕಾರು ನಿಂತುದು ಅವಳಿಗೆ ತಿಳಿದಿರಲೇ ಇಲ್ಲ. ರಜನಿ ಗೆಳತಿಯನ್ನು ನೋಡಿ ಶೂನ್ಯವಾಗಿ ನಕ್ಕಳು.

ಮನೆಯ ಮೆಟ್ಟಲುಗಳನ್ನು ಅವಳು ಸಂಭಾಳಿಸಿಕೊಂಡು ಏರಬೇಕಾಯಿತು!

*

ಸಮಸ್ಯೆ ಮತ್ತಷ್ಟು ಜಟಿಲವಾಯಿತು

ಇಂತಹ ತಿರಂಗು ಬಾಣಕ್ಕೆ ಯಾರೂ ಸಿದ್ಧ ರಾಗಿರಲಿಲ್ಲ.

ಅನಿತಾ ಸಂಪೂರ್ಣ ಕುಸಿದುಹೋದಳು. ಕೆಲವೇ ದಿನಗಳ ಮೊದಲು ಅನಿತಾ ಒಂದು ಲವ ಲವಿಕೆಯ ಬುಗ್ಗೆಯಾಗಿದ್ದಳೆಂದು ಊಹಿಸು ವುದೂ ಅಸಾಧ್ಯವಾಗಿತ್ತು. ಖಂಡಾಳಾದ ಮರುಳುಗೊಳಿಸುವ ಪ್ರಕೃತಿಯಾಗಲೀ, ಶಾಲಿನಿ- ದಂಪತಿಗಳ ವಾತ್ಸಲ್ಯಮಯ ಆತಿಥ್ಯ ಗಳಾಗಲೀ ಅವಳನ್ನು ಸೆಳೆಯಲೇ ಇಲ್ಲ.

ಆ ಹಾಸಿಗೆಯಲ್ಲಿ ಅವಳು ಮಲಗಿದ್ದಳು– ಮೋದುಡಿ ಮುದ್ದೆಯಾಗಿ ಬಿದ್ದ ಹಾಸಿಗೆಯ ಹಾಸಿನಂತೆ. ಬಳಿಯಲ್ಲಿ ದಿಕ್ಕಿಲ್ಲದಂತೆ ದೀನಳಾಗಿ ಕುಳಿತಿದ್ದಳು ರಜನಿ. ಅಂದರೆ... ಅವಳು ಯಾರನ್ನೂ ಗುರುತಿಸಲಾರಳೇ?

ಈ ಯೋಚನೆ ಬಂದಾಗ ಅನಂತ ಕಂಪಿಸಿದ. ಅವನ ಕಣ್ಣುಗಳು ಸಂಪೂರ್ಣ ತೊಯ್ದು ಹೋಗಿ ನಡುಗುತ್ತಿರುವ ಹಕ್ಕಿಗಳಂತಿದ್ದ ಆ ತಾಯಿ ಮಗಳತ್ತ ತಿರುಗಿದುವು. ಕೆಲವೇ ದಿನಗಳ ಮೊದಲು ರಜನಿ ಇದೇ ರೀತಿ ಬೆಡ್ ರೂಮಿನ ಹಾಸಿಗೆಯಲ್ಲಿ ಕುಳಿತಿದ್ದುದು ಅವನಿಗೆ ನೆನಪಾಯಿತು...

'ಇಂದಿನಿಂದ ಸಮಸ್ಯೆಗಳೆಲ್ಲವೂ ಬಗೆಹರಿಯ ಬೇಕು.' ಎಂದಿದ್ದಳು ರಜನಿ ಕೆಲಸಕ್ಕೆ ರಾಜೀ ನಾಮೆ ಕೊಟ್ಟು ಬಂದ ದಿನ. ಆದರೆ ಯಾವುದೂ ಬಗೆಹರಿದಂತೆ ಕಾಣಿಸುತ್ತಿರಲಿಲ್ಲ. ದಿಕ್ಕೆಟ್ಟವ ಳಂತೆ ಅವಳು ಹಲುಬುತ್ತಿದ್ದಳು. ಭಿನ್ನಭಿನ್ನ ಬಯಕೆಗಳ ಹೊಯ್ದಾಟದಲ್ಲಿ ಬಹುಶಃ ಸಂಪೂರ್ಣ ಸೋತಿರಬೇಕು ರಜನಿ.

ಎರಡರಲ್ಲೂ ಅವಳಿಗೆ ಅಷ್ಟೇ ಮೋಹ ವಿತ್ತು–ಅನಿತಾ ಮತ್ತು ಸಂಶೋಧನೆ. ಮಗಳು ಮತ್ತು ಅವಳ ಮನಸ್ಸಿನಲ್ಲಿಯೇ ಬೆಳೆದು ಬಂದಿದ್ದ ಮಗು! ಆದರೆ ಎಂತಹ ವೈಪರೀತ್ಯ! ಒಂದನ್ನು ಪಡೆಯಬೇಕಾದರೆ ಮತ್ತೊಂದನ್ನು ಮರೆಯಲೇಬೇಕು!

ಕಡೆಗೆ ಅವಳ 'ತಾಯ್ತನ'ವೇ ಜಯಿಸಿತು. ಸಂಶೋಧನೆಯ ಕೆಲಸವನ್ನು ಅವಳು ಬಿಡ ಬೇಕಾಯಿತು. ದಾದಿಯನ್ನು ಹೇಗೆ ತ್ಯಜಿಸು ತ್ತಾಳೆ ಎಂಬ ಯೋಚನೆಯು ಸಣ್ಣ ಮೋಡ

ವೊಂದು ಅನಂತನ ಮನದಲ್ಲಿ ಸುಳಿದಿತ್ತು. ಅನಂತ ಅವಳ ನಿರ್ಧಾರ ತಂದ ಸಂತಸದಲ್ಲಿ ಆದರೆ ಅದನ್ನು ಮರೆತಿದ್ದ.

ಅಂದು ಅವನು ಮಡದಿಯನ್ನು ಎದೆಯಲ್ಲಿ ಹುದುಗಿಸಿಕೊಂಡಿದ್ದ. ಅವಳ ಕಣ್ಣೀರನ್ನು ತುಟಿಗಳಿಂದ ಒರಸಿದ್ದ...

ಇಂದು ಅವಳನ್ನು ಸಮಾಧಾನಪಡಿಸುವ ಸ್ಥಿತಿಯಲ್ಲಿ ಅವನು ಇರಲಿಲ್ಲ. ಬದಲಾಗಿ, ಯಾರಾದರೂ ಅವನನ್ನೇ ಸಂತೈಸುವುದು ಅಗತ್ಯವಾಗಿತ್ತು-

ಆದರೆ ಶಾಲಿನಿ–ದಂಪತಿಗಳು ಸಹಾಯ ಮಾಡಲು ಕಾತರರಾಗಿದ್ದರು. ಈ ಮೂರು ಜೀವಿಗಳ ಸ್ಥಿತಿಯನ್ನು ನೋಡಲಾರದೆ ಅವರು ಡಾ ವಾಧ್ವಾನಿಯವರನ್ನು ಕಾಣುವಂತೆ ಒತ್ತಾ ಯಿಸಿದರು. ಡಾ. ವಾಧ್ವಾನಿ ಮಕ್ಕಳ ವಿಷಯ ದಲ್ಲಿ ತಜ್ಞರು. ಅವರಿಗೆ ಪುಣೆದಲ್ಲಿ ಅಪರಿಮಿತ ಬೇಡಿಕೆ ಇತ್ತು. ವಿಶ್ರಾಂತಿಯೇ ಇಲ್ಲದ ಆ ಕೆಲಸದ ಒತ್ತಡವನ್ನು ಮರೆತು ಕೆಲವು ದಿನಗಳ ನ್ನಾದರೂ ಹಾಯಾಗಿ ಕಳೆಯಲು ಅವರು ವರ್ಷಂಪ್ರತಿ ಖಂಡಾಳಾಕ್ಕೆ ಬರುತ್ತಿದ್ದರು.

ಎಂಟು–ಹತ್ತು ದಿನಗಳಲ್ಲಿ ಅನಿತಾ ತಕ್ಕ ಮಟ್ಟಿಗೆ ಸುಧಾರಿಸಿಕೊಂಡಳು. ಇದು ರಜ ನಿಯ ಅವಿಶ್ರಾಂತ ಆರೈಕೆ, ಪ್ರಾರ್ಥನೆಗಳಿಗೆ ಸಿಕ್ಕಿದ ಉಡುಗೊರೆಯೋ, ಡಾ. ವಾಧ್ವಾನಿ ಯವರ ಪರಿಣತಿಯೋ ಅಲ್ಲ, ಆ ದಂಪತಿಗಳಿ ಬ್ಬರೂ ಎರೆದ ವಾತ್ಸಲ್ಯದ ಫಲಗಳೋ–ಅವ ರಿಗೆ ತಿಳಿಯದು. ಈ ವಿಚಾರ ಯಾರನ್ನೂ ಕಾಡಲೇ ಇಲ್ಲ!

ಹೆಗಲನ್ನು ಪರಸ್ಪರ ಬಳಸಿಕೊಂಡು ಗೆಳ ತಿಯರಿಬ್ಬರೂ ಮೆಟ್ಟಿಲನ್ನಿಳಿದು ಬರುವಾಗ ರಜನಿ ಮೆಲುವಾಗಿ ನಗುತ್ತಿದ್ದಳು.

ಬೀಳ್ಕೊಡುಗೆಯ ದೃಶ್ಯ ಹೃದಯಸ್ಪರ್ಶಿ- ಯಾಗಿತ್ತು.

ಸೂರ್ಯನು ಇನ್ನೂ ಉದಿಸಿರಲಿಲ್ಲ. ದೂರ ವಾಗುತ್ತಿರುವ ಆ ಮೂರು ವ್ಯಕ್ತಿಗಳನ್ನು ಸಾಂತ್ವನಗೊಳಿಸಲೋ ಎಂಬಂತೆ ತಂಗಾಳಿಯು ಸಿಳ್ಳು ಹಾಕುತ್ತಾ ಬೀಸುತ್ತಿತ್ತು.

ಕಾರು ನಿಧಾನವಾಗಿ ಖಂಡಾಳಾ ಘಟ್ಟವನ್ನು ಇಳಿಯತೊಡಗಿತು.

ಇಂದು ಸೂರ್ಯನನ್ನು ತಳ ಸೇರಿ ಕಣ್ಮರೆಯಾದವನಲ್ಲ. ಕಾಂತಿಪೂರ್ಣವಾದ ಒಂದು ದಿನವನ್ನು ಜಗತ್ತಿಗೆ ಕೊಡಲು ಸಿದ್ಧತೆ ಮಾಡುತ್ತಿದ್ದಾನೆ.

ಅಚಾನಕವಾಗಿ, ಶಾಲಿನಿ ಕೊಟ್ಟಿದ್ದ ಗೊಂಬೆಯು ಅನಿತಾಳ ಕೈಯಿಂದ ಜಾರಿ ಕೆಳಗೆ ಬಿತ್ತು. ಸಹಜವಾದ ಪ್ರವೃತ್ತಿಯಿಂದ ರಜನಿ ಅದನ್ನು ಹೆಕ್ಕಿ ಮಗಳಿಗೆ ಕೊಟ್ಟಳು. ಅದನ್ನು ಸ್ವೀಕರಿಸುವಾಗ ಅನಿತಾಳ ತುಟಿಗಳಿಂದ ಒಂದು ಬಹು ಸಣ್ಣ, ಅಸ್ಪಷ್ಟ ನಗೆಯ ಅಲೆಯೊಂದು ತೇಲಿಹೋಯಿತು!

ಹೌದು! ರಜನಿಯ ಹೃದಯ ಕಂಪಿಸಿತು. ಒಮ್ಮೆಲೇ ಮಗಳನ್ನು ತಬ್ಬಿಕೊಂಡು ಅವಳ ಮೇಲೆ ಮುತ್ತಿನ ಮಳೆಗರೆಯುವ ಬಯಕೆಯೊಂದು ಅವಳಲ್ಲಿ ಮೂಡಿಬಂತು. ಆದರೆ, ಹಠಾತ್ತಾಗಿ, ತುಂಬಾ ವಿವೇಕದಿಂದ ವರ್ತಿಸುವಂತೆ ಅಡಿಗಡಿಗೆ ಎಚ್ಚರಿಸಿದ ಡಾ. ಮಾಧ್ವಾನಿಯವರ ನುಡಿಗಳು ಅವಳ ಕಿವಿಗಳಲ್ಲಿ ಮೊಳಗಿದುವು. ಆ ಪ್ರಚೋದನೆಯನ್ನು ಪ್ರಯಾಸದಿಂದ ಹತ್ತಿಕ್ಕಿಕೊಂಡು ರಜನಿ ಮುಗುಳುನಗೆಯನ್ನು ಮಾತ್ರ ನಕ್ಕಳು.

ಹೌದು, ರಜನಿ ಇನ್ನೆಂದೂ ಅವಿವೇಕಿಯಾಗಲಾರಳು. ಅವಳು ನಿಧಾನಿಸುವಳು, ತಾಳುವಳು.

ರಜನಿಯ ಕಣ್ಣುಗಳು ಖಂಡಾಳಾದ ಶಿಖರಗಳನ್ನು ನೋಡಿದುವು. ಉದಯಿಸುತ್ತಿರುವ ಸೂರ್ಯನ ಎಳೆಬಿಸಿಲನ್ನು ಪ್ರತಿಫಲಿಸಿ ಮಿನುಗುತ್ತಿದ್ದುವು ಆ ಶಿಖರಗಳು. ಆ ಶಿಖರ ಕಡಿದಾದ ಇಳಿಕಲುಗಳ ಭೀಕರತೆಯು ಹೊಂಬಿಸಿಲಿನ ಸ್ನಾನದಲ್ಲಿ ತೊಳೆದುಹೋದಂತೆ ಭಾಸವಾಗುತ್ತಿತ್ತು.

ಎಲೆಗಳೆಡೆಯಿಂದ ತೂರಿಬಂದ ಎಳೆ ಕಿರಣವೊಂದು ಅವಳ ಮುಖವನ್ನು ಬೆಳಗಿತು. ✡

೧೭೮೯ ರಲ್ಲಿ ಒಂದು ದಿನ ಅಮೇರಿಕದ ಆಗಿನ ಅಧ್ಯಕ್ಷ ಜಾರ್ಜ್ ವಾಷಿಂಗ್‌ಟನ್ ನ್ಯೂಯಾರ್ಕಿನ ಒಂದು ಬೀದಿಯಲ್ಲಿ ಸಂಚರಿಸುತ್ತಿದ್ದರು. ಆಗ ಒಬ್ಬ ಬಡ ಹೆಂಗಸು ತನ್ನ ಪುಟ್ಟ ಮಗನೊಂದಿಗೆ ಅವರನ್ನು ಕಾಣಲು ಬಂದಳು. ಆದರೆ ಅಂಗರಕ್ಷಕರು ಆ ಹೆಂಗಸನ್ನು ಅಧ್ಯಕ್ಷರ ಬಳಿಗೆ ಬಿಡಲೊಪ್ಪಲಿಲ್ಲ. ಕೊನೆಗೂ ಹೇಗೊ ಅಂಗರಕ್ಷಕರ ಕಣ್ಣು ತಪ್ಪಿಸಿ, ವಾಷಿಂಗ್‌ಟನ್ ಇದ್ದಲ್ಲಿಗೆ ಬಂದು ಅವರಿಗೆ ನಮಸ್ಕರಿಸಿ ತನ್ನ ಆರು ವರ್ಷದ ಮಗುವನ್ನು ತೋರಿಸಿ, "ಈ ನನ್ನ ಮಗನಿಗೆ ನಿಮ್ಮ ಹೆಸರನ್ನೆ ಇಟ್ಟಿದ್ದೇನೆ," ಎಂದಳು.


ವಾಷಿಂಗ್‌ಟನ್ ಆ ಹುಡುಗನನ್ನು ಪ್ರೀತಿಯಿಂದ ಹತ್ತಿರ ಕರೆದು ಆಶೀರ್ವಾದ ಮಾಡಿದರು. ಆ ಹುಡುಗನ ತಾಯಿ ತನ್ನ ಮಗ ಖಂಡಿತ ದೊಡ್ಡ ಮನುಷ್ಯನಾಗುತ್ತಾನೆ ಎಂದುಕೊಂಡಳು.

ಅಧ್ಯಕ್ಷರಿಂದ ಆಶೀರ್ವಾದ ಪಡೆದ ಈ ಹುಡುಗನಾರು ಗೊತ್ತೆ? ಅಮೇರಿಕದ ಶ್ರೇಷ್ಠ ಕತೆಗಾರರಲ್ಲಿ ಒಬ್ಬನೆನಿಸಿದ ವಾಷಿಂಗ್‌ಟನ್ ಐರ್ವಿಂಗ್–"ರಿಪ್ ವಾನ್ ವಿಂಕಲ್" ಸೃಷ್ಟಿಸಿದಾತ

•

ನಾರ್ವೆಯ ಖ್ಯಾತ ನಾಟಕಕಾರ ಹೆನ್ರಿಕ್ ಯೋಹಾನ್ ಇಬ್ಸೆನ್ ತನ್ನ ೬೧ ನೇ ವಯಸ್ಸಿನಲ್ಲಿ ೧೯ ವರ್ಷದ ಯುವತಿಯನ್ನು ಪ್ರೀತಿಸಿ ಭಗ್ನಪ್ರಣಯಿಯಾದ. ಈ ಪ್ರಣಯ ಪ್ರಸಂಗ ಇಬ್ಸೆನ್ನನ ಮನಸ್ಸಿಗೆ ತೀವ್ರ ಆಘಾತವನ್ನುಂಟುಮಾಡಿ ಅವನ ಸಾವಿಗೆ ಮುಖ್ಯ ಕಾರಣವಾಯಿತು.

ಸಂಗ್ರಹ : ಅಭಿನಂದನಾ


ಆಟ ಯಾವುದೇ ಇರಲಿ,
ಸಿ.ಎಸ್.ಸಿ.
ಸ್ಪೋರ್ಟ್ಸ್ ಷೂಗಳನ್ನು ಧರಿಸಿ
ಹೆಚ್ಚು ಉತ್ತಮವಾಗಿ
ಆಡಬಹುದು.
CHAITRA-CS-19 KAN
C.S.C.
FOOTWEAR
ಕರೋನಾ ಸಾಹು ಕಂ. ಲಿ.



ಖಲ್ವಾಟ ಸಮಸ್ಯೆಗೆ ಕೇಶಾರೋಪಣ ಪರಿಹಾರ!

'ಬಾದಲ'

ಖಲ್ವಾಟೋ ನಿರ್ಧನೋ ಕ್ವಚಿತ್ ಎಂದು ಹೇಳುವವರಿದ್ದಾರೆ. ಆದರೆ ಅದು ನಿಜವೆಂದು ನಂಬಬೇಕಿಲ್ಲ. ಅದರಂತೆ ಬೋಳು ತಲೆಯವರಲ್ಲಿ ಪುರುಷಶಕ್ತಿ ಅಧಿಕ ಎಂಬ ಭಾವನೆಯೂ ಇದೆ ಅದನ್ನು ಕೂಡ ನಿರಾಕರಿಸುವ ಉದಾಹರಣೆಗಳು ಕಾಣಸಿಗುತ್ತವೆ. ಯಾವಾಗಲೂ ಚಿಂತೆ ಈ ದೇಹಕ್ಕೆ ಎಂಬಂತೆ ಖಲ್ವಾಟರಿಗೂ ಅವರ ಚಿಂತೆ ಇದ್ದೇ ಇರುತ್ತದೆ ಎಂಬ ದೃಷ್ಟಾಂತಗಳಿಗೂ ಕೊರತೆಯಿಲ್ಲ. ತಮ್ಮ ತಲೆ ಬೋಳಾಗಿರಬಾರದು, ಇತರರಂತೆ ತಾವೂ ಕೂದಲು ಬೆಳೆಸಬೇಕು. ಕ್ರಾಪ್ ಕತ್ತರಿಸಿ ಅಚ್ಚುಕಟ್ಟಾಗಿ ಹಿಕ್ಕಿಕೊಂಡು ಮೆರೆಯಬೇಕು, ಅಥವಾ ಹಿಪ್ಪಿಗಳಂತೆ ಕೂದಲು ಬೆಳೆಸಬೇಕು ಎಂಬ ಆಕಾಂಕ್ಷೆ ಖಲ್ವಾಟರಿಗೆ ಇರುವದೂ ಸ್ವಾಭಾವಿಕ. ವಯೋಧರ್ಮ ಎಂದು ತಮ್ಮ ಬೊಕ್ಕ ತಲೆಯ ಮೇಲೆ ಕೈಯಾಡಿಸಿಕೊಳ್ಳುತ್ತ ಸಮಾಧಾನದ ಉದ್ಗಾರ ಹೊರಡಿಸುವವರೂ ಇದ್ದಾರೆ. ಆದರೆ ಬಿದ್ದುಹೋದ ಕೂದಲುಗಳನ್ನು ಮರಳಿ ಪಡೆಯಲು ಸಾಧ್ಯ ಎಂದು ವೈದ್ಯಶಾಸ್ತ್ರ ಹೇಳುತ್ತಿರುವುದು ವಿದಿತವಾದಾಗ ಖಲ್ವಾಟರಲ್ಲಿ ಬಹು ಸಂಖ್ಯಾಕರು ಪುನಃ ಸಕೇಶಿಗಳಾಗಲು ಅಪೇಕ್ಷಿಸುವದು ಸ್ವಾಭಾವಿಕ.

ಹಾಗಾದರೆ ಕೂದಲು ಉದುರುವುದನ್ನು ತಡೆಗಟ್ಟುವದು ಹೇಗೆ? ಯಾವ ಕೇಶ ತೈಲಗಳೂ ಈ ಕಾರ್ಯ ಮಾಡಲಾರವು; ಖಲ್ವಾಟರಿಗೆ ರಕ್ಷಣೆ ನೀಡಲಾರವು. ಇನ್ನು ಬೋಳು ತಲೆಯನ್ನು ಟೋಪಣದಿಂದ ಮುಚ್ಚಿಕೊಳ್ಳುವದು ಒಂದು ಉಪಾಯ. ಆಗ ಆ ಟೋಪಣಗಳನ್ನು ದೊರಕಿಸುವುದು, ಅವನ್ನು ಜೋಪಾನವಾಗಿ ಕಾದಿರಿಸುವುದು ಅಷ್ಟೇ ಎಚ್ಚರದಿಂದ ಧರಿಸುವುದು ಅಗತ್ಯವಾಗುತ್ತದೆ. ಪೇಟೆಯಲ್ಲಿ ಹೋಗುವಾಗ ಕಿಸೆಯಿಂದ ಬಿದ್ದ ಕರವಸ್ತ್ರವನ್ನು ಎತ್ತಿಕೊಳ್ಳಲೆಂದು ಬಾಗಿದಾಗ ನಿಮ್ಮ ತಲೆಯ ಟೋಪಣ ಜಾರಿಬಿದ್ದು ಆಭಾಸ ಉಂಟುಮಾಡಿ, ನಿಮ್ಮನ್ನು ನಗೆಗೀಡು ಮಾಡಿದಾಗ ಸಹಿಸಿಕೊಳ್ಳುವ ಗಂಡೆದೆಯೂ ನಿಮಗಿರಬೇಕಾಗುತ್ತದೆ. ಈ ರೀತಿ ಟೋಪಣಗಳನ್ನು ಉಪಯೋಗಿಸುವ ಪ್ರಘಾತ ನಮ್ಮಲ್ಲಿ ಹೆಚ್ಚಾಗಿಲ್ಲ.

ಖಲ್ವಾಟರಿಗೆ ಉಪಯುಕ್ತವಾದಂಥ ಇನ್ನೊಂದು ಉಪಾಯವನ್ನು ಅಮೇರಿಕದ ಡಾಕ್ಟರರು ಹುಡುಕಿದ್ದಾರೆ. ಅದೆಂದರೆ ಬೊಕ್ಕ ತಲೆಯಲ್ಲಿ ಕೂದಲು ಸಸಿ ನೆಡುವದು. ಅದೇ ಮನುಷ್ಯನ ತಲೆಯಲ್ಲಿ ಇತರತ್ರ ಇರಬಹುದಾದ ಕೂದಲುಗಳನ್ನು ಕಿತ್ತಿ ಅವು ಇಲ್ಲದಲ್ಲಿ ನೆಡುವದೇ ಆ ಪದ್ಧತಿ ಆಗಿದೆ. ಒಂದು ಕೂದಲನ್ನು ಕಿತ್ತಿ ಬೇರೆ ಕಡೆಗೆ ನೆಡಬೇಕಾದರೆ ಡಾಕ್ಟರರ ಫೀ ಐದು ಡಾಲರುಗಳಿಂದ ಇಪ್ಪತ್ತೈದು ಡಾಲರುಗಳವರೆಗೆ ಇರುತ್ತದೆ. ಇಡೀ ತಲೆಯು ಕೂದಲು ಕಸಿ ಮಾಡಬೇಕೆಂದರೆ ಒಂದೆ-


ರಡು ಸಾವಿರ ಡಾಲರುಗಳನ್ನಾದರೂ ಆತ ಡಾಕ್ಟರರಿಗೆ ತೆರಬೇಕಾಗುತ್ತದೆ. ಈ ಕಾರ್ಯ ಎರಡು ವಾರಗಳಲ್ಲಿ ಪೂರೈಸಬಹುದಾದರೂ ಗಾಯ ಮಾಯದೆ ತೊಂದರೆ ಉಂಟಾಗಬಹುದು. ಕಸಿ ಮಾಡಿಸಿಕೊಳ್ಳುವದೂ ಸುಖದ ಕೆಲಸವಲ್ಲ. ಎಷ್ಟು ಕೂದಲು ನೆಡಬೇಕಾಗುವದೋ ಅಷ್ಟು ಸಲ ತಲೆ ಚುಚ್ಚಿಸಿಕೊಂಡು ನೋವು ಸಹಿಸಬೇಕು. ಡಾಕ್ಟರರು ಚುಚ್ಚಿ ತೋರಿಸಿದಲ್ಲಿ ತಜ್ಞನು ಕೂದಲು ನೆಡಬೇಕು. ಇಷ್ಟು ನೋವು ಸಹಿಸಿದರೂ ಆ ವಿಕಾರವಾದ ತಲೆಯು ಮೇಲೆ ಸುಂದರವಾಗಿ ಕೂದಲು ಬೆಳೆದು ಮುಖವು ಆಕರ್ಷಕವಾಗಿ ಕಾಣಬೇಕಾದರೆ ಆತ ಆರು ತಿಂಗಳೋ ವರ್ಷವೋ ದಾರಿ ಕಾಯಬೇಕು. ಇಷ್ಟೆಲ್ಲ ಪರಿಶ್ರಮದ ನಂತರ ನೆಟ್ಟ ಕೂದಲು ಬೇರು ಬಿಡದೆ ಮತ್ತೆ ಉದುರಿಬಿದ್ದು ತಲೆ ಬೋಳಾಗಿ ಉಳಿಯುವ ಸಂಭವವೂ ಇಲ್ಲದಿಲ್ಲ. ಈ ಮಹಾಸಾಹಸ ಒಂದು ಆವಿಷದಂತೆ ಖಲ್ವಾಟರನ್ನು ಮೋಹಿಸಿದರೂ ಅವರಿಗೆ ಇಷ್ಟ ಫಲ ದೊರೆತೀತು ಎಂಬ ಶಾಶ್ವತ ಭರವಸೆಯೂ ಇಲ್ಲ. ಹೀಗಾಗಿ ಈ ಕೂದಲು ಸಸಿ ನೆಡುವ ಪ್ರಯೋಗ ಮಾಡುವ ಡಾಕ್ಟರರೂ ಕೂಡ ನೂರಕ್ಕೆ ತೊಂಬತ್ತು ಪಾಲು ದೈವಾಧೀನರಾಗಿಯೇ ತಮ್ಮ ಕೆಲಸ ಮಾಡಬೇಕಾಗುತ್ತದೆ. ಅಂದಾಗ ಖಲ್ವಾಟರಿಗೆ ಕೂದಲು ಬೆಳೆಸಿಕೊಳ್ಳುವದಕ್ಕೆ ರಾಮಬಾಣ ಔಷಧವಾಗಲಿ ಪ್ರಯೋಗವಾಗಲಿ ಇಲ್ಲ ಎಂದೇ ಹೇಳಬೇಕಾಗುತ್ತದೆ. ಇರಲಿ, ಕೆಲವರಿಗಂತೂ ಈ ಕೂದಲು ಸಸಿ ವಿಧಾನ ಒಗ್ಗುವದೇ ಇಲ್ಲವಂತೆ. ಯಾರಿಗೆ ಒಗ್ಗುವದಿಲ್ಲ ಎಂಬುದನ್ನೂ ಡಾಕ್ಟರರೇ ನಿರ್ಧರಿಸುತ್ತಾರೆ. ಅಮೇರಿಕದಂಥ ಸಿರಿವಂತ ರಾಷ್ಟ್ರದಲ್ಲಿ ಈ ಅಪೂರ್ವ ಸಸಿ ನೆಡುವ ಪ್ರಯೋಗಕ್ಕೆ ಅಲ್ಪ ಸ್ವಲ್ಪ ಸ್ವಾಗತ ಸಿಗಬಹುದು ಎನಿಸಿದರೂ ಭಾರತದಂಥ ಬಡ ದೇಶದಲ್ಲಿ ಈ ಪ್ರಯೋಗ ದುಬಾರಿಯದು, ಅನಾಕರ್ಷಣೀಯ. ಅಂಥ ತಜ್ಞರೂ ಇಲ್ಲಿಲ್ಲ.

ಭಾರತದಲ್ಲಿಯ ಖಲ್ವಾಟರು-ಕೇಶವರ್ಧಕ ತೈಲಗಳನ್ನು ಅವಲಂಬಿಸುವುದೇ ಹೆಚ್ಚು. ಅವು ಪ್ರಯೋಜನಕಾರಿಯಲ್ಲ ಎಂದೂ ಈ ಮೊದಲೇ ಹೇಳಿದ್ದಾಗಿದೆ. ತಲೆಗೆ ರಕ್ತಾಭಿಸರಣ ಸರಿಯಾಗಿ ಆಗಿ ಕೇಶಮೂಲಗಳು ಒಣಗದಂತೆ ನೋಡಿಕೊಳ್ಳುವದಕ್ಕಾಗಿ ಹಲ ಕೆಲವು ಆಸನ ವ್ಯಾಯಾಮಗಳನ್ನು ಮಾಡಲು ಹೇಳುವುದೂ ಉಂಟು. ಅವುಗಳಿಂದ ಪ್ರಕೃತಿ ನಿರೋಗಿಯಾಗಿರಬಹುದಲ್ಲದೆ ಉದುರುವ ಕೂದಲುಗಳನ್ನು ಕಾಪಾಡುವ ಶಕ್ತಿ ಅವುಗಳಿಗಾದರೂ ಇಲ್ಲ ಎಂದೇ ಅನುಭವದಿಂದ ಹೇಳಲಾಗುತ್ತಿದೆ

ತಮ್ಮ ತಲೆ ಬೋಳಾಗಿಲ್ಲ ಎಂದು ಈ ಖಲ್ವಾಟರು ತೋರಿಸಿಕೊಳ್ಳಬೇಕಾದರೆ ಕೂದಲಿನ ಟೋಪಣಗಳನ್ನು ಉಪಯೋಗಿಸುವುದೊಂದೇ ದಾರಿ. ಇವರಲ್ಲಿ ಕಾಳಾಹಿವೇಣಿಯರಾದ ಲತಾಂಗಿಯರು ತಮ್ಮ ಕೂದಲು ಉದುರತೊಡಗಿದರೆ ಸರಾಗವಾಗಿ ಗಂಗಾವನ (ಕೇಶಗುಚ್ಛ)ಗಳನ್ನು ಉಪಯೋಗಿಸಲು ಆರಂಭಿಸುತ್ತಾರೆ. ಅವರವರ ಬೇಡಿಕೆಗೆ ತಕ್ಕಂತೆ ತಕ್ಕ ಆಕಾರ ಬಣ್ಣ, ನಯ, ನುಣುಪುಗಳ ಗಂಗಾವನಗಳು ಅವರಿಗೆ ಲಭ್ಯವಿರುತ್ತದೆ, ಆದರೆ ಈ ವಿಚಾರದಲ್ಲಿ ಪುರುಷರಿಗೆ ತೊಂದರೆ ತಪ್ಪಿದ್ದಲ್ಲ ಅಂತೇ ಅವರು ಅವನ್ನು ಬಯಸುವುದೂ ಇಲ್ಲ.

ಇಷ್ಟೆಲ್ಲ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ತಲೆ ಕೆಡಿಸಿಕೊಳ್ಳುವದಕ್ಕಿಂತ, ಬೋಳು ತಲೆ ತಮ್ಮ ಹಿರಿತನದ ಪ್ರತೀಕ ಎಂದೆಂದುಕೊಂಡು ಹಿರಿಯರ ಗಾಂಭೀರ್ಯ ಮೆರೆಯಬಾರದೇಕೆ? ಮತ್ತೇನನ್ನೂ ಮಂದಾನವಾಗಿ ನೀಡದಿದ್ದರೂ ಹಿರಿತನವನ್ನು ತಂದೊಡ್ಡುವ ಬೋಳು ತಲೆಯನ್ನು ಅನಾದರಿಸಲೇಕೆ?

✡



ಚಡಪಡಿಕೆಯು ಕ್ರಿಯೆಯಲ್ಲಿ ತಮ್ಮ ತಮ್ಮ ಆಲೋಚನಾ ಸಾಮರ್ಥ್ಯಗಳಿಗೆ ಅನುಗುಣವಾಗಿ ಸೃಜನಶೀಲರಾಗುತ್ತಾರೆ. ಕ್ರಿಯಾತ್ಮಕತೆಗೆ ಅರ್ಥವಂತಿಕೆ ತುಂಬಲು ಪಣ ತೊಡುತ್ತಾರೆ.

ಆ ಘಟ್ಟದಲ್ಲಿ ಕೆಲವರು ಆದರ್ಶದ ಬೆನ್ನು ಹತ್ತಿ ಹೋಗಬಹುದು; ಇನ್ನು ಕೆಲವರು ವಾಸ್ತವದತ್ತ ಮುಖ ಮಾಡಬಹುದು; ಮತ್ತೆ ಹಲವರು ಲೌಕಿಕ ಸುಖಗಳನ್ನೇ ಗುರಿಯನ್ನಾಗಿಸಿಕೊಂಡು ತಮ್ಮ ಬುದ್ಧಿಮತ್ತೆಯಿಂದ ಸೌಕರ್ಯಗಳ ಸೂರೆ ಮಾಡಿ ಆತ್ಮವಂಚನೆ ಮಾಡಿಕೊಳ್ಳಬಹುದು. ಆದರೆ ಅವರೆಲ್ಲರ ಒಂದೆ ಸಾಮಾನ್ಯ ವ್ಯಕ್ತಿಗಿಂತ ಬದಲಾದ

ನಮ್ಮ ಬುದ್ಧಿಜೀವಿಗಳು ಎಲ್ಲಿ ಎಡವುತ್ತಿದ್ದಾರೆ ?

ದೊಡ್ಡರಂಗೇಗೌಡ

ಯಾವುದೇ ಸಮಾಜ ಮೂಲಭೂತವಾಗಿ ಅನೇಕ ವ್ಯಕ್ತಿಗಳ ಗುಂಪಾಗಿರುತ್ತದೆ. ಆ ಗುಂಪಿನಲ್ಲಿ ಇತರರಂತೆ ಬುದ್ಧಿಜೀವಿಗಳೂ ವ್ಯಕ್ತಿಗಳೇ. ಆದರೆ ಬೇರೆ ಜೀವಿಗಳಿಗಿಂತ ಬಾಹ್ಯ ರೂಪಗಳಲ್ಲಿ ಬೇರೆ ಅಲ್ಲದಿದ್ದರೂ ಅವರು ಮಾನಸಿಕ ಧರ್ಮದಲ್ಲಿ ಖಂಡಿತಾ ಬೇರೆಯಾಗಿರುತ್ತಾರೆ. ಸಾಮಾನ್ಯರಿಗೆ ಮಾಮೂಲು ಜೀವನವೇ ಮುಖ್ಯವಾದರೆ ಬುದ್ಧಿಜೀವಿಗಳು ಅನ್ನಿಸಿಕೊಂಡವರಿಗೆ ಅಷ್ಟೇ ಬದುಕಾಗುವುದಿಲ್ಲ. ಸಂಪೂರ್ಣ ಬದುಕಿಗೆ ಅವರು ಇನ್ನೇನೋ ಇರಬೇಕಾಗುತ್ತದೆ ಎಂದು ಅವರು ಹಂಬಲಿಸುತ್ತಾರೆ. ಹಂಬಲಗಳು ಕೇವಲ ಕನಸುಗಳಾಗಿ ಉಳಿಯಬಿಡದೆ ಚಡಪಡಿಸುತ್ತಾರೆ. ಅಂಥ ಗುಣವೊಂದು ಇದ್ದೇ ಇರಲು ಶಕ್ಯ. ಅಂಥ ಗುಣವನ್ನೇ ಬೇರೆ ಮಾತಿನಲ್ಲಿ ಕರೆಯಬಹುದಾದರೆ—ಜ್ಞಾನ ಸಂಪಾದನೆ; ಅದು ಕೇವಲ ಸಂಗ್ರಹಣದ ಹಂತಕ್ಕೆ ನಿಲ್ಲದೆ ಅದರ ಪ್ರಸಾರ ಕ್ರಿಯೆಯನ್ನೂ ಅವಲಂಬಿಸುವಂಥ ಪೂರಕ ವಿಧಿಯಾಗುತ್ತದೆ. ಹೀಗೆ ಜ್ಞಾನಾರ್ಜನೆ ಮತ್ತು ಅದನ್ನು ವ್ಯವಸ್ಥಿತವಾಗಿ ವಿತರಣೆ ಮಾಡುವಲ್ಲಿ ಗುರುತರ ಹೊಣೆ ಹೊತ್ತವನನ್ನು ಬುದ್ಧಿಜೀವಿ ಎಂದು ಕರೆದರೆ ತಪ್ಪಿಲ್ಲ.

ಅವನು ಬರಹಗಾರನಾಗಿರಬಹುದು, ಕಲಾವಿದನಾಗಿರಬಹುದು, ಅಧ್ಯಾಪಕನಾಗಿರಬಹುದು, ವಿಜ್ಞಾನಿಯಾಗಿರಬಹುದು ಅಥವಾ ಯಾವುದೇ ಒಂದು ಕ್ಷೇತ್ರದಲ್ಲಿ ಪರಿಣತಿ ಪಡೆ

ದವನಾಗಿರಬಹುದು. ಆದರೆ ಅವರೆಲ್ಲರ ಗುರಿ ಒಂದಾಗಿರುತ್ತದೆ. ರೀತಿ ಮತ್ತು ಅನ್ವಯ ಕ್ರಮ ವಿಭಿನ್ನವಾಗಿ ಆವರವರ ಸಂಸ್ಕಾರಗಳಿಗನುಗುಣವಾಗಿ ಹೊರಹೊಮ್ಮಬಹುದು.

ಯಾರಿಗೇ ಆಗಲಿ ಅನುಭವದಿಂದ ಅಭಿವ್ಯಕ್ತಿ ಕೆರಳುತ್ತದೆ- ಹಾಗೇ ಬುದ್ಧಿಜೀವಿಗಳಿಗೆ ತಮ್ಮ ಗ್ರಹಿಕೆಗಳಿಂದ ತೀವ್ರ ದೃಷ್ಟಿ ಚಿಮ್ಮಲು ಸಾಧ್ಯವಾಗುತ್ತದೆ ಮನುಷ್ಯನು ಸಮಾಜ, ನಿಸರ್ಗ, ಇಡೀ ಸೃಷ್ಟಿ—ಇವುಗಳೊಡನೆ ನಿಕಟ ಸಂಬಂಧಗಳನ್ನಿಟ್ಟುಕೊಳ್ಳಲು ಪ್ರಯತ್ನಿಸುತ್ತಾನೆ.

ಬುದ್ಧಿಜೀವಿಗಳ ಚಟುವಟಿಕೆಗಳಿಗೆ ಚಿಂತನಶೀಲ ಗತಿ ಇರುವುದರಿಂದ ಸಾಮಾನ್ಯವಾಗಿ ಅವು ಕೇವಲ ಗುಂಪುಗಳಾಗಿ ನಿಲ್ಲದೆ ಸಂಸ್ಥೆಗಳಾಗುತ್ತವೆ, ಪೀಠಗಳಾಗಿ ಬೆಳೆಯುತ್ತವೆ. ಈ ಮಾತನ್ನು ಪುಷ್ಟೀಕರಿಸಿ ನೋಡಲು ನಾವು ಎಂಥ ಪುರಾತನ ಸಮಾಜದ ಮೂಲ ಅವಸ್ಥೆಗಳಲ್ಲೂ ಬುದ್ಧಿಜೀವಿಗಳ ಸಾಮೂಹಿಕ ಸಂಘಟನ ಶಕ್ತಿಯ ಚಾಲನೆಗೆ ಅವಕಾಶ ಇತ್ತು ಎಂಬುದರಿಂದ ಅರಿಯಬಹುದಾಗಿದೆ. ವ್ಯಕ್ತಿಯಿಂದ ಸಂಘಕ್ಕೆ, ಸಂಘದಿಂದ ಸಮುದಾಯಕ್ಕೆ ತನ್ನ ನೈಜ ಆಲೋಚನೆ ಸಂಹಿತೆಗಳನ್ನು ತಲುಪಿಸುವಲ್ಲಿ ಬುದ್ಧಿಜೀವಿ ದಿಟ್ಟತನ ಮತ್ತು ತೀವ್ರತೆಯನ್ನು ತೋರಿಸಬೇಕಾಗುತ್ತದೆ. ಸ್ಪಷ್ಟ ಗುರಿ, ಸ್ಪಷ್ಟ ದಾರಿ ಎರಡೂ ಅವನ ಅಂತರ್ಯದ ಶಕ್ತಿಯನ್ನವಲಂಬಿಸಿ ಕೆಲಸ ಮಾಡುತ್ತದೆ. ಆಚರಣೆ ಮತ್ತು ಫಲ ಅವನನ್ನಷ್ಟೆ ಮುಖ್ಯವಾಗಿಟ್ಟುಕೊಂಡಿರುವುದಿಲ್ಲ. ಬೇರೆ ಸಂಗತಿಗಳೂ ಇಂಬಾಗಿರುತ್ತವೆ.

ಸ್ವಂತಿಕೆ, ಬುದ್ಧಿಜೀವಿಗಳ ಮುಖ್ಯ ಆಸ್ತಿ: ಬಹುಶಃ ಅಂಥ ಸ್ವಂತಿಕೆ ಎಂಬ ಧೋರಣೆ ಉಳಿಸಿಕೊಳ್ಳಲು ಹೋಗಿ ಅವರು ಸಮಾಜದ ಜೀವಂತ ಭೂಮಿಕೆಯಿಂದ ಸಿಡಿದು ನಿಲ್ಲುವ, ಪ್ರತ್ಯೇಕವಾಗುವ ಪ್ರಸಂಗವನ್ನು ತಮಗೆ ತಾವೇ ತಂದೊಡ್ಡಿಕೊಳ್ಳುತ್ತಾರೆ. ಆದರೂ ಅವರು ಸಮಾಜದ ಸಮಷ್ಟಿಯನ್ನು ಪ್ರತಿನಿಧಿಸುವ ಸಾಂಸ್ಕೃತಿಕಸಾರ ಇದ್ದ ಹಾಗೆ. ಕಾರಣ ಅವರು ನಿರಂತರ ಅಧ್ಯಯನ ನಿರತರಾಗಿರುವ ಸಾಧ್ಯತೆ ಇದ್ದೇ ಇದೆ. ಪ್ರಾಮಾಣಿಕವಾಗಿ ವರ್ತಮಾನಕ್ಕೆ ಸ್ಪಂದಿಸುವ ಚುರುಕಿರುತ್ತದೆ. ಸಂವಹನದಲ್ಲಿ ಮತ್ತು ಅಭಿವ್ಯಕ್ತಿ ಕಾರ್ಯಗಳಲ್ಲಿ ಸಾಮಾನ್ಯ ಮನುಷ್ಯನಿಗಿಂತ ಸೂಕ್ಷ್ಮವೂ ಜಾಗೃತವೂ ಆಗಿರುವುದೇ ಬುದ್ಧಿಜೀವಿಯ ಉಸಿರಾಗಿರುತ್ತದೆ. ಸತ್ಯಕ್ಕೆ ಹೆಚ್ಚಿನ ಬೆಲೆಯನ್ನು ಕೊಡಬಲ್ಲವರು ಬುದ್ಧಿಜೀವಿ ಎಂಬ ಕಾರಣದಿಂದ ಸಾಮಾನ್ಯ ಜನತೆ ಅವರನ್ನು ವಿಶೇಷ ಗೌರವದಿಂದ ಕಾಣುತ್ತದೆ. ಅವರು ಹಾಗೆ ಕಾಣಲು ಕಾರಣ ಬುದ್ಧಿಜೀವಿಗಳ ಒಂದು ಮುಖ ಮಾತ್ರ ಅವರಿಗೆ ಗೋಚರಿಸಿರುತ್ತದೆ, ಅಷ್ಟೆ.

ಅವರ ಇನ್ನೊಂದು ಮುಖವನ್ನು ಅವರ ಯೋಜನಾ ವಿಧಾನಗಳಿಂದ ಕಾರ್ಯ ಚಟುವಟಿಕೆಗಳಿಂದ ಕಾಣಬಹುದು. ಬಹಳಷ್ಟು ಜನ ಬುದ್ಧಿಜೀವಿಗಳು ಕಾಲ್ಪನಿಕ ಭ್ರಾಂತಿಗಳಲ್ಲಿ ಪರ್ಯವಸಾನವಾಗುವ ಸಂಭವವೇ ಹೆಚ್ಚು. ಭಾರತದ ಇಂದಿನ ಪರಿಸ್ಥಿತಿಯನ್ನು ಗಮನಿಸಿ ಹೇಳುವುದಾದರೆ ಶೇಕಡಾ ತೊಂಬತ್ತು ಭಾಗ ಬುದ್ಧಿಜೀವಿಗಳು ಬೌದ್ಧಿಕ ಮರಣವನ್ನಪ್ಪಿದ್ದಾರೆ. ಇದು ವ್ಯಥೆಯ ಸಂಗತಿಯಾದರೂ ನಗ್ನ ಸತ್ಯವಾಗಿದೆ. ದೇಶದ ಪ್ರಸ್ತುತ ಸಾಮಾಜಿಕ ಸನ್ನಿವೇಶಗಳು ಹಾಗೂ ರಾಜಕೀಯ ಕ್ಷೇತ್ರಗಳೂ ಪ್ರಕ್ಷುಬ್ಧವಾಗಿವೆ. ಇಂಥ ಸ್ಥಿತಿಯಲ್ಲೂ ನಾಡಿನ ಬುದ್ಧಿಜೀವಿಗಳೆನಿಸಿಕೊಂಡವರು ಮೌನವನ್ನೇ ಪ್ರತಿಕ್ರಿಯೆಯಾಗಿ ತೋರಿಸುವುದು ಸರಿಯಾದ ದಾರಿಯಲ್ಲ. ಕೆಲವರು ಸಂತುಲ ಬೆಳವಣಿಗೆಗಳ ಹಿಂದಿನ ಅವ್ಯವಸ್ಥೆ ಕಂಡು ಮೂಲಭೂತವಾಗಿ ಸರಿಪಡಿಸಲು ಯೋಜನೆಗಳನ್ನು ರೂಪಿಸುವ ಕಡೆಗೆ, ಕ್ರಮಬದ್ಧವಾದ ಕಾರ್ಯತತ್ಪರತೆಯ ಕಡೆಗೆ ನಡೆಯುತ್ತಿದ್ದಾರೆ. ಆದರೆ ದೇಶದಲ್ಲಿ ಬದಲಾವಣೆ ಆಗಬೇಕಾದರೆ ಅದು ಕೇವಲ ಬುದ್ಧಿಜೀವಿಗಳ ತೋರು ದೀಪಗಳಂಥ ಮಾತಿನಿಂದಷ್ಟೇ ಸಾಧ್ಯವಿಲ್ಲ. ಅದನ್ನು ತಮ್ಮ ಬದುಕಿನ ದೈನಂದಿನ ಗುಂಗಿನಷ್ಟೇ—ತೀವ್ರವಾಗಿ ಆಸಕ್ತಿಯಿಂದ ಜನತೆ ಪಡೆದುಕೊಂಡಾಗ, ಕ್ರಿಯೆಯ ಆಶಯವನ್ನು ದಕ್ಕಿಸಿಕೊಂಡಾಗ ಸಾರ್ಥಕ ಹೊಸತನ ಕಂಡೀತು.

ಬಹಳಷ್ಟು ಜನ ನಿನ್ನೆಯ ವಾಮಪಂಥೀಯ ಬುದ್ಧಿಜೀವಿಗಳು ಪ್ರತಿಷ್ಠಿತ ವರ್ಗದವರ ಬೂರ್ಜ್ವಾ ಗದ್ದುಗೆಯಲ್ಲಿ ಪ್ರಮುಖ ಸ್ಥಾನಗಳಲ್ಲಿ ಕುಳಿತು ತಜ್ಞರಂತೆ ಸಲಹೆಗಾರರಂತೆ ವರ್ತಿಸುತ್ತಿದ್ದಾರೆ; ಆಡಳಿತ ಪಕ್ಷಗಳ ತುತ್ತೂರಿಯನ್ನೇ ಊದುತ್ತಿದ್ದಾರೆ.

ಒಂದು ಸಾರಿ ಬುದ್ಧಿಜೀವಿ ಪ್ರತಿಷ್ಠಿತರ ಗಣದಲ್ಲಿ ನುಸುಳಿ ಆಡಳಿತ ವರ್ಗದ ಮರ್ಜಿ ಹಿಡಿದರೆ ಅಲ್ಲಿಗೆ ಅವನ ಬೌದ್ಧಿಕತೆಯು ಬುಗ್ಗೆ ಬತ್ತಿದ ಹಾಗೆಯೇ. ಏಕೆಂದರೆ, ಮುಂದೆ ಅವರೆಂದೂ ಮೂಲಭೂತ ಸಮಸ್ಯೆಗಳನ್ನು ಎತ್ತುವ ಗೋಜಿಗೇ ಹೋಗುವುದಿಲ್ಲ, ಆ ಪದ್ಧತಿಯ ಅನರ್ಹತೆಗಳನ್ನಾಗಲೀ ಅಸಂಬದ್ಧತೆಗಳನ್ನಾಗಲೀ ಪ್ರಶ್ನಿಸುವುದಿಲ್ಲ. ಆದರ ನಿಜವಾದ ಬುದ್ಧಿಜೀವಿಗಳು ಹಾಗೆ ಎಂದೂ ಮಾಡುವುದಿಲ್ಲ. ಈಗಂತೂ, ಒಂದು ಕಾಲಕ್ಕೆ ವಾಮ ಪಂಥೀಯರೆಂದೂ, ಪ್ರಗತಿಶೀಲರೆಂದೂ ಹೆಸರಾಂತ ಬುದ್ಧಿಜೀವಿಗಳು ಈಗ ಪರಿಷ್ಕರಣವಾದಿಗಳಾಗಿಯೂ ಸುಧಾರಣಾವಾದಿಗಳಾಗಿಯೂ ತಪ್ಪು ಹೆಜ್ಜೆಯನ್ನು ಇಡುತ್ತಿರುವುದನ್ನು ನೋಡಿದರೆ ಪ್ರತಿಷ್ಠಿತ ವರ್ಗ ಯಾವತ್ತೂ ಅಸಂಖ್ಯಾತ ಬುದ್ಧಿಜೀವಿಗಳನ್ನು ಕೊಂಡುಕೊಂಡು ಒಂದು ಸೈನ್ಯವನ್ನು ನಿರ್ಮಿಸಿಕೊಂಡಿರುತ್ತದೆ ಎಂಬ ವಾಸ್ತವಾಂಶ ನೆನಪಾಗುತ್ತದೆ.

ನಿಜವಾಗಿ ಬುದ್ಧಿಜೀವಿಗಳು ಸೈದ್ಧಾಂತಿಕ ಮಾದರಿಗಳನ್ನು ಸತತವಾಗಿ ರಚಿಸುವ, ಅನ್ವಯಿಸಿ ನೋಡುವ, ಪುನಾರಚಿಸುವ, ಪ್ರಯೋಗ ಮಾಡುವ ಸತತ ಪ್ರಕ್ರಿಯೆಯಲ್ಲಿ ತೊಡಗುತ್ತಾರೆ ಎಂಬುದೇನೋ ಸತ್ಯವೇ. ಈ ದೃಷ್ಟಿಯಿಂದಲೇ ಅವರು, ಸಮೂಹವನ್ನೂ ವ್ಯಕ್ತಿಯನ್ನೂ ಬೇರೆ ಬೇರೆಯಾಗಿ ಗುರುತಿಸಿ ಅವುಗಳೆರಡರ ಅರಿವಿನಿಂದ ರಚನಾತ್ಮಕವಾಗಿ ಸಮಾಜಕ್ಕೆ ಸೂಚನೆ ಕೊಡುತ್ತಾರೆ ಎಂಬ ಮಹತ್ವದ ಮಾತು ನಿಂತಿರುವುದು. ಬುದ್ಧಿಜೀವಿ ಇಡೀ ದೃಷ್ಟಿಯಲ್ಲಿ ತಾನು ಬದುಕಿದ ಸಮಾಜವನ್ನು ಅರ್ಥೈಸಿಕೊಳ್ಳುವುದು ಸಾಧ್ಯವಾಗದೆ ಹೋದರೆ ತನ್ನ ಗುರಿ ಸಾಧಿಸುವಲ್ಲಿ ತಪ್ಪು ಹಾದಿ ತುಳಿಯಬೇಕಾಗುತ್ತದೆ.

ವ್ಯಕ್ತಿಗಳ ಜವಾಬ್ದಾರಿಯನ್ನು ಅರ್ಥೈಸಲು, ಕೆಡಕುಗಳನ್ನು ನಿಯಂತ್ರಿಸಲು ಬುದ್ಧಿಜೀವಿ ಅತ್ಯವಶ್ಯವಾಗಿ ಬೇಕಾಗುತ್ತಾನೆ. ಪೂರ್ವ ಸಮಾಜಗಳನ್ನು ಅವಲೋಕಿಸುವ ವಿಮರ್ಶಿಸುವ ಚಾಣಾಕ್ಷತೆ ಅವನಿಗೆ ಇರಬೇಕಾಗುತ್ತದೆ. ಪರಂಪರೆಯಲ್ಲಿ ಆತ ಸಿಕ್ಕಿಕೊಂಡರೂ ಸಮಾಜದ ಗಣ್ಯರನ್ನೂ ತರುಣರನ್ನೂ ಎಚ್ಚರಿಸುವ ವಾಣಿಯನ್ನು ಬಿತ್ತರಿಸಬೇಕಾಗುತ್ತದೆ.

ನಮ್ಮಲ್ಲಿ ಬಹು ಹಿಂದಿನಿಂದಲೂ ಜ್ಞಾನ ಸಂಪಾದಿಸಿದ ವ್ಯಕ್ತಿಗಳನ್ನು ಬುದ್ಧಿಜೀವಿಗಳು ಎಂದು ಪರಿಗಣಿಸುತ್ತಾ ಬಂದಿರುವುದು ಒಂದು ನಂಬಿಕೆ. ಅಂಥವರು ಸೂಕ್ಷ್ಮಮತಿಗಳೆಂದು ಜನ ತಿಳಿದುಕೊಂಡಿರುವುದು ವಾಡಿಕೆಯಾಗಿ ಬಿಟ್ಟಿದೆ.

ಒಂದು ಅರ್ಥದಲ್ಲಿ ಬುದ್ಧಿಜೀವಿಗಳು ಪಂಡಿತ ವರ್ಗದ ಮಾದರಿಗಳೇ. ಮಾನಸಿಕ ಆಲೋಚನಾ ವ್ಯಾಪಾರದಲ್ಲಿ ಪರಿಣಿತ ಹಂತ ತಲುಪಿದವರು ಅವರಾಗಿರುತ್ತಾರೆ. ಗುರುವಿನ ಯೋಗ್ಯತೆಯನ್ನು ಹೊಂದಿದವರೂ ಗುರುತರವಾದ ಕಾರ್ಯ ನಿರ್ವಹಣೆ ಮಾಡಬಲ್ಲ ಶ್ರದ್ಧಾಸಕ್ತರೂ ಆಗಿರುತ್ತಾರೆ ಎಂಬುದು ಪ್ರತೀತಿ.

ಸಾಮಾನ್ಯವಾಗಿ ನಿತ್ಯಜೀವನದಲ್ಲಿ ಇರುವ ಕೊಳಕು ವ್ಯವಸ್ಥೆಗಳ ವಿರುದ್ಧ ಬಂಡಾಯವೇಳುವ ಪ್ರವೃತ್ತಿ ಅವರಲ್ಲಿರುತ್ತದೆ. ಅಧ್ಯಯನಕ್ಕೆ ಮತ್ತು ಬೋಧನೆಗೆ ವಿಶ್ವವಿದ್ಯಾಲಯಗಳ ಸ್ವಾಯತ್ತತೆಗೆ, ವಿದ್ಯಾರ್ಥಿವೃಂದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕೆಂದು ಹೇಳುವುದಕ್ಕೆ, ಮತ್ತು ಹೊಸ ಪಂಥಗಳ ನಿರ್ಮಾಣಕ್ಕೆ, ನವೀನ ಆಂದೋಲನಕ್ಕೆ ಬುದ್ಧಿಜೀವಿಗಳು ಬೆನ್ನೆಲುಬಾಗಿರುತ್ತಾರೆ ಅಥವಾ ಅಂಥವರ ಕೈವಾಡವೇ ಅಲ್ಲಿ ಹೆಚ್ಚು ಕೆಲಸ ಮಾಡಿರುತ್ತದೆ ಎಂದು ಶಂಕಿಸುವುದು ಸತ್ಯವಾಗಿರುತ್ತದೆ.

ಅವರ ಆಶಯಗಳು ರಾಷ್ಟ್ರೀಯ ಅರ್ಥಗಳಲ್ಲಿ ಸ್ಪಂದಿಸಿದಾಗ ದೇಶಪ್ರೇಮದ ಸೆಳೆತಗಳನ್ನು ಅವರು ಒಳಗೊಳ್ಳುತ್ತಾರೆ. ಬುದ್ಧಿ-

ಜೀವಿಗಳಿಗೆ ಸ್ವಾತಂತ್ರ್ಯವಿಲ್ಲದಿದ್ದರೆ ಅನೈತಿಕ ವಾಗುತ್ತದೆ. ಸಂಸ್ಕೃತಿಯು ಪತನವಾಗುತ್ತದೆ. ಒಂದು ಪದ್ಧತಿಗೆ ಒಳಪಟ್ಟ ಬುದ್ಧಿ ಜೀವಿಗಳು ಸಾರ್ವತ್ರಿಕ ಮೌಲ್ಯ ಪಡೆಯುವುದು ಕಷ್ಟ ವಾಗುತ್ತದೆ. ಅನೇಕ ದುಷ್ಟ ಪ್ರವೃತ್ತಿಗಳನ್ನು ನಿಯಂತ್ರಿಸುವಲ್ಲಿ ಸಮಾಜದಲ್ಲಿ ವಿಶಿಷ್ಟ ಪಾತ್ರ ವನ್ನು ನೆರವೇರಿಸಲೇಬೇಕಾಗಿ ಬರುವುದು ಸಹಜ ಬೇರೆ ಬೇರೆ ವರ್ಗಗಳಿಗೆ ಮಾರ್ಗ ದರ್ಶಕವಾಗುವ ಸವಾಲನ್ನೂ ಎದುರಿಸಬೇಕಾಗಿ ಬರುವುದೂ ಸೂಕ್ತ. ಸಮಾಜದಲ್ಲಿ ಎಲ್ಲಿಯು ತನಕ ಅವರು ಅಗತ್ಯಗಳ ಒತ್ತಡಗಳ ನಾಡಿಯ ಮಿಡಿತವನ್ನು ಗುರುತಿಸಬಲ್ಲವರಾಗಿ ರುತ್ತಾರೋ ಅಲ್ಲಿನ ತನಕ ಸೃಜನಶೀಲತೆ ಅವರ ವಿಶೇಷ ಕಾರ್ಯಗಳಿಗೆ ಪೂರಕವಾಗು ತ್ತದೆ.

ಬುದ್ಧಿಜೀವಿಗಳ ಮಹತ್ತರ ಕಾರ್ಯ ಅಡಗಿರುವುದು ಬೌದ್ಧಿಕ ಹಸಿವನ್ನು ತಣಿಸುವ ಕೃತಿಗಳ ರಚನೆಯಲ್ಲಿ... ಅವು ಹೊಸ ಪರಂಪರೆ ಯನ್ನು ನಿರ್ಮಿಸಬಲ್ಲವುಗಳಾಗಿರುತ್ತವೆ ಅಥವಾ ಉತ್ತುಂಗ ಸಂಸ್ಕೃತಿಯ ಹೊಳಹನ್ನು ತೋರುವ ಸ್ಥಿತಿಯಲ್ಲಿರುತ್ತವೆ. ಯಾವ ಬುದ್ಧಿ-ಜೀವಿಯೂ ತನ್ನ ಕಾಲದ, ಸಮಾಜದ ಜೀವಂತ ಸ್ಪಂದನ ಪಡೆಯದೆ ಇರಲು ಸಾಧ್ಯವಾಗುವು ದಿಲ್ಲ.

ನಿಜವಾದ ಬುದ್ಧಿಜೀವಿಗಳು ಬೆಳೆದು ಬಂದ ಪರಂಪರೆಯ ಅಂಶಗಳನ್ನು ಸಂದರ್ಭಾ-ನುಸಾರ ತಿದ್ದಬೇಕಾಗುತ್ತದೆ. ಅದು ಅವರ ಹೊಣೆಯೂ ಆಗಿರುತ್ತದೆ. ತನ್ನ ಕಾಲಕ್ಕೆ ಹಿಂದಿನದನ್ನು ಅನ್ವಯಿಸಿಕೊಳ್ಳುವ ರೂಪಾಂತರಿಸಿಕೊಳ್ಳುವ ಅಥವಾ ನವೀನ ವಾದುದನ್ನು ತಾನು ಪಡೆದ ಜ್ಞಾನದ ಮುಖಾಂತರ ಕಂಡರಸಿಕೊಳ್ಳುವ ಧೀಮಂತಿಕೆ, ಪ್ರತಿಯೊಬ್ಬ ಬುದ್ಧಿಜೀವಿಗೂ ಬಹು ಮುಖ್ಯ ವಾಗಿ ಇರಬೇಕಾದ ಗುಣವಾಗಿದೆ. ಅದರ ಜೊತೆಗೆ ಜಗತ್ತಿನ ಬೇರೆ ಬೇರೆ ವರ್ತುಲ ಗಳನ್ನೂ ಅವುಗಳ ಹಿಂದಿನ ನಂಬಿಕೆಗಳ ತುಡಿತ ಗಳನ್ನೂ ವಿಶ್ಲೇಷಿಸಿ ಸತ್ಯ ದರ್ಶನ ಪಡೆದು ಕೊಳ್ಳುವುದು ಕರ್ತವ್ಯವಾಗುತ್ತದೆ, ಆದರೆ, ಈಗಿನ ಕೆಲ ಬುದ್ಧಿಜೀವಿಗಳು ಆಳುವ ಪಕ್ಷದ ಬಾಲವಾಗುತ್ತ ಅವರ ಅದಕ್ಷ ನೀತಿಗಳಿಗೂ ಕೌಲೆ ಬಸವಗಳ ಹಾಗೆ ಕತ್ತು ಹಾಕುತ್ತಾ ಇರುವ ಪರಿಸ್ಥಿತಿಯನ್ನು ಗಮನಿಸಿದರೆ ವಾಸ್ತವ ವಾಗಿ ಈ ಭಾರತದಲ್ಲಿ ಬಹುತೇಕ ವ್ಯಕ್ತಿಗಳ ಅಧಿಕಾರಲಾಲಸೆ, ಕೀರ್ತಿಕಾಮನೆ, ಸ್ವಾರ್ಥ ಲಾಲಸೆಯ ವಿಪರ್ಯಾಸದ ಪರಮಾವಧಿ ನಡ ವಳಿಕೆ ಅರ್ಥವಾಗುತ್ತದೆ.

ನ್ಯಾಯವಾಗಿ ಬುದ್ಧಿಜೀವಿ ತನ್ನ ಸಮ-ಕಾಲೀನ ಬದುಕಿನ ರಾಜಕೀಯ ವ್ಯವಸ್ಥೆಯ ರೂವಾರಿಯಾಗಿ ನಿಲ್ಲದೆ ಹೋದರೆ ಅಥವಾ ಕೊನೇ ಪಕ್ಷ ಅವನು ತನ್ನ ಐಬಿರದ ಅಭಿ-ಪ್ರಾಯದಿಂದ ಸಕಾಲದಲ್ಲಿ ಜನತೆಯ ರೋಗ ಗ್ರಸ್ತವಾದ ವಿಷ ಒಲವುಗಳನ್ನು ತಿದ್ದದೆ ಹೋದರೆ ಅಂಥವರನ್ನು ಬುದ್ಧಿಜೀವಿ ಎಂದು ನಾವು ಕರೆಯುವ ಬಗ್ಗೆಯೂ ಸಂಶಯಪಡ ಬೇಕಾಗುತ್ತದೆ.

ಎಷ್ಟೋ ವೇಳೆ ಅಂಥ ಹಲವರು ಸಾರ್ವ-ಜನಿಕ ಅಭಿಪ್ರಾಯದ ಕತ್ತು ತಿರುಚಿ ಅರ್ಥೈ ಸುವ, ಸರಕಾರಕ್ಕೆ ಸಲಹೆ ಸೂಚನೆಗಳ ಮೂಲಕ ತಮ್ಮ 'ಸ್ವಾರ್ಥ'ಗಳನ್ನು ಒಲಿಸಿ ಕೊಳ್ಳುವ ಕೆಲಸ ಮಾಡುತ್ತಾರೆ. ಅನಕ್ಷರ ಸ್ಥರೇ ಹೆಚ್ಚಾಗಿರುವ ಈ ದೇಶದಲ್ಲಿ ಅಂಥದನ್ನು ಜನ ಪತ್ತೆ ಹಚ್ಚುವ, ಮಟ್ಟ ಹಾಕುವ ಗೋಜಿಗೇ ಹೋಗುವುದಿಲ್ಲ. ಅದೂ ಅಲ್ಲದೆ ನಮ್ಮಲ್ಲಿನ ಬಹಳಷ್ಟು ಸಾಮಾನ್ಯ ಜನಕ್ಕೆ ಹೊಟ್ಟೆಯ ಪಾಡೇ ಮುಖ್ಯವಾಗಿರುವುದರಿಂದ ಅವರು ರಾಜಕೀಯವಾಗಿ ಪಾಲ್ಗೊಳ್ಳುವುದಿಲ್ಲ. ಅಷ್ಟೇ ಏಕೆ ಸಾಮಾಜಿಕವಾಗಿ ಕೂಡ ತಟಸ್ಥ ರಾಗಿರುತ್ತಾ ತನ್ಮೂಲಕ ಅನ್ಯಾಯ ನಡೆಸುವ ಪಟ್ಟ ಭದ್ರರಿಗೇ ಪೂರಕವಾಗುವಂತೆ ವರ್ತಿ ಸುತ್ತ ಸುಮ್ಮನಿದ್ದುಬಿಡುತ್ತಾರೆ. ಈ ಎಲ್ಲ ಹಿನ್ನೆಲೆಗಳಲ್ಲಿ ಸಾರ್ವಜನಿಕರಿಗೆ ತಿಳಿವಳಿಕೆ ಯನ್ನು ಕೊಡುವ ಜವಾಬ್ದಾರಿ ಬುದ್ಧಿಜೀವಿಗೆ ಇರಬೇಕಾಗುತ್ತದೆ ಇದಕ್ಕಾಗಿ ವೇದಿಕೆಯನ್ನು ಆತ ಹುಡುಕಿಕೊಳ್ಳಬೇಕಾಗುತ್ತದೆ. ಜಯಾಪ-ಜಯಗಳನ್ನೂ ಲೆಕ್ಕಿಸದೆ ಸಕಾಲದಲ್ಲಿ ಆತ ಹುಚ್ಚು ಪ್ರವಾಹದ ಎದುರು ನಿಲ್ಲುವಂಥ

ಕೆಲಸವನ್ನೂ ಮಾಡಲೇಬೇಕಾಗುತ್ತದೆ. ಯಾವ ದೇಶದ ಬುದ್ಧಿಜೀವಿಗಳೇ ಆಗಲಿ, ತಮ್ಮ ಕಾಲದ ಪ್ರಚಲಿತ ಸಮಸ್ಯೆಗಳ ನಾಡಿಯನ್ನು ಗುರುತಿಸದೆ ಹೋದರೆ ಸಮಾಜದ ಮೂಲಭೂತ ರೋಗವನ್ನು ಪತ್ತೆ ಹಚ್ಚಲಾಗುವುದಿಲ್ಲ. ಸಾಮಾಜಿಕ ಅನುಸರಣೆಗಳ ಹಿಂದಿನ ಎಲ್ಲ ಜಾಲಗಳನ್ನು ಪರೀಕ್ಷಿಸುವ ದಕ್ಷತೆ ಅತಿ ಮುಖ್ಯ. ಅದನ್ನು ರಾಜಕೀಯ ವಿಧಾನಗಳಿಂದ ಪರಿಹರಿಸಿ ನೈತಿಕ ಪ್ರಾಬಲ್ಯವನ್ನು ರಕ್ಷಿಸದೆ ಹೋದರೆ ಪ್ರಯೋಜನವಾಗುವುದಿಲ್ಲ.

ಕೆಲವು ಬುದ್ಧಿಜೀವಿಗಳಂತೂ ತಾವಾಯಿತು, ತಮ್ಮ ಪಾಡಾಯಿತು, ತಮ್ಮ ಬೆಚ್ಚನೆಯ ಮಾಡಗಳಿಂದ ಚಿಂತನೆ ಕೋಟೆಗಳಿಂದ ಹೊರ ಬರುವುದಿಲ್ಲ. ನಿಜಮಾನವನ ನೇರ ಸಂಪರ್ಕ ಪಡೆಯದ ಹೋದರೆ, ಅವನ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳದೆ ಹೋದರೆ ಸಾಮಾಜಿಕ ಆಂದೋಲನವನ್ನಾಗಲೀ ಅಥವಾ ಇನ್ನಿತರ ಯಾವುದೇ ಸಂಘಟನೆಯನ್ನಾಗಲೀ ಕೈಕೊಂಡು ಜನರ ಮೇಲೆ ಪ್ರಭಾವ ಬೀರಲಾಗುವುದಿಲ್ಲ.

ಕೊನೆಗೂ ಒಬ್ಬ ಬುದ್ಧಿಜೀವಿ ಯಶಸ್ವಿಯಾಗಬೇಕಾದರೆ ಅಂದಂದಿನ ಸಮಾಜದಲ್ಲಿನ ಬೆಂಕಿಯಂತೆ ಹತ್ತಿ ಉರಿಯುತ್ತಿರುವ ಜೀವಂತ ಸಮಸ್ಯೆಗಳ ಅಂತರ್ಗರ್ಭವನ್ನು ಬಗೆದು ಅದರಲ್ಲಿ, ಸಂಪೂರ್ಣ ಒಂದಾಗಿ ಚಿಂತಿಸಿ ಕೊನೆಗೆ ಸರಿಯಾದ ಗುರಿಯನ್ನವನು ಆರಿಸಿಕೊಂಡು ಸಾಮಾನ್ಯ ಜನತೆಯನ್ನು ಅತ್ತ ಮುನ್ನಡೆಸುವಲ್ಲಿ ನಿರಂತರವಾಗಿ ಶ್ರಮಿಸಬೇಕಾಗುತ್ತದೆ.

ಯಾವತ್ತೂ ರಾಜಕೀಯರಂಗ ಬುದ್ಧಿಜೀವಿಗಳಿಂದ ಕೂಡಿದ ಉತ್ತಮ ಸಾರಭೂತ ವ್ಯಕ್ತಿತ್ವಗಳನ್ನೇ ನಿರೀಕ್ಷಿಸುತ್ತದೆ. ಆದರೆ ಆಳುವ ವರ್ಗ ಬುದ್ಧಿಜೀವಿಗಳ ವರ್ಗದಿಂದ ಬಂದಿರದೆ ಇತರ ಕಾರಣಗಳಿಂದ ಮೇಲೆ ಬಂದುದಾದರೆ ಎಂಥ ಬುದ್ಧಿಜೀವಿಗೂ ಅಂಥ ಶೋಷಕ ಆಡಳಿತದ ಯಂತ್ರದಲ್ಲಿ ತನ್ನ ಅಸ್ತಿತ್ವವನ್ನೇ ನಾಶ ಮಾಡಿಕೊಂಡು ಬಿಡುವ ಸಂಭವವುಂಟು. ನನ್ನ ಅನಿಸಿಕೆಯಲ್ಲಿ ಪ್ರತಿ ಬುದ್ಧಿಜೀವಿಯೂ ಮುಖ್ಯವಾಗಿ ಸಮಾಜ ವಿಜ್ಞಾನಿಯಾಗಿರಲೇಬೇಕಾಗುತ್ತದೆ. ಅವನು ಯಾವುದೇ ಕ್ಷೇತ್ರದಲ್ಲಿ ದುಡಿಯುತ್ತಿರಲಿ, ಸಮಾಜದ ಜೀವಂತಿಕೆಯ ಬಗ್ಗೆ ಅವನಿಗೆ ಕಾಳಜಿ ಇರಬೇಕಾಗುತ್ತದೆ. ಅವನು ತನ್ನವೇ ಆದ ಮಿತಿಗಳಲ್ಲಿ ಕೂಡ ಸಕ್ರಿಯವಾಗಿ ಸಮಾಜವನ್ನು ಒಳಿತಿನತ್ತ ಸಾಗಿಸುತ್ತ ಇರಬೇಕು, ಆಡಳಿತ ವರ್ಗದ ದೋಷಗಳನ್ನು ಖಂಡಿಸುವಂತಿರಬೇಕು, ಮೂಢಜನರ ಪ್ರಬಲ ಕುರುಡು ನಂಬಿಕೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಅವನ್ನು ಸರಿಯಾಗಿ ಅರ್ಥೈಸಿ ಅವರನ್ನು ವಿಚಾರದ ಬೆಳಕಿಗೆ ತರುವ ಶ್ರಮ ವಹಿಸಬೇಕು.

ಅಸಮಾನತೆಗಳನ್ನು ಕಡಿಮೆ ಮಾಡುವಲ್ಲಿ, ಹೊಸ ವ್ಯವಸ್ಥೆಗಳನ್ನು ಯೋಜಿಸುವಲ್ಲಿ ಭ್ರಷ್ಟ ರಾಷ್ಟ್ರವನ್ನು ನಿಯಂತ್ರಿಸುವಲ್ಲಿ, ಜನತೆಯಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವಲ್ಲಿ, ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವಲ್ಲಿ ಭಾರತೀಯ ಬುದ್ಧಿಜೀವಿಗಳು ಇಂದು ಮುಂದಾಗಲೇಬೇಕಾದಂಥ—ಇಲ್ಲದೆ ಹೋದರೆ ಈ ನಾಡಿಗೆ ಬೇರೆ ಭವಿಷ್ಯವೇ ಇಲ್ಲದಂಥ—ಕೆಟ್ಟ ವಾತಾವರಣ ನಿರ್ಮಾಣವಾಗಿದೆ.

ಭಾರತವನ್ನಷ್ಟೇ ವಿಷಯಕ್ಕೆ ಸೀಮಿತಗೊಳಿಸಿಕೊಂಡು ಹೇಳುವುದಾದರೆ ಇಲ್ಲಿನ ವರ್ಗ ತಾರತಮ್ಯಗಳ ಪೈಶಾಚಿಕ ನಗ್ನತೆಯನ್ನು ಅದರ ಭೀಕರ ಪರಿಣಾಮಗಳನ್ನು ಗುರುತಿಸಿ ಮೂಲಭೂತ ಸಾಮಾಜಿಕ ಬದಲಾವಣೆಗೇ ಕೈ ಹಾಕಬೇಕಾಗುತ್ತದೆ. ಈ ಹಂತದಲ್ಲೇ ಅದು ಆರ್ಥಿಕ ರಂಗದ ತಳಪಾಯದ ಪುನರ್ರಚನೆಯೂ ಆಗಿದೆಯೆಂಬುದನ್ನು ತಿಳಿಯಬೇಕಾಗುತ್ತದೆ. ಇನ್ನೂ ವರ್ಣಭೇದ 'ಜಾತಿ'ಯ ಹೆಸರಲ್ಲಿ ನಮ್ಮ ರಾಷ್ಟ್ರದಲ್ಲಿ ತಾಂಡವವಾಡುತ್ತಿದೆ. ತರುಣ ಜನಾಂಗಕ್ಕೆ ಇದರ ಪರಿಣಾಮವನ್ನು ಸರಿಯಾಗಿ ತಿಳಿಸದೆ ಹೋದರೆ ಭಾರತೀಯ ಬುದ್ಧಿಜೀವಿಗಳು ನಿದ್ದೆಹೋದ ಹಾಗಾಗುತ್ತದೆ. ಇಡೀ ವ್ಯವಸ್ಥೆಯನ್ನೇ ಹೊಸದಾಗಿ ಕಟ್ಟುವ ಕಡೆಗೆ ನಮ್ಮ ಬುದ್ಧಿಜೀವಿಗಳು ಕಾರ್ಯೋನ್ಮುಖವಾಗಬೇಕಾದ ಹೊಣೆಗಾರಿಕೆ ಬೆಟ್ಟದಷ್ಟಿದೆ. ಬುದ್ಧಿಜೀವಿ ಯಾವುದೇ ರಾಷ್ಟ್ರದಲ್ಲಿ ಮುಖ್ಯವಾಗಿ ಸಮಾಜದ ಒರೆಗಲ್ಲಾಗಿ ನಿಲ್ಲಬೇಕಾಗುತ್ತದೆ. ಇಡೀ ಸಮಾಜದ ರಾಜಕೀಯ ನಕ್ಷೆ

ಯನ್ನು ಸಮರ್ಥವಾಗಿ ರೂಪಿಸುವ ಶಕ್ತಿಯೂ ಅವನಿಗಿರುತ್ತದೆ. ಆದರೆ ಇಂದು ಭಾರತದ ಬಹು ದೊಡ್ಡ ವಿಪರ್ಯಾಸವೆಂದರೆ ನಮ್ಮ ಬುದ್ಧಿಜೀವಿಗಳು ಸಕ್ರಿಯ ರಾಜಕೀಯ ಪ್ರವೇಶವು ವ್ಯಕ್ತಿಯ ಮೂರ್ಖತನದ ಪರಮಾವಧಿ ಎಂದೋ ಅಥವಾ ತಮ್ಮ ಅಧ್ಯಯನ ಸಂಶೋಧನ ಕ್ಷೇತ್ರಕ್ಕೆ ಹಾಗೆ ಮಾಡಿದರೆ ಪೆಟ್ಟು ಬೀಳುವುದೆಂದೋ ಅತ್ತ ಕಡೆ ಕಿವಿ ಹಾಕುವುದನ್ನೂ ನಿರಾಕರಿಸಿದ್ದಾರೆ. ಆದ್ದರಿಂದ ನಮ್ಮಲ್ಲಿ ಎಲ್ಲ ವಲಯಗಳಲ್ಲೂ ಪಂಡಿತರು ವಿಪರೀತ ಆದರೆ ಅಂಥ ಪಂಡಿತರು ತಮ್ಮ ವೃತ್ತಿ ವೈಷಮ್ಯಗಳಲ್ಲಿ ಇಲ್ಲಸಲ್ಲದ ಕ್ಷುಲ್ಲಕಗಳಲ್ಲಿ ಮುಳುಗಿ ದೇಶಕ್ಕೆ ನಾಲಾಯಕ್ಕಾಗಿದ್ದಾರೆ.

ಇತಿಹಾಸವನ್ನು ಗಮನಿಸಿದರೆ- ಎಲ್ಲೋ ಕೆಲವು ಸಾರಿ ಮಾತ್ರ ಬುದ್ಧಿಜೀವಿಗಳು ನಿಜವಾಗಿ ಇಡೀ ಜೀವನವನ್ನು ಮುಡಿಪಾಗಿಟ್ಟು ಬಹಿರಂಗ ಕಾರ್ಯರಂಗಕ್ಕೆ ಧುಮುಕಿರುವುದನ್ನು ಕಾಣುತ್ತೇವೆ. ಅಂಥ ಸಂದರ್ಭಗಳಲ್ಲಿ ಅವರ ಕ್ರಾಂತಿಕಾರಿ ಭಾವನೆಗಳು ಕ್ಷಣಿಕ ಬದಲಾವಣೆ ಮಾಡಿವೆ- ಅವರ ಹೊಳಹುಗಳಲ್ಲಿ ಕ್ಷಾರಾಂಶ ಇದ್ದ ಕಾರಣದಿಂದ. ಅಂಥ ಕ್ಷಾರಾಂಶ ಯಾವತ್ತೂ ಸಮಾಜದ ಸರ್ವಾಂಗ ರಚನೆಗೆ ಅಗತ್ಯ ಎಂಬುದನ್ನು ಯಾರೂ ಮರೆಯುವ ಹಾಗಿಲ್ಲ.

ಕೊನೆಯ ಪಕ್ಷ ಬುದ್ಧಿಜೀವಿ ಸಮಾಜಕ್ಕೆ ಒಂದು ಮಾದರಿಯನ್ನಾದರೂ ರೂಪಿಸುವ ಗುರುತರವಾದ ಹೊಣೆ ಹೊತ್ತಿರುತ್ತಾನೆ: ಅವನು ಇತರ ತನ್ನ ಜನರೊಡನೆ ಏಕಕಾಲಕ್ಕೆ ಹಳೆಯದರ ಉತ್ತಮಿಕೆಯನ್ನು ಹೀರಿ ನವೀಕರಣ ಮಾಡುವ ಹೊಸ ಯುಗದ, ಹೊಸ ಪರಿಸರದ ವಾಸ್ತವ ಸತ್ಯಗಳ ಅರ್ಥ ಮಾಡಿಕೊಂಡು ಹೊಸ ವ್ಯವಸ್ಥೆಯ ನಿರ್ಮಾಣ ಮಾಡುವ ಕಡೆಗೆ ತೊಡಗದೇ ಹೋದರೆ ಯಾವುದೇ ದೇಶ ಆರೋಗ್ಯವಾಗಿರಲು ಶಕ್ಯವಾಗುವುದಿಲ್ಲ. ಆದುದರಿಂದ ಬುದ್ಧಿಜೀವಿಗಳು ತಮ್ಮ 'ದಂತಗೋಪುರ'ಗಳಿಂದ ಹೊರಬಂದು ಜನತೆಯೊಂದಿಗೆ ಕ್ರಿಯಾತ್ಮಕವಾಗಿ ಭಾಗವಹಿಸದೆ ಹೋದರೆ ಸಮಾಜ ಹಸನಾಗಲು ಸಾಧ್ಯವಿಲ್ಲ. ✡

"ಪ್ರಜಾಪ್ರಭುತ್ವವು ರಶಿಯಕ್ಕೆ ನಿಜವಾದ ಸ್ವಾತಂತ್ರ್ಯವನ್ನು ತಂದುಕೊಡಬಲ್ಲದೆ? ಅನೇಕ ರಾಜಕೀಯ ಪಕ್ಷಗಳ ಸಂಸದೀಯ ಪದ್ಧತಿ ರಶಿಯದಲ್ಲಿ ಅವ್ಯವಹಾರಿಕವೆನಿಸುವುದು. ಮಾನವ ಜನಾಂಗದ ಉತ್ಕರ್ಷಕ್ಕೆ ಹಾಗೂ ಮಹತ್ಸಾಧನೆಗಳಿಗೆ ಪ್ರಜಾತಂತ್ರವು ಎಂದಿಗೂ ಅಗತ್ಯ ಎಂದೆನಿಸಿಲ್ಲ. ಸರ್ವಾಧಿಕಾರಿ ಆಡಳಿತ ತನ್ನಷ್ಟಕ್ಕೆ ಗಂಡಾಂತರಕಾರಿ ಏನೂ ಅಲ್ಲ- ಆದರೆ ಅಂಥ ಆಡಳಿತಕ್ಕೆ ವಿವೇಕದ, ದೇವರ ಭೀತಿಯೂ ಇಲ್ಲದಂತಾದರೆ ಮಾತ್ರ ಉಪದ್ರವಕಾರಿಯಾಗುತ್ತದೆ. ರಶಿಯ ಒಂದು ರೀತಿಯ ಸರ್ವಾಧಿಕಾರತ್ವದಿಂದ ಇನ್ನೊಂದು ರೀತಿಯ ಸರ್ವಾಧಿಕಾರತ್ವಕ್ಕೆ ಪರಿವರ್ತನಗೊಳ್ಳಬಹುದು. ರಶಿಯಕ್ಕೆ ಅದು ಸ್ವಾಭಾವಿಕ ಮತ್ತು ಅಭಿವೃದ್ಧಿಗ ನಿರಾಯಾಸದ ಮಾರ್ಗ. ರಶಿಯದ ಇಂದಿನ ಆಡಳಿತ ಪದ್ಧತಿ ಭೀಕರವಾಗಿರುವುದು ಅದು ಪ್ರಜಾತಾಂತ್ರಿಕವಾಗಿಲ್ಲ ಎಂದಲ್ಲ, ಆದರೆ ಅದು ಬಲಾತ್ಕಾರವನ್ನು ಆಧರಿಸಿರುವುದರಿಂದ ಭೀಕರವಾಗಿದೆ. ಅಂಥಲ್ಲಿಯೂ ಪ್ರಜೆ ಆತ್ಮಸ್ವಾತಂತ್ರ್ಯ ಕಾಪಾಡಿಕೊಂಡು ನೆಮ್ಮದಿಯಿಂದ ಇರಬಹುದು. ಆದರೆ ರಶಿಯದ ಆಡಳಿತವು ನಮ್ಮ ಆತ್ಮಬಲಿಯನ್ನು ಕೇಳುತ್ತದೆ. ನಮಗೆ ರಾಜಕೀಯ ವಿಮೋಚನೆ ಬೇಕಿಲ್ಲ, ಆದರೆ ಬಲಾತ್ಕಾರದಿಂದ ನಮ್ಮ ಮೇಲೆ ಹೇರಲ್ಪಟ್ಟ ಸುಳ್ಳಿನಲ್ಲಿ ನಾವು ಪಾಲುಗಾರರಾಗದಿರಲು ನಮಗೆ ಸ್ವಾತಂತ್ರ್ಯ ದೊರೆತರೆ ಸಾಕು."


—ಸೊಲ್ಜೆನಿತ್ಸಿನ್

ನಾನೇಕೆ ಹೀಗಾದೆ ?

ಮನೆಗೆ ಒಬ್ಬನೇ ಮಗ
ಮದುವೆಯಾಗಿ ವಂಶವನ್ನು ಬೆಳೆಸು
ಎಂದರು,
ನಮ್ಮ ವಂಶ ಬೆಳೆಯದಿದ್ದರೆ
ದೇಶಕ್ಕೇನೂ ಕೇಡಿಲ್ಲ ಎಂದೆ.
ಹೇಳಲು-ಕೇಳಲು ತಂದೆಯಂತೂ ಇಲ್ಲ
ತಾಯಿಯ ಮಾತನ್ನೂ ಮೀರುತ್ತೀಯಾ
ಎಂದರು,
ಯಾರನ್ನೂ ನಂಬಿ ಯಾರೂ ಹುಟ್ಟಿಲ್ಲ ಎಂದೆ.
ನಿಮ್ಮಪ್ಪನಿಗೆ ಹದಿನೆಂಟಕ್ಕೆ ಆಗಿತ್ತು
ನಿನಗೀಗಾಗಲೆ ಇಪ್ಪತ್ತೇಳು ಎಂದರು,
ನಮ್ಮಪ್ಪನ ಅಪ್ಪನಿಗೆ ಆರಕ್ಕೇ ಆಗಿತ್ತಂತೆ,
ಕನ್ಯೆ ಆಗಿನ್ನೂ ತೊಟ್ಟಿಲ ಕೂಸಂತೆ ಎಂದೆ.
ಮದುವೆಯಿಲ್ಲದೆ ಮೋಕ್ಷವಿಲ್ಲ ಎಂದರು,
ಆದರಲ್ಲೆಲ್ಲಾ ನನಗೆ ನಂಬಿಕೆಯಿಲ್ಲ
ಎಂದೆ.
ನೀ ಸತ್ತ ಮೇಲೆ ಶ್ರಾದ್ಧ ಮಾಡುವರಾರು
ಎಂದರು,
ಮಾಡದಿದ್ದರೆ— ಏನಾಗುತ್ತೆ ಎಂದೆ.
ಪತ್ನಿಯಿಲ್ಲದ ಬದುಕು ಬದುಕೇ ಅಲ್ಲ
ಎಂದರು,
ನಾನೀಗ ಬದುಕಿಲ್ಲವೇ ಎಂದೆ.
ಉಪಚರಿಸಲು ಮಡದಿಯಿದ್ದರೆ
ಒಳ್ಳೆಯದಲ್ಲವೇ ಎಂದರು,
ಮಡದಿಯೇ ಆಗಬೇಕೆಂದಿಲ್ಲ ಎಂದೆ.
ಹೋಟಲ್ ಊಟ ಹಾಳಲ್ಲವೇ ಎಂದರು,
ಹೊಟ್ಟೆಗೆ ಬೇಕಾದರೆ ಹೋಗಬೇಕು
ಎಂದೆ.
ಸ್ವತಃ ಮಾಡಿಕೊಳ್ಳಲು ಬೇಸರ ಬಾರದೇ
ಎಂದರು,
ಬೇಸರ-ಗೀಸರ ಎಲ್ಲ ನನ್ನಿಂದ
ಬಹುದೂರ ಎಂದೆ.
ಎಷ್ಟು ದಿನ ಹೀಗೆ ನಡೆದೀತು ಎಂದರು,
ನಡೆದಷ್ಟು ದಿನ ನಡೆಯಲಿ,
ನಿಮಗೇಕೌ ಚಿಂತೆ ಎಂದೆ
ಸಂನ್ಯಾಸಿಗಳೇ ಮುಗ್ಗರಿಸುತ್ತಿದ್ದಾರೆ ...
ನೀನೆಷ್ಟರವ ಎಂದರು,
ನಾ ಸನ್ಯಾಸಿಯಲ್ಲ-ಸಂಸಾರಿಯಾಗಲಾರೆ
ಎಂದೆ
ಬ್ರಹ್ಮಚಾರಿಯಾಗಿಯೇ ಇರುತ್ತೀಯಾ
ಎಂದರು
ಅವಿವಾಹಿತನಾಗಿಯೇ ಇರುತ್ತೇನೆ ಎಂದೆ
ನಿನಗೆಲ್ಲೋ ಹುಚ್ಚು ಎಂದರು,
ಇದ್ದರೂ ಇರಬಹುದು....
ಅದಕ್ಕೇ ನಿಮ್ಮ ಮಗಳನ್ನು ನನಗೆ
ಕೊಡುವುದು
ಬೇಡ ಅಂದೆ.
ನಾ ಹೋಗಿ ಬರುತ್ತೇನೆ ಎಂದರು,
ಒಳ್ಳೆಯದು ಎಂದೆ.
ಮುಂದೆ.—
ತಿರುಗಿ ನೋಡದೆ ನಡೆದರು ಅವರು,
ಶೂನ್ಯವ ನೋಡುತ್ತಾ ಕುಳಿತೆ ನಾನು.
ಹಾಗೇ.... ನೋಡುತ್ತಾ.... ನೋಡುತ್ತಾ....
ನೋಡುತ್ತಾ
ಮಧುರ ನೆನಪೊಂದು ಮರುಕಳಿಸಿ.
ಮನದ ತಳಮಳವು ಇಮ್ಮಡಿಸಿ,
ಹೃದಯ ಕರಗಿ ಹರಿಯಿತು
ಕಂಬನಿಯಾಗಿ ತಟ-ತಟಸಿ.
ಹೇಳಬಲ್ಲಿರಾ
ನಾನೇಕೆ ಹೀಗಾದೆ?
ತಿಳಿಯದಿದ್ದರೆ-ತಿಳಿಸುವಳು
ಆ ನನ್ನ ರಾಧೆ.

— ವಿದೂಷಕ

2 ಫಾಸ್ಫೋಮಿನ್ ಟಾನಿಕ್...




ಫಾಸ್ಫೋಮಿನ್ ಅಯರ್ನ್

ಸ್ತ್ರೀಯರಿಗಾಗಿ
ಅಯರ್ನ್ ಟಾನಿಕ್

ಫಾಸ್ಫೋಮಿನ್ ವಿಟಮಿನ್

ಕುಟುಂಬದ ಎಲ್ಲರಿಗಾಗಿ
ವಿಟಮಿನ್ ಟಾನಿಕ್



2 **ಫಾಸ್ಫೋಮಿನ್** ಟಾನಿಕ್‌ಗಳು ಕುಟುಂಬದ ಎಲ್ಲರಿಗೂ ಆರೋಗ್ಯಕರ

ಫಾಸ್ಫೋಮಿನ್ ಟಾನಿಕ್‌ಗಳು ಹಸಿವನ್ನು ಉದ್ದೀಪನಗೊಳಿಸುತ್ತವೆ,
ದೇಹದಾರ್ಢ್ಯವನ್ನು ಬಲಪಡಿಸುತ್ತವೆ ಮತ್ತು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ.

®SQUIBB® SARABHAI CHEMICALS LTD.

ಭತ್ತದ ಕೃಷಿಯಲ್ಲಿ ನೂತನ ವೈಜ್ಞಾನಿಕ ವಿಧಾನಗಳ ಅನುಸರಣೆ ಅನಿವಾರ್ಯ

ಡಾ. ಟಿ. ಶ್ರೀನಿವಾಸ

ನೀವುಳಿಸುವ ಒಂದೊಂದು ಕಾಳೂ ದೇಶಕ್ಕೆ ಬೇಕು

ವೈಜ್ಞಾನಿಕ ವಿಧಾನಗಳಿಂದ ಅಧಿಕ ಬೆಳೆ ತೆಗೆಯುವುದು ಆಹಾರದ ಅಭಾವವನ್ನು ಪರಿಹರಿಸುವ ಪ್ರಯತ್ನಗಳಲ್ಲಿ ಮೊದಲನೆಯದಾಗಿದೆ. ಕೈಗೆ ಬಂದ ಬೆಳೆ ಹಾಳಾಗದಂತೆ ಮತ್ತು ಕೆಡದಂತೆ ರಕ್ಷಿಸುವ ಹಾಗೂ ಪರಿಷ್ಕರಿಸುವ ಕ್ರಮಗಳು ಆಹಾರದ ಕೊರತೆಯನ್ನು ಪೂರೈಸುವ ಇನ್ನು ಕೆಲವು ಅತಿ ಮುಖ್ಯವಾದ ಸಾಧನಗಳಾಗಿವೆ. ನಮ್ಮ ದೇಶದಲ್ಲಿ ಆಹಾರ ಪದಾರ್ಥಗಳು ಉಪಯೋಗಕ್ಕೆ ಬರುವ ಮೊದಲೇ ಅಧಿಕ ಪ್ರಮಾಣದಲ್ಲಿ ನಷ್ಟ ಹೊಂದುವ ವಿಷಯ ಹಲವಾರು ಅಂಕಿ ಅಂಶಗಳಿಂದ ತಿಳಿದುಬಂದಿದೆ. ಪ್ರಸ್ತುತ ಲೇಖನದಲ್ಲಿ ಭತ್ತದ ಬೆಳೆಯನ್ನು ಸರಿಯಾದ ಕಾಲದಲ್ಲಿ ಕೊಯ್ಲು ಮಾಡುವ ಮತ್ತು ಕಾಳನ್ನು ಸರಿಯಾದ ಕ್ರಮದಲ್ಲಿ ಒಣಗಿಸುವುದರ ಮಹತ್ವವನ್ನು ಹಾಗೂ ಅವುಗಳ ವೈಜ್ಞಾನಿಕ ವಿಧಾನಗಳನ್ನು ವಿವರಿಸಲಾಗಿದೆ.

ತೆನೆಯಲ್ಲಿ ಕಾಳುಗಳೆಲ್ಲವೂ ಹಣ್ಣಾದ ನಂತರ ಕೊಯ್ಲು ಮಾಡುವುದು ಸಾಮಾನ್ಯವಾಗಿ ರೈತರು ಅನುಸರಿಸುವ ಪದ್ಧತಿ. ಹೀಗೆ ಮಾಡುವುದರಿಂದ ಭತ್ತದ ಇಳುವರಿಯು ಹೆಚ್ಚಾಗುವುದಲ್ಲದೆ ಹುಲ್ಲನ್ನೂ ಕಾಳನ್ನೂ ಒಣಗಿಸುವ ಕೆಲಸ ಸುಲಭವಾಗುವುದೆಂದು ಅವರ ನಂಬಿಕೆ. ಅನೇಕ ಕಡೆಗಳಲ್ಲಿ ಭತ್ತವನ್ನು ಕೊಯ್ದು ೨-೩ ದಿನ ಗದ್ದೆಯಲ್ಲಿ ಒಣಗಿಸಿ ನಂತರ ಕಣಕ್ಕೆ ತಂದು ಒಕ್ಕಣೆ ಮಾಡುತ್ತಾರೆ. ಈ ಪದ್ಧತಿಗಳಲ್ಲಿ ಕೆಲವು ಉತ್ತಮಾಂಶಗಳಿದ್ದರೂ, ವೈಜ್ಞಾನಿಕ ವಿಧಾನಗಳಿಗೆ ಹೋಲಿಸಿದಾಗ ಇವು ಹಲವಾರು ನ್ಯೂನತೆಗಳಿಂದ ಕೂಡಿರುವುದು ತಿಳಿದುಬಂದಿದೆ. ಭತ್ತದ ತೆನೆಗಳಲ್ಲಿ ಎಲ್ಲಾ ಕಾಳುಗಳೂ ಒಟ್ಟಿಗೆ ಹಣ್ಣಿಗೆ ಬರುವುದಿಲ್ಲ. ಕಾಳುಗಳು ತೆನೆಯ ಮೇಲ್ಭಾಗದಿಂದ ಕೆಳಕ್ಕೆ ಕ್ರಮವಾಗಿ ಹಣ್ಣಾಗುತ್ತಾ ಬರುತ್ತವೆ. ಒಂದು ತೆನೆಯಲ್ಲಿ ಈ ಕ್ರಿಯೆಯು ಪೂರ್ತಿಗೊಳ್ಳಲು ಸುಮಾರು ೮-೧೦ ದಿನಗಳು ಬೇಕಾಗುತ್ತವೆ. ಇದೇ ರೀತಿ ಒಂದು ಗಿಡದಲ್ಲಿ ಮೊದಲಿನ ಮತ್ತು ಕೊನೆಯ ಹಿಳ್ಳುಗಳಲ್ಲಿ (tillers) ಕಾಳು ಹಣ್ಣಾಗಲು ೮-೧೦ ದಿನಗಳ ಅಂತರವಿರುತ್ತದೆ. ಒಂದು ಗದ್ದೆಯಲ್ಲಿ ಕಾಳು ಹಣ್ಣಾಗಲು ಪ್ರಾರಂಭವಾದ ನಂತರ ಪೂರ್ತಿಯಾಗಿ ಅವು ಮಾಗಿ ಕಟಾವಿಗೆ ಬರಲು ಸುಮಾರು ೧೫-೨೦ ದಿನಗಳು ಬೇಕಾಗುತ್ತವೆ. ಈ ದಿನಗಳಲ್ಲಿ ಬೆಳೆಯು ಪ್ರಾಣಿ, ಹುಳ, ಮಳೆ ಮುಂತಾದ ಕಾರಣಗಳಿಂದಲೂ ಕಾಳುಗಳ ಉದುರುವಿಕೆಯಿಂದಲೂ ಬಹಳ ನಷ್ಟ ಹೊಂದುತ್ತದೆ. ಹಗಲು ಬಿಸಿಲಿನಿಂದ ಕಾದು ರಾತ್ರಿ ಮಂಜಿನಿಂದ ಒದ್ದೆಯಾಗಿ ಹಣ್ಣಾದ ಕಾಳುಗಳು ಒಡೆಯುತ್ತವೆ. ಭತ್ತವನ್ನು

ಕೊಯ್ದು ಹೊಲದಲ್ಲಿ ಒಣಗಲು ಹಾಕಿದಾಗ ಕಾಳುಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಿರುಕು ಉಂಟಾಗುತ್ತದೆ. ಈ ಒಡೆದ ಕಾಳುಗಳು ಗಿರಣಿಗೆ ಹಾಕಿದಾಗ ಮಿಲ್ ಮಾಡುವಾಗ ನುಚ್ಚಾಗುವುದಲ್ಲದೇ ಅಕ್ಕಿಯ ಇಳುವರಿಯನ್ನೂ ಸಹ ಕಡಿಮೆ ಮಾಡುತ್ತವೆ. ಈ ಕಾರಣಗಳಿಂದ ಭತ್ತವನ್ನು ಅತಿಯಾಗಿ ಹಣ್ಣಾಗಲು ಬಿಡುವುದು ಮತ್ತು ಕೊಯ್ದು ಹೊಲದಲ್ಲಿ ಒಣಗಿಸುವುದು ಹಾನಿಕರ. ಹೀಗೆಂದು ಸರಿಯಾಗಿ ಮಾಗುವುದಕ್ಕೆ ಮೊದಲೇ ಕಟಾವು ಮಾಡುವುದರಿಂದ ಭತ್ತದ ಇಳುವರಿಯು ಕಡಿಮೆಯಾಗುವುದಲ್ಲದೆ ಅರ್ಧ ಮಾಗಿದ ಹಸಿರು ಕಾಳುಗಳು ಮಿಲ್ ಮಾಡುವಾಗ ಒಡೆದು ಚೂರಾಗಿ ಅಕ್ಕಿಯ ಇಳುವರಿಯನ್ನೂ ಕಡಿಮೆ ಮಾಡುತ್ತವೆ. ಆದ್ದರಿಂದ ಭತ್ತವನ್ನು ಯಾವಾಗ ಕೊಯ್ಲು ಮಾಡಿದರೆ ಹೆಚ್ಚಿನ ಲಾಭ ಬರುವುದೆಂಬುದನ್ನು ತೀರ್ಮಾನಿಸುವುದು ಅತಿ ಮುಖ್ಯವಾದ ವಿಷಯವಾಗಿದೆ.

ಈ ಕಾಲವನ್ನು ತೀರ್ಮಾನಿಸುವ ಕೆಲಸವು ನೋಡಲು ಸರಳವಾಗಿ ಕಂಡರೂ ವಿಮರ್ಶಿಸಿ ನೋಡಿದಾಗ ಅಷ್ಟು ಸುಲಭವಾಗಿಲ್ಲವೆಂಬುದು ತಿಳಿದುಬರುವುದು. ಇದಕ್ಕೆ ಕಾರಣವೇನೆಂದರೆ ಜಾತಿ, ಭೂಗುಣ ಹಾಗೂ ಹವಾಮಾನಗಳನ್ನು ಅನುಸರಿಸಿ ಭತ್ತದ ಬೆಳವಣಿಗೆಯ ಕಾಲಾವಧಿಯಲ್ಲಿ ವ್ಯತ್ಯಾಸವಾಗುವುದರಿಂದ ಬೀಜ ಬಿತ್ತಿದ ನಂತರ ಇಷ್ಟು ದಿನಗಳಲ್ಲಿ ಬೆಳೆಯನ್ನು ಕೊಯ್ಲು ಮಾಡಬಹುದೆಂಬುದನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಕೆಲವು ತಳಿಗಳಲ್ಲಿ ಕಾಳುಗಳು ಹಣ್ಣಿಗೆ ಬಂದರೂ ಗಿಡದಲ್ಲಿ ದಂಟು ಮತ್ತು ಎಲೆಗಳು ಇನ್ನೂ ಹಸಿರಾಗಿಯೇ ಇರುತ್ತವೆ. ಗಿಡಗಳು ಪೂರ್ತಿ ಒಣಗುವವರೆಗೆ ಕಾದು ನಂತರ ಕಟಾವು ಮಾಡಿದಲ್ಲಿ ಹಣ್ಣಾದ ಭತ್ತದಲ್ಲಿ ಬಿರುಕುಂಟಾಗಿ ಮತ್ತು ಕಾಳು ಉದುರಿ ಬಹಳ ನಷ್ಟ ಸಂಭವಿಸುವುದು. ಕೆಲವು ವೇಳೆ ಗದ್ದೆಯಲ್ಲಿ ನಿಂತ ನೀರು ಮತ್ತು ಮಳೆಯ ವಾತಾವರಣದಿಂದ, ಕಾಳು ಹಣ್ಣಾಗಿದ್ದರೂ ಅವುಗಳಲ್ಲಿ ತೇವಾಂಶವು ಹೆಚ್ಚಾಗಿ ಕಂಡುಬರುವುದು. ಆದ್ದರಿಂದ ಕಾಳುಗಳ ತೇವಾಂಶವನ್ನು ಆಧಾರವಾಗಿಟ್ಟುಕೊಂಡು ಕಟಾವಿನ ಸಮಯವನ್ನು ನಿರ್ಧರಿಸುವುದೂ ಸಹ ಎಲ್ಲಾ ಸಂದರ್ಭಗಳಲ್ಲಿಯೂ ಸಾಧ್ಯವಾಗುವುದಿಲ್ಲ. ಮೇಲಾಗಿ ಇದು ರೈತರಿಗೆ ಸುಲಭ ಸಾಧ್ಯವಾದ ವಿಧಾನವೂ ಅಲ್ಲ. ಭತ್ತವನ್ನು ಕೊಯ್ಲು ಮಾಡಲು ಸರಿಯಾದ ಕಾಲವನ್ನು ನಿರ್ಧರಿಸುವ ಈ ಕ್ಲಿಷ್ಟವಾದ ಸಮಸ್ಯೆಯನ್ನು ಬಗೆಹರಿಸಲು ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದ ವಿಜ್ಞಾನಿಗಳು ಹಲವಾರು ಸಂಶೋಧನೆಗಳನ್ನು ನಡೆಸಿರುತ್ತಾರೆ. ಅವರ ಸಂಶೋಧನೆಗಳಿಂದ ವ್ಯಕ್ತಪಟ್ಟ ಕೆಲವು ವಿಷಯಗಳು ಬೇಸಾಯಗಾರರಿಗೆ ಉಪಯೋಗವಾಗಬಹುದಾದ್ದರಿಂದ ಈ ಕೆಳಗೆ ಅವುಗಳನ್ನು ಸಂಕ್ಷೇಪವಾಗಿ ವಿವರಿಸಲಾಗಿದೆ.

ಭತ್ತದ ಮೇಲಿನ ಸಿಪ್ಪೆಯನ್ನು ಬಿಡಿಸಿ ಅಕ್ಕಿಯ ಕಾಳನ್ನು ಸೂರ್ಯನ ಬೆಳಕಿನಲ್ಲಿ ಪರೀಕ್ಷಿಸಿದರೆ ಬಿರುಕು ಬಂದಿರುವುದು ಕಾಣಿಸುವುದು. ಆದರೆ ಸೂಕ್ಷ್ಮವಾದ ಬಿರುಕುಗಳು ಈ ವಿಧಾನದಿಂದ ಕಾಣಿಸುವುದಿಲ್ಲ. ಇದು ಬಹಳ ಶ್ರಮಸಾಧ್ಯವಾದ ವಿಧಾನವಾಗಿದೆ. ಮೇಲೆ ಹೇಳಿದ ಆಹಾರ ಸಂಶೋಧನಾಲಯದ ವಿಜ್ಞಾನಿಗಳು ಭತ್ತದ ಸಿಪ್ಪೆಯನ್ನು ಬಿಡಿಸದೆಯೇ ಒಳಗಡೆ ಅಕ್ಕಿಯಲ್ಲಿ ಉಂಟಾಗಿರುವ ಬಿರುಕನ್ನು ಅತಿ ಶೀಘ್ರವಾಗಿ ಪರೀಕ್ಷಿಸಲು ಮತ್ತು ಅದರ ಪ್ರಮಾಣವನ್ನು ನಿರ್ಧರಿಸಲು 'ಭತ್ತದ ಛಿದ್ರದರ್ಶಿನಿ' (Paddy crack detector) ಎಂಬ ಒಂದು ಪುಟ್ಟ ಯಂತ್ರವನ್ನು ತಯಾರಿಸಿರುತ್ತಾರೆ. ಇದರ ಉಪಯೋಗದಿಂದ ಭತ್ತದ ಹಲವಾರು ಜಾತಿಗಳಲ್ಲಿ ಕಾಳಿನ ಬೆಳವಣಿಗೆಗೂ ಮತ್ತು ಅವುಗಳಲ್ಲಿ ಬಿರುಕು ಉಂಟಾಗುವುದಕ್ಕೂ ಇರುವ ಸಂಬಂಧವನ್ನು ಅವರು ಅಭ್ಯಾಸ ಮಾಡಿ ಕೆಳಗಿನ ವಿಷಯಗಳನ್ನು ಗಮನಿಸಿರುತ್ತಾರೆ.

ಸಾಮಾನ್ಯವಾಗಿ ತೆನೆಯ ತೀರಾ ಕೆಳಭಾಗದ ಕಾಳುಗಳಲ್ಲಿರುವ ಹಾಲು ಗಟ್ಟಿಯಾಗಲು ತೊಡಗಿದಾಗ ಮೇಲ್ಭಾಗದ ಕಾಳು

ಗಳಲ್ಲಿ ಬಿರುಕು ಉಂಟಾಗಲು ಪ್ರಾರಂಭವಾಗುತ್ತದೆ. ಈ ಕಾಲದಲ್ಲಿ ಬೆಳೆಯನ್ನು ಕಟಾವು ಮಾಡಿದರೆ ಹೆಚ್ಚಾದ ಭತ್ತ ಮತ್ತು ಅಕ್ಕಿಯು ಇಳುವರಿ ಹಾಗೂ ನುಚ್ಚಿಲ್ಲದ ಅಕ್ಕಿಯೂ ಸಹ ದೊರೆಯುವುದು. ಕೆಲವು ಭತ್ತದ ಜಾತಿಗಳಲ್ಲಿ ತೆನೆಯ ಕೆಳ ಭಾಗದ ಕಾಳುಗಳು ಇನ್ನೂ ಬಹಳ ಹಸಿರಾಗಿರುವಾಗಲೇ ಮೇಲ್ಭಾಗದ ಕಾಳುಗಳಲ್ಲಿ ಬಿರುಕು ಉಂಟಾಗಲೂ ಪ್ರಾರಂಭವಾಗುತ್ತದೆ. ಇಂತಹ ಜಾತಿಯ ಭತ್ತವನ್ನು ಗಿರಣಿಗೆ ಹಾಕಿದಾಗ ಅನಿವಾರ್ಯವಾಗಿ ನುಚ್ಚು ಬಂದೇ ಬರುತ್ತದೆ ಮತ್ತು ಅಕ್ಕಿಯ ಇಳುವರಿಯೂ ಸಹ ಕಡಿಮೆಯಾಗುತ್ತದೆ. ರೈತರು ಇಂತಹ ಜಾತಿಗಳನ್ನು ಪತ್ತೆ ಮಾಡಿ ಅವುಗಳನ್ನು ಬೆಳೆಯಬಾರದು. ಒಂದು ವೇಳೆ ಬೆಳೆದರೂ ಸಾಮಾನ್ಯವಾಗಿ ಕೊಯ್ಲು ಮಾಡುವ ಕಾಲಕ್ಕಿಂತ ೪-೬ ದಿನಗಳಿಗೆ ಮುಂಚಿತವಾಗಿ ಅವುಗಳನ್ನು ಕೊಯ್ದು ಬಿಡಬೇಕು. ಒಂದು ಗದೆಯಲ್ಲಿ ಅತಿ ಎಳಸಾದ ಭತ್ತದ ತೆನೆಗಳನ್ನು ಪರೀಕ್ಷಿಸಿ ಅದರಲ್ಲಿರುವ ಕಾಳುಗಳೆಲ್ಲವೂ ಹಾಲಿನ ಅಂಶವನ್ನು ಕಳೆದುಕೊಂಡು ದೃಢವಾಗಿ ಮಾಗಿವೆಯೆಂದು ಕಂಡುಬಂದರೆ ಆಗ ಬೆಳೆಯು ಕಟಾವಿಗೆ ಸಿದ್ಧವಾಗಿದೆಯೆಂದು ತಿಳಿಯಬೇಕು ಮತ್ತು ತಡಮಾಡದೆ ಬೆಳೆಯನ್ನು ಕೊಯ್ದು ಬಿಡಬೇಕು. ಈ ಕಾಲದಲ್ಲಿ ಭತ್ತದ ಕಾಳಿನಲ್ಲಿ ಸರಾಸರಿ ಶೇಕಡಾ ೨೦ ರಿಂದ ೨೪ ರಷ್ಟು ತೇವಾಂಶವಿರುತ್ತದೆ. ಹಿಂದಿನ ಪದ್ಧತಿಯ ಪ್ರಕಾರ ಕಾಳುಗಳೆಲ್ಲವೂ ಹಣ್ಣಾದ ನಂತರ ಕಟಾವು ಮಾಡುವಾಗ ಭತ್ತದಲ್ಲಿ ಸರಾಸರಿ ಶೇಕಡಾ ೧೬ ರಿಂದ ೧೭ ರಷ್ಟು ತೇವಾಂಶವಿರುತ್ತದೆ. ಈ ಸಂದರ್ಭದಲ್ಲಿ ಒಂದು ತೆನೆಯ ಮೇಲ್ಭಾಗದ ಕಾಳುಗಳಲ್ಲಿ ತೇವಾಂಶವು ಶೇಕಡಾ ೧೩-೧೪ ಮತ್ತು ಕೆಳ ಭಾಗದ ಕಾಳುಗಳಲ್ಲಿ ಶೇಕಡಾ ೧೯-೨೦ ಇರುತ್ತದೆ. ಭತ್ತದ ಕಾಳುಗಳಲ್ಲಿ ತೇವಾಂಶವು



"ಡಾಕ್ಟ್ರೆ, ನೀವು ಒಂದು ಕೆಲಸ ಮಾಡ್ಬೇಕು ನೋಡಿ. ನನ್ನ ಕಂಡಿಶನ್ನು ಸೀರಿಯಸ್ಸಾದ ಕೂಡಲೆ ಚೀಫ್ ಮಿನಿಸ್ಟರಿಗೆ ಹಾಗಂತ ತಿಳಿಸ್ಬೇಕು."

ಶೇಕಡಾ ೧೬ ಕ್ಕಿಂತ ಕಡಿಮೆ ಇರುವಾಗ ಅವುಗಳು ಒಣಗುವುದೂ ಒದ್ದೆಯಾಗುವುದೂ ಸಂಭವಿಸಿದಲ್ಲಿ ಬಿರುಕು ಉಂಟಾಗುತ್ತದೆ. ಈ ಕಾರಣದಿಂದ ರೈತರು ಭತ್ತವನ್ನು ಪೂರ್ತಿ ಹಣ್ಣಾಗಿಸಿ ಕೊಯ್ಲು ಮಾಡುವ ಸಮಯದಲ್ಲಿ ತೆನೆಯ ಮೇಲ್ಭಾಗದ ಕಾಳುಗಳಲ್ಲಿ ಬಹಳ ಪ್ರಮಾಣದಲ್ಲಿ ಬಿರುಕು ಸಂಭವಿಸಿರುತ್ತದೆ. ಆದ್ದರಿಂದ ಮೇಲೆ ಹೇಳಿದ ಪ್ರಕಾರ ಭತ್ತದ ತೆನೆಗಳನ್ನು ಪರೀಕ್ಷಿಸಿ ಸರಿಯಾದ ಕಾಲದಲ್ಲಿ ಕೊಯ್ಲು ಮಾಡಬೇಕು. ಭತ್ತದ 'ಛಿದ್ರದರ್ಶಿನೀ' ಯಂತ್ರವೂ ಸಹ ಈ ಕಾಲವನ್ನು ತೀರ್ಮಾನಿಸಲು ಸಹಾಯವಾಗುವುದು. ಈ ರೀತಿ ಕೊಯ್ಲು ಮಾಡುವ ಸಮಯದಲ್ಲಿ ಸರಾಸರಿ ಶೇಕಡಾ ೧೦ ರಿಂದ ೧೫ ರಷ್ಟು ಕಾಳುಗಳು ಇನ್ನೂ ಹಸಿರು ಬಣ್ಣದಿಂದ ಕೂಡಿರುತ್ತವೆ. ಆದರೆ ಅವುಗಳಲ್ಲಿ ಬಹುಭಾಗ ಕಾಳುಗಳು ಪೂರ್ತಿಯಾಗಿ ಬೆಳೆದು, ಮಿಲ್ ಮಾಡಿದರೆ ಒಡೆಯದೇ ಇರುವಷ್ಟು ದೃಢವಾಗಿರುತ್ತವೆ. ಕೇವಲ ಕೆಲವೇ ಕಾಳುಗಳಲ್ಲಿ (ಶೇಕಡಾ ೦.೫ ಕ್ಕೂ ಕಡಿಮೆ) ಇನ್ನೂ ಕೊಂಚ ಬೆಳೆಯುವ ಅವಕಾಶವಿರುತ್ತದೆ. ಅದು ಪೂರ್ತಿ ಬೆಳೆಯಲು ಇನ್ನೂ ಸುಮಾರು ೭–೮ ದಿನಗಳು ಬೇಕಾಗುತ್ತವೆ. ಆದರೆ ಈ ೭–೮ ದಿನಗಳ ಸಮಯದಲ್ಲಿ ಈಗಾಗಲೇ ಹಣ್ಣಾಗಿರುವ ಕಾಳುಗಳಿಗೆ ಸಂಭವಿಸುವ ನಷ್ಟವು ಈ ಅಪರಿಪಕ್ವ ಕಾಳುಗಳು ಪೂರ್ತಿ ಬೆಳೆಯುವುದರಿಂದ ಆಗುವ ಲಾಭಕ್ಕಿಂತ ಬಹಳ ಅಧಿಕವಾಗಿರುತ್ತದೆ. ಆದ್ದರಿಂದ ಈ ಕೆಲವೇ ಕಾಳುಗಳ ಪೂರ್ತಿ ಬೆಳವಣಿಗೆಗೆ ಕಾಯದೇ ಭತ್ತವನ್ನು ಮೇಲೆ ಹೇಳಿದ ಕಾಲದಲ್ಲಿ ಕೊಯ್ಲು ಮಾಡಬೇಕು. ಕೊಯ್ದ ಬೆಳೆಯನ್ನು ಗದ್ದೆಯಲ್ಲಿ ಬಿಡದೆ ತಕ್ಷಣ ಕಣಕ್ಕೆ ಸಾಗಿಸಿ ಒಂದೆರಡು ದಿನಗಳಲ್ಲಿಯೇ ಒಕ್ಕಣೆ ಮಾಡಿಸಿ ಹುಲ್ಲನ್ನೂ, ಭತ್ತವನ್ನೂ ಪ್ರತ್ಯೇಕವಾಗಿ ಒಣಗಿಸಬೇಕು. ವಿದೇಶಗಳಲ್ಲಿಯೂ ಮತ್ತು ನಮ್ಮ ದೇಶದ ದೊಡ್ಡ ದೊಡ್ಡ ಫಾರಂಗಳಲ್ಲಿಯೂ ಈ ವಿಧಾನವು ರೂಢಿಗೆ ಬಂದಿದೆ. ಆದರೆ ಅನೇಕ ರೈತರು ಹುಲ್ಲು ಮತ್ತು ಭತ್ತವನ್ನು ಒಣಗಿಸುವ ಹೆಚ್ಚಿನ ತೊಂದರೆಯನ್ನು ಗಮನಿಸಿ ಭತ್ತದ ಕೊಯ್ಲು ಮಾಡುವ ಮೇಲಿನ ವಿಧಾನವನ್ನು ಸ್ವೀಕರಿಸಲು ಒಪ್ಪುವುದಿಲ್ಲ.

ಭತ್ತವನ್ನು ಕಟಾವು ಮಾಡುವುದಕ್ಕೆ ೫–೬ ದಿನ ಮುಂಚಿತವಾಗಿ ರಾಸಾಯನಿಕ ಪದಾರ್ಥಗಳಿಂದ ಸ್ಪ್ರೇಮಾಡಿ ಹುಲ್ಲನ್ನೂ ಕಾಳನ್ನೂ ಒಣಗಿಸುವ ವಿಧಾನವನ್ನು ಕಂಡುಹಿಡಿಯಲಾಗುತ್ತಿದೆ. ಆದರೆ ಇದಕ್ಕಾಗಿ ಉಪಯೋಗಿಸುವ ರಾಸಾಯನಿಕ ಪದಾರ್ಥಗಳು ಮಣ್ಣಿನ ಗುಣವನ್ನು ಹಾಳುಮಾಡುತ್ತದೆಂಬುದು ತಿಳಿದುಬಂದಿದೆ. ಮಣ್ಣಿನ ಗುಣವನ್ನೂ ಕೆಡಿಸದೇ ಇರುವ ರಾಸಾಯನಿಕ ಪದಾರ್ಥವನ್ನು ಕಂಡುಹಿಡಿದು, ಸ್ಪ್ರೇಮಾಡುವುದರ ಮೂಲಕ ನಿಂತ ಬೆಳೆಯಲ್ಲಿ ಹುಲ್ಲನ್ನೂ ಭತ್ತವನ್ನೂ ಒಣಗಿಸುವ ವಿಧಾನವು ಸಾಧ್ಯವಾದಲ್ಲಿ ಬಹಳ ಉಪಯೋಗಕರವಾಗಿರುವುದು. ಮುಂಗಾರು ಮಳೆಯಿಂದ ರಕ್ಷಿಸುವುದಕ್ಕಾಗಿ ಭತ್ತವನ್ನು ಶೀಘ್ರವಾಗಿ ಕಟಾವು ಮಾಡಬೇಕಾದ ಸಂದರ್ಭದಲ್ಲಿಯಂತೂ ಈ ವಿಧಾನವು ಬಹಳ ಪ್ರಯೋಜನಕರವಾಗಿರುವುದು.

ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದ ವಿಜ್ಞಾನಿಗಳೂ ಮತ್ತು ಮಂಡ್ಯದ ವಿ. ಸಿ. ಫಾರಂನಲ್ಲಿರುವ ಭತ್ತದ ಬೆಳೆಯ ವಿಶೇಷಜ್ಞರು ಸೇರಿ ಭತ್ತದ ಛಿದ್ರದರ್ಶಿನೀ ಯಂತ್ರದ ಸಹಾಯದಿಂದ ಹಲವಾರು ಭತ್ತದ ತಳಿಗಳನ್ನು ಪರೀಕ್ಷಿಸಿ ಸಾಮಾನ್ಯವಾಗಿ ಬಿರುಕು ಬಾರದೇ ಇರುವ ಗುಣವನ್ನು ಹೊಂದಿರುವ ಕೆಲವು ತಳಿಗಳನ್ನು ಪತ್ತೆ ಮಾಡಿದ್ದಾರೆ. ಈ ಗುಣವನ್ನು ಮತ್ತು ಹಚ್ಚಾಗಿ ಕಾಳು ಉದುರದೇ ಇರುವ ಗುಣವನ್ನು ಅಧಿಕ ಬೆಳೆ ಬರುವ ತಳಿಗಳಲ್ಲಿ ಉಂಟುಮಾಡುವ ಕಾರ್ಯವನ್ನು ಅವರು ಕೈಗೊಂಡಿರುತ್ತಾರೆ. ಇಂಥ ತಳಿಗಳ ಉಪಯೋಗದಿಂದ ರೈತರು ಹಳೆಯ ಪದ್ಧತಿಯಂತೆಯೇ ಕಾಳುಗಳು ಪೂರ್ತಿ ಹಣ್ಣಾದ ನಂತರ ಭತ್ತವನ್ನು ಕೊಯ್ಲು ಮಾಡಿದರೂ ಸಹ, ಕಾಳು ಉದುರುವಿಕೆ ಇಲ್ಲವೇ ಕಾಳಿನಲ್ಲಿ ಬಿರುಕು ಬರುವ ಕಾರಣಗಳಿಂದಾಗಿ ಉಂಟಾಗುವ ನಷ್ಟ ಬಹಳ

ಕಡಿಮೆಯಾಗುತ್ತದೆ, ಮತ್ತು ಹುಲ್ಲನ್ನೂ ಭತ್ತವನ್ನೂ ಒಣಗಿಸುವುದು ಸುಲಭವಾಗುತ್ತದೆ.

ಯಾವ ಪದ್ಧತಿಯನ್ನು ಅನುಸರಿಸಿ ಭತ್ತವನ್ನು ಕೊಯ್ಲು ಮಾಡಿದರೂ ಸಹ ಒಕ್ಕಣೆಯಾದ ನಂತರ ಕಾಳನ್ನು ಬಿಸಿಲಿನಲ್ಲಿ ಒಣಗಿಸಿ ಅದರ ತೇವಾಂಶವನ್ನು ಶೇಕಡಾ ೧೩–೧೪ ಕ್ಕೆ ಇಳಿಸಿ ನಂತರ ಶೇಖರಿಸಿಡುವುದು ಒಳ್ಳೆಯದು. ಹೀಗೆ ಮಾಡುವುದರಿಂದ ಭತ್ತವು ಕೆಡದೇ ಚೆನ್ನಾಗಿರುತ್ತದೆ. ಬಿಸಿಲಿನ ತಾಪವು ಹೆಚ್ಚಾಗಿದ್ದು ವಾತಾವರಣದಲ್ಲಿ ತೇವಾಂಶವು ಕಡಿಮೆ ಇದ್ದಲ್ಲಿ ಭತ್ತವು ಶೀಘ್ರವಾಗಿ ಒಣಗುತ್ತದೆಯಾದರೂ ಕಾಳುಗಳಲ್ಲಿ ಬಿರುಕು ಉಂಟಾಗುತ್ತದೆ. ಆಹಾರ ಸಂಶೋಧನಾಲಯದಲ್ಲಿ ಬಿರುಕು ಬಾರದಿರುವಂತೆ ಭತ್ತವನ್ನು ಒಣಗಿಸಲು ಕೆಲವು ಸುಲಭೋಪಾಯಗಳನ್ನು ಕಂಡುಹಿಡಿಯಲಾಗಿದೆ.

ಹೊಸದಾಗಿ ಕೊಯ್ಲು ಮಾಡಿದ ಭತ್ತದ ಕಾಳಿನಲ್ಲಿ ಸರಾಸರಿ ಶೇಕಡಾ ೨೦ ರಿಂದ ೨೪ ರಷ್ಟು ತೇವಾಂಶವಿರುತ್ತದೆಂದು ಹಿಂದೆ ಹೇಳಿದೆ. ಇದನ್ನು ೧ ರಿಂದ ೧½ ಇಂಚು ದಪ್ಪನಾಗಿ ಹರವಿ ಬಿಸಿಲಿನಲ್ಲಿ ಒಣಗಿಸುತ್ತಾ ಆಗಾಗ ಕೈಯಿಂದ ಮಗುಚಿಹಾಕುತ್ತಾ ಇದ್ದಲ್ಲಿ ಸುಮಾರು ೨ ಗಂಟೆಗಳಲ್ಲಿ ತೇವಾಂಶವು ಶೇಕಡಾ ೧೬–೧೭ ಕ್ಕೆ ಇಳಿಯುತ್ತದೆ. ಇಲ್ಲಿಂದ ಮುಂದಕ್ಕೆ ಕಾಳು ಒಡೆಯದಂತೆ ಒಣಗಿಸಲು, ವಾತಾವರಣದ ಉಷ್ಣಾಂಶವನ್ನೂ ತೇವಾಂಶವನ್ನೂ ಗಮನಿಸಿ, ಕೆಳಗೆ ಸೂಚಿಸಿದ ಕ್ರಮಗಳನ್ನು ಅನುಸರಿಸಬೇಕು. ಉಷ್ಣಾಂಶವು ೩೦° ಸೆಂಟಿಗ್ರೇಡಿಗಿಂತ ಹೆಚ್ಚಾಗಿದ್ದು ತೇವಾಂಶವು ಶೇಕಡಾ ೪೫ಕ್ಕಿಂತ ಕಡಿಮೆ ಇರುವ ಕಡೆಗಳಲ್ಲಿ ಭತ್ತವನ್ನು ಮೇಲಿನ ಪ್ರಕಾರ ೨ ಗಂಟೆಗಳ ವರೆಗೆ ಒಣಗಿಸಿದ ನಂತರ ರಾಶಿ ಮಾಡಿ ಇಲ್ಲವೇ ಹರಡಿರುವಂತೆಯೇ ಮತ್ತೆ ೨ ಗಂಟೆಗಳವರೆಗೆ ಬಿಸಿಲು ಬೀಳದಂತೆ ಮುಚ್ಚಿಟ್ಟು ಅನಂತರ ಪುನಃ ಒಣಗಿಸಬೇಕು. ಹೀಗೆ ಮುಚ್ಚಲು, ಟಾರ್‌ಪಲ್, ಗೋಣಿ, ಕಂಬಳಿ, ಚಾಪೆ ಮುಂತಾದವುಗಳನ್ನು ಉಪಯೋಗಿಸಬಹುದು. ಭತ್ತವನ್ನು ಒಣಗಿಸುವ ಕಾಲದಲ್ಲಿ ಆಗಾಗ ಮಗುಚಿ ಹಾಕುತ್ತಿರಬೇಕು. ಉಷ್ಣಾಂಶವು ಕಡಿಮೆ ಇದ್ದು ತೇವಾಂಶವು ಹೆಚ್ಚಾಗಿರುವ ಕಡೆಗಳಲ್ಲಿ ಭತ್ತವನ್ನು ಒಣಗಿಸುವಾಗ ಪ್ರತಿ ಘಂಟೆಗೊಮ್ಮೆ ಕೈಯಿಂದ ಮಗುಚಿ ಹಾಕುತ್ತಿದ್ದರೆ ಸಾಕು. ಹೀಗೆ ಮಾಡುವುದರಿಂದ ಅದು ಶೀಘ್ರವಾಗಿ ಒಣಗುವುದಲ್ಲದೇ ಕಾಳಿನಲ್ಲಿ ಬಿರುಕು ಉಂಟಾಗುವುದಿಲ್ಲ. ಆಕಾಶದಲ್ಲಿ ಮೋಡವಿಲ್ಲದ ವಾತಾವರಣವಿದ್ದಲ್ಲಿ, ಬೆಳಗಿನ ೯ ಗಂಟೆಯಿಂದ ಸಂಜೆ ೪ ಗಂಟೆಯೊಳಗಿನ ಕಾಲದಲ್ಲಿ ಶೇಕಡಾ ೨೦–೨೪ ರಷ್ಟು ತೇವಾಂಶವುಳ್ಳ ಭತ್ತವನ್ನು ಶೇಕಡಾ ೧೪ ರಷ್ಟು ತೇವಾಂಶದ ಮಟ್ಟಕ್ಕೆ ಒಣಗಿಸಬಹುದು.

ವಿದೇಶಗಳಲ್ಲಿಯೂ ನಮ್ಮ ದೇಶದ ದೊಡ್ಡ ದೊಡ್ಡ ಫಾರಂಗಳಲ್ಲಿಯೂ ಭತ್ತವನ್ನು ಒಣಗಿಸಲು ಮೆಕ್ಯಾನಿಕಲ್ ಡ್ರೈಯರ್‌ಗಳನ್ನು ಉಪಯೋಗಿಸುತ್ತಾರೆ. ಇವುಗಳಲ್ಲಿ ಬಿರುಕು ಬಾರದಂತೆ ಭತ್ತವನ್ನು ಒಣಗಿಸುವ ಎಲ್ಲಾ ಸೌಲಭ್ಯಗಳೂ ಇರುತ್ತವೆ. ✱

ಶ್ರೀ ಸೂರ್ಯನಾರಾಯಣ ಅಡಿಗರು ಮಂಗಳೂರು ಪುರಸಭೆಯ ಅಧ್ಯಕ್ಷರಾಗಿದ್ದಾಗಿನ ಮಾತಿದು. ಅವರಾಗ ಅಂದಿದ್ದರು: "ನಾವು ರಾಮರಾಜ್ಯದ ಕನಸನ್ನು ಕಾಣುತ್ತಿದ್ದೇವೆ. ಏಕೆಂದರೆ, ರಾಮರಾಜ್ಯದಲ್ಲಿ ದಾನ ಧರ್ಮಗಳಿಗೆ ಕೊರತೆ ಇರಲಿಲ್ಲವಂತೆ. ಸ್ವತಃ ಶ್ರೀರಾಮಚಂದ್ರನೇ ಊರಿನ ಎಲ್ಲಾ ಬಡಬಗ್ಗರಿಗೆ ಊಟ ಹಾಕಿಸಿ ತೃಪ್ತಿಪಡಿಸಿ ಕಳಿಸುತ್ತಿದ್ದನಂತೆ. ಆದರೆ ನಮ್ಮ ನವಭಾರತದಲ್ಲಿ ಬಡಬಗ್ಗರು ಅಂತ ಏಕಿರಬೇಕು ? ಅನ್ಯರು ಕೊಡುವ ಪುಕ್ಕಟೆ ಊಟಕ್ಕಾಗಿ ಜನ ಓಡಿಬರುವಂತೆ ಏಕೆ ಆಗಬೇಕು ? ಪ್ರತಿಯೊಬ್ಬನೂ ನಿತ್ಯ ತನ್ನ ಮನೆಯಲ್ಲೇ ಪುಷ್ಕಳವಾಗಿ ಊಟ ಮಾಡುವಂತಾಗಬೇಕು. ನಮ್ಮ ದೇಶ ರಾಮರಾಜ್ಯಕ್ಕಿಂತಲೂ ಒಂದು ಕೈ ಮೇಲಾಗಬೇಕು."

ಸಂಗ್ರಹ : ಕೆ. ಶ್ರೀ. ಜೋಡ

ಪ್ರಾಚೀನ ಕಾವ್ಯ ಸುಧೆ

ನರ್ತನವಿಲಾಸ

ಹದಿನಾರನೆ ಶತಮಾನದಲ್ಲಿ ಆಗಿ ಹೋದ ದಕ್ಷಿಣ ಕನ್ನಡ ಜಿಲ್ಲೆಯ ರತ್ನಾಕರಸಿದ್ಧ (ವರ್ಣಿ)ನ "ಭರತೇಶವೈಭವ"ವು ಒಂದು ಸರಸ ಮಹಾಕಾವ್ಯ. ಚಾಮರಸನ ಪ್ರಭುಲಿಂಗಲೀಲೆ, ಕುಮಾರವ್ಯಾಸನ ಭಾರತ, ಲಕ್ಷ್ಮೀಶನ ಜೈಮಿನಿ ಭಾರತ, ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣಗಳಷ್ಟು ಭರತೇಶವೈಭವ ಜನಪ್ರಿಯತೆ ಗಳಿಸಿಲ್ಲ ಎಂದು ಹೇಳಬಹುದಾದರೂ ಭೋಗ ಯೋಗಗಳ ಸಮನ್ವಯವನ್ನು ಭರತೇಶ ಚಕ್ರವರ್ತಿಯ ಕಥೆಯ ಮೂಲಕ ಸಾರುವ ಈ ಕಾವ್ಯ ಪಂಡಿತಪಾಮರರಂಜಕ ಮಹಾ ಕಾವ್ಯ. ಮಹಾಕಾವ್ಯದ "ಸಕಲ ಲಕ್ಷಣವಾಗಿ ಬಿರುಸು ಮಾಡಿದರೆ ಪುಸ್ತಕ ಬದನೆಕಾಯು ಹುದುಗು" ಎಂದು ಪ್ರಾರಂಭದಲ್ಲಿಯೆ ಸಾರಿರುವ ರತ್ನಾಕರವರ್ಣಿ "ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ ಕಬ್ಬ" ಎಂದು ಪ್ರತಿಜ್ಞೆ ಮಾಡಿ ತನ್ನ ಈ ಕಾವ್ಯವನ್ನು ಬರೆದಿದ್ದಾನೆ. ಬೇರೊಂದು ಗ್ರಂಥದ ಮೇಲಿನ ಈರ್ಷೆಯಿಂದ ಕೇವಲ ಒಂಬತ್ತು ತಿಂಗಳುಗಳಲ್ಲಿ ೯೯೭೯ ಪದ್ಯಗಳ ೮೦ ಸಂಧಿಗಳ ಮಹಾಕಾವ್ಯವನ್ನು ಸಾಂಗತ್ಯ ರೂಪದಲ್ಲಿ ಬರೆದಿದ್ದಾನೆ. ಗುರುವಿನ ಆಜ್ಞೆಯಂತೆ ಆತ್ಮಲೀಲಾರ್ಥವಾಗಿ ತಾನು ಈ ಕೃತಿ ರಚಿಸಿರುವುದಾಗಿ ಹೇಳಿಕೊಳ್ಳಲೂ ಆತ ತಪ್ಪಿಲ್ಲ. ಅಪರಾಜಿತೇಶ್ವರ ಶತಕ, ರತ್ನಾಕರಾಧೀಶ್ವರ ಶತಕ, ತ್ರಿಲೋಕಶತಕ ಇವು ಈತನ ಇನ್ನಿತರ ಕೃತಿಗಳು. ಅನೇಕ ಅಧ್ಯಾತ್ಮ ಗೀತಗಳನ್ನೂ ಇವನು ರಚಿಸಿರುವುದಾಗಿ ತಿಳಿಯುತ್ತದೆ.

ರತ್ನಾಕರನ ವರ್ಣನೆಗಳನ್ನು ಓದುವಾಗ ಆತ ಬಣ್ಣಿಸಿದ ಚಿತ್ರ ಕಣ್ಣೆದುರಿಗೆ ಕಟ್ಟುವುದು. ಬಣ್ಣಗಳಿಂದ ಚಿತ್ರ ಬಿಡಿಸಿ ನೋಟಕರ ಕಂಗಳಿಗೆ ಕಾಣಿಸುವದಕ್ಕಿಂತ ಶಬ್ದ ಚಿತ್ರಗಳಿಂದ ದೃಶ್ಯಗಳ ವೈಖರಿಯನ್ನೇ ಕಣ್ಣೆದುರು ನಿಲ್ಲಿಸುವುದು ಸುಲಭವಲ್ಲ. ರತ್ನಾಕರ ಇಂಥ ವರ್ಣನೆಗಳಲ್ಲಿ ಸಿದ್ಧಹಸ್ತ. ಆತ ನೀಡಿದ ನೃತ್ಯದ ವರ್ಣನೆ ಇಲ್ಲಿದೆ.

ಸಂಜೆಗೆಂಪೊಳೆವಂತೆ ತೆರೆ ತೊಲಗಿತು ಕಣ್ಗೆ, ಕಂಜಾಕ್ಷಿಯರು ಕಾಣಿಸಿದರು||
ರಂಜಿಪ ನಳಿತೋಳ್ಗಳೆತ್ತಿ ಸುವರ್ಣಪು| ಷ್ಪಾಂಜಲಿ ಮಾಡಿದರೊಡನೆ.... ೧
ನಡುವಿನೊಳಿಟ್ಟ ಹಸ್ತಗಳು ಪಸರಿಸಿ| ತೊಡೆಸಾರ್ದ ಮುಡಿಗಳಿಂದಾಗ||
ಮಿಡುಕದೆ ನಿಲುವಿನ ರೇಖೆದೋರಿದರು ಪು| ಪ್ಪೊಡವಿಯುಂಡವ ತೋರುವಂತೆ.... ೨
ಪಚ್ಚೆಯು ಚಲ್ಲಣ ಪಂಚವರ್ಣದ ಕಾಸೆ| ಬೆಚ್ಚ ಮುತ್ತಿನ ಮೊಲೆಗಟ್ಟು||
ಅಚ್ಚ ಜವ್ವನೆಯರಿದ್ದರು ನೋಡುವರ ಮನ| ಹುಚ್ಚೆದ್ದು ಧರೆಗೆ ಬೀಳ್ವಂತೆ.... ೩
ತಿಟ್ಟವಿಕ್ಕಲು ತಿದ್ದಲರಿದೆನಿಸುವ ಮೈಯು| ಕಟ್ಟಾಯುವೇರುವ ಪ್ರಾಯು||
ಮುಟ್ಟೆ ಕೆಂದುವ ಮೈಯು ಪೆಂಗಳಿದ್ದರು ನಿಂದ| ತಿಟ್ಟ ಸೋಲಿಸೆ ರಾಜಸಭೆಯಾ.... ೪
ನೇತ್ರಮೋಹಿನಿ ಮೆಲ್ಲನೊಲೆದು ರಾಯನ ನೋಡಿ| ನೇತ್ರಸುಖವ ಸೂಚಿಸಿದಳು||
ಸೂತ್ರಿಸಿ ಚಿತ್ತಮೋಹಿನಿ ನೋಡಿ ಚಿತ್ತವ| ಸೂತ್ರದಂತಲುಗಾಡಿಸಿದಳು.... ೫
ಹೆಜ್ಜೆಸರಿದು ಮೆಲ್ಲನೊಲೆದರು ಕಾಲ ಹೊಂ| ಗೆಜ್ಜೆ ಝುಲಿರುಝುಲಿರೆನಲು||
ಸಜ್ಜುಕಮೊಲೆಯ ಪೆಣ್ಗಳು ಮುಂದೆ ನಡೆದರು| ಪಜ್ಜಳಿಸುತ ಮುಖಕಾಂತಿ... ೬

ನೋಟದೊಳಗೆ ಕೊಂದರೊಮ್ಮೆ ನೋಟಕರನು। ನಾಟಿಸಿ ನಸುನಗೆಯಿಂದ॥
ಊಟಮಾಡಿದರು ಮೈಯೊಲೆದಾಟದಿಂದೆದೆ। ಗೋಟೆಯು ಕೊಂಡರೇನೆಂಬೆ.... ೭
ಒಬ್ಬರೊಬ್ಬರು ಬಲಮುರಿಯೆಡಮುರಿಯಾಗಿ। ಸಬ್ಬವದೊಳು ಚಾರಿವರಿದು॥
ಇಬ್ಬರು ಸುಳಿದಾಡಿ ನಿಂದಳೊಬ್ಬಳು ಹಿಂದೆ। ಮೊಬ್ಬಳಾಡಿದಳು ರಂಗದೊಳು.... ೮
ಜೊಂಗಿ ಹೊಳೆದು ನೇತ್ರಮೋಹಿನಿ ತಾಳ ಲ। ಯಂಗಳನರಿದು ನರ್ತಿಸುತ॥
ರಂಗದೊಳಿದ್ದಳು ನೋಡುವ ಜನದಂತ। ರಂಗದೊಳಿದ್ದಳೇನೆಂಬೆ.... ೯
ತೋಳ ನೀಡಿದಳು ಮನ್ಮಥನೊರೆಯಿಂದುರ್ಚಿ। ಬಾಳ ನೀಡಿದನೊಯೆಂಬಂತೆ॥
ಬಾಳೆಯುದೊಳು ಹೊಳೆದಳು ರಾಜಸುತರೆದೆ। ಹೋಳಾಗುವಂತೆ ಜೊಮ್ಮರಿದು.... ೧೦
ಎತ್ತ ನೀಡಿತು ಹಸ್ತವತ್ತ ದೃಷ್ಟಿಗಳಲ್ಲಿ। ಚಿತ್ತವೆಲ್ಲವು ಭಾವರಸವು
ತತ್ತತ ತಿತ್ತಿತಿ ಯಾರೆ ಯಾರೆನೆ। ಲತ್ತಿತ್ತಲೊಲೆದು ಹರಿದಳು.... ೧೧
ನೂರೆಂಟು ಕರಣ ನೂರೆಂಟು ನಿಲುವು ಹದಿಮೂರು ಶಿರೋಭೇದವರಿದು॥
ಬೇರೆ ಬೇರರುವತ್ತುನಾಲ್ಕು ಭೇದದ ಹಸ್ತ। ದೋರಿ ನರ್ತಿಸಿದಳಾ ನೀರೆ.... ೧೨
ಚಾರಿ ಮೂವತ್ತೆರಡಸಂಚರಿಸಿರಲಂಗ। ಹಾರ ಮೂವತ್ತೆರಡೆಸೆಯೆ॥
ಸೇರಿ ಮೂವತ್ತಾರು ನೋಟ ರಂಜಿಸಿ ನಾಟ್ಯ। ಸಾರಗಾಣಿಸಿ ನಟಿಸಿದಳು.... ೧೩
ಭಾವವಿಭಾವಾನುಭಾವ ಮುಂತಾದ ಕ। ಲಾ ವಿರಚನೆ ರೇಖೆದೋರಿ॥
ಭಾವಕರೆಲ್ಲರ ಚಿತ್ತ ರಂಜಿಸಲೋಡಿ। ಭಾವೆ ಹಿಂಗಡೆಗೆ ಸಾರಿದಳು.... ೧೪
ಚಿತ್ತಮೋಹಿನಿ ಕೂಡೆಬಂದು ನಿಂದಳು ಮೇರು। ಚಿತ್ತವೆಲ್ಲವ ಚಿಗುರಿಸುತ॥
ವೃತ್ತಕುಚದ ಬಿಲುಭಾರವ ಬಡ ನಡು। ಹೊತ್ತು ನಿಂದುದು ಚಿತ್ರವೆನಿಸಿ.... ೧೫
ತೊಡೆ ತೋರ ಕಟಿಗಳ ತಾಳ್ದುದಚ್ಚರಿ ದೊಡ್ಡ। ಮುಡಿಯು ನುಂಗೊರಳಾಂತುದರಿದು॥
ನಡೆದೊಲೆದಿನ್ನು ನರ್ತಿಸಿದರೇನಹಳೊಯೆಂ। ದೊಡನೆಣಿಸಿದರು ನೋಟಕರು.... ೧೬
ಮರ್ದಲ ತಾಳಾನುಗತಿಯೊಳು ನಡೆದಳು। ಪರ್ದಿರೆಯಂತೆ ಮುಂದೊತ್ತಿ॥
ಸಾರ್ದಳು ಹಿಂದಕೆ ಕಡಲ ಭರತವೊಳ। ಸಾರ್ದಿಳಿವಂತೆ ಜೋಕೆಯೊಳು.... ೧೭
ದಿಗಿದಿಗಿನೊಡನಿದಿರಾಗಿ ಬಹಳು ನಸು। ನಗುತ ರಾಯನನಪ್ಪುವಂತೆ॥
ಭುಗಿಲನೆ ತಿರುಗುವಳರಸನೊಳ್ಮನಿದಷ್ಟು। ಮೊಗವಿಕ್ಕಿ ಹೋಹಳೆಂಬಂತೆ ೧೮
ಬಾಹಾಗ ಮೊಗ ಮೊಲೆ ನಡುಪಜ್ಜೆಗಳ ನೋಡಿ। ಮೋಹಿಸುವರು ರಾಜಸುತರು॥
ಹೋಹಾಗ ಮುಡಕಟಿ ಮುಡಿಬೆನ್ನ ನೋಡಿಯು। ತ್ಪಾಹಿಸುತಿಹರೇನನೆಂಬೆ.... ೧೯
ಸುಳಿದು ಸುತ್ತುವಳು ನಾಟ್ಯದೊಳು ಸಮ್ಮೋಹನ। ಜಲಧಿಯು ಸುಳಿಯೊಯೆಂಬಂತೆ॥
ಬಲಕೆಡಕೊಲೆದು ಜರಿವಳೆಳೆವಿಸಿಲಲ್ಲಿ। ಯೆಳೆನಾಗ ಹರಿವಂತೆ ಮುರಿದು.... ೨೦
ನಟಿಸಿ ರಂಗದೊಳು ಮೇಲುಪ್ಪರಿಸುವವಳಾಗ। ಪುಟವೇರಿ ಪೊಯ್ಚೆಂಡಿನಂತೆ॥
ಕಟಕಚಕುಚದ ಭಾರವನೀಕೆ ಕೊಂಡೆದ್ದು। ಪಟುತನ ಲೇಸು ಮಝುನಲು.... ೨೧
ಮೋರೆಯೊಲೆದು ನೋಡಿ ನೃಪಸುತರಿಗೆ ಹುಬ್ಬು। ಹಾರಿಸುವಳು ನಸುನಗುತ॥
ಹಾರವುದೊಡನವರೆದೆ ತನ್ನ ತೋಳೆತ್ತಿ। ವೀರ ಕೊಲ್ಲಣಿಸಿ ಸುತ್ತುವಳು.... ೨೨
ಮಾರನ ಮದದಾನೆ ಚಾರಿವರಿದು ನಾಟ್ಯ। ಧಾರಿಣಿಯೊಳಗಾಡಿದಂತೆ॥
ಆರಭಟಿಯೊಳು ನೃತ್ಯವನಾಡಿ ಹಿಂದಕೆ। ಸಾರಿದಳಾ ಬೆಲೆವೆಣ್ಣು.... ೨೩

ಸಂಗ್ರಹ: 'ದಲಕ'

ಅಭೂತಪೂರ್ವ ಸೌಲಭ್ಯ
ಹೌದು, ಸಿಂಗರ್ ಅವರ ಕೊಡುಗೆ!


ನಿಮ್ಮ
ಮೆರಿಟ್*
ಹೊಲಿಗೆ ಮೆಶೀನಿನ
ಹಣವನ್ನು 3 ತಿಂಗಳಲ್ಲಿ ಕೊಡಿರಿ!

ಆದರೂ ಲಿಸ್ಟ್ ಪ್ರೈಸ್‌ಗಿಂತ ಒಂದು ಪೈಸೆ ಕೂಡ ಹೆಚ್ಚು ಕೊಡಬೇಡಿ.

"ಇದು ನಿಜಕ್ಕೂ ವಿಸ್ಮಯಜನಕ!"

ಸಿಂಗರ್‌ರವರು ನಿಮಗೆ ಈಗ ಕಂತುಗಳಲ್ಲಿ ಹಣ ಸಲ್ಲಿಸುವ ಸೌಲಭ್ಯವನ್ನೀಯುತ್ತಾರೆ. ಹೆಚ್ಚು ಹಣವನ್ನೇನೂ ಕೊಡಬೇಕಾಗಿಲ್ಲ.





"ನನಗೆ ಎಷ್ಟು ಉಳಿತಾಯವಾಗುತ್ತದೆ, ಊಹಿಸಬಲ್ಲಿರಾ?"

ನೀವು ಮೂರು ತಿಂಗಳೊಳಗೆ ಹಣ ಕೊಟ್ಟರೆ ನಿಮಗೆ ಎಷ್ಟು ಉಳಿತಾಯವಾಗುತ್ತದೆ ನೋಡಿರಿ! ನೀವು ಲಿಸ್ಟ್ ಪ್ರೈಸ್‌ಗಿಂತ ಹೆಚ್ಚೇನೂ ಕೊಡುವುದಿಲ್ಲ. ಅಷ್ಟೇ ಅಲ್ಲ, ನಿಮ್ಮ ಹಣ ನಿಮಗೆ ಎಷ್ಟು ಬೇಗನೆ ಹಿಂದೆ ಬರುತ್ತದೆ ನೋಡಿ! ಮತ್ತು ಅದೆಲ್ಲವೂ ಉಳಿತಾಯವೇ!

"ಒಂದು ಪೈಸೆ ಕೂಡ ಹೆಚ್ಚಿಗೆ ಕೊಡಬೇಕಾಗಿಲ್ಲ"

ಸಾಮಾನ್ಯವಾಗಿ ಕಂತುಗಳಲ್ಲಿ ಹಣ ಸಲ್ಲಿಸುವಾಗ ಸ್ವಲ್ಪ ಹೆಚ್ಚು ಹಣ ಕೊಡಬೇಕಾಗುತ್ತದೆ. ಏಕೆ ಗೊತ್ತೇ? ಈ ಸೌಲಭ್ಯವನ್ನು ನಿಮಗೆ ಒದಗಿಸಲು ಅಷ್ಟು ಹಣವನ್ನು ಕಂಪೆನಿಯೇ ವಹಿಸಬೇಕಾಗುತ್ತದೆ. ಈ ದೃಷ್ಟಿಯಿಂದ, ಈ ಸೌಲಭ್ಯ ನಿಮಗೆ ಲಾಭದಾಯಕವಾಗದೇನಲ್ಲವೇ? ಏಕೆಂದರೆ ನೀವು ಮೆರಿಟ್ ಹೊಲಿಗೆ ಮೆಶೀನಿನ ಹಣ ಸಲ್ಲಿಸುತ್ತಿರುವಾಗಲೇ ನಿಮಗೆ ಉಳಿತಾಯವೂ ಆಗುತ್ತದೆ (ದರ್ಜಿಗೆ ಹಣ ಕೊಡಬೇಕಾಗುವುದಿಲ್ಲ).





"ಇಷ್ಟು ಒಳ್ಳೆಯ ಸಂದರ್ಭ ಹೆಚ್ಚು ಸಮಯ ಉಳಿಯದು!"

ಹೌದು. ಇಷ್ಟು ಒಳ್ಳೆಯ ಸೌಲಭ್ಯವನ್ನು ಸಿಂಗರ್‌ರವರು ಸ್ವಲ್ಪ ಸಮಯದ ವರೆಗೆ ಮಾತ್ರ ನೀಡಬಲ್ಲರು. ಆದ್ದರಿಂದ ತ್ವರೆ ಮಾಡಿರಿ. ಈ ಸುಯೋಗದ ಲಾಭವನ್ನು ಪಡೆಯುವ ಅದೃಷ್ಟಶಾಲಿಗಳಲ್ಲಿ ನೀವೂ ಒಬ್ಬರಾಗಿರಿ! ನಿಮ್ಮ ಸಮೀಪದ ಸಿಂಗರ್ ಅಂಗಡಿಯಲ್ಲಿ ಅಥವಾ ಡೀಲರರಲ್ಲಿ ವಿಚಾರಿಸಿರಿ.

ಇದು ಎಲ್ಲರಿಗೂ ತಿಳಿದ ವಿಷಯವೇ-
ಜಗತ್ತಿಗೆ ಹೊಲಿಯಲು ಕಲಿಸಿದ್ದು ನಾವೇ!

ಸಿಂಗರ್



* ಸಿಂಗರ್ ಕಂಪೆನಿಯ ಟ್ರೇಡ್‌ಮಾರ್ಕ್.

ಸಿಂಗರ್ ಸೋಯಿಂಗ್ ಮಶೀನ್ ಕಂಪನಿ, 207, ಡಿ. ಎನ್. ರೋಡ್, ಬೊಂಬಾಯಿ 400 001.

CHAITRA-SM-79 KAN

ಅಳಿವು-ಉಳಿವು

ಕೆ. ವಿ. ವಿಷ್ಣುವರ್ಧನ

ಆಫೀಸಿನಲ್ಲಿ ಅಂದು ಬಹಳ ಕೆಲಸವಿತ್ತು. ರಾತ್ರಿ ಎಂಟರ ವರೆಗೆ ಕುಳಿತು ಕೆಲಸಮಾಡಿ ಮೈ ಸೋತಿತ್ತು. ಕಾಲೆಳೆದುಕೊಂಡು ರೂಮಿಗೆ ಬಂದು, ನಿತ್ಯದಂತೆ ವಸ್ತ್ರ ಬದಲಾಯಿಸಿ, ಕೈಕಾಲು ತೊಳೆದು, ದೇವರ ಪಟಕ್ಕೆ ಊದು-ಬತ್ತಿ ಹಚ್ಚಿಟ್ಟು, ಅರ್ಧಗಂಟೆಕಾಲ ಕಾಲು ಚಾಚಿ ಕುಳಿತೆ.

ಆಯಾಸದಿಂದ ಜೊಂಪು ಬಂದಂತಾಯಿತು.

ಮೊದಲು ಊಟ ಮುಗಿಸಿ ಸುತ್ತಾಡಿ ಬಂದು ಮಲಗೋಣವೆಂದುಕೊಂಡು ಊಟಕ್ಕೆ ಹೊರಟೆ. ಒಂದು ಗಂಟೆ ಕಾಲದ ಊಟ, ಸುತ್ತಾಟಗಳ ನಂತರ ರೂಮಿಗೆ ಹಿಂತಿರುಗಿದೆ. ನಿದ್ದೆ ಹಾರಿ ಹೋಗಿತ್ತು.

ಅಂದು ಮನೆಗೆ ಪತ್ರ ಬರೆಯಬೇಕಾದುದು ಜ್ಞಾಪಕಕ್ಕೆ ಬಂದಿತು. ಕಾಲು ಗಂಟೆ ಕುಳಿತು ದೀರ್ಘವಾದ ಒಂದು ಪತ್ರ ಬರೆದು ಕವರಿನಲ್ಲಿಟ್ಟೆ.

ನಿದ್ದೆಯ ಮಂಪರು ಕಳೆದಿತ್ತು. ನಿದ್ದೆ ಬರುವವರೆಗೂ ಪುಸ್ತಕವನ್ನಾದರೂ ಓದೋಣವೆಂದು, ಆಲ್ಫ್ರೆಡ್ ಹಿಚ್‌ಕಾಕ್‌ನ ಒಂದು ಪುಸ್ತಕವನ್ನು ಹಿಡಿದು ಕುಳಿತೆ.

ಇದ್ದಕ್ಕಿದ್ದಂತೆ ರೂಮಿನಲ್ಲಿ ಏನೋ ಗುಂಯ್‌ಗುಡುವ ನಾದ ಹೊರಡಲಾರಂಭಿಸಿತು. ಮೊದಮೊದಲು ನಾನು ಅದನ್ನು ಅಷ್ಟಾಗಿ ಗಮನಿಸಲಿಲ್ಲ. ಆ ಶಬ್ದವು ಇನ್ನೂ ಹೆಚ್ಚಾಗಿ ನನ್ನ ಓದಿಗೆ ಭಂಗ ತಂದಂತಾದಾಗ ಸುತ್ತಲೂ ನೋಡಿದೆ. ಆಗ ನನ್ನ ಗಮನಕ್ಕೆ ಹಸಿರು ನೀಲಿ ಬಣ್ಣಗಳ ದೇಹವಿದ್ದ ದೊಡ್ಡ ಜಾತಿಯ ನೊಣವೊಂದು ರೂಮಿನಲ್ಲಿ ಸುತ್ತಾಡುತ್ತಿರುವುದು ಕಂಡು ಬಂದಿತು. ಅದು ಸುತ್ತಾಡುತ್ತ, ಸುತ್ತಾಡುತ್ತ, ಆಗೊಮ್ಮೆ ಈಗೊಮ್ಮೆ ನನ್ನನ್ನು ತಾಕಲಾರಂಭಿಸಿತು. ಒಂದು ಕಡೆ ಅದರ ಗುಂಯ್‌ಗುಡುವ ಗೋಳಿನ ನಾದ, ಮತ್ತೊಂದೆಡೆ ಅದರ ತಾಕಲಾಟ. ನಾನು ಸ್ವಲ್ಪ ಹೊತ್ತು ಸುಮ್ಮನಿದ್ದೆ. ನಂತರ ಬೇಸರದಿಂದ ಅದನ್ನು ಹೊರಗೋಡಿಸಲು ಎದ್ದೆ.

ಅದು ಏನು ಮಾಡಿದರೂ ಹೊರಗೆ ಹೋಗದು. ವೃತ್ತಾಕಾರದಲ್ಲಿ ರೂಮಿನಲ್ಲಿ ಸುತ್ತು ಹಾರಲಾರಂಭಿಸಿತು. ನಾನು ಟವಲನ್ನೆತ್ತಿ ಅದರ ಹಿಂದೆಯೇ ವೇಗವಾಗಿ ಸುತ್ತುತ್ತಾ ಬಂದೆ. ಕಡೆಗೆ ನನ್ನ ಯತ್ನ ಯಶಸ್ವಿಯಾಯಿತೋ ಎನ್ನುವಂತೆ ಅದೆಲ್ಲೋ ಮರೆಯಾಯಿತು.

ನಂತರ ನಾನು ಬಿಟ್ಟಲ್ಲಿಂದ ಕಥೆ ಓದಲು ಕುಳಿತೆ. ಒಳ್ಳೇ ಸ್ವಾರಸ್ಯವಾದ ಘಟ್ಟ. ಪಕ್ಷಿಗಳು ಒಂದು ಪಟ್ಟಣದ ಮೇಲೆ ಮಾಡಿದ ದಾಳಿ

ರೋಮಾಂಚಕಾರಿಯಾಗಿ ವರ್ಣಿಸಲ್ಪಟ್ಟಿತ್ತು. ಕಥೆಯ ನಾಯಕ ಅವುಗಳಿಂದ ತನ್ನ ಸಂಸಾರವನ್ನು ರಕ್ಷಿಸಲೋಸಂಗವಾಗಿ ಮನೆಯ ಕಿಡಿಕಿ, ದ್ವಾರಗಳಿಗೆಲ್ಲ ಹಲಗೆಗಳನ್ನು ಜಡಿಯುವುದು ಮನೆಯ ಕಿಡಕಿ ಬಾಗಿಲುಗಳ ಹಲಗೆಗಳನ್ನು ಪಕ್ಷಿಗಳು ಛಿದ್ರಛಿದ್ರವಾಗಿಸುವುದು, ಇದೇ ರೀತಿ ಕಥೆ ಮುಂದುವರಿಯುತ್ತಿತ್ತು.

ಇದ್ದಕ್ಕಿದ್ದಂತೆ ಎಲ್ಲಿಂದಲೋ ಗುಂಯ್ಯ್ ಗುಂಯ್ಯ್–ನಾದ ಕಥೆಯಲ್ಲಿ ಬರುವ ಪಕ್ಷಿಗಳ ಕೂಗಿನಂತೆ, ಸಮುದ್ರದ ಮೊರೆತದಂತೆ ಕೇಳಿ ಬರಲಾರಂಭಿಸಿತು.

ನಾನು ಒಮ್ಮೆ ಹಿಂದು ಮುಂದು ನೋಡಿ ಏನನ್ನೂ ಕಾಣಲಾರದೆ ಮುಂಡೆ ಓದಲಾರಂಭಿಸಿದೆ. ಆದರೆ ಮತ್ತೆ ಮತ್ತೆ ಆ ಶಬ್ದ ನಿಂತು ನಿಂತು ಬರಲಾರಂಭಿಸಿತು, ಆಗ ನಾನು ಮತ್ತೊಮ್ಮೆ ಕುತೂಹಲದಿಂದ ಸುತ್ತಲೂ ನೋಡಿದೆ. ಆಗ.. ನನ್ನ ಕಣ್ಣಿಗೆ...ಆ ನೊಣ... ಒಂದು ಮೂಲೆಯಲ್ಲಿ...ಒಂದು ಜೇಡನ ಬಲೆಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿರುವುದು ಕಂಡಿತು. ಅದು ಒದ್ದಾಡಿದಷ್ಟೂ ಬಲೆ ಅದರ ಸುತ್ತಲೂ ಬಿಗಿದುಕೊಳ್ಳುತ್ತಿತ್ತು. ನಾನು ಮೆಲ್ಲನೆ ಎದ್ದು ಅದರ ಬಳಿ ಹೋಗಿ ನಿಂತೆ.

ಜಾಣ ನೇಕಾರ ಬಹಳ ಸಮರ್ಥತೆಯಿಂದ ಹೆಣೆದ ಬಲೆಯಂತೆ, ಆ ಜೇಡವು ಮೂಲೆಯನ್ನು ಆಧಾರವಾಗಿಟ್ಟುಕೊಂಡು ಬಲೆಯನ್ನು ತ್ರಿಕೋಣಾಕಾರವಾಗಿ ಹೆಣೆದಿತ್ತು. ಅದರ ವಿನ್ಯಾಸವನ್ನೇ ನೋಡುತ್ತಾ ಕ್ಷಣಕಾಲ ತಲೆದೂಗುತ್ತಾ ನಿಂತೆ. ಅಲ್ಲಿ ಒಂದು ಬದಿಗೆ ನೊಣವು ಸಿಕ್ಕಿಕೊಂಡು ಬಿಡಿಸಿಕೊಳ್ಳಲಾಗದೆ ಒದ್ದಾಡುತ್ತಿತ್ತು. ಅದರ ಒಂದು ರೆಕ್ಕೆಗೆ ಬಲೆಯ ನೂಲು ಚೆನ್ನಾಗಿ ಸುತ್ತಿಕೊಂಡಿತ್ತು. ಮತ್ತೊಂದು ರೆಕ್ಕೆಯು ಸ್ವಾಧೀನದಲ್ಲಿದ್ದುದರಿಂದ ಅದನ್ನು ನೊಣವು ಬಿರುಸಾಗಿ ಆಡಿಸುತ್ತಾ ಬಿಡಿಸಿಕೊಳ್ಳಲು ಪರದಾಡುತ್ತಿತ್ತು. ಬಲೆಯ ಮತ್ತೊಂದು ಮೂಲೆಯಲ್ಲಿ ಜೇಡವೊಂದು ಕುಳಿತು ಆಶೆಯ ಕಂಗಳಿಂದ ತನ್ನ ಬಲೆಗೆ ಸಿಕ್ಕ ಆ ದೊಡ್ಡದಾದ ನೊಣವನ್ನೇ ನೋಡುತ್ತಾ ತನ್ನ ಅ(ನಿ)ಷ್ಟ ಪಾದಗಳನ್ನು ಅಷ್ಟ ದಿಕ್ಕು



ಗಳಿಗೆ ಪಸರಿಸಿ ಮೆಲು ಮೆಲನೆ ನೊಣದೆಡೆಗೆ ಸರಿಯುತ್ತಿತ್ತು.

ಆದರ ಒಂದೇ ಕಾಲು ನೊಣವನ್ನು ಮುಟ್ಟಿದಾಗಲೆಲ್ಲಾ ನೊಣ ಚಡಚಡಿಸುತ್ತಾ ತನ್ನ ರೆಕ್ಕೆಯನ್ನು ರಭಸವಾಗಿ ಆಡಿಸುತ್ತಿತ್ತು. ಅದರ ಪ್ರಹಾರದಿಂದ ಜೇಡ ಹತ್ತಿರ ಸರಿಯಲಾಗದೆ ಪ್ರದಕ್ಷಿಣೆ ಬರಲಾರಂಭಿಸಿತು. ಹಾಗೂ ಅದರಿಂದ ನೊಣವನ್ನು ಕಟ್ಟಿಹಾಕಲಾಗಲಿಲ್ಲ. ಊಹುಂ... ಆ ಭಾರಿ ನೊಣ ಸಿಕ್ಕಿಹಾಕಿಕೊಂಡಿತೆ ಏನಾ ದಕ್ಕಲಿಲ್ಲ.

ನಾನು ಈ ನಾಟಕವನ್ನು ಬಹಳ ಹೊತ್ತು ನೋಡುತ್ತಾ ನಿಂತೆ. ನೊಣದಿಂದ ಪ್ರಹಾರ ಪಡೆದು ಜೇಡ ಓಡಿದಾಗಲೆಲ್ಲ ನನಗೆ ತಡೆಯುಲಾಗದಷ್ಟು ನಗು ಬಂದಿತು. ಆದರೆ ನೊಣ ಹೋರಾಡಿ ಹೋರಾಡಿ ಸುಸ್ತಾಗುತ್ತಿತ್ತು. ಬಿಡಿಸಿಕೊಳ್ಳುವ ಅದರ ಆರ್ಭಟ ನಿಂತಿತು. ಜೇಡ ಮೆಲ್ಲನೆ ಅದನ್ನು ಸುತ್ತುವರಿಯಿತು.

ಆಗಲೇ ನನಗೆ ನಾನು ನೋಡುತ್ತಿರುವ ಭಯಂಕರ ಮೋಜು ಅರ್ಥವಾಯಿತು.

ನನಗೆ ಮಾರಣದ ದವಡೆಯಲ್ಲಿ ಸಿಲುಕಿದ ಪ್ರಾಣಿಯೊಂದನ್ನು ಕಾಪಾಡುತ್ತಿರುವಂಥ ಹೆಮ್ಮನಸ್ಸು ಹುಟ್ಟಿತು. ಒಮ್ಮೆ ಜೇಡನತ್ತ ನೋಡಿದೆ. ಮತ್ತೊಮ್ಮೆ ನೊಣದೆಡೆ ನೋಡಿದೆ. ಜೇಡ ವಿಜಯೋನ್ಮತ್ತವಾಗಿ ಹ್ಹ ಹ್ಹ ಹ್ಹ ಎನ್ನುತ್ತಾ ಹಲ್ಲು ಕಿರಿದು ನೊಣವನ್ನು ಮುತ್ತುತ್ತಿತ್ತು. ನೊಣ ಪರಿತಾಪ ದೃಷ್ಟಿಯಿಂದ ನನ್ನನ್ನು ನೋಡುತ್ತಾ 'ರಕ್ಷಿಸು, ರಕ್ಷಿಸು,' ಎಂದರಚುತ್ತಿತ್ತು. ನಾನು ಉದ್ವೇಗದಿಂದ 'ಇದೋ ಬಂದೆ ಉಳಿಸುತ್ತೇನೆ ತಾಳು' ಎಂದೆ. ನನ್ನ ಕೈಗೆ ಸಿಕ್ಕ ಕಡ್ಡಿಯೊಂದರಿಂದ ಜೇಡನನ್ನು ಓಡಿಸುತ್ತ ನೊಣವನ್ನು ಆ ಸೆರೆಮನೆಯಿಂದ ಬಿಡಿಸಿದೆ. ನೊಣವು ಕಾಲಿಗೆ ರೆಕ್ಕೆಗೆ ಸಿಕ್ಕಿಹಾಕಿ



"ದಪ್ಪ ಚರ್ಮದ ರಾಜಕಾರಣಿಗಳಿಗೆ ಇಂಥಾ ತೆಳುವಾದ ಸೂಜಿ ಉಪಯೋಗ ಬೀಳಬಹುದೇನೆ? ಬೇರೆ ಸೂಜಿ ತೆಗೆದುಕೋ."

ಕೊಂಡಿದ್ದ ಬಲೆಯು ದಾರಗಳನ್ನು ಬಿಡಿಸಿಕೊಳ್ಳಲೆತ್ನಿಸುತ್ತ ನನ್ನ ಮಂಚದ ಕೆಳಗೆ ಬಿದ್ದಿತು. ಜೇಡನನ್ನು ನಾನು ಗಮನಿಸಲೂ ಇಲ್ಲ.

ಕೃತಕೃತ್ಯನಾದವನಂತೆ ನಾನು ನನ್ನ ಮಂಚಕ್ಕೆ ಒರಗಿಕೊಂಡೆ. ಬಿಟ್ಟಲ್ಲಿಂದ ಕಥೆಯನ್ನು ಮತ್ಯಾವ ವಿಘ್ನವೂ ಇಲ್ಲದೆ ರಾತ್ರಿ ಬಹಳ ಹೊತ್ತಿನವರೆಗೂ ಓದಿದೆ. ಮಾರನೇ ದಿವಸ ಭಾನುವಾರ. ಬೇಗ ಏಳುವ ತೊಂದರೆಯೂ ಇರಲಿಲ್ಲ!

ನಾನು ಬೆಳಗ್ಗೆ ಎದ್ದಾಗ ೯–೩೦ ಆಗಿತ್ತು. ಅರೆ... ಅರೆ... ಸ್ನಾನಕ್ಕೆ ನೀರಿರುವುದೋ ಇಲ್ಲವೋ' ಎಂದುಕೊಂಡು ಗಡಿಬಿಡಿಯಿಂದ ಬಚ್ಚಲಿಗೆ ಓಡಿದೆ. ಇದ್ದ ಸ್ವಲ್ಪ ನೀರನ್ನೇ ಸುರಿದುಕೊಂಡು ಮೈ ಒರೆಸಿಕೊಳ್ಳುತ್ತಾ ರೂಮಿಗೆ ಬಂದೆ. ಯಥಾ ಪ್ರಕಾರ ಬೆಳಗಿನ ಪ್ರಾರ್ಥನೆ, ಉಪಾಹಾರ ವಿಧಿಗಳನ್ನು ಮುಗಿಸಿ ಬಟ್ಟೆ ಒಗೆಯಲು ಬಟ್ಟೆಗಳನ್ನು ಜೋಡಿಸಿದೆ. ರೂಮಿನಲ್ಲಿ ಒಂದು ವಾರದ ಕಸ ತುಂಬಿಕೊಂಡಿತ್ತು. ಕಸಬರಿಕೆ ತೆಗೆದೆ. ಒಂದು ಮೂಲೆಯಿಂದ ಗುಡಿಸುತ್ತಾ ಮಂಚದ ಕೆಳಗೆ ತುಂಬಿಕೊಂಡಿದ್ದ ಧೂಳನ್ನೂ ಎಳೆದೆ...

ಆ ಧೂಳಿನಲ್ಲಿ ನಾನು ಹಿಂದಿನ ದಿವಸ ತಿಂದು ಬೀಸಾಡಿದ್ದ ತಿಂಡಿ ಚೂರುಗಳನ್ನು ಮುತ್ತಿದ್ದ ಕಟ್ಟಿರುವೆಗಳು ಇದ್ದವು. ಅಲ್ಲೇ ಆ ರಾಶಿಯಲ್ಲೆ... ಮತ್ತೊಂದು... ಹೊಳಪುಳ್ಳ ವಸ್ತುವಿನ... ಚೂರುಗಳನ್ನು ಕಂಡೆ... ದಿಗ್ಭ್ರಮೆಗೊಂಡೆ... ದಿಙ್ಮೂಢನಾದೆ...

ಅದು ಬೇರೇನೂ ಆಗಿರದೆ ನಾನು ಹಿಂದಿನ ದಿವಸ 'ಉಳಿಸಿದ,' 'ಕಾಪಾಡಿದ', 'ರಕ್ಷಿಸಿದ' ನೊಣದ ಅವಶೇಷವೇ ಆಗಿತ್ತು.

ನಾನು ಬೆಚ್ಚರಗೊಂಡು ಬಹಳ ಹೊತ್ತು ಅದನ್ನೇ ದಿಟ್ಟಿಸಿ ನೋಡುತ್ತಾ ಕುಳಿತೆ.

ಅದರ ದೇಹದೊಳಗಿನದನ್ನೆಲ್ಲಾ ಮುಗಿಸಿದ್ದವು. ಇರುವೆಗಳು.

ನಾನು 'ಮೂಢ... ಮೂಢ... ಮೂಢ ಎಂದು ಹಣೆಗೆ ಬಡಿದುಕೊಂಡೆ. ಅದನ್ನು ನಿನ್ನೆ ನಾನು ನಿಜವಾಗಿ ಉಳಿಸಿದೆ ಎಂದು ನಂಬಿದ್ದೆ. ಅದನ್ನು ಜೇಡವ ದವಡೆಯಿಂದ ಬಿಡಿಸಿದಂತೆ ಅದರ ಬಲೆಯು ಕಟ್ಟುಗಳಿಂದ ಬಿಡಿಸಲಿಲ್ಲವಲ್ಲ. ಆದ್ದರಿಂದಲೇ ಅದು ಕಟ್ಟುಗಳಿಂದ ಬಿಡಿಸಿಕೊಳ್ಳಲಾಗದೆ ಹಾಗೆಯೇ ಕೆಳಗೆ ಬಿದ್ದಿತ್ತು.

ನಾನು ಚಿಂತಿಸಿದೆ. "ನಿನ್ನೆ ನಾನು ಜೇಡನ ದವಡೆಯಿಂದ ಉಳಿಸಿದೆ ಎಂದು ಹೆಮ್ಮೆಗೊಂಡಿದ್ದೆನಲ್ಲ. ತಿಂಡಿಗಾಗಿ ಬಂದಿದ್ದ ಇರುವೆಗಳಿಗೆ ನೀನು ಆಹಾರವಾಗುತ್ತಿ ಎಂದು ನಾನು ಕನಸುಗಂಡಿದ್ದೆನೆ? ನಮ್ಮನ್ನು ಸೃಷ್ಟಿಸಿದ ದೇವ ನಿನ್ನನ್ನು ಇನ್ನೊಂದರ ಆಹಾರವಾಗಿಯೇ ಸೃಷ್ಟಿಸಿದ್ದಲ್ಲಿ ನಿನ್ನನ್ನು ಉಳಿಸಲು ನಾನಾರು?

'ಹ್ಹ... ಹ್ಹ... ಹ್ಹ' ಎಂದಿತು ಧ್ವನಿಯೊಂದು.

ನಾನು ತಲೆಯೆತ್ತಿದೆ...

ಮೂಲೆಯಲ್ಲಿ ಆ ಜೇಡ ತನ್ನ ಹೊಸ ಬಲೆಗೆ ಬಿದ್ದ ಹುಳುವೊಂದನ್ನು ಸುತ್ತುವರಿಯುತ್ತಿತ್ತು.

ನಾನು ಅದನ್ನೇ ನೋಡುತ್ತಾ ಕುಳಿತೆ!

ಉಳಿಸುವುದಕ್ಕೂ, ಅಳಿಸುವುದಕ್ಕೂ ನಾವಾರು?

✡

ದೈವ ಮತ್ತು ಮಾನವಿ ಪ್ರಯತ್ನ ಪರಸ್ಪರ ಅವಲಂಬಿಗಳು. ಉದಾತ್ತರು ಒಳ್ಳೆಯುವೆನಿಸುವ ಮಹತ್ಕಾರ್ಯಗಳನ್ನೇ ಎಸಗುತ್ತಾರೆ. ಹೆಂಬೇಡಿಗಳಾದವರು ಮಾತ್ರ ದೈವವನ್ನು ಆರಾಧಿಸುತ್ತ ಉಳಿಯುತ್ತಾರೆ.

—'ಮಹಾಭಾರತ'ದಿಂದ



ಕಣಜದ ಹುಳಗಳ ಸಂಸಾರ ಚಕ್ರ

ಕೆ. ವಿ. ಭಟ್

ಕಣಜದ ಹುಳಗಳ ಜೀವನಯಾತ್ರೆ ಸ್ವಾರಸ್ಯಕರವಾಗಿದೆ. ಅವುಗಳ ಆಯುಷ್ಯ ಪೂರ್ತಿ ಒಂದು ವರ್ಷ ಕೂಡ ಇಲ್ಲ. ಅವುಗಳ ಸಂತಾನಾಭಿವೃದ್ಧಿಯಾಗುವುದು ಬಹು ಬೇಗ, ಆದರೆ ಅಷ್ಟೇ ತ್ವರಿತವಾಗಿ ಅವುಗಳ ಕುಲ-ಕ್ಷಯವೂ ಆಗಿ ಬಿಡುತ್ತದೆ.

ರಾಣಿ ಕಣಜದ ಹುಳ ಚಳಿಗಾಲವನ್ನೆಲ್ಲ ಮನೆಯ ಮೂಲೆಗಳಲ್ಲಿ ಹಾಕಿದ ಗೋಣಿ ಚೀಲದ ಮೇಲೋ ಕಿಟಕಿ ಪರದೆಗಳ ಮೇಲೋ ಅಥವಾ ಇನ್ನಾವುದಾದರೂ ಅಂಥ ಸಂರಕ್ಷಿತವೆಂದೆನಿಸುವ ಜಾಗದಲ್ಲಿ ನಿಶ್ಚೇಷ್ಟಿತವಾಗಿ ಕುಳಿತು ಕಳೆಯುತ್ತದೆ. ಈಗ ಅದಕ್ಕೆ ಬೇರಾವ ಪರಿವೆಯೂ ಇಲ್ಲ. ಅದು ಪೂರ್ಣ ನಿಶ್ಚೇಷ್ಟಿತವಾಗಿರುತ್ತದೆ. ಈ ತಂದ್ರಿ ಸುಮಾರು ಐದು ತಿಂಗಳ ಕಾಲ ಇರುತ್ತದೆ.

ದೀರ್ಘ ಕಾಲದ ನಂತರ ಎದ್ದ ರಾಣಿಗೆ ಭಾರೀ ಹಸಿವು. ಐದು ತಿಂಗಳ ನಿದ್ದೆಯಲ್ಲಿ ಆಹಾರದ ತುಣುಕಾದರೂ ಅದರ ಹೊಟ್ಟೆಗೆಲ್ಲಿ ಬೀಳಬೇಕು? ನಿದ್ದೆಯಿಂದೆದ್ದೊಡನೆ ಅದು ಪ್ರಥಮತಃ ತನ್ನ ಹಸಿವನ್ನು ನಿವಾರಿಸಲು ಹೂಗಳ ಮೇಲೆ ಕೆಲ ದಿನಗಳನ್ನು ಕಳೆಯುತ್ತದೆ. ಮಕರಂದಪಾನದಿಂದ ಅದು ಭ್ರಮಾಧೀನವಾಗಿ ಮೈಮರೆಯುವುದಿಲ್ಲ. ಹೊಟ್ಟೆ ತುಂಬಿದೊಡನೆ ಅದು ತನ್ನ ಕರ್ತವ್ಯಕ್ಕೆ ಗಮನ ಕೊಡುತ್ತದೆ.

ಮನೆ ಹುಡುಕುವುದೀಗ ರಾಣಿಯ ಮೊದಲ ಕರ್ತವ್ಯ. ನದಿಯ ದಡಗಳ ಮೇಲೆ, ಹೊಂಡಗಳ ಬದಿಗೆ, ಮರಗಳ ಕೆಳಗೆ ಹೀಗೆ ಸಾಗುತ್ತದೆ ಅದರ ಗೃಹಾನ್ವೇಷಣೆ. ಎಲ್ಲಾದರೊಂದು ಕಡೆ ತನಗೆ ವಾಸಿಸಲು ಸಾಕಾಗುವಷ್ಟು ರಂಧ್ರ ಕಂಡರೆ ಸಾಕು, ಅಲ್ಲಿ ಕುಳಿತು ಅತ್ತಿತ್ತ ಹೋಗಿ ಯೋಗ್ಯವಾಗಿದೆಯೋ ಎಂದು ನೋಡುತ್ತದೆ. ಸ್ತ್ರೀಸ್ವಭಾವಗುಣವಾದ ಚಂಚಲತೆಗೆ ಈ ರಾಣಿ ಅಪವಾದವಲ್ಲ. ಹಲವಾರು ಸ್ಥಳಗಳನ್ನು ನೋಡಿದರೂ ಅದಕ್ಕೆ ತೃಪ್ತಿಯಿಲ್ಲ.

ಸೂಕ್ಷ್ಮ ಪರೀಕ್ಷೆಯ ನಂತರ ಒಂದು ಜಾಗ ಅದಕ್ಕೆ ಹಿಡಿಸುತ್ತದೆ. ಅಲ್ಲಿ ಒಂದು ಸಣ್ಣ ತೂತನ್ನು ಮಾಡಿ ಕೊರೆದ ಮಣ್ಣನ್ನು ತುಸು ದೂರದ ಯಾವುದಾದರೊಂದು ಸ್ಥಳಕ್ಕೊಯ್ದು ಹಾಕುತ್ತದೆ. ಹಾಗೆ ಕೆಲ ಗಂಟೆಗಳ ಕಾಲ ಒಳಗಿನ ಪ್ರದೇಶವನ್ನು ವಿಸ್ತಾರಗೊಳಿಸಿದ ಮೇಲೆ ಅದು ತುಸು ದೂರ ಹಾರಿ ಯಾವುದಾದರೊಂದು ಮರದ ಕಾಂಡದ ನಾರುಗಳನ್ನು ಕಿತ್ತುಕೊಳ್ಳುತ್ತದೆ. ಆ ನಾರುಗಳನ್ನು ಅನಂತರ ತನ್ನ ಜೊಲ್ಲಿನೊಂದಿಗೆ ಬೆರೆಸಿ ಒಂದು ತರಹದ ಅಂಟು ಮುದ್ದೆಯನ್ನಾಗಿ ಮಾಡಿ, ಅದನ್ನು ತನ್ನ ಮನೆಯ

ಜಾಗಕ್ಕೆ ಒಯ್ಯುತ್ತದೆ. ಈ ಅಂಟು ಮುದ್ದೆಯೇ ಅದರ ಮನೆ ಕಟ್ಟುವ ಸಾಮಗ್ರಿ.

ಹೀಗೆ ಗೃಹನಿರ್ಮಾಣ ಪ್ರಾರಂಭವಾಗುತ್ತದೆ. ಅಂಟು ಮುದ್ದೆಗಳನ್ನು ಒಂದೊಂದಾಗಿ ತಂದು ಒಂದಕ್ಕೊಂದು ಅಂಟುವಂತೆ ಜೋಡಿಸಿ ಸಾಮಾನ್ಯವಾಗಿ ನಾಲ್ಕು ಕೋಣೆಗಳಿರುವ ಒಂದು ಚೊಕ್ಕ ಮನೆ ನಿರ್ಮಾಣವಾಗುತ್ತದೆ. ಆದರೆ ಒಂದು ವಿಶೇಷ, ಅದರ ಮನೆ ತಲೆ ಕೆಳಗೆ. ಹೆಚ್ಚಾಗಿ ಕಣಜದ ಹುಳಗಳ ಗೂಡುಗಳು ಮರದ ಬೇರಿಗೋ, ಇನ್ನಾವುದಾದರೂ ಅಂಥ ವಸ್ತುವಿಗೋ ಅಂಟಿಕೊಂಡು ತಲೆಕೆಳಗಾಗಿರುತ್ತದೆ.

ಅನಂತರ ರಾಣಿ ನಾಲ್ಕೂ ಕೋಣೆಗಳಲ್ಲಿ ಒಂದೊಂದು ಮೊಟ್ಟೆ ಇಡುತ್ತದೆ. ಬೀಳದಂತೆ ಮೊಟ್ಟೆ ಒಂದು ಅಂಟು ದ್ರವದಿಂದ ಕೋಣೆಯ ಭಿತ್ತಿಗೆ ಅಂಟಿಕೊಂಡಿರುತ್ತದೆ. ಒಂದು ವಾರ ವಾಗುವಷ್ಟರಲ್ಲಿ ಮೊಟ್ಟೆಗಳೊಡೆದು ಮರಿಗಳು ಹೊರಗೆ ಬರುತ್ತವೆ. ಈ ಮರಿಗಳದು ಕೀಟ ಸ್ವರೂಪ. ಈ ಕೀಟಗಳು ಒಡೆದ ಮೊಟ್ಟೆಗಳಿಗೆ ಅಂಟಿಕೊಂಡಿರುತ್ತವಾದ್ದರಿಂದ ಬಿದ್ದು ಬಿಡುವ ಅಪಾಯವಿಲ್ಲ. ಕೀಟಗಳು ದೊಡ್ಡದಾಗಿ ಬೆಳೆದಾಗ ಅವು ಕೋಣೆಯ ಭಿತ್ತಿಗಳಿಗೇ ಅಂಟಿಕೊಂಡು ಸುರಕ್ಷಿತವಾಗಿರುತ್ತವೆ.

ರಾಣಿಗೀಗ ತುಂಬಾ ಕೆಲಸ ಮನೆಯನ್ನು ದೊಡ್ಡದು ಮಾಡಲು ನೆಲ ಕೊರೆಯಬೇಕು, ನಾರು ಮುದ್ದೆಗಳನ್ನು ಒಂದೊಂದೇ ತರಬೇಕು. ಕೋಣೆಗಳನ್ನು ಕಟ್ಟಬೇಕು. ಕೋಣೆಗಳಾದಂತೆ ಮೊಟ್ಟೆಗಳನ್ನು ಇಡುತ್ತ ಹೋಗಬೇಕು, ಮಕ್ಕಳು ಹೆಚ್ಚಾದಂತೆ ಅವುಗಳಿಗೆ ಆಹಾರ ತಂದೀಯಬೇಕು– ಒಂದೇ, ಎರಡೇ, ಕಾರ್ಯಭಾರವನ್ನು ರಾಣಿ ಸ್ತ್ರೀ ಸಹಜ ಸಹನೆಯಿಂದ ನೆರವೇರಿಸತೊಡಗುತ್ತದೆ, ಅದು ತನ್ನ ಮಕ್ಕಳ ಪೋಷಣೆಗಾಗಿ ಮನುಷ್ಯನಿಗೆ ಉಪದ್ರವಕಾರಿಯಾಗಿರುವ ಹಲವು ಕ್ರಿಮಿ ಕೀಟಗಳ ಬೇಟೆಯಾಡುತ್ತದೆ. ಈ ರೀತಿ ರಾಣಿ ಕಣಜದ ಕಾರ್ಯ ಮಾನವನಿಗೆ ಪ್ರಯೋಜನಕರವಾಗುತ್ತದೆ.

ಮೊಟ್ಟೆಯಿಂದ ಹೊರ ಬಂದ ಕಣಜದ ಹುಳಗಳು ಉದ್ದವಾಗಿ ಬೆಳೆಯುತ್ತವೆ. ಅವು ಬಕಾಸುರನಂತೆ ತುಂಬಾ ಆಹಾರ ತಿನ್ನುತ್ತವೆ. ಕ್ರಮೇಣ ಅವು ಮುದುಡಿಕೊಂಡಂತಾಗಿ ಅವುಗಳ ಸುತ್ತ ಒಂದು ಪೆಟ್ಟಿಗೆಯಂಥ ಆವರಣ ಮುಸುಕುತ್ತದೆ. ಈ ಆವರಣದ ಒಳಗೆ ಕೀಟ ಕುಗ್ಗತೊಡಗುತ್ತದೆ. ಆ ಕರಗುವಿಕೆಯನ್ನು ನೋಡಿದರೆ ಕೀಟ ಸತ್ತುಹೋಗುತ್ತದೆ ಏನೋ ಅನಿಸುತ್ತದೆ. ನಿಜವೆಂದರೆ ಅದೊಂದು ಜನ್ಮದಲ್ಲೊಂದು ಪುನರ್ಜನ್ಮದ ಹಾಗೆ. ಬರಬರುತ್ತ ಆವರಣ ಬಣ್ಣ ತಳೆಯುತ್ತ ಕೊನೆಗೆ ಸಮಯ ಪಕ್ವವಾದಾಗ ಒಡೆಯುತ್ತದೆ. ಒಡೆದ ಆ ಪೆಟ್ಟಿಗೆಯಿಂದ ಹರಿದಾಡುತ್ತ ಬರುತ್ತದೆ ಒಂದು ಪುಟ್ಟ ಜೀವಿ. ಅದುವೇ ಕೆಲಸಗಾರ ಕಣಜದ ಹುಳ.

ಕೆಲಸಗಾರ ಕಣಜದ ಹುಳುಗಳೆಲ್ಲ ಹೆಣ್ಣು ಜಾತಿಯವು. ಇದೇ ಮುಂದೆ ಇಡೀ ಕಣಜ ಕುಟುಂಬಕ್ಕೆ ಆಹಾರ ಒದಗಿಸುವ ಪೋಷಕ ವರ್ಗ. ಆದರೆ ಈ ಕಣಜದ ಹುಳುಗಳೆಲ್ಲ ಬಂಜೆಗಳು. ಅವು ಮೊಟ್ಟೆ ಇಡತಕ್ಕ ಹುಳುಗಳಾಗಬೇಕಾದರೆ ಅವುಗಳಿಗೆ ವಿಶೇಷ ಆಹಾರ ಸಿಗಬೇಕಾಗುತ್ತದೆ. ಇವುಗಳಲ್ಲಿ ಕೆಲವಕ್ಕೆ ಕೀಟಾವಸ್ಥೆಯಲ್ಲಿದ್ದಾಗ ಒಳ್ಳೇ ಪೌಷ್ಟಿಕ ಆಹಾರ ಸಿಕ್ಕಿರುವುದರಿಂದಲೋ ಏನೋ, ಮೊಟ್ಟೆಗಳನ್ನಿಡುತ್ತವೆ. ಈ ಮೊಟ್ಟೆಗಳಿಂದ ಹುಟ್ಟುವವೆಲ್ಲ ಗಂಡು ಹುಳುಗಳೇ.

ಸುಮಾರು ಹತ್ತು ಕೆಲಸಗಾರ ಕಣಜಗಳು ಪ್ರೌಢಾವಸ್ಥೆಗೆ ಬಂದೊಡನೆ ರಾಣಿ ತನ್ನ ದುಡಿಮೆಯಿಂದ ನಿವೃತ್ತವಾಗುತ್ತದೆ. ಅದು ಗೂಡಿನಲ್ಲಿ ಹಾಯಾಗಿ ಇರುತ್ತದೆ. ಅದಕ್ಕೀಗ ಇರುವ ಒಂದೇ ಒಂದು ಕೆಲಸವೆಂದರೆ ಮೊಟ್ಟೆಯಿಡುವುದು.

ಈಗ ಕೆಲಸಗಾರ ಹುಳಗಳು ಬಿರುಸಿನ ಕೆಲಸಕ್ಕೆ ಮೊದಲಾಗುತ್ತವೆ. ದಿನೇ ದಿನೇ ಅವುಗಳ ಸಂಖ್ಯೆ ಹೆಚ್ಚತೊಡಗುತ್ತದೆ. ಹತ್ತು, ಇಪ್ಪತ್ತು, ನೂರು, ಸಾವಿರ ಹೀಗೆ ಬೆಳೆಯುತ್ತದೆ ಕಣಜಸಂತತಿ. ಕುಟುಂಬ ದೊಡ್ಡದಾದಂತೆ ಮನೆ ವಿಸ್ತಾರವಾಗಬೇಕು. ಹಳೇ

ಕೋಣೆಗಳನ್ನು ಸರಿಪಡಿಸಬೇಕು. ಪೂರ್ಣ ಜೀರ್ಣವಾಗಿದ್ದ ಭಾಗಗಳನ್ನೆಲ್ಲ ತೆಗೆದು ಬಿಸಾಡಿ ಹೊಸತನ್ನು ಕಟ್ಟಬೇಕು. ಕೆಲಸಗಾರ ಕಣಜಗಳು ಹಾರುತ್ತ ಹೋಗುತ್ತವೆ. ನಾರುಮುದ್ದೆಗಳನ್ನು ತರುತ್ತವೆ. ಕಂಬಗಳೇಳುತ್ತವೆ. ಕೋಣೆಗಳು ಕಟ್ಟಲ್ಪಡುತ್ತವೆ. ಕೋಣೆಗಳು ಪೂರ್ಣವಾಗುವುದೇ ತಡ, ರಾಣಿ ಮೊಟ್ಟೆಗಳನ್ನಿಟ್ಟು ಬಿಡುತ್ತದೆ. ಎಲ್ಲಿ ನೋಡಿದರಲ್ಲಿ ಮೊಟ್ಟೆಗಳು, ಕಣಜ ಕೀಟಗಳು, ಆವರಣದಿಂದ ಹೊರಬಂದ ಕೆಲಸಗಾರ ಹುಳುಗಳು, ಗದ್ದಲವೇ ಗದ್ದಲ ಒಳಗೆಲ್ಲ.

ಕೆಲಸಗಾರರ ಕಣಜ ಹುಳುಗಳಲ್ಲಿ ಕೆಲವು ಗೂಡು ಕಟ್ಟುವುದರಲ್ಲಿ ನಿರತವಾದಾಗ ಇನ್ನು ಕೆಲವು ಆಹಾರ ತಂದು ಕೀಟಕಣಜಗಳನ್ನು ಸಲಹುವ ದಾದಿ ಕೆಲಸವನ್ನು ಮಾಡುತ್ತವೆ. ದಾದಿಹುಳುಗಳಿತ್ತ ಆಹಾರಕ್ಕೆ ಪ್ರತಿಯಾಗಿಯೋ ಎಂಬಂತೆ ಕೀಟಗಳು ಒಂದು ತರದ ಅಂಟುದ್ರವವನ್ನು ಸ್ರವಿಸುತ್ತವೆ. ಈ ದ್ರವವನ್ನು ನೆಕ್ಕಿ ಸವಿದಾಗ ದಾದಿಹುಳುಗಳಿಗೆ ತೃಪ್ತಿ, ಆನಂದ. ಎಲ್ಲಾದರೂ ಕೀಟಕಣಜ ದ್ರವವನ್ನು ಸ್ರವಿಸದಿದ್ದರೆ ದಾದಿ ಹುಳ ಆ ಕೀಟವನ್ನು ಹಿಡಿದು ಸಿಟ್ಟಿನಿಂದ ಅಲ್ಲಾಡಿಸುತ್ತದೆ. ಕೀಟ ಕಣಜ ಈ ದ್ರವವನ್ನು ಸ್ರವಿಸುವ ತನಕ ದಾದಿಹುಳಗಳು ಬಿಡುವುದಿಲ್ಲ.

ಕೀಟಕಣಜಗಳು ತಿನ್ನುವ ಆಹಾರ ಮುಖ್ಯವಾಗಿ ಕ್ರಿಮಿಕೀಟಗಳು. ಪ್ರಾಯಕ್ಕೆ ಬಂದ ಹುಳುಗಳು ಮಾಂಸ ಮತ್ತು ಸಿಹಿತಿಂಡಿಗಳನ್ನು ತಿನ್ನುತ್ತವೆ. ಅವು ತಿನ್ನುವ ಸಿಹಿ ತಿಂಡಿಗಳಲ್ಲಿ ಜೇನು, ಸಕ್ಕರೆ, ಕಳಿತ ಹಣ್ಣು ಮೊದಲಾದವೆಲ್ಲ ಇರುತ್ತವೆ.

ಆಹಾರಕ್ಕಾಗಿ ಅಲೆಯುತ್ತ ಕಣಜದ ಹುಳುಗಳು ಗೂಡು ಬಿಟ್ಟು ಸುತ್ತಿ ಸುತ್ತಿ ಒಂದು ಮೈಲಿಗಿಂತಲೂ ಹೆಚ್ಚು ದೂರ ಸಾಗುವುದುಂಟು. ಆದರೆ ಹಿಂತಿರುಗುವಾಗ ಮಾತ್ರ ಅವು ನೇರವಾಗಿ ತಮ್ಮ ರಂಧ್ರಕ್ಕೆ ಬರುತ್ತವೆ. ಅವು ಗೂಡು ಎಲ್ಲಿದೆ ಎಂದು ಗುರುತಿಗಾಗಿ ಕೆಲ ಬಂಡೆಗಳನ್ನೊ ಮರಗಳನ್ನೊ ಅಥವಾ ಇಂಥದೇ ಏನಾದರೊಂದನ್ನು ಮನಪಿನಲ್ಲಿಟ್ಟಿರುತ್ತವೆ. ಆಗುರುತುಗಳನ್ನೆಲ್ಲಾದರೂ ತಪ್ಪಿಸಿಬಿಟ್ಟರೆ ಅವಕ್ಕೆ ಗೂಡಿನ ಇರವೆ ತಿಳಿಯುವುದಿಲ್ಲ. ಇದು ಹಲವು ಪ್ರಯೋಗಗಳಿಂದ ದೃಢವಾಗಿದೆ.

ಕಣಜದ ಹುಳದ ಗೂಡಿನೊಳಗೆ ಶಿಸ್ತು ನೈರ್ಮಲ್ಯ ಕಾಣದು. ಅವು ಮೋಜಿನ ಜೀವಿಗಳು. ಜೇನ್ನೊಣಗಳಂತೆ ಕಸಕಶ್ಮಲಗಳನ್ನು ಗೂಡಿನಿಂದ ಹೊರಗೆ ಹಾಕುವ ಪರಿಪಾಠ ಇವಕ್ಕಿಲ್ಲ. ಕಣಜದ ಹುಳದ ಗೂಡಿನ ಕೆಳಗೆ ಒಂದು ಸಣ್ಣ ಹೊಂಡ ಇರುತ್ತದೆ. ಕಸಕಶ್ಮಲಗಳೆಲ್ಲ ಅಲ್ಲಿ ಶೇಖರವಾಗುತ್ತವೆ ಕೆಲ ಜಾತಿಯ ಪತಂಗಗಳು (ಪೆಗೋಮಿಯಾ ಮತ್ತು ವೊಲ್ಯುಸೆಲ್ಲಾ) ಕಣಜದ ಹುಳದ ಗೂಡಿನೊಳಗೆ ಕಸಕಶ್ಮಲಗಳ ಹೊಂಡದಲ್ಲಿ ಮೊಟ್ಟೆಗಳನ್ನಿಟ್ಟು ಹೋಗುತ್ತವೆ. ಅಲ್ಲಿನ ಕಸಕಶ್ಮಲಗಳೆಲ್ಲ ಈ ಪತಂಗದ ಮರಿಗಳ ಆಹಾರವಾಗುತ್ತದೆ.

ಶರತ್ಕಾಲ ಬಂತೆಂದರೆ ಕೆಲಸಗಾರ ಹುಳಗಳ ಅವಸಾನ ಸಮೀಪದಲ್ಲಿದೆ ಎಂದೆ ತಿಳಿಯಬೇಕು. ಆಗ ಕೆಲಸಗಾರ ಹುಳಗಳ ಕೆಲಸದ ಗತಿ ತೀವ್ರವಾಗುತ್ತದೆ. ಗೂಡಿನ ಬುಡದಲ್ಲಿ ಇಷ್ಟರ ತನಕ ಕಟ್ಟಿದ ಕೋಣೆಗಳಿಗಿಂತ ದೊಡ್ಡದಾದ ಕೋಣೆಗಳು ಕಟ್ಟಲ್ಪಡುತ್ತವೆ. ಕೋಣೆಗಳನ್ನು ಕಟ್ಟಿದೊಡನೆಯೇ ಮುದಿ ರಾಣಿಹುಳವನ್ನು ಅಲ್ಲಿಗೆ ಒಯ್ಯಲಾಗುತ್ತದೆ. ರಾಣಿ ಅಲ್ಲಿ ಮೊಟ್ಟೆಗಳನ್ನಿಡುತ್ತದೆ. ಆ ಮೊಟ್ಟೆಗಳು ಕೀಟಗಳಾಗಿ ಕ್ರಮೇಣ ಕಣಜದ ಹುಳಗಳಾಗುತ್ತವೆ. ಆದರೆ ಆ ಹುಳಗಳು ಕೆಲಸಗಾರ ಹುಳಗಳಲ್ಲ. ಇವು ರಾಜಕುಮಾರಿ ಹುಳಗಳು ಅರ್ಥಾತ್ ಭಾವೀ ರಾಣಿಗಳು ಮತ್ತು ಗಂಡು ಹುಳಗಳು. ಗಂಡು ಹುಳಗಳು ಮತ್ತು ಹೆಣ್ಣು ಹುಳಗಳಿಗಿರುವ ವ್ಯತ್ಯಾಸ ಇಷ್ಟೇ: ಗಂಡು ಹುಳಗಳ ಗ್ರಾಹಕ ತಂತುಗಳು ತೆಳ್ಳಗೆ ಉದ್ದವಾಗಿರುತ್ತವೆ. ಹೆಣ್ಣು ಹುಳುಗಳ ಗ್ರಾಹಕ ತಂತುಗಳು ತುಸು ದಿಡ್ಡವಾಗಿ ನೇರವಾಗಿರುತ್ತವೆ.

ಈ ಹೊಸತಾಗಿ ಬಂದ ಗಂಡು ಮತ್ತು ಹೆಣ್ಣು ಹುಳಗಳನ್ನು ಮೊದಲಿನಿಂದಲೇ ಇದ್ದ ಕೆಲಸಗಾರ ಹುಳಗಳು ಮೆಚ್ಚುವುದಿಲ್ಲ. ಅವರೊಳಗೆ ಕಾದಾಟಗಳೂ ಆಗುವುದುಂಟು. ಹೀಗೆ ಈ ಹೊಸ ಗಂಡು ಮತ್ತು ಹೆಣ್ಣು ಹುಳ

ಗಳು ಗೂಡನ್ನು ಬಿಟ್ಟು, ಹೂಗಳಿಗೆ ತೆರಳುತ್ತವೆ. ಅಲ್ಲಿ ಅವುಗಳ ಮಧುರ ದಾಂಪತ್ಯ ಜೀವನ ಸಾಗುತ್ತದೆ.

ಸಂಭೋಗಾನಂತರ ರಾಣಿ ಹುಳುಗಳು ಮನೆಯ ಮೂಲೆಗಳಿಗೆ, ಕಿಟಕಿ ಪರದೆಗಳಿಗೆ ದೀರ್ಘ ವಿಶ್ರಾಂತಿಗಾಗಿ ತೆರಳುತ್ತವೆ. ಗಂಡು ಹುಳಗಳ ಭವಿಷ್ಯ? ಅವುಗಳಿಗೆ ರಾಣಿ ಹುಳಗಳಂತೆ ಚಳಿಯನ್ನು ತಡೆದುಕೊಳ್ಳುವ ದೈಹಿಕ ಬಲವಿಲ್ಲ, ಅವು ಕೆಲಸಮಯ ಹೂಗಳಿಗೆ ಅಂಟಿಕೊಂಡು ಕಳೆಯುತ್ತವೆ. ಕ್ರಮೇಣ ರಾತ್ರಿಯ ಚಳಿಯನ್ನು ಸಹಿಸಲಾಗದೆ ಅವು ಸಾಯುತ್ತವೆ.

ಕಣಜದ ಗೂಡಿನ ಅವಸ್ಥೆಯೂ ಇಷ್ಟರಲ್ಲೇ ವಿಪರೀತ ಸ್ಥಿತಿಗೆ ಬಂದಿರುತ್ತದೆ. ಗಂಡು ಮತ್ತು ಹೆಣ್ಣು ಹುಳಗಳ ನಿರ್ಗಮನದೊಡನೆ ಅಲ್ಲಿನ ಶಿಸ್ತು ಭಂಗವಾಗಿರುತ್ತದೆ. ತಾಯಿ ಹುಳ ಆ ಸಮಯಕ್ಕೆ ಸತ್ತುಹೋಗಿರುತ್ತದೆ. ಹುಚ್ಚೆದ್ದ ಕೆಲಸಗಾರ ಹುಳಗಳು ಎಳೆಹುಳಗಳನ್ನು ಸ್ವಾಹಾ ಮಾಡುತ್ತವೆ. ಅವುಗಳ ಅಂತ್ಯವೂ ದೂರವಿರುವುದಿಲ್ಲ. ಕೆಲಸಗಾರ ಹುಳಗಳು ಮತ್ತು ಉಳಿದ ಗಂಡು ಹುಳಗಳು ಕೆಲ ದಿನಗಳಲ್ಲೇ ಚಳಿಯಿಂದಾಗಿ ಪ್ರಾಣಬಿಡುತ್ತವೆ. ಖಾಲಿ ಗೂಡು ಕೆಲ ದಿನಗಳಲ್ಲಿ ಬಿದ್ದು ನಾಶವಾಗುತ್ತದೆ. ಅಲ್ಲಿಗೆ ಕಣಜದ ಹುಳಗಳ ಒಂದು ಜನಾಂಗದ ಕತೆ ಮುಗಿಯಿತು.

ಕಣಜದ ಹುಳಗಳ ದೊಡ್ಡದೊಂದು ಉಪದ್ರವವೆಂದರೆ ಅವು ಜೇನ್ನೊಣಗಳಿಗೆ ಕೊಡುವ ಪೀಡೆ. ಜೇನು ಅವುಗಳ ಪ್ರಿಯ ಆಹಾರ. ಜೇನುಗೂಡಿಗೆ ಬಂದು ಅವು ತುಂಬಾ ತೊಂದರೆ ಕೊಡುತ್ತವೆ. ಜೇನ್ನೊಣಗಳಿಗೆ ಇವುಗಳನ್ನೆದುರಿಸುವ ಸಾಮರ್ಥ್ಯವಾಗಲೀ ಬಲವಾಗಲೀ ಇರುವುದಿಲ್ಲ.

ಕಣಜದ ಹುಳಗಳ ಹೊಟ್ಟೆಯ ಅಡಿಭಾಗದಲ್ಲಿ ಒಂದು ಕೂದಲಿನಂಥ ಅಂಗ ಕಾಣುತ್ತದೆ. ಅದು ಸಿಟ್ಟಿಗೆದ್ದಾಗಲಂತೂ ಅದು ಸ್ಪಷ್ಟವಾಗಿ ಗೋಚರಿಸುತ್ತದೆ. ಇದೇ ಅದು ಕಡಿಯುವ ಕೊಂಡಿಯೆಂದು ಕೆಲವರು ತಿಳಿಯುತ್ತಾರೆ. ಅದು ತಪ್ಪು, ಅದು ಕೊಂಡಿಯಲ್ಲ. ಅದು ಕೊಂಡಿಯ ಮಾರ್ಗದರ್ಶಕ ಎನ್ನಬಹುದು. ಕಣಜದ ಹುಳ ಕಡಿಯಬೇಕಾದರೆ ಮೊದಲು ಈ ಮಾರ್ಗದರ್ಶಕ ದೇಹವನ್ನು ಚುಚ್ಚುತ್ತದೆ. ಅನಂತರ ಅದರ ಬುಡದಿಂದ ಎರಡು ಈಟಿಗಳಂಥ ಕೊಂಡಿಗಳು ಹೊರಗೆ ಬರುತ್ತವೆ. ಅವು ತುಸು ಬಾಗಿರುತ್ತವೆ. ಹುಳದ ದೇಹದ ಒಂದು ಗ್ರಂಥಿ ಸ್ರವಿಸುವ ವಿಷದ್ರವ* ಒಂದು ನಳಿಕೆಯ ಮೂಲಕ ಬಂದು ಕೊಂಡಿಗಳನ್ನು ಸೇರುತ್ತದೆ. ಈ ಕೊಂಡಿಗಳಿಂದಲೇ ಅದು ಚುಚ್ಚುವುದು.

ಕಣಜದ ಹುಳಗಳ ಸಂಪರ್ಕ ವಿಭಾಗವೂ ತುಸು ಸೋಜಿಗವಾದದ್ದು. ಒಂದು ಹುಳಕ್ಕೆ ಕಾದಾಡಬೇಕಾಗಿ ಬಂದರೆ ಕೆಲಕ್ಷಣಗಳಲ್ಲೇ ಅದರ ಪಂಗಡದ ನೂರಾರು ಹುಳಗಳು ಎಲ್ಲಿಂದಲೋ ಅದರ ಸಹಾಯಕ್ಕೆ ಬಂದು ಸೇರುತ್ತವೆ.

ಕಣಜದ ಹುಳಗಳು ಬಹುಬೇಗನೇ ಸಿಟ್ಟಿಗೇಳುತ್ತವಾದರೂ ಅವು ಜೇನ್ನೊಣಗಳಂತೆ ಆಕ್ರಮಣಕಾರಿಗಳಾಗಿ ಬೆಂಬತ್ತಿ ಬರುವುದಿಲ್ಲ. ಇದಕ್ಕಾಗಿ ಕಣಜದ ಹುಳಗಳನ್ನು ಹೊಗಳಲೇಬೇಕು.

* 'ಕಸ್ತೂರಿ'ಯ ೧೯೬೭ ರ ಸಪ್ಟಂಬರ್ ಸಂಚಿಕೆಯಲ್ಲಿ ಪ್ರಕಟವಾದ 'ಕಣಜದ ಹುಳು ಹಾರಾಡುವ ವಿಷಕುಂಭ' ಲೇಖನವನ್ನು ನೋಡಿ. ಪುಟ ೩೩.

ಶಾಂಡ್ರಿನ್ ನದೀ ತೀರದಲ್ಲಿ ಇತ್ತೀಚೆ ಕೆಲ ಪುರಾತತ್ವಶಾಸ್ತ್ರಿಗಳು ಇಪ್ಪತ್ತು ಸಾವಿರ ವರ್ಷಗಳಷ್ಟು ಹಳೆಯದಾದ, ಇಂದು ನಿರ್ವಂಶವಾಗಿ ಹೋದ ಬೃಹದ್ಗಜವೊಂದರ ಪಳೆಯುಳಿಕೆಗಳನ್ನು ಅಗೆದು ತೆಗೆದಿದ್ದಾರೆ. ಪ್ರಪಂಚದಲ್ಲಿ ಇದುವರೆಗೆ ಸುಸ್ಥಿತಿಯಲ್ಲಿ ದೊರೆತ ಈ ಪ್ರಾಣಿಯ ಪಳೆಯುಳಿಕೆಗಳು ಹತ್ತರಷ್ಟು ಮಾತ್ರ. ಈ ಆನೆಯ ಕೋರೆ ಸುಮಾರು ಒಂಬತ್ತು ಅಡಿಗಳಷ್ಟು ಉದ್ದವಾಗಿದೆಯಂತೆ.

ನಗೆಮಲ್ಲಿಗೆ

ಇಬ್ಬರು ಯುವತಿಯರಲ್ಲಿ ಯಾವುದೋ ವಿಷಯಕ್ಕೆ ಜಗಳವಾಗುತ್ತಿತ್ತು ಇಬ್ಬರೂ ಒಬ್ಬರನ್ನೊಬ್ಬರು ಬೈದಾಡುತ್ತಿದ್ದರು. ಒಬ್ಬಳು ಹೇಳಿದಳು, "ಥೂ, ನಿನ್ನಂಥ ಪಾಪಿಗೆ ನರಕದಲ್ಲೂ ಸ್ಥಳ ದೊರೆಯಲಾರದು." ಕೂಡಲೆ ಇನ್ನೊಬ್ಬಳು ಹೇಳಿದಳು: "ಹೌದು, ನೀನಾಗಲೇ ಅದನ್ನು ರಿಸರ್ವ್ ಮಾಡಿಸಿಕೊಂಡಿರಬಹುದು."

—ಪದ್ಮಾ

*

ಜಿಪುಣ ರೈತ ಒಂದು ದಿನ ಬಾವಿಗೆ ಬಿದ್ದುಬಿಟ್ಟನು ಅವನು ಚೀರಿಕೊಂಡು ತನ್ನ ಹೆಂಡತಿಗೆ ಕೂಗಿ ಹೇಳಿದ:- "ನನ್ನನ್ನು ಹೊರತೆಗೆ!"

ಹೆಂಡತಿ ಗಾಬರಿಗೊಂಡು ಹೇಳಿದಳು:- "ಒಳ್ಳೇದು, ನಿಲ್ಲು, ನಾನು ಹೊಲದಿಂದ ಕೂಲಿಯವರನ್ನು ಕೂಗಿ ತರುತ್ತೇನೆ."

ರೈತ ಹೇಳಿದ:- "ಸ್ವಲ್ಪ ನಿಧಾನಿಸು. ಮೊದಲೀಗ ಎಷ್ಟು ಗಂಟೆ ತಿಳಿಸು!"

"ಹನ್ನೆರಡೂ ಮುಕ್ಕಾಲು."

"ಹಾಗಾದರೆ ಹದಿನೈದು ನಿಮಿಷ ತಡೆ. ಊಟದ ವೇಳೆಯಾದಾಗ ಅವರನ್ನು ಕರೆ. ಅಷ್ಟರವರೆಗೂ ಈಜುತ್ತಿರುತ್ತೇನೆ."

*

ಒಬ್ಬ: ಕಮ್ಯೂನಿಸ್ಟನ ಎಲ್ಲಕ್ಕೂ ಉತ್ತಮ ನಿಯಮವೇನು?

ಮತ್ತೊಬ್ಬ: ರಷ್ಯದಲ್ಲಿ ಮಳೆಯಾದಾಗ ಹಿಂದುಸ್ಥಾನದಲ್ಲಿ ಛತ್ರಿ ಹಿಡಿದು ನಡೆಯುವುದು.

*

ಉಪಾಧ್ಯಾಯರಿಗೆ ಜರೂರಾದ ಕೆಲಸ ಮಾಡಬೇಕಿತ್ತು ಆದುದರಿಂದ ಅವರು ತಮ್ಮ ಟೋಪಿ ತೆಗೆದು ಮೇಜಿನ ಮೇಲಿಟ್ಟು ಹೇಳಿದರು: "ಮಕ್ಕಳೇ, ನೋಡಿ, ಇದು ಟೋಪಿ; ಇದರ ಮೇಲೆ ಚಿಕ್ಕದಾದ ಸುಂದರ ಲೇಖನ ಬರೆಯಿರಿ."

ತರಗತಿ ಕೆಲಸದಲ್ಲಿ ತೊಡಗಿಬಿಟ್ಟಿತು, ಮತ್ತು ಐದು ನಿಮಿಷ ತರಗತಿಯಲ್ಲಿ ಶಾಂತಿಯಿದ್ದಿತು. ತರಗತಿಯ ಹಿಂದಿನಿಂದ ಧ್ವನಿ ಬಂದಿತು: "ಸಾರ್ 'ಕೊಳಕು'ನಲ್ಲಿ 'ಕೊ' ಚಿಕ್ಕದೋ ದೊಡ್ಡದೋ?"

*

ತಂದೆ-ತಾಯಿಗಳು ತಮ್ಮ ಮೂರು ಮಕ್ಕಳನ್ನೂ ಮನೆಯಲ್ಲೇ ಬಿಟ್ಟು ಸಿನಿಮಾಕ್ಕೆ ಹೋದರು. ಹಿಂತಿರುಗಿ ಬಂದಾಗ ಬಾಗಿಲಲ್ಲೇ ಮಕ್ಕಳು ಅವರಿಗೆ ಸಿಕ್ಕಿದರು.

ತಾಯಿ ಕೇಳಿದಳು: "ಏನ್ರೋ, ನೀವು ಗಲಾಟೆಯೇನು ಮಾಡಲಿಲ್ಲವೇನು?"

ಹುಡುಗಿ ಹೇಳಿದಳು: "ಇಲ್ಲ, ನಾನು ಟೀ ಕುಡಿದ ಕಪ್‌ಗಳನ್ನೆಲ್ಲಾ ತೊಳೆದು ಇಟ್ಟಿದ್ದೇನೆ."

ಹುಡುಗ ಬಹು ಹೆಮ್ಮೆಯಿಂದ ಹೇಳಿದ: "ನಾನು ಅವುಗಳನ್ನೆಲ್ಲಾ ಒರೆಸಿಟ್ಟೆ."

ತಾಯಿ: (ಮೂರನೆಯವನೊಡನೆ) "ಏಕೆ, ರಾಮು ನೀನೇನು ಮಾಡಿದೆ?"

ರಾಮು: "ನಾನು ಕಪ್ಪುಗಳ ಚೂರನ್ನೆಲ್ಲಾ ಎತ್ತಿಕೊಂಡು ಹೋಗಿ ಕಸದಲ್ಲಿ ಹಾಕಿದೆ."

*

ಒಬ್ಬ ಮನುಷ್ಯ ಕೈತೋಟದಲ್ಲಿ ಹುಲ್ಲಿನ ಮೇಲೆ ನಡೆಯುತ್ತಿದ್ದನು. ಅಷ್ಟರಲ್ಲಿ ಓರ್ವ ವೃದ್ಧ ಅಲ್ಲಿಗೆ ಬಂದು, "ಸ್ವಾಮಿ, ಸ್ವಲ್ಪ ನಿಮ್ಮ ಪೆನ್ಸಿಲ್ ಕೊಡಬಲ್ಲಿರಾ?" ಎಂದು ಕೇಳಿದ. "ಆಗಲಿ," ಎಂದು ಆ ಮನುಷ್ಯ ಪೆನ್ಸಿಲ್ ಕೊಟ್ಟ "ತುಂಬಾ ಥ್ಯಾಂಕ್ಸ್. ಈ ಪೆನ್ಸಿಲನ್ನು ನಾನೇತಕ್ಕಾಗಿ ಬೇಡಿದೆನೆಂದರೆ, ತಮ್ಮ ಹೆಸರು- ವಿಳಾಸ ಬರೆದುಕೊಳ್ಳಲೆಂದು ಇಲ್ಲಿ ಹುಲ್ಲಿನ ಮೇಲೆ ತಿರುಗುವುದು ಶಿಕ್ಷಾರ್ಹ."

*

ಸ್ಕೂಲಿನ ಇನ್‌ಸ್ಪೆಕ್ಟರ್ ಒಬ್ಬ ಹುಡುಗನೊಡನೆ ಅವನ ಬುದ್ಧಿಯನ್ನು ಪರೀಕ್ಷಿಸಲು ಪ್ರಶ್ನಿಸಿದರು: "ಮೊನ್ನೆ ನಾನು ೨೫ ಗಜ

ಅಗಲವಾದ ಮಾರ್ಗದಲ್ಲಿ ೧೦೦ ಗಜ ಕಾಲ್ನಡಿಗೆ ನಡೆದೆ. ಹಾಗಾದರೆ ನಿನ್ನ ವಯಸ್ಸೆಷ್ಟು?"

ಸ್ವಲ್ಪ ಯೋಚಿಸಿ ಆ ಹುಡುಗ ಹೇಳಿದ, "ಸ್ವಾಮಿ, ೩೪ ವರ್ಷ."

ಇನ್‌ಸ್ಪೆಕ್ಟರ್‌ಗೆ ಉತ್ತರ ಸರಿಯಾದದ್ದು ಕೇಳಿ ತಲೆ ತಿರುಗಿದಂತಾಯಿತು. "ನೀನು ಇದನ್ನು ಹೇಗೆ ಕಂಡುಹಿಡಿದೆ? ಅವರು ಹುಡುಗನನ್ನು ಪ್ರಶ್ನಿಸಿದರು.

ಸ್ವಾಮೀ ನನಗೊಬ್ಬ ಅಣ್ಣನಿದ್ದಾನೆ, ಅವನು ಅರೆ ಹುಚ್ಚ. ಆತನ ವಯಸ್ಸು ೧೭." — ಕಾ. ಶ್ರೀ. ಗೋಪಾಲ ಶ್ರೀವತ್ಸ

*

ಪೋಲಿಸ್ ಪೇದೆಯೊಬ್ಬ ಪೋಲಿಸ್ ಸ್ಟೇಶನ್ನಿಗೆ ಓಡಿಬಂದು ಇನ್‌ಸ್ಪೆಕ್ಟರರಿಗೆ, "ಸರ್, ಆ ಪ್ರಸಿದ್ಧ ಕಳ್ಳನ ಬೆರಳಚ್ಚುಗಳನ್ನು ತಂದಿದ್ದೇನೆ," ಎಂದನು. ಸಾಹೇಬರು ಸಂತೋಷದಿಂದ, "ಗುಡ್, ಎಲ್ಲಿ ತೋರಿಸು," ಎಂದಾಗ ಆ ಪೇದೆಯು ತನ್ನ ಗಲ್ಲವನ್ನು ತೋರಿಸಿ, "ಇಲ್ಲಿದೆ ಸರ್," ಎಂದ.

*

"ನನ್ನ ನೆನಪಿನ ಶಕ್ತಿ ಹೆಚ್ಚುವುದಕ್ಕೆ ಡಾಕ್ಟರರು ಕೆಲವು ಗುಳಿಗೆ ಕೊಟ್ಟಿದ್ದರು."

"ಹಾಗಾದರೆ, ನಿನ್ನ ನೆನಪಿನ ಶಕ್ತಿ ಚೆನ್ನಾಗಿರಬೇಕು."

"ಆದರೆ, ಆ ಗುಳಿಗೆಗಳನ್ನು ಎಲ್ಲಿಟ್ಟಿದ್ದೇನೆಯೋ ನೆನಪಿಲ್ಲ."

—ವಿನಾಯಕ ಕುಲಕರ್ಣಿ

*

ಇಬ್ಬರು ಮಹಿಳಾಮಣಿಗಳು ಇಂಗ್ಲಿಷ್ ಚಿತ್ರ ನಡೆಯುತ್ತಿದ್ದ ಚಿತ್ರಮಂದಿರದ ಬಳಿ ಮಾತನಾಡುತ್ತಾ ನಿಂತಿದ್ದಾಗ ಒಬ್ಬಳು, "ಇಂಗ್ಲಿಷ್ ಸಿನಿಮಾಕ್ಕೆ ಬಂದಿದಿಯಲ್ಲೆ! ನಿನಗೆ ಇಂಗ್ಲಿಷ್ ಓದೋದಕ್ಕೆ ಬರುತ್ತೇನೆ?" ಎಂದು ಕೇಳಿದಳು. ನಾನು ಸಿನಿಮ ಓದೋದಿಲ್ಲ ಕಣೆ," ಉತ್ತರಿಸಿದಳು ಇನ್ನೊಬ್ಬಳು. —ಅಭಿನಂದನಾ



"ನಿಜ ಹೇಳಬೇಕೆಂದರೆ ಇತ್ತೀಚಿನ ಗಲಭೆಗಳಲ್ಲಿ ಸುಟ್ಟುಹೋದ ಸ್ಟೇಶನ್ ಇದು. ಆದರೂ ಪ್ರವಾಸೋದ್ಯಮ ಶಾಖೆಯವರು ಪ್ರೇಕ್ಷಣೀಯ ಸ್ಥಳವಾಗಿ ಇದನ್ನು ತಮ್ಮ ಲಿಸ್ಟಿನಲ್ಲಿ ಸೇರಿಸಿಕೊಂಡಿದ್ದಾರೆ.

ಕಚ್ಛದ ಜಾನಪದ ಕಥೆ

ಜೇಸಲ್-ತೋರಲ್

ಕನ್ನಡಕ್ಕೆ : ಬಿ. ಎನ್. ಜಿ.

ಕರುಣೆಗಿಂತ ಮಿಗಿಲಾದ ಶಾಮಕ ಇಲ್ಲ. ತೋರಲ್‌ಳ ಕರುಣೆಯೇ ಕಠೋರ ಜೇಸಲ್‌ನ ಹೃದಯ ಪರಿವರ್ತನ ಸಾಧಿಸಿತು.

ಕಚ್ಛ ಪ್ರದೇಶದಲ್ಲಿ ಇವತ್ತಿಗೂ ಜೇಸಲ್ ಪೀರ್ ಹಾಗೂ ಸತಿ ತೋರಲ್ ಇವರ ಗುಣಗಾನವನ್ನು ಕೇಳಬಹುದು. ಈ ಜೇಸಲ್ ಪೀರ್ ಮತ್ತು ಸತಿ ತೋರಲ್ ಯಾರು? ಎಂದರೆ- ಜೇಸಲ್ ಯದುವಂಶದ ಜಾಡೇಜಾ. ಈ ಜಾಡೇಜಾ ಸ್ವಭಾವದಿಂದ ಬುದ್ಧಿವಂತರೂ ಮತ್ತು ಶೂರ ಯೋಧರೂ ಆಗಿರುತ್ತಾರೆ. ಆದರೆ ಅಷ್ಟೇ ಹಟಮಾರಿಗಳೂ ಹೌದು. ಏನನ್ನಾದರೂ ಮಾಡಲು ಒಂದು ಬಾರಿ ನಿಶ್ಚಯಿಸಿದರೆ ಸಾಕು, ಅದು ಎಂತಹುದೇ ಆಗಿರಲಿ–ಒಳ್ಳೆಯದೇ ಆಗಲಿ. ಕೆಟ್ಟದೇ ಆಗಲಿ–ಅದನ್ನು ಜೀವನಪರ್ಯಂತ ನಡೆಸಿಕೊಂಡು ಹೋಗುತ್ತಾರೆ. ಬೇರೆಯವರಿಗಾಗಿ ಪ್ರಾಣ ಕೊಡುವುದರಲ್ಲೇ ಆಗಲಿ, ಪ್ರಾಣ ತೆಗೆಯುವುದರಲ್ಲೇ ಆಗಲಿ ಅವರಿಗೆ ಯಾವ ಸಂಕೋಚವೂ ಇಲ್ಲ. ಇಂತಹದೇ ವ್ಯಕ್ತಿ ಈ ಜೇಸಲ್. ಶಿಕ್ಷಣ ಎಂದು ಅವನು ಕಲಿತದ್ದು ಖಡ್ಗ ತಿರುಗಿಸುವುದು. ಜೊತೆಗಾರನೆಂದರೆ ಅವನ ಹತ್ತಿರ ಇರುವ ಒಂದೇ ಒಂದು ಹೆಣ್ಣು ಕುದುರೆ, ಮಾಡುವ ಒಂದೇ ಒಂದು ಕೆಲಸ ಸುಂದರವಾದ ಸ್ತ್ರೀಯರನ್ನು ಅಪಹರಿಸುವುದು ಹಾಗೂ ಅವರ ಸಹವಾಸ. ಹೀಗಾಗಿ ಅಕ್ಕಪಕ್ಕದ ಜನರು ಜೇಸಲ್ ಜಾಡೇಜಾನ ಹೆಸರು ಕೇಳಿಯೇ ನಡುಗುತ್ತಿದ್ದರು.

ಕೊನೆಗೊಂದು ದಿನ ಊರ ಜನ ಅವನ ವಿರುದ್ಧ ಅವನ ಅಣ್ಣನ ಮುಂದೆ, "ನಿನ್ನ ತಮ್ಮ ಜೇಸಲ್ ಮೃಗವಾಗಿದ್ದಾನೆ. ಪಶು, ಪಕ್ಷಿ ಮತ್ತು ಮನುಷ್ಯ ಯಾರ ಮೇಲೂ ಅವನ ಹೃದಯದಲ್ಲಿ ದಯೆ ಇಲ್ಲ. ಯಾರನ್ನೂ ಬಿಡುತ್ತಿಲ್ಲ," ಎಂದು ದೂರಿದರು. ಹಳ್ಳಿಯವರನ್ನು ಸಮಾಧಾನ ಪಡಿಸಿ ಆಶ್ವಾಸನೆ ನೀಡಿ ಕಳುಹಿಸಿದ ಮೇಲೆ ಸಿಟ್ಟಿನಿಂದ ಬೆಂಕಿಯಾಗಿ ಅಣ್ಣ ತನ್ನ ಪತ್ನಿಗೆ ಹೇಳಿದ:

"ಬರಲಿ, ಈ ದಿನ ಅವನಿಗೆ..."

"ಅವನು ಈಗ ಬರುತ್ತಿರಬಹುದು... ಹಠಾತ್ತಾಗಿ ಅವನಿಗೆ ಏನೂ ಹೇಳಲು ಹೋಗಬೇಡಿ... ಅವನು ಊಟ ಮಾಡಿದ ನಂತರ ಏನಾದರೂ ಹೇಳಿ." ಜೇಸಲ್‌ನ ಅತ್ತಿಗೆ ನುಡಿದಳು.

"ನನಗೆ ಸಿಟ್ಟು ತರಿಸಬೇಡ. ಈ ದುಷ್ಟನನ್ನು ಅಮ್ಮ ಯಾಕೆ ಹೆತ್ತಳೋ! ಬರಲಿ ಈ ದಿನ ಅವನು..." ಅಣ್ಣನ ಸ್ವರದಲ್ಲಿ ದೃಢತೆ ಇತ್ತು. ಜೇಸಲ್ ಮನೆಗೆ ಹಿಂತಿರುಗಿದ. ಅತ್ತಿಗೆ ಊಟ ಬಡಿಸಿದಳು. ಅವನು ಊಟ ಮಾಡಲು ತುತ್ತು ಎತ್ತಿದ. ಕೈ ಬಾಯಿ ಹತ್ತಿರವೂ ಹೋಗಿರಲಿಲ್ಲ.

ಅಷ್ಟರಲ್ಲಿ ಅಣ್ಣ ಅಲ್ಲಿಗೆ ಬಂದು, "ನಿನಗಿಂತ ಹಾವು-ಚೇಳುಗಳೇ ವಾಸಿ. ಅವು ಕೆಲವರನ್ನು ಮಾತ್ರ ಕಚ್ಚುತ್ತವೆ. ನೀನು ಇಡೀ ಹಳ್ಳಿಗೇ ವೈರಿಯಾಗಿ ತಿರುಗುತ್ತೀಯೆ. ಇಲ್ಲಿ ನೋಡು. ಇನ್ನು ನಿನಗೆ ಈ ಮನೆಯಲ್ಲಿ ಸ್ಥಾನವಿಲ್ಲ, ಆ ಪೆಟ್ಟಿಗೆಯಲ್ಲಿ ಅಪ್ಪ-ಅಜ್ಜ ಅವರ ಆಸ್ತಿ ಇದೆ. ಏನು ಬೇಕೋ ಅದನ್ನು ತೆಗೆದುಕೊಂಡು ಇಲ್ಲಿಂದ ಹೊರಡು," ಎಂದ.

ಜೇಸಲ್ ಕೈಯಲ್ಲಿನ ತಂತ್ರನ್ನು ತಟ್ಟೆಗೆ ಹಾಕಿ ಪೆಟ್ಟಿಗೆಯ ಹತ್ತಿರ ಬರದು ಪೆಟ್ಟಿಗೆ ಯಿಂದ ಹಳೆಯದಾದ ಕತ್ತಿಯೊಂದನ್ನು ತೆಗೆದುಕೊಂಡ. "ಅಣ್ಣಾ, ಅಪ್ಪ-ಅಜ್ಜ ಇವರ ಆಸ್ತಿಯಲ್ಲಿ ನನಗೆ ಇದೊಂದೇ ಸಾಕು. ಇನ್ನೇನೂ ಬೇಡ," ಎಂದು ಅದನ್ನೆತ್ತಿಕೊಂಡ.

ಜೇಸಲ್ ಮನಸ್ಸಿನಲ್ಲಿ ಗ್ಲಾನಿ-ಸಿಟ್ಟನ್ನು ಹೊತ್ತು ಏನೊಂದೂ ಯೋಚಿಸದೆ ಮನೆ ಬಿಟ್ಟು ತನ್ನ ಏಕಮಾತ್ರ ಸೋದರಿಯ ಮನೆ ತಲುಪಿದ. ಅಣ್ಣನ ತಿರಸ್ಕಾರ ದಿಂದ ಉಂಟಾದ ಗಾಯ ಸೋದರಿಯ ಪ್ರೀತಿಯಿಂದ ತೊಳೆದುಹೋದೀತು ಎಂಬ ಆಸೆ ಇತ್ತು ಅವನಲ್ಲಿ. ಆದರೆ ಅವನ ಭಾವ ಅವನನ್ನು ನೋಡುತ್ತ, ತಿರಸ್ಕಾರ ದಿಂದಲೇ, "ಭೇಷ್! ಅಣ್ಣ ಹೇಳುತ್ತಿದ್ದಂತೆಯೇ ನೀನು ಹೊರಟು ಬಂದೆ. ಆದರೆ ನೀನು ಮಾಡಿರುವ ಅತ್ಯಾ-ಚಾರದ ಕಥೆ ನಿನಗಿಂತ ಮುಂಚೆ ಇಲ್ಲಿಗೂ ತಲುಪಿರಬಹುದು ಎಂಬ ಬಗ್ಗೆ ಯೋಚಿಸಿದೆಯಾ? ಕೊನೆಯ ಪಕ್ಷ ನಮ್ಮ-ನ್ನಾದರೂ ನೆಮ್ಮದಿಯಿಂದ ಬಾಳಲು ಬಿಡು," ಎಂದ.

ಭಾವನ ತಿರಸ್ಕಾರದ ನುಡಿ ಕೇಳಿ ಜೇಸಲ್ ಕ್ರೋಧಗೊಂಡ. ತಾನೇ ತಾನಾಗಿ ಖಡ್ಗ ಹೊರ ಬಂತು. ಆದರೆ ಅಷ್ಟರಲ್ಲಿ ಅವನ ಸೋದರಿ ಇಬ್ಬರ ಮಧ್ಯೆ ಬಂದಳು. ಅವಳೂ ಸಹ ಜೇಸಲ್‌ನನ್ನೇ ನಿಂದಿಸಿದಳು. ಎರಡು ಕ್ಷಣ ಜೇಸಲ್ ತನ್ನ ಪ್ರೀತಿಯ ಸೋದರಿ ಯನ್ನು ದಿಟ್ಟಿಸಿದ. ನಂತರ ಕೈಯಲ್ಲಿ ಹಿಡಿ ಮಣ್ಣನ್ನು ಹಿಡಿದು ತೂರುತ್ತ, "ಈ ಜೇಸಲ್ ಇಂದಿನಿಂದ ಮಣ್ಣಿನಲ್ಲಿ ಸೇರಿಹೋದ ಎಂದು ತಿಳಿದುಕೋ... ಇನ್ನು ಹೆಜ್ಜೆ ಹೆಜ್ಜೆಗೆ ಬೆಂಕಿ ಇಡುತ್ತೇನೆ. ಇನ್ನು ನಾನು-ಈ ಖಡ್ಗ. ಇನ್ನಾರೂ ಇಲ್ಲ," ಎಂದವನೇ ಅಲ್ಲಿಂದ ಹೊರಟ.



ಅಂದಿನಿಂದ ಜೇಸಲ್ ಹಾಗೂ ಅವನ ಕತ್ತಿಯ ಉಪಟಳಕ್ಕೆ ಆಸುಪಾಸಿನ ಜನರೆಲ್ಲಾ ಥರಥರ ನಡುಗಲಾರಂಭಿಸಿದರು. ಬಿರುಗಾಳಿಯಂತೆ ಗರ್ಜಿಸುತ್ತಿದ್ದ, ನಿರ್ದಯಿ ದರೋಡೆಕೋರನಂತೆ ಎಲ್ಲದನ್ನು ಲೂಟಿ ಮಾಡುತ್ತಿದ್ದ, ಕಟುಕನಾಗಿ ಜನಗಳನ್ನು ಕತ್ತರಿಸುತ್ತಿದ್ದ, ಸೈತಾನನಾಗಿ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಸುತ್ತಿದ್ದ. ಕ್ರೋಧ, ಹಿಂಸೆ, ಲೂಟಿ, ಬಲಾತ್ಕಾರ ಇವೆಲ್ಲಾ ಸೇರಿದ ಒಂದು ರೂಪವಾಗಿದ್ದ — ಜೇಸಲ್. ಇವನ ಹೆಸರು ಕೇಳಿದರೆ ಸಾಕು ಜನರ ಹೃದಯ ಭೀತಿಯಿಂದ ಹೊಡೆದುಕೊಳ್ಳುತ್ತಿತ್ತು, ಸ್ತ್ರೀಯರ ಗರ್ಭಪಾತವಾಗುತ್ತಿತ್ತು. ವೀರರು ತಲೆ ತಗ್ಗಿಸುತ್ತಿದ್ದರು. ಜೇಸಲ್‌ನನ್ನು ಎದುರಿಸುವ ಯಾವ ವ್ಯಕ್ತಿಯೂ ಇರಲಿಲ್ಲ. ಅವನನ್ನು ಯುದ್ಧಕ್ಕೆ ಆಹ್ವಾನಿಸುವ ಶಬ್ದ ಬಾಯಿಂದ ಹೊರಡುವ ಮುನ್ನವೇ ಜೇಸಲ್‌ನ ಖಡ್ಗ ಅವನ ತಲೆಯನ್ನು ಮುಂಡದಿಂದ ಕತ್ತರಿಸಿ ಹಾಕುತ್ತಿತ್ತು. ದೂರ ದೂರದವರೆಗೆ ಹಾಹಾಕಾರ ಹಬ್ಬಿತು.

ಈ ರೀತಿ ಹಾಹಾಕಾರ ಹಬ್ಬಿದ ಆತಂಕಕಾರಿ ರಾಜ್ಯದಲ್ಲಿ ಕಾಠಿಯಾವಾಡದ ರಾಜಕುಮಾರಿ ತೋರಲ್‌ಳ ವಿವಾಹವಾಯಿತು. ಮಣಿಗಳಿಂದ ಗೆಜ್ಜೆಗಳಿಂದ ಅಲಂಕೃತವಾದ ಪಲ್ಲಕ್ಕಿಯಲ್ಲಿ ಕುಳಿತು ತೋರಲ್ ಮಾವನ ಮನೆಗೆ ಹೊರಟಳು. ಈ ರೀತಿ ಮಾವನ ಮನೆಗೆ ಬರುತ್ತಿರುವ ನವವಧುಗಳನ್ನು ತಡೆಯುವುದು, ಮತ್ತು ತನ್ನ ಖಡ್ಗದ ಬೆದರಿಕೆಯಿಂದ ತನ್ನ ಕಾಮಪಿಪಾಸೆ ತೀರಿಸಿಕೊಳ್ಳುವುದು ಜೇಸಲ್‌ನ ನಿತ್ಯ ಕೆಲಸವಾಗಿತ್ತು. ಆದರೆ ಸಂಯೋಗವಶಾತ್ ತೋರಲ್‌ಳ ಪಲ್ಲಕ್ಕಿ ಸುರಕ್ಷಿತವಾಗಿ ಬಂದು ತಲುಪಿತು, ಪ್ರಥಮ ರಾತ್ರಿ ಹಾಸಿಗೆಯ ಪಕ್ಕದಲ್ಲಿ ದೀಪ ಹಚ್ಚಿಟ್ಟು ಪತಿ ಠಾಕೂರ್ ಜೊತೆ ಸ್ನೇಹ ಸಂಭಾಷಣೆ ನಡೆಸಲು ಬಂದ ತೋರಲ್ ಪತಿಯ ಮುಖದಲ್ಲಿ ಚಿಂತೆಯ ರೇಖೆಗಳನ್ನು ಕಂಡು ಚಕಿತಳಾದಳು. ಪತ್ನಿಯ ಪ್ರಶ್ನೆಗೆ, "ದಾರಿಯಲ್ಲಿ ಜೇಸಲ್‌ನ ದೃಷ್ಟಿ ನಿನ್ನ ಮೇಲೆ ಬಿದ್ದಿದ್ದರೆ ಏನಾಗುತ್ತಿತ್ತು! ಎಂದು ಯೋಚಿಸುತ್ತಿದ್ದೇನೆ," ಎಂದು ಉತ್ತರಿಸಿದ.

"ಬಹಳ ಚಿನ್ನಾಗಿರುತ್ತಿತ್ತು," ತೋರಲ್ ನಗುತ್ತಾ ಉತ್ತರಿಸಿದಳು. "ಪಾಪ ಅವನ ಆಸೆ ಆಸೆಯಾಗಿಯೇ ಉಳಿಯುತ್ತಿತ್ತು. ನನ್ನ ಕಡೆ ಕಣ್ಣೆತ್ತಿ ನೋಡಿದರೆ ಸಾಕು ಖಡ್ಗ ಎತ್ತುವುದನ್ನೇ ಮರೆಯುತ್ತಿದ್ದ."

"ನಿನ್ನ ಬಗ್ಗೆ ಅಷ್ಟು ಭರವಸೆ ಇದೆಯೋ ನಿನಗೆ!"

"ನನ್ನ ಮೇಲೆ ಅಲ್ಲ, ಪ್ರಕೃತಿಯ ಅಪಾರವಾದ ಲೀಲೆಯ ಮೇಲೆ ವಿಶ್ವಾಸ. ಪ್ರಕೃತಿ ಸ್ತ್ರೀಯನ್ನು ಹೂ ಮತ್ತು ಚಂದ್ರನಂತೆ ಸೃಷ್ಟಿಸಿದೆ. ಆದರೆ ಜೇಸಲ್‌ಗೂ ಸಹ ಯಾರೋ ಒಬ್ಬ ಹೆಂಗಸೇ ತಾನೇ ಜನ್ಮ ಕೊಟ್ಟವಳು. ಪುರುಷನಿಗೆ ಜನ್ಮ ಕೊಡುವ ಶಕ್ತಿ ಸ್ತ್ರೀಗೆ ಹೇಗಿದೆಯೋ ಹಾಗೆ ಅವನನ್ನು ಸಂಧಾರಿಸಿ ಸರಿಯಾದ ಮಾರ್ಗದಲ್ಲಿ ತರುವ ಶಕ್ತಿಯೂ ಅವಳಿಗಿದೆ."

"ಹೋಗಲಿ ಬಿಡು, ಆ ದಾರಿ ತಪ್ಪಿದ ಮನುಷ್ಯನ ಬಗ್ಗೆ ಮಾತು ಬೇಡ..." ಇನ್ನೂ ಅನೇಕ ವಿಷಯಗಳು ಬಂದುಹೋದವು.

ತೋರಲ್‌ಳ ಪತಿ ಕಾಠಿಯಾವಾಡದ ರಜಪೂತ. ತಂದೆ ತಾತಂದಿರ ಆಸ್ತಿಯಾದ ಖಡ್ಗ ಇವನ ಹತ್ತಿರವೂ ಇತ್ತು. ಬಾಹುಬಲವೂ ಕಡಿಮೆ ಇರಲಿಲ್ಲ. ಆದರೆ ಅವನ ಹೃದಯದಲ್ಲಿ ಹಿಂಸೆ ತುಂಬಿರಲಿಲ್ಲ. ಭಕ್ತಿ ತುಂಬಿತ್ತು. ಭಗವಂತನ ಪೂಜೆ, ಸಾಧು ಸಂತರು ಮತ್ತು ಅತಿಥಿಗಳ ಸತ್ಕಾರ ಇವೇ ಅವನ ನಿತ್ಯ ಕರ್ಮಗಳು. ಮನೆಯಲ್ಲಿಯೇ ಒಂದು ದೇವಸ್ಥಾನ ಇತ್ತು. ತೋರಲ್ ಬೆಳಗ್ಗೆ–ಸಂಜೆ ಅಲ್ಲಿ ಪೂಜೆ–ಆರತಿ ಮಾಡಲು ಬರುತ್ತಿದ್ದಳು. ಜೀವನ ಸುಖ ಶಾಂತಿಯಿಂದ ಕಳೆಯುತ್ತಿತ್ತು.

ಈ ಕಡೆ ಜೇಸಲ್‌ನ ಜೀವನದಲ್ಲಿ ಒಂದು ದುರ್ಘಟನೆ ನಡೆಯಿತು. ಅವನ ಕುದುರೆಯ ಕಾಲೊಂದು ಮುರಿದುಹೋಯಿತು. ಸೇವಕನೊಬ್ಬ ಈ ಸುದ್ದಿ ತಿಳಿಸುತ್ತಿದ್ದಂತೆಯೇ ಜೇಸಲ್ ಮೆಟ್ಟಿ ಬಿದ್ದ. ದೊಡ್ಡ ಆಘಾತವಾಯಿತು ಅವನಿಗೆ. ಆದರೆ ಕಲ್ಲು ಹೃದಯ

ಕರಗಲು ಸಾಧ್ಯವೇ !

"ಕಾಲು ಮುರಿದ ನಂತರ ಅದರಿಂದ ಇನ್ನೇನು ಕೆಲಸ. ವಿಷ ಹಾಕಿ ಅದನ್ನು ಕೊಂದು ಬಿಡು. ಈ ರುಮಾಲನ್ನು ಅದಕ್ಕೆ ಹೊದ್ದಿಸು," ಎಂದು ತಲೆಯಿಂದ ರುಮಾಲನ್ನು ತೆಗೆದು ಸೇವಕನಿಗೆ ಕೊಟ್ಟು ಕಳುಹಿಸಿದ.

ಹೋಗುವಾಗ ಸೇವಕ ಹೇಳಿದ : "ಸ್ವಾಮಿ ತಾವು ಸಿಟ್ಟಾಗುವುದಿಲ್ಲ ಎಂದರೆ ಒಂದು ಮಾತು. ಕುದುರೆ ಇಲ್ಲದೆ ತಮ್ಮ ಕೆಲಸ ಸಾಧ್ಯವಿಲ್ಲ. ತಮಗೆ ಯೋಗ್ಯವಾದ ಕುದುರೆ ಎಂದರೆ ಕಾಠಿಯಾವಾಡದಲ್ಲಿರುವ ತೋರಲ್ ಕುದುರೆ ಒಂದೇ."

ಜೇಸಲ್ ಕಾಠಿಯಾವಾಡದ ಹೆಸರು ಮುಂತಾದ ವಿವರಗಳನ್ನು ತಿಳಿದುಕೊಂಡು ಆ ಕ್ಷಣವೇ ಹೊರಟ. ಅಲ್ಲಿ ತೋರಲ್‌ಳ ಪತಿಯ ಹತ್ತಿರ ವಾಯುವೇಗದಲ್ಲಿ ಓಡುವಂತಹ ಹೆಣ್ಣು ಕುದುರೆಯೊಂದಿತ್ತು. ಅದಕ್ಕೆ ಪ್ರೀತಿಯಿಂದ ತೋರಲ್ ಎಂದೇ ಹೆಸರಿಟ್ಟಿದ್ದ.

ಜೇಸಲ್ ತೋರಲ್‌ಳ ಮನೆಯನ್ನು ತಲಪುವ ಹೊತ್ತಿಗೆ ರಾತ್ರಿಯಾಗಿತ್ತು. ಮಂದಿರದಲ್ಲಿ ಆರತಿ ಮುಗಿಸಿ ಹೊರಗಡೆ ಬಂದು ಪ್ರಸಾದವನ್ನು ಹಂಚುತ್ತಿದ್ದಳು ತೋರಲ್. ಜೇಸಲ್‌ನ ದೃಷ್ಟಿ ತೋರಲ್ ಮೇಲೆ ಬೀಳುತ್ತಿದ್ದಂತೆಯೇ ಚಕಿತನಾದ. ಎಂತಹ ಅಮೋಘ ರೂಪರಾಶಿ! ಅದೂ ಜೇಸಲ್‌ಗೆ ತಿಳಿಯದಂತೆ! ಮನದಲ್ಲಿಯೇ ತೋರಲ್‌ಳನ್ನು ಹಾರಿಸಿಕೊಂಡು ಹೋಗುವ ನಿಶ್ಚಯ ಮಾಡಿ ಜೇಸಲ್ ಕುದುರೆಯ ಲಾಯದಲ್ಲಿ ಹೋಗಿ ಅವಿತುಕೊಂಡ. ಕುದುರೆ ತೋರಲ್ ಇವನನ್ನು ನೋಡುತ್ತಿದ್ದಂತೆ ಕೆನೆಯಲಾರಂಭಿಸಿತು. ಅದೇ ಸಮಯಕ್ಕೆ ಅದು ಹೇಗೆ ಬಿತ್ತೋ ಏನೋ ಅಟ್ಟಣಿಗೆಯ ಮೇಲೆ ಇಟ್ಟಿದ್ದ ಹುಲ್ಲಿನ ರಾಶಿ ಕಳಚಿ ಮೂಲೆಯಲ್ಲಿದ್ದ ಜೇಸಲ್‌ನ ತಲೆಯ ಮೇಲೆ ಬಿದ್ದು ಅವನು ಆ ರಾಶಿಯಲ್ಲಿ ಮುಚ್ಚಿಹೋದ. ಕುದುರೆ ಗಾಬರಿಯಿಂದ ಕಟ್ಟಿದ್ದ ಹಗ್ಗವನ್ನು ಕಿತ್ತುಹಾಕಿತು. ಅಷ್ಟರಲ್ಲಿ ನೌಕರನೊಬ್ಬ ಬಂದು ಗೂಟ ಕಿತ್ತು ಹೋಗಿದನ್ನು ಕಂಡು ಮೂಲೆಯಲ್ಲಿದ್ದ ಹುಲ್ಲಿನ ಮೇಲೆಯೇ ಗೂಟ ಹೊಡೆದು ಕುದುರೆಯನ್ನು ಕಟ್ಟಿ ಹಾಕಿದ. ಹುಲ್ಲಿನ ಕೆಳಗೆ ಜೇಸಲ್‌ನ ಅಂಗೈಯಿತ್ತು. ಅಂಗೈಯನ್ನು ದಾಟಿ ಗೂಟ ಭೂಮಿಯನ್ನು ಸೇರಿತ್ತು. ರಕ್ತ ಬುಗ್ಗೆಯಂತೆ ಚಿಮ್ಮಿದರೂ ಜೇಸಲ್‌ನ ಬಾಯಿಂದ ಚೀತ್ಕಾರ ಹೊರಡಲಿಲ್ಲ. ಅವನು ತನ್ನ ಜಾಗದಲ್ಲಿ ಸ್ಥಿರವಾಗಿ ಕುಳಿತಿದ್ದ.

ತೋರಲ್‌ಳ ಭಕ್ತಿಗೆ ದೇವರೂ ಮೆಚ್ಚಿದ್ದ. ತೋರಲ್ ಪ್ರಸಾದ ಹಂಚಲು ನಿಂತಾಗ ಪ್ರಸಾದ ತೆಗೆದುಕೊಳ್ಳುವವರು ಎಷ್ಟೇ ಜನರಿರಲಿ ಪ್ರಸಾದ ಕಡಿಮೆಯಾಗುತ್ತಿರಲಿಲ್ಲ. ಎಷ್ಟು ಜನರಿರುತ್ತಿದ್ದರೋ ಅಷ್ಟು ಪ್ರಸಾದದ ದೊನ್ನೆಗಳಿರುತ್ತಿದ್ದವು. ಆ ದಿನ ಒಂದು ದೊನ್ನೆ ಉಳಿದಾಗ ತೋರಲ್‌ಗೆ ಆಶ್ಚರ್ಯವಾಯಿತು. "ಯಾರಿಗೋ ಪ್ರಸಾದ ಸಿಕ್ಕಿಲ್ಲ," ಎಂದುಕೊಂಡಳು.

ಅದೇ ಸಮಯಕ್ಕೆ ಅವಳ ದೃಷ್ಟಿ ಲಾಯದಿಂದ ಹರಿದು ಬರುತ್ತಿರುವ ರಕ್ತದ ಧಾರೆಯ ಕಡೆ ಬಿತ್ತು. "ಅರೇ ಈ ರಕ್ತ ಯಾರದು!" ಆಶ್ಚರ್ಯದಿಂದ ಕೇಳಿದಳು ತೋರಲ್. ಅವಳ ಪತಿ ಹತ್ತಿರದಲ್ಲಿಯೇ ಇದ್ದ. ರಕ್ತದ ಧಾರೆಯನ್ನೇ ಅನುಸರಿಸಿ ಅವನು ಲಾಯದ ಮೂಲೆಗೆ ಬಂದ. ದೊಂದಿಯ ಬೆಳಕಿನಲ್ಲಿ ಹುಲ್ಲನ್ನು ಓರೆ ಮಾಡಿ ನೋಡಿದರೆ ಜೇಸಲ್. ಜೇಸಲ್‌ನ ಕೈಯಿಂದ ರಕ್ತದ ಧಾರೆ.

"ಯಾರು ನೀನು? ಇದು ದೇವಮಂದಿರ. ಇಲ್ಲಿ ಹೀಗೆ ಮೂಲೆಯಲ್ಲಿ ಏಕೆ ಬಚ್ಚಿಟ್ಟುಕೊಂಡಿದ್ದೀಯೋ? ಹೊರಗೆ ಬಾ," ಎಂದ ತೋರಲ್‌ಳ ಪತಿ.

"ಹೇಗೆ ಬರಲಿ ? ಅಂಗೈಗೆ ಗೂಟ ಹೊಡೆದಿದೆ."

ತೋರಲ್‌ಳ ಪತಿ ತಕ್ಷಣ ಗೂಟ ಕಿತ್ತು ಬಿಸಾಡಿ ಹೇಳಿದ, "ಗಂಡಸು ಎಂದರೆ ನೀನು. ತಲೆಯ ಮೇಲೆ ಇಷ್ಟು ಭಾರಿ ಹುಲ್ಲಿನ ರಾಶಿ, ನಿನ್ನ ಅಂಗೈಯನ್ನು ಕೊರೆದು ಹೋಗಿರುವ ಗೂಟ, ಇಷ್ಟಾದರೂ ಸ್ವಲ್ಪವೂ ಅಂಜಲಿಲ್ಲವಲ್ಲ ನೀನು. ಆದರೆ ನೀನು ಈ ರೀತಿ ಏಕೆ ಬಚ್ಚಿಟ್ಟುಕೊಂಡಿದ್ದೀಯೋ? ಈ ಮನೆಯಲ್ಲಿ

ನಡೆಯುವುದಿಲ್ಲ. ಇಲ್ಲಿ ನೀನು ಏನೇ ಕೇಳು ಅದು ನಿನಗೆ ಸಿಗುತ್ತದೆ... ನೀನು ಯಾರು?"

ಒಂದೇ ಸಮನೆ ನೋಡುತ್ತಾ ತೋರಲ್ ಉತ್ತರಿಸಿದಳು: "ಜೇಸಲ್ ಜಾಡೇಜಾ." ಜೇಸಲ್ ಚಕಿತನಾದ. ತೋರಲ್ ಕಡೆ ತಿರುಗಿದ ಅಷ್ಟೇ. ಅವಳನ್ನು ನೋಡುತ್ತಲೇ ನಿಂತ. ತೋರಲ್‌ಳ ಪತಿ ನಕ್ಕು ನುಡಿದ: "ಜೇಸಲ್ ಜಾಡೇಜಾ! ಭೇಷ್! ಇಲ್ಲಿಯವರೆಗೆ ಹೆಸರನ್ನು ಮಾತ್ರ ಕೇಳಿದ್ದೆ. ಈ ದಿನ ಭೇಟಿಯೂ ಆಯಿತು. ಒಳ್ಳೆಯದೇ ಆಯ್ತು. ನಮ್ಮ ಮನೆಯನ್ನು ಪವಿತ್ರ ಮಾಡಿದೆ... ಯಾವ ಕೆಲಸಕ್ಕೆ ಬಂದೆ ನೀನು?"

ಜೇಸಲ್ ಈಗ ತೋರಲ್‌ಳ ಪತಿಯ ಕಡೆಗೂ ನೋಡುತ್ತಾ ನಿಂತ. ಜೇಸಲ್‌ಳ ಎದುರು ನಿಂತು ನಗುವ ಧೈರ್ಯ ಯಾರಿಗೂ ಇರಲಿಲ್ಲ. ಹೆದರಿ ಎಲ್ಲರ ಉಸಿರೂ ನಿಲ್ಲುತ್ತಿತ್ತು. ಆದರೆ ಇವನು...! ಕೆಲವು ಕ್ಷಣ ಸ್ತಬ್ಧನಾಗಿ ನಿಂತ. "ಬಂದಿದ್ದೇನೋ ಕಳ್ಳತನ ಮಾಡಲೆಂದೇ... ನಿನ್ನ ಕುದುರೆ ತೋರಲ್‌ನನ್ನು ಕದಿಯಲು... ಆದರೆ ಇನ್ನೊಬ್ಬ ತೋರಲ್ ಕಂಡಳು... ಈಗ ನಾನು ಈ ತೋರಲ್‌ಳನ್ನೂ ಕರೆದೊಯ್ಯುತ್ತೇನೆ." ತೋರಲ್ ಕಡೆಗೆ ನೋಡುತ್ತಾ, ಸೊಂಟದ ಮೇಲಿದ್ದ ಖಡ್ಗದ ಹಿಡಿಯ ಮೇಲೆ ಕೈಯಿಡುತ್ತಾ ಜೇಸಲ್ ಹೇಳಿದ.

ತೋರಲ್‌ಳ ಪತಿ ಮುಗುಳ್ನಗುತ್ತಾ, "ಖಡ್ಗ ಹಿರಿಯಲು ಇಚ್ಛಿಸುತ್ತೀಯಾ? ಖಡ್ಗ ಪ್ರಯೋಗದಲ್ಲಿ ನಾನೂ ನಿಪುಣ. ಆದರೆ ಅದಕ್ಕೆ ನಾನು ಇಷ್ಟಪಡುವುದಿಲ್ಲ. ಈ ಮನೆಗೆ ಆಸೆ ಪಟ್ಟು ಬಂದವರಾರೂ ಬರಿಗೈಯಲ್ಲಿ ಹಿಂತಿರುಗಿಲ್ಲ. ಆದರೆ ಇವೆಲ್ಲಾ ನಿನಗೆ ಶೋಭಿಸುತ್ತವೆಯೇ?" ಎಂದು ಕೇಳಿದ.

"ನಾನು ಉಪದೇಶ ಕೇಳಲು ಬಂದಿಲ್ಲ. ಖಡ್ಗ ಹಿರಿಯುವುದಾದರೆ ಹಿರಿದು ನಿಲ್ಲು. ಇಲ್ಲವಾದರೆ ಈ ಹೆಣ್ಣನ್ನು ನನಗೆ ಒಪ್ಪಿಸು."

ಇದನ್ನು ಕೇಳಿ ತೋರಲ್ ಕ್ರುದ್ಧಳಾದಳು. ಆದರೆ ಅವಳ ಪತಿ ಶಾಂತ ಸ್ವರದಲ್ಲಿ ಸಮಾಧಾನ ಹೇಳಿದ: "ತೋರಲ್, ನೀನು ಹಿಂದೊಂದು ದಿನ ಹೇಳಿದ್ದೆ, ದಿಕ್ಕೆಟ್ಟ ಪುರುಷನನ್ನು ಸ್ತ್ರೀ ಸುಧಾರಿಸಬಲ್ಲಳು ಎಂದು. ಆ ಭಾರವನ್ನು ಈಗ ನೀನೇ ಹೊತ್ತುಕೊಳ್ಳಬೇಕು. ನೀನು ಈಗ ಇವನ ಜೊತೆ ಹೋಗು. ಇವನಿಗೆ ಈಗ ನಿನ್ನ ಅವಶ್ಯಕತೆ ಇದೆ."

ಪತಿಯಿಂದ ದೂರವಾಗುವ ಸಂದರ್ಭ ಒದಗಿಬಂದುದಕ್ಕೆ ತೋರಲ್‌ಳ ಕಣ್ಣುಗಳು ತುಂಬಿ ಬಂದವು. ಆದರೆ ಜೀವನದಲ್ಲಿ ಸತ್ಕಾರ್ಯ ಮಾಡಲು ಮತ್ತು ಅದರ ಕಠಿಣ ಪರೀಕ್ಷೆಗೆ ಒಳಗಾಗಲು ಅವಳು ಒಪ್ಪಿದಳು.

ಜೇಸಲ್ ಇದನ್ನೆಲ್ಲ ಕಂಡು ಕಕ್ಕಾಬಿಕ್ಕಿಯಾಗಿ ಹೋದ. ಇಂತಹ ಜನವೂ ಪ್ರಪಂಚದಲ್ಲಿ ಉಂಟೆ? ಇದನ್ನು ತೋರಲ್‌ಳ ಪತಿಯ ಹೇಡಿತನ ಅನ್ನೋಣವೇ? ಇಲ್ಲ, ಉದಾರತೆ ಅನ್ನೋಣವೇ? ಏನೂ ತಿಳಿಯಲಿಲ್ಲ ಅವನಿಗೆ.

ಪತಿಯಿಂದ ಬೀಳ್ಕೊಂಡು ತೋರಲ್ ಜೇಸಲ್ ಜೊತೆ ಹೊರಟಳು. ಜೇಸಲ್ ಆಶ್ಚರ್ಯ ಚಕಿತನಾದ. ಲೂಟಿ, ಬಲಾತ್ಕಾರ ಇವನ ಅಭ್ಯಾಸ. ಆದರೆ ಪ್ರೇಮಪೂರ್ಣವಾದ ಈ ಸಮರ್ಪಣೆ ಅದ್ಭುತವಾಗಿತ್ತು. ಒಂದು ಕ್ಷಣ ಮನಸ್ಸು ಚಂಚಲವಾಯಿತು. ಮತ್ತೆ ತಕ್ಷಣ ಕಠೋರವಾಗಿ ತೋರಲ್ ಜೊತೆ ಹೊರಟ. ತೋರಲ್ ತನ್ನ ಜೊತೆ ಕೇವಲ ಒಂದು ಏಕತಾರಿಯನ್ನು ಮಾತ್ರ ತಗೆದುಕೊಂಡಿದ್ದಳು ಅಷ್ಟೆ. ಊರನ್ನು ದಾಟಿ ಒಂದು ಪಾಳು ಜಾಗದಲ್ಲಿ ರಾತ್ರಿ ಕಳೆಯಲು ಜೇಸಲ್ ನಿಂತ. ಆಯಾಸದಿಂದ ತೋರಲ್ ನಿದ್ದೆ ಹೋದಳು, ಆದರೆ ಜೇಸಲ್ ರೆಪ್ಪೆ ಮುಚ್ಚಲಿಲ್ಲ. ಹತ್ತಿರವೇ ರೂಪರಾಶಿ ಹರಡಿದೆ. ಬೆಳದಿಂಗಳು ಆ ಸ್ವರ್ಣ ಕಾಂತಿಯ ಶರೀರವನ್ನು ಬೆಳಗುತ್ತಿದೆ. ಸುಗಂಧಮಯ ಆಹ್ಲಾದಕರ ಸ್ವಚ್ಛ ಗಾಳಿ ಬೀಸುತ್ತಿದೆ. ಜೇಸಲ್ ಬಾಯಾರಿದ್ದ, ಆದರೂ ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳಲು ಇಚ್ಛೆಯಾಗುತ್ತಿರಲಿಲ್ಲ.

ಜೇಸಲ್‌ನಂತಹ ಅತ್ಯಂತ ಹೇಯ ದಸ್ಯುವಿನ ಬಗ್ಗೆ ಇಂತಹ ಅಗಾಧವಾದ ನಂಬಿಕೆ! ಜೇಸಲ್‌ಗೆ ಪ್ರಥಮ ಬಾರಿ ಪವಿತ್ರತೆಯ ಅನುಭವವಾಯಿತು. "ಅಪ್ಸರೆಯಂತಹ ಈಕೆ ಎಲ್ಲಿ! ಧೂಳಿ

ನಲ್ಲಿ ಹೋರಾಡುವ ನಾನೆಲ್ಲಿ! ನನ್ನ ಜೊತೆಯಲ್ಲಿ ಇವಳು ಏಕೆ ಬಂದಳು?"

ಅಷ್ಟರಲ್ಲಿ ತೋರಲ್ ಕಣ್ತೆರೆದು ಕೇಳಿದಳು, "ನಿದ್ದೆ ಬರುತ್ತಿಲ್ಲವೆ?" ಮತ್ತೆ ತನಗೆ ತಾನೇ ಹೇಳಿಕೊಂಡಳು. "ನನ್ನ ಠಾಕೂರ್‌ಗೆ ಸಹ ಈ ದಿನ ನಿದ್ದೆ ಬಂದಿರಲಾರದು. ನನ್ನಂತಹ ಪತ್ನಿಯನ್ನು ತ್ಯಾಗಮಾಡಿ ನಿದ್ದೆ ಹೇಗೆ ತಾನೆ ಬಂದೀತು? ಆದರೆ ಅವರ ಹೃದಯ ಬಹಳ ವಿಶಾಲವಾದುದು... ಇಂತಹ ದೊಡ್ಡ ತ್ಯಾಗವನ್ನು ಅವರೊಬ್ಬರೇ ಮಾಡಬಲ್ಲರು."

"ಠಾಕೂರ್‌ನ ಪ್ರಶಂಸೆ ಮಾಡುವುದಕ್ಕೇ ನನ್ನ ಜೊತೆಯಲ್ಲಿ ಬಂದೆಯೇನು?"

"ಪ್ರಶಂಸೆ ಮಾಡಬಾರದೇನು? ಠಾಕೂರ್‌ಗೆ ನಿನ್ನ ಖಡ್ಗದ ಹೆದರಿಕೆ ಇರಲಿಲ್ಲ. ಅವರಿಗೆ ನಿನ್ನ ಜೀವನದ ಬಗ್ಗೆಯೇ ಯೋಚನೆ..."

"ನನ್ನ ಬಗ್ಗೆ ಯೋಚನೆ ಮಾಡೋರು ಈ ಪ್ರಪಂಚದಲ್ಲಿ ಯಾರೂ ಇಲ್ಲ!" ಜೇಸಲ್ ಸಿಟ್ಟುಗೊಂಡು ಹೇಳಿದ. "ಅಣ್ಣ ಮನೆ ಬಿಟ್ಟು ಓಡಿಸಿದ, ತಂಗಿ ಸಹ ತಿರಸ್ಕರಿಸಿದಳು. ಜನ ನನ್ನನ್ನು ಕೆಟ್ಟವನು ಅಂದರು... ಇಡೀ ಪ್ರಪಂಚದ ಬಾಗಿಲೇ ನನಗೆ ಮುಚ್ಚಿಹೋಗಿದೆ. ಎಲ್ಲೆಲ್ಲೂ ತಿರಸ್ಕಾರ! ನನ್ನನ್ನು ವಿಶ್ವಾಸದಿಂದ ಕಾಣುವವರು ಯಾರಿದ್ದಾರೆ? ನನ್ನ ಚಿಂತೆ ಯಾರಿಗಿದೆ?"

"ನಾನಿದ್ದೇನೆ...ನಿನ್ನ ಚಿಂತೆ ನನಗಿದೆ, ಠಾಕೂರ್‌ಗೆ ಇದೆ. ಇಷ್ಟು ದೊಡ್ಡ ಪ್ರಪಂಚದಲ್ಲಿ ಹತ್ತಾರು ಜನರ ತಿರಸ್ಕಾರಕ್ಕೆ ಏನು ಮಹಾ ಬೆಲೆ? ಪ್ರೀತಿ ಬೇಕು ಎಂದು ಹೊರಡು ಖಂಡಿತ ಸಿಗುತ್ತೆ."

"ನಿಜವಾಗಿಯೂ? ನೀನು ನಿಜ ಹೇಳ್ತಾ ಇದ್ದೀಯಾ ತೋರಲ್? ನೀನು...ನೀನು ನನ್ನನ್ನು...ನನ್ನಂತಹ ಪಾಪಿಯನ್ನು ಪ್ರೀತಿಸ್ತೀಯಾ?...ಪ್ರೀತಿ ಮಾಡಬಲ್ಲೆಯಾ?"

"ಇತ್ತ ಬಾ. ಇಲ್ಲಿ ಮಲಗಿಕೋ ಬಾ. ನಿನ್ನ ತಲೆ ದುಃಖದಿಂದ ತುಂಬಿದೆ. ಅದನ್ನು ಹಗುರ ಮಾಡ್ತೀನಿ ಬಾ."

"ನನ್ನ ಕೂದಲಿನಲ್ಲಿ ರೇಷ್ಮೆಯಿಲ್ಲ, ಬೆಂಕಿ ಜ್ವಾಲೆ ಇದೆ."

ತೋರಲ್ ಮುಗುಳ್ನಗುತ್ತಾ, "ಏನೂ ಪರವಾಗಿಲ್ಲ. ನಾನು ಆ ಜ್ವಾಲೆಯಲ್ಲಿ ಸುಟ್ಟು-ಹೋಗಲು ಇಷ್ಟಪಡುತ್ತೇನೆ," ಎಂದಳು.

ಏಕತಾರಿಯನ್ನು ತೆಗೆದುಕೊಂಡು ತನ್ನ ಮಧುರ ಕಂಠದಿಂದ ಒಂದು ಹಾಡು ಹೇಳಲಾರಂಭಿಸಿದಳು. ಹಾಡು–ಸಂಗೀತ, ಸ್ನೇಹ–ಮಮತೆ ಇವು ಜೇಸಲ್‌ಗೆ ಪ್ರಥಮ ಬಾರಿಗೆ ಪರಿಚಯವಾದವು.

ಆ ರಾತ್ರಿಯಿಂದ ಜೇಸಲ್ ಬದಲಾದ ಎನ್ನುತ್ತಾರೆ. ತನ್ನೆಲ್ಲ ಕೆಟ್ಟಗುಣಗಳನ್ನೂ ಬಿಟ್ಟ. ಖಡ್ಗ ಬಿಸಾಡಿ ಏಕತಾರಿ ಹಿಡಿದು ಹಾಡುತ್ತಾ ಅಲೆದಾಡಿದ. ಕ್ರಮೇಣ ಲೂಟಿಗಾರ ಜೇಸಲ್ ಸಂತ ಜೇಸಲ್ ಆದ. ಸಾಧು ಸಂತರು ಅವನನ್ನು ನೋಡಲಾರಂಭಿಸಿದರು. ತೋರಲ್ ಅವನ ಜೊತೆಗೇ ಇರುತ್ತಿದ್ದಳು ಆದರೆ ಜೇಸಲ್ ಅವಳನ್ನು ತನ್ನ ಗುರು ಎಂದು ಭಾವಿಸುತ್ತಿದ್ದ. ಜಯಗೀತೆ ಹಾಡುತ್ತಿದ್ದ. ಜಯ ತೋರಲ್ ದೇವಿ...ಜಯ ಉದ್ಧಾರಿಣೀ!

ಜೀವನ ಪರ್ಯಂತ ಬೇರೆಯವರ ಸೇವೆ–ಶುಶ್ರೂಷೆ ಮಾಡುತ್ತಲೇ ಇಬ್ಬರೂ ಒಟ್ಟಿಗೇ ಸ್ವರ್ಗಸ್ಥರಾದರು. ಜೇಸಲ್ ಪೀರ್ ಮತ್ತು ಸತಿ ತೋರಲ್ ಇವರ ಸಮಾಧಿಗಳು ಇವತ್ತಿಗೂ ಹತ್ತಿರ ಹತ್ತಿರವೇ ಇವೆ, ಕಚ್ಛ ಪ್ರದೇಶದಲ್ಲಿ ಎಷ್ಟೋ ದೊಡ್ಡ ದೊಡ್ಡ ಭೂಕಂಪಗಳಾಗಿ-ದ್ದರೂ ಈ ಸಮಾಧಿಗಳು ಹಾಗೆಯೇ ನಿಂತಿವೆ ಎಂದು ಅಲ್ಲಿಯ ಜನ ಹೇಳುತ್ತಾರೆ. ✡

ಕೃಪೆ : 'ನವನೀತ' ಹಿಂದಿ ಡೈಜೆಸ್ಟ್



ಜನವೆ ಜೀವ, ಜನ ಜೀವನ

ಕಳೆದ ವರ್ಷ ಮಕರ ಸಂಕ್ರಮಣದ ಹಿಂದಿನ ದಿನ ಭೋಗಿ. ನಾವೆಲ್ಲ ಹೆಣ್ಣು ಮಕ್ಕಳು ಎರೆದುಕೊಂಡು ಎಳ್ಳು ಸಕ್ಕರೆ ತಿಂದು ಕೆಲಸದಲ್ಲಿ ತೊಡಗಿದ್ದೆವು. ರವಿವಾರವಾದ್ದರಿಂದ ನಮ್ಮ ಯಜಮಾನರೂ ಮನೆಯಲ್ಲೇ ಇದ್ದರು. ಕಿರಿಯ ಮಗಳನ್ನು ಕರೆದು, ಒಂದು ಬಟ್ಟಲಲ್ಲಿ ಎಳ್ಳು ಸಕ್ಕರೆ ಹಾಕಿ, "ನಿನ್ನ ತಂದೆಯವರಿಗೆ ಕೊಟ್ಟು ಬಾ," ಎಂದು ಹೇಳಿದೆ. ಅಡಿಗೆ ಮನೆ ಬಿಟ್ಟು ಕದಲುವ ಮನಸ್ಸು ಆಕೆಗಿರಲಿಲ್ಲವೆಂದು ತೋರುತ್ತದೆ. ಮುಖ ಗಂಟು ಹಾಕಿಕೊಂಡು ಸನ್ನ ಒತ್ತಾಯಕ್ಕೆಂಬಂತೆ ಬಟ್ಟಲನ್ನು ಎತ್ತಿಕೊಂಡಳು. ನನಗೆ ಸಿಟ್ಟು ತಡೆಯಲಾಗಲಿಲ್ಲ. "ಇದೇನು ದೊಡ್ಡ ಕೆಲಸವೇ? ಹೀಗೇಕೆ ಕೋಡಂಗಿಯಂತೆ ಮುಖ ಸಿಂಡರಿಸಿಕೊಂಡಿರುವೆ?" ಎಂದು ಜಬರಿಸಿ ಕಳಿಸಿದೆ.

ಕೆಲಸದಲ್ಲಿದ್ದ ಅವರು, ಒಂದು ಚಮಚೆ ಕೇಳಿರಬೇಕು. ಮಗಳು ಒಳಬಂದು ಹೇಳಿದಳು: "ಅಮ್ಮಾ, ಕೋಡಂಗಿಯ ಅಪ್ಪನಿಗೆ ಒಂದು ಚಮಚೆ ಬೇಕಂತೆ."

—ಲಕ್ಷ್ಮೀಬಾಯಿ ಭದ್ರಶೆಟ್ಟಿ

ಕಳೆದ ದಸರಾ ರಜೆಯಲ್ಲಿ ನಮ್ಮ ಅಕ್ಕನ ಮನೆಗೆ ಹೋಗಿದ್ದೆ. ನನ್ನ ಅಕ್ಕನಿಗೆ ಮುದ್ದಾದ ಎರಡೇ ಮಕ್ಕಳು—ಶೇಖರ್ ಮತ್ತು ಸುಮಾ. ೬ ವರ್ಷದ ಶೇಖರನಿಗೆ ಅದೇನು, ಇದೇಕೆ ಹೀಗೆ ಎಂದು ಪ್ರತಿಯೊಂದಕ್ಕೂ ವಿವರಣೆ ಪಡೆಯುವ ಕುತೂಹಲ. ನಾವೆಲ್ಲಾ ರಾತ್ರಿ ಊಟಕ್ಕೆ ಕುಳಿತಿದ್ದೆವು. ಅದೇ ದಿನ ಅವರ ಮನೆಯ ಬೀದಿಯಲ್ಲಿ ಯಾರೋ ಸತ್ತುಹೋಗಿದ್ದರು. ಆ ಬಗ್ಗೆ ಶೇಖರ್ ತನ್ನ ತಂದೆಯನ್ನು ಪ್ರಶ್ನಿಸಿದ: "ಅಪ್ಪಾ, ಅವರೇಕೆ ಸತ್ತುಹೋದರು?"

"ಎಲ್ಲರೂ ವಯಸ್ಸಾದ ನಂತರ, ಅಂದರೆ ೬೦-೭೦ ವರ್ಷಗಳಾಗುವ ವೇಳೆಗೆ ಶರೀರದಲ್ಲಿ ಶಕ್ತಿ ಕಡಿಮೆಯಾಗುತ್ತಾ ಕಡೆಗೊಂದು ದಿನ ಸಾಯುತ್ತಾರೆ." ಅವನ ತಂದೆ ಉತ್ತರಿಸಿದರು.

"ಹಾಗಾದರೆ ಅಮ್ಮ, ನೀವು, ನಾನು ಎಲ್ಲರೂ ಸಾಯುತ್ತೇವಾ?" ಎಂದು ಕೇಳಿದ ಶೇಖರ್.

"ಹೌದು," ಎಂದರು ತಂದೆ.

"ಹಾಗಾದರೆ ಈ ಸಾಮಾನುಗಳು, ಬೀರು, ಮಂಚ, ಸ್ಟೀಲ್ ಪಾತ್ರೆ ಎಲ್ಲಾ ಯಾರು ತೆಗೆದುಕೊಳ್ಳುತ್ತಾರೆ?" ಎಂದು ಶೇಖರ್ ಪ್ರಶ್ನಿಸಿದ್ದೇ ತಡ, ಇನ್ನೂ ನಾಲ್ಕು ತುಂಬಿರದ ಸುಮಾ ತಟ್ಟನೆ ಉತ್ತರಿಸಿದಳು: "ನಾನಿರ್ತೀನಲ್ಲೋ ಅಣ್ಣಾ, ನಾನು ತೆಗೊಳ್ತೀನಿ."

—ಪದ್ಮಾ

ಉಡುಪಿಯಿಂದ ಧಾರವಾಡಕ್ಕೆ ಮರಳಿ ಬರುತ್ತಿದ್ದೆ. ರಾತ್ರಿಯ ಮಂಗಳೂರು-ಮುಂಬಯಿ ಬಸ್ಸಿನಲ್ಲಿ ಪ್ರಯಾಣ. ಕುಮಟಾದಲ್ಲಿ ಡ್ರೈವರ್, ಒಂದು ಹೋಟೆಲ್ ಎದುರುಗಡೆ ಬಸ್ಸು ನಿಲ್ಲಿಸಿದ. ಅಷ್ಟರವರೆಗೆ ಜೋಂಪಿನಲ್ಲಿದ್ದ ನಾನೂ ಎದ್ದು ಚಹಾ ಕುಡಿಯಲೆಂದು ಹೋಟೆಲಿನತ್ತ ನಡೆದೆ. ಚಳಿಯಿದ್ದುದರಿಂದ ಸ್ವೆಟರ್ ತೊಟ್ಟು ಮಫ್ಲರನ್ನು ಕಿವಿಗಳು ಮುಚ್ಚುವಂತೆ ತಲೆಗೆ ಪೇಟಾದಂತೆ ಸುತ್ತಿಕೊಂಡಿದ್ದೆ. ಚಹ ಕುಡಿದಾದ ಮೇಲೆ ಆಕಳಿಸುತ್ತ ಕಿಸೆಯಲ್ಲಿ ಕೈಹಾಕಿ ಬಿಲ್ ಕೊಡಲು ಮುಂದಾದೆ. ಆಗ ಹಣ ಸ್ವೀಕರಿಸಲು ನಿಂತವ ನಗುತ್ತ, "ಇದೇನು ಸ್ವಾಮೀ, ಬ್ಯಾಡಾ ಬಿಡಿ ಬಿಲ್ಲು,'' ಎಂದ. ನನಗೆ ಆಶ್ಚರ್ಯ. ಬಿಲ್ಲು ಬೇಡವೆನ್ನಲು ಈತನಿಗೇನು ಧಾಡಿಯಾಗಿದೆ? ಇವನಿಗೆ ನನ್ನ ಪರಿಚಯ ಇರಬಹುದೆ? ಅಥವಾ ಧಾರ-

ವಾಡದಲ್ಲಿ ಲೆಕ್ಚರರ್ ಆಗಿರುವ ನಾನು ಇಷ್ಟೊಂದು ಫೇಮಸ್ ಆಗಿರುವೆನೆ? ನನ್ನ ಬಗ್ಗೆ ನನಗೇ ಏನೋ ಒಂದು ಬಗೆಯ ಹೆಮ್ಮೆಯೆನಿಸಿತು. ಆದರೂ ಒಂದು ಮಾತು ಒಗೆದು ನೋಡೋಣ, ನನ್ನ ಪರಿಚಯ ಅವನಿಗೆ ಹೇಗಾಯಿತು ಎಂಬುದನ್ನಾದರೂ ತಿಳಿಯುವ ಮಂಗಕುತೂಹಲದಿಂದ ತಿರುಗಿ ಅವನಿಗೆ ಕೇಳಿದೆ: “ಅಲ್ರೀ ನನ್ನ ಬಿಲ್ಲು ಬೇಡಾಂತೀರಾ ಅಂದ್ಮೇಲೆ, ತಮಗೆ ನನ್ನ ಪರಿಚಯ ಇದೆಯಾ? ನಾನು ಸ್ವಲ್ಪ ಮರುಗುಳಿ. ತಪ್ಪು ತಿಳೀಬೇಡಿ.''

“ಇಲ್ಲಾ ರಾಯ್ರೇ, ನೀವು ಫಸ್ಟ್ ಟೈಂ ಈ ರೂಟಿನಲ್ಲಿ ಬರ್‍ತೀದಿರಿ ಅಂತ ಕಾಣುತ್ತೆ. ನಮ್ಮಲ್ಲಿ ನಿಲ್ಲೋ ಯಾವುದೇ ಬಸ್ಸಿನ ಡ್ರೈವರ್, ಕಂಡಕ್ಟರ್ ಹತ್ರಾ ನಾವು ಬಿಲ್ ತೆಗೊಳ್ಳೊಲ್ಲ. ಹ್ಹ, ಹ್ಹ,” ಎಂದನಾ ಭೂಪ.

ಹರ ಹರಾ ಎಂದು ತಲೆಗೆ ಸುತ್ತಿದ್ದ ಮಫ್ಲರ್ ಬಿಚ್ಚಿ ಬಿಲ್ಲು ಕೊಟ್ಟೆ. ಅವನು ಮಿಕಿ ಮಿಕಿ ನನ್ನ ಮುಖ ನೋಡುತ್ತ ನಿಂತ

—ಬಿ. ಎಂ. ರಾಮದಾಸ

ನಮ್ಮ ಅರವಿಂದನಿಗೆ ಚಿಕ್ಕಂದಿನಿಂದಲೂ ಕತೆ ಕೇಳುವ ಹುಚ್ಚು. ದಿನವೂ ಅವನಿಗೆ ಬೇರೆ ಬೇರೆ ಕತೆ ಹೇಳುವದರಲ್ಲಿ ನಮಗೆ ಸಾಕಾಗುತ್ತಿತ್ತು. ಒಂದು ಶುಕ್ರವಾರ ಸಾಯಂಕಾಲ ಪ್ರತಿಸಲದಂತೆ ಮನೆಯವರೆಲ್ಲರೂ ಕುಳಿತು ದೇವರ ಕೆಲವು ಫೋಟೋಗಳನ್ನಿಟ್ಟು ಪೂಜೆ ಮಾಡಿ ಸಂಸ್ಕೃತ ಶ್ಲೋಕಗಳನ್ನು ಹೇಳುತ್ತಿದ್ದೆವು. ಆದರೆ ಅಂದು ಅರವಿಂದ ಮಾತ್ರ ಈ ಕಾರ್ಯಕ್ರಮದಲ್ಲಿ ಭಾಗವಹಿಸದೇ ಗದ್ದಲ ಮಾಡುತ್ತ ನಾವೂ ಚಂಚಲಚಿತ್ತರಾಗುವಂತೆ ಮಾಡಿದ. ಆಗ ನಾನು ಅವನನ್ನು ಸುಮ್ಮನಿರಿಸಬೇಕೆಂದು ಕೊಂಚ ಸಿಟ್ಟಿನಿಂದ “ಸರಿಯಾಗಿ ಕೂಡು; ದೇವರ ಕಡೆ ಬೆನ್ನು ಮಾಡಿಕೊಂಡು ಕೂತೀದಿ ನೋಡು; ನೀನೂ ಶ್ಲೋಕಾ ಹೇಳು; ಗದ್ದಲಾ ಮಾಡಬ್ಯಾಡಾ,'' ಎಂದೆ. ಆದರೆ ಅವನು, “ಮತ್ತs ಮೊನ್ನೆ ಕನಕದಾಸನ ಕಥ್ಯಾಗ ದೇವರು ಎಲ್ಲಾ ಕಡೆ ಇರತಾನ ಅಂತ ನೀನs ಹೇಳಿದ್ದಿಲ್ಲವೆ?. ಈಗ ನಾನು ಎತ್ಲಾಗ ಬೆನ್ನು ಮಾಡಿ ಕೂತರ ಏನಾತು ಬಿಡು,'' ಎಂದುತ್ತರಿಸಿಬಿಟ್ಟ.

–ಶಾಂತಾ ದೇಶಪಾಂಡೆ

ಆಗ ನಾನು ಮಂಗಳೂರು-ಉಡುಪಿ ಎಕ್ಸ್‌ಪ್ರೆಸ್ ಬಸ್ಸಿನಲ್ಲಿ ಕುಳಿತಿದ್ದೆ. ಬಸ್ಸು ಬಿಡಲು ಇನ್ನೂ ಸುಮಾರು ಹದಿನೈದು ನಿಮಿಷಗಳಿದ್ದುವು. ಆಗ ಬಸ್ಸಿನೊಳಕ್ಕೆ ಒಬ್ಬ ಅಂಗವಿಹೀನ ಭಿಕ್ಷುಕನು ಬಂದು ಸಿನಿಮಾ ಹಾಡುಗಳನ್ನು ಹೇಳಲು ಮೊದಲುಮಾಡಿದನು. ಅವನ ಕಂಠ ನಿಜಕ್ಕೂ ಒಳ್ಳೆಯದಿತ್ತು. ಬಸ್ಸಿನಲ್ಲಿದ್ದವರೆಲ್ಲರೂ ಅವನ ಪದ್ಯಕ್ಕೆ ಮಾರುಹೋದರು ಹಾಗೂ ಅವನಿಗೆ ಕೊಡಲು ಚಿಲ್ಲರೆ ಹಣವನ್ನು ಕೈಗೆತ್ತಿಕೊಂಡರು. ಇನ್ನೇನು, ಅವನಿಗೆ ೨-೩ ರೂ. ಹಣ ಕಲೆಕ್ಷನ್ ಆಗುತ್ತಿತ್ತು. ಇಷ್ಟಾಗುವಾಗ ಅವನು 'ಸಂಪತ್ತಿಗೆ ಸವಾಲು' ಸಿನಿಮಾದ 'ನಗುವುದೋ ಅಳುವುದೋ' ಪದ್ಯವನ್ನು ಹೇಳಲು ಸುರುಮಾಡಿದ. “ಹಾಕುವೆ ನಿನ್ನ ಸಂಪತ್ತಿಗೆ ನನ್ನ ಸವಾಲು, ನಿನ್ನ ಸೊಕ್ಕು ಮುರಿಯುವೆ .. ಸಿರಿತನದ ಗರ್ವವನು ಮೆಟ್ಟಿ ನಿಲುವೆನು....” ಎಂಬುದಾಗಿ ಹಾಡಿದನು. ಇದನ್ನು ಕೇಳುತ್ತಿದ್ದ ಪ್ರಯಾಣಿಕರ ಕೈಲಿದ್ದ ಚಿಲ್ಲರೆ ಹಣ ಮೆಲ್ಲಗೆ ಜೇಬಿನೊಳಕ್ಕೆ ಇಳಿಯಬೇಕೆ? ಕೇವಲ ೧೦-೨೦ ಪೈಸೆಗಳೊಂದಿಗೆ ಭಿಕ್ಷುಕನು ಬಸ್ಸಿನಿಂದ ಕೆಳಕ್ಕೆ ಇಳಿಯಬೇಕಾಯಿತು.

—ಸೂರ್ಯನಾರಾಯಣ ಪಿ. ಕೆ.


ಸ್ತ್ರೀ ಸಹಜ ಸೌಂದರ್ಯವೇ ಮಹಿಳೆಯ ಹೆಗ್ಗಳಿಕೆ
anita
TOILET SOAP
ಅನಿತಾ
ಟಾಯ್ಲೆಟ್ ಸೋಪ್
ನಿಮ್ಮ ಸೌಂದರ್ಯವನ್ನು ರಕ್ಷಿಸುತ್ತದೆ

ಪೋಪರ ಗೂಢಚಾರ ಸಂಸ್ಥೆ

ಸುರಜಿತ

ಲೆಪೆನ್‌ಸ್ಕಿ ಎಂಬ ಕೆಂಗೂದಲಿನ ಕೃಷಿಕನೊಬ್ಬ ರಶಿಯಾದ ನ್ಯಾಯಾಲಯವೊಂದರ ಕಟಕಟೆಯಲ್ಲಿ ನಿಂತಿದ್ದ. ಯಾವುದೋ ಅಪರಾಧಕ್ಕಾಗಿ ನ್ಯಾಯಾಧೀಶರು ಅವನಿಗೆ ಆಜೀವ ಕಾರಾಗೃಹ ವಾಸವನ್ನು ವಿಧಿಸಿದರು.

ಈ ಘಟನೆ ಸಾರ್ವಜನಿಕರ ಕುತೂಹಲವನ್ನು ಕೆರಳಿಸಲೂ ಇಲ್ಲ, ಈ ಪ್ರಕರಣದ ಬಗ್ಗೆ ರಶಿಯನ್ ಪತ್ರಿಕೆಗಳು ಚಕಾರವೆತ್ತಲೂ ಇಲ್ಲ. ಆದರೆ ಘಟನೆ ಮಾತ್ರ ಬಹು ಮಹತ್ವದ್ದಾಗಿತ್ತು. ವಾಸ್ತವಿಕವಾಗಿ ಲೆಪೆನ್‌ಸ್ಕಿ ರಶಿಯನ್ನನೇ ಆಗಿರಲಿಲ್ಲ. ಅದು ಅವನ ನಿಜವಾದ ಹೆಸರೂ ಆಗಿರಲಿಲ್ಲ. ವಾಸ್ತವವಾಗಿ ಆತ ರಶಿಯನ್ನನಲ್ಲ, ಅಮೇರಿಕನ್. ಮೂಲಭೂತವಾಗಿ ಅವನು ಪೆನಿಸಿಲ್ವೇನಿಯದ ಪಾದ್ರಿ.

ಈ ಪ್ರಕರಣದಿಂದಾಗಿ ಜಗತ್ತಿನ ಒಂದು ವಿಚಿತ್ರ ಗೂಢಚಾರ ಸಂಸ್ಥೆಯ ಅಸ್ತಿತ್ವ ಪ್ರಥಮತಃ ಬೆಳಕಿಗೆ ಬಂತು. ಸೀಜಕ್ ರೋಮನ್ ಕ್ಯಾಥೋಲಿಕ್ ಪಂಗಡಕ್ಕೆ ಸೇರಿದ ಪಾದ್ರಿಯಾಗಿದ್ದರೂ ರಶಿಯಾದಲ್ಲಿ ಅಲ್ಲಿನ ಕೃಷಿಕನ ಹಾಗೆ ನಟಿಸುತ್ತಾ ಅಮೇರಿಕದ ಪರವಾಗಿ ಗೂಢಚರ್ಯೆಯ ಚಟುವಟಿಕೆಗಳನ್ನು ನಡೆಸುತ್ತಿದ್ದ. ಅಮೇರಿಕ, ಬ್ರಿಟನ್, ಹಾಗೂ ಅವುಗಳ ಮಿತ್ರರಾಷ್ಟ್ರಗಳಿಗೆ 'ಧಾರ್ಮಿಕ ಗೂಢಚಾರ'ರನ್ನು ಒದಗಿಸುವ ಉದ್ದೇಶದಿಂದ ಕ್ಯಾಥೋಲಿಕ್ ಧರ್ಮಗುರುವಾದ ಪೋಪರು ಸ್ಥಾಪಿಸಿದ 'ಗಾಡ್ಸ್ ಅಂಡರ್‌ಗ್ರೌಂಡ್' (ಭೂಗತ ದೇವತೆಗಳು) ಎಂಬ ಸಂಸ್ಥೆಯೊಡನೆ ಸೀಜಕ್ ಸಂಬಂಧವಿರಿಸಿಕೊಂಡಿದ್ದ.

ಆತನ ನಿಜವಾದ ಹೆಸರು ವಾಲ್ಟರ್ ಸೀಜಕ್ ಎಂಬುದು ಈ ಪ್ರಕರಣದಿಂದಾಗಿ ಬೆಳಕಿಗೆ ಬಂತು.

ಗೂಢಚರ್ಯೆಯ ಆಪಾದನೆಯ ಮೇಲೆ ರಶಿಯನ್ ಸರಕಾರ ಸೀಜಕನನ್ನು ೧೯೪೦ ರಲ್ಲಿ ಬಂಧಿಸಿ ಹದಿನೈದು ವರ್ಷಗಳ ವರೆಗೆ ಕಾರಾಗೃಹದಲ್ಲಿರಿಸಿತ್ತು. ಅನಂತರ ಅವನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದ್ದರಿಂದ ಸೀಜಕ್ ಸಾಮಾನ್ಯ ನಾಗರಿಕನಂತೆ ಜೀವಿಸತೊಡಗಿದರೂ ಸರಕಾರದ ಕಣ್ಣಳವಿನಲ್ಲೇ ಇರಬೇಕಾಗಿತ್ತು. ಮುಂದೆ ಎಂಟು ವರ್ಷಗಳ ನಂತರ ಅಮೇರಿಕನ್ ಸರಕಾರ ತಾನು ಬಂಧಿಸಿದ ರಶಿಯನ್ ಗೂಢಚಾರನ ಬದಲಿಗೆ ಸೀಜಕನನ್ನು ಮರಳಿ ಪಡೆದುಕೊಂಡಿತು.

ಖೊಟ್ಟಿ ಪಾಸಪೋರ್ಟನ್ನಿಟ್ಟುಕೊಂಡ ಅಪರಾಧಕ್ಕಾಗಿ ಅವನನ್ನು ೧೯೪೦ ರಲ್ಲಿ ಬಂಧಿಸಲಾಯಿತೆಂದು ರಶಿಯಾದ ಪೋಲೀಸಖಾತೆ ಹೇಳುತ್ತದೆ. ಆತನನ್ನು ಬಂಧಿಸಿ ಪಾಸ್‌ಪೋರ್ಟನ್ನು ಪರೀಕ್ಷಿಸಿದಾಗ ಅದರಲ್ಲಿ ಅವನ ಹೆಸರನ್ನು ವಾಲ್ಟರ್ ಮೀರ್ ಲೆಪೆನ್‌ಸ್ಕಿ ಎಂದೇ ನಮೂದಿಸಲಾಗಿತ್ತು. ಅನಂತರ ಅಮೇರಿಕದೊಂದಿಗಿದ್ದ ಆತನ ಸಂಬಂಧ ಕಡಿದು ಹೋದದ್ದರಿಂದ ೧೯೪೭ ರಲ್ಲಿ ಅಮೇರಿಕದ ನ್ಯಾಯಾಲಯವೊಂದು ಸೀಜಕ್ ಮೃತನಾಗಿದ್ದಾನೆಂದು ಘೋಷಿಸಿತು. ಆದರೆ ೧೯೬೩ ರಲ್ಲಿ ಸೀಜಕನಿಂದ ಅವನ ತಂಗಿಗೆ ಆಕಸ್ಮಾತ್ತಾಗಿ ಒಂದು ಪತ್ರ ಬಂದು ಆತ ಇನ್ನೂ ಜೀವಂತವಾಗಿದ್ದಾನೆಂಬುದು ಖಚಿತವಾಯಿತು. ಅದೇ

ವರ್ಷ ಅಕ್ಟೋಬರಿನಲ್ಲಿ ಅಮೇರಿಕನ್ ಸರಕಾರ ಅವನನ್ನು ವಾಪಸು ಪಡೆದುಕೊಂಡಿತು.

ವ್ಯಾಟಿಕನ್ನಿನ ಪೋಪರ ರಾಜಕೀಯ ಪ್ರಭಾವವನ್ನು ಕುರಿತು ಅನೇಕ ವರ್ಷಗಳ ವರೆಗೆ ರಶಿಯನ್ನರು ಗೇಲಿ ಮಾಡುತ್ತಿದ್ದುದು ಆಶ್ಚರ್ಯವೇನಲ್ಲ. ಆದರೆ ಪೋಪರ ಚಟುವಟಿಕೆಗಳೆಲ್ಲ ಕೇವಲ ಧಾರ್ಮಿಕ-ಆಧ್ಯಾತ್ಮಿಕ ಕ್ಷೇತ್ರಗಳಿಗೆ ಸೀಮಿತವಾಗಿರುತ್ತವೆಂಬುದು ಮಹಾ ಭ್ರಮೆಯೆಂದು ಅವರಿಗೆ ಕೊಂಚ ನಿಧಾನವಾಗಿಯೇ ತಿಳಿದುಬಂತು. ವ್ಯಾಟಿಕನ್ನಿನ ವಿರುದ್ಧ ಯುದ್ಧವನ್ನು ಘೋಷಿಸುವುದು ಹಾನಿಕರವಾಗುವುದೆಂದು ರಶಿಯದ ವಿದೇಶಮಂತ್ರಿಯಾಗಿದ್ದ ಮೋಲೋಟೊವ್ ಸ್ಟಾಲಿನ್ನನನ್ನು ಎಚ್ಚರಿಸಿದಾಗ, ಪೋಪರ ಬಳಿ ಎಷ್ಟು ಡಿವಿಜನ್ ಸೈನ್ಯವಿದೆ ಎಂದು ಸ್ಟಾಲಿನ್ ವ್ಯಂಗ್ಯವಾಗಿ ಕೇಳಿದ್ದನಂತೆ.

'ಸ್ವಿಸ್ ಗಾರ್ಡ್ಸ್' ಎಂಬ ಪಹರೆದಾರರ ತಂಡವನ್ನುಳಿದು ಪೋಪರ ಬಳಿ ಯಾವ ಸಂರಕ್ಷಣಾ ವ್ಯವಸ್ಥೆಯಾಗಲಿ ಸೈನ್ಯವಾಗಲಿ ಇಲ್ಲವೆನ್ನುವುದು ನಿಜವೆ. ಆದರೆ ಪೋಪರು ಸ್ಟಾಲಿನ್ನನೆಣಿಸಿದಷ್ಟು ಅಸಮರ್ಥರಲ್ಲವೆನ್ನುವುದೂ ಅಷ್ಟೇ ನಿಜ. ಪೋಪರಿಂದ ತರಬೇತಾದ ಎಷ್ಟೋ ಪಾದ್ರಿಗಳು ಧಾರ್ಮಿಕಸ್ವಾತಂತ್ರ್ಯ ನಷ್ಟವಾದ ರಶಿಯಾ ಹಾಗೂ ಪೂರ್ವ ಯುರೋಪಿನ ದೇಶಗಳಲ್ಲಿ ಗೂಢಚರ್ಯೆ ನಡೆಸುತ್ತಾ ನಿಧನರಾದ ಅನೇಕ ದಾಖಲೆಗಳು ವ್ಯಾಟಿಕನ್ನಿನಲ್ಲಿ ಸುರಕ್ಷಿತವಾಗಿವೆ.

ಈ ಸಂಸ್ಥೆ ಗೂಢಚರ್ಯೆಯ ಇತಿಹಾಸದಲ್ಲಿಯೇ ವಿಚಿತ್ರವಾದುದ್ದು. ವಿಧ್ವಂಸಕ ಕೃತ್ಯಗಳನ್ನೆಸಗದೆಯೇ ಅನ್ಯದೇಶಗಳಿಂದ ಮಹತ್ವದ ಮಾಹಿತಿಯನ್ನು ಹೇಗೆ ಸಂಗ್ರಹಿಸಬೇಕೆಂಬ ಬಗ್ಗೆ ಇಲ್ಲಿ ಶಿಕ್ಷಣ ಕೊಡಲಾಗುತ್ತದೆ. ಇಲ್ಲಿಂದ ತರಬೇತಾದ ಅನೇಕ ಪಾದ್ರಿಗಳು ಪರದೇಶಗಳಲ್ಲಿ ಗೂಢಚರ್ಯೆಯನ್ನು ನಡೆಸುತ್ತಿದ್ದಾರೆ; ಎಷ್ಟೋ ಜನ ಕೊಲ್ಲಲ್ಪಟ್ಟಿದ್ದಾರೆ. ಆದರೂ ಸಾಮ್ಯವಾದಿ ದೇಶಗಳಿಂದ ಮಹತ್ವದ್ದಾದ, ಹಾಗೆಯೇ ರಹಸ್ಯಾತ್ಮಕವಾದ ವಿವರಗಳನ್ನು ಪಾಶ್ಚಾತ್ಯ ರಾಷ್ಟ್ರಗಳಿಗಾಗಿ ಸಂಗ್ರಹಿಸಿ ಸಕುಶಲರಾಗಿ ಹಿಂದಿರುಗಿ ಬಂದ ಪಾದ್ರಿಗಳಿಗೇನೂ ಕೊರತೆಯಿಲ್ಲ.

ವ್ಯಾಟಿಕನ್ನಿನಿಂದ ಸುಮಾರು ಎರಡು ಮೈಲು ದೂರದಲ್ಲಿ ರೋಮ್ ನಗರವಿದೆ. ಅದರ ಮಧ್ಯದಲ್ಲಿ 'ಗಾಡ್ಸ್ ಅಂಡರ್ ಗ್ರೌಂಡ್'ದ ಸದಸ್ಯರಿಗೆ ತರಬೇತಿ ಕೊಡುವ 'ಕೊಲಾಜಿಯೊ ರೆಶಿಕೊ' ಇದೆ. ಈ ಸಂಸ್ಥೆಯ ಹೆಸರನ್ನಾಗಲಿ ಸ್ವರೂಪವನ್ನಾಗಲಿ ಅವಲಕ್ಷಿಸಿದರೆ ಗೂಢಚರ್ಯೆಗೂ ಈ ಸಂಸ್ಥೆಗೂ ಸಂಬಂಧವಿದೆಯೆನ್ನುವಲ್ಲಿ ಯಾವ ಸಂಶಯವೂ ಉಳಿಯುವುದಿಲ್ಲ. ಆದರೆ ಸಂಸ್ಥೆಯ ಕಟ್ಟಡದ ಹೊರಗೆ ಒಬ್ಬನಾದರೂ ಸಶಸ್ತ್ರನಾದ ಕಾವಲುಗಾರ ಕಂಡುಬರುವುದಿಲ್ಲ. ಈ ಕಟ್ಟಡದಲ್ಲಿ ಯಾರು ಬೇಕಾದರೂ ಪ್ರವೇಶಿಸಬಹುದು. ಸಂದರ್ಶಕರನ್ನು ನಿರ್ಬಂಧಿಸುವಂತಹ ವಿದ್ಯುತ್ತು ಹರಿಯುವ ತಂತಿಗಳಾಗಲಿ ಮತ್ತಾವುದೆ ಬಗೆಯ ವ್ಯವಸ್ಥೆಯಾಗಲಿ ಇಲ್ಲಿಲ್ಲ. ಅಷ್ಟೆ ಏಕೆ, ಸಂಸ್ಥೆಯ ಟೆಲಿಫೋನ್ ನಂಬರು ಕೂಡ ರಹಸ್ಯವಾಗಿಲ್ಲ. ರೋಮ್ ನಗರದ ಟೆಲಿಫೋನ್ - ಡೈರೆಕ್ಟರಿಯಲ್ಲಿ ನಂಬರು ನೋಡಿ ಡಯಲ್ ಮಾಡಿದರೆ ಆಚೆ ಒದಿಯಿಂದ ಮಧುರವಾದ ಧ್ವನಿಯೊಂದು ಉತ್ತರಿಸುತ್ತದೆ, "ಕೊಲಾಜಿಯೊ ರೆಶಿಕೊ, ಎಸ್ ಪ್ಲೀಸ್,!" ಎಂದು.

ಕೊಲಾಜಿಯೋ ರೆಶಿಕೋ ಅರ್ಥಾತ್ 'ರೆಶಿಕಮ್'ದಲ್ಲಿ ಎತ್ತರವಾದ ಛತ್ತಿನ ಅರೆಗತ್ತಲಿನ ಕೋಣೆಗಳಲ್ಲಿ ಸೋವಿಯತ್ ರಶಿಯದ ಬಗೆಗೂ ಪೂರ್ವ ಯುರೋಪಿನ ಕಮ್ಯುನಿಸ್ಟ ದೇಶಗಳ ಬಗೆಗೂ ಶಿಕ್ಷಣವೀಯಲಾಗುತ್ತದೆ. ಇಲ್ಲಿ ತರಬೇತಾದವರನ್ನು ಆಯಾದೇಶದ ನಾಗರಿಕರಿಂದ ಬೇರ್ಪಡಿಸುವುದು ಅಸಾಧ್ಯವೆನಿಸುವರೀತಿಯಲ್ಲಿ ಇಲ್ಲಿ 'ಶತ್ರು' ದೇಶದ ಭಾಷೆಗಳನ್ನು ಕಲಿಸಲಾಗುತ್ತದೆ.

ರಶಿಯದಲ್ಲಿ ಬೋಲ್‌ಶೆವಿಕ್ ಕ್ರಾಂತಿಯಾದಾಗ ಕಮ್ಯುನಿಸಮ್ಮಿನ ಸರಿಯಾದ ಕಲ್ಪನೆ ಪೋಪರಿಗಿರಲಿಲ್ಲ. ಆದರೆ ಸಾಮ್ಯವಾದವೂ ಹೆಚ್ಚುತ್ತಿರುವ ಸೋವಿಯತ್ ರಶಿಯದ ಶಕ್ತಿಯೂ ಕ್ರಿಶ್ಚಿಯನ್ ಧರ್ಮಕ್ಕೆ ಮಾರಕ

ಮಾಗಬುಹುದೆಂಬುದು ಸ್ಪಷ್ಟವಾದಾಗ ಕಮ್ಯುನಿಸಮ್ಮಿನ ವಿರುದ್ಧ ಕೆಲಸ ಮಾಡಲು 'ರೆಶಿಕಮ್' ಅನ್ನು ಸ್ಥಾಪಿಸಲಾಯಿತು.

'ಧಾರ್ಮಿಕ ಪರಿಭಾಷೆಯಲ್ಲಿ ರೆಶಿಕಮ್ ಏನೂ ಅಲ್ಲ, ಆದರೆ ಎಲ್ಲವೂ ಹೌದು... ವಾಸ್ತವದಲ್ಲಿ. ಈ ಸಂಸ್ಥೆ ಒಂದಿಲ್ಲೊಂದು ದಿನ ಸೋವಿಯತ್ ರಶಿಯದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಈಶ್ವರೀಯ ವ್ಯವಸ್ಥೆಯನ್ನು ಪುನಃಪ್ರಸ್ಥಾಪಿಸುವ ಬಗೆಗೆ ನಡೆವ ನಮ್ಮ ಸಂಘರ್ಷಣೆಯ ಪ್ರತೀಕವಾಗಿದೆ" ಯೆಂದು ರೆಶಿಕಮ್'ದ ರೆಕ್ಟರರಾದ ಥಿಯೋಫಿಸಲ್ ಹೋರೇಸರು ಹೇಳಿದ್ದರಿಂದಾಗಿ ಈ ಗುಪ್ತಚಾರ ಸಂಸ್ಥೆಗೆ ಧರ್ಮದ ಆವರಣವನ್ನು ಹೇಗೆ ಹೊದಿಸಲಾಗಿದೆಯೆಂಬುದು ಸ್ಪಷ್ಟವಾಗುವುದು.

ಕೊಲಾಜಿಯೊ ರೆಶಿಕೊ ವ್ಯಾಟಿಕನ್ನಿನಿಂದ ಪ್ರಪಂಚದಾದ್ಯಂತ ಹಬ್ಬಿಸಲ್ಪಟ್ಟ ಗೂಢಚಾರರ ಜಾಲದ ಕೇಂದ್ರವಾಗಿದೆಯೆಂದು ರಶಿಯದ ಪ್ರಮುಖ ಪತ್ರಿಕೆಗಳಾದ 'ಪ್ರಾವ್ಡಾ' ಹಾಗೂ 'ಇಜ್‌ವೆಸ್ತಿಯಾ'ಗಳು ಅನೇಕ ಸಲ ಆಪಾದಿಸಿವೆ. ಈ ಪತ್ರಿಕೆಗಳ ಪ್ರಕಾರ ಕೊಲಾಜಿಯೊ ರೆಶಿಶೆಕೊ ಅರ್ಥಾತ್ ರೆಶಿಕಮ್ ತನ್ನ ಚಟುವಟಿಕೆಗಳ ಮೂಲಕವಾಗಿ ಈ ವರೆಗೆ ಲೆಕ್ಕ ಹಾಕಲು ಸಾಧ್ಯವಿಲ್ಲದಷ್ಟು ಅಪರಾಧಗಳನ್ನು ಎಸಗಿದೆ. ಉನ್ನತಿ ಹಾಗೂ ಶಾಂತಿಯನ್ನು ಬಯಸುವ ಮಾನವ ಜನಾಂಗಕ್ಕೆ ವ್ಯಾಟಿಕನ್ನಿನಿಂದ ತರಬೇತಾದ ಈ ಗೂಢಚಾರ ಪಾದ್ರಿಗಳು ಶತ್ರು ಸ್ವರೂಪರಾಗಿದ್ದಾರೆಂದು ರಶಿಯಾನ್ ವಿಶ್ವಕೋಶ ಹೇಳುತ್ತದೆ.

ವಿಮಾನ ಹಾರುತ್ತಿದ್ದಾಗ ಪ್ಯಾರಾಷ್ಯೂಟಿನಿಂದ ಕೆಳಗೆ ಹಾರುವುದು, ವಿಭಿನ್ನ ಅಸ್ತ್ರಗಳನ್ನು ಉಪಯೋಗಿಸುವದು, ವಿಧ್ವಂಸಕ ಕಾರ್ಯಗಳನ್ನೆಸಗುವುದು, ರಾಜನೈತಿಕ ಕ್ಷೇತ್ರದಲ್ಲಿ ತಮಗೆ ಬೇಡವಾದ ವ್ಯಕ್ತಿಗಳನ್ನು ಕೊಲ್ಲುವುದು ಮುಂತಾದವುಗಳನ್ನಲ್ಲದೆ ಇನ್ನೂ ಅನೇಕ ಹೀನ ಕೃತ್ಯಗಳನ್ನೆಸಗುವುದರಲ್ಲಿಯೂ ರೆಶಿಕಮ್ ತನ ಪಾದ್ರಿಗಳನ್ನು ತರಬೇತು ದೊಳಿಸುತ್ತದೆಂದು ಸೋವಿಯತ್ ರಶಿಯಾ ಆಪಾದಿಸಿದೆ.

ಆದರೆ, ಇದೆಲ್ಲ ಹಾಸ್ಯಾಸ್ಪದ; ನಾವು ಅಧಾರ್ಮಿಕವಾದ ಅಥವಾ ಅನೈತಿಕವಾದ ಯಾವ ವಿಷಯದಲ್ಲಿಯೂ ಪಾದ್ರಿಗಳಿಗೆ ತರಬೇತಿ ಕೊಡುವುದಿಲ್ಲ ಎಂದು ರೆಶಿಕಮ್'ದ ರೆಕ್ಟರರು ಹೇಳುತ್ತಾರೆ. ಆದರೆ ಇಲ್ಲಿಂದ ತರಬೇತಾದ ಪಾದ್ರಿಗಳಿಗೆ ಅತಿ ಮಹತ್ವದ್ದಾದ, ಅದೇ ವೇಳೆಗೆ ಅತಿ ಅಪಾಯಕರವಾದ ಕೆಲಸವನ್ನು ವಹಿಸಿಕೊಡಲಾಗುತ್ತದೆಂಬುದನ್ನು ಈ ಸಂಸ್ಥೆಯ ಅಧಿಕಾರಿಗಳು ಎಂದಿಗೂ ನಿರಾಕರಿಸಿಲ್ಲ "ತರಬೇತಾದ ಪಾದ್ರಿಗಳನ್ನು ಇಲ್ಲಿಂದ ಎಲ್ಲಿಗೆ ಕಳಿಸಿಕೊಡುತ್ತೀರಿ?" ಎಂದು ರೆಶಿಕಮ್'ದ ಡೀನರನ್ನು ಕೇಳಿದಾಗ, "ಜಗತ್ತಿನ ಮೂಲೆ ಮೂಲೆಗೂ ಅವರನ್ನು ಕಳಿಸಿಕೊಡುತ್ತೇವೆ." ಎಂದು ಡೀನರು ಅನುಮಾನವಿಲ್ಲದೆ ಉತ್ತರಿಸಿದರು. ಪೋಪರ ಗುಪ್ತಚಾರ ವಿಭಾಗದ ಚಟುವಟಿಕೆಗಳು ಕಮ್ಯುನಿಸ್ಟ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗಿವೆಯೆಂದು ತಿಳಿದರೆ ತಪ್ಪಾದೀತು.

೧೯೬೩ರಲ್ಲಿ ರಶಿಯ ದಿಂದ ಪಾರಾಗಿ ಬಂದ ರೆಶಿಕಮ್'ದ ಪಾದ್ರಿ ತನ್ನೊಂದಿಗೆ ತಂದ ವರದಿ ಎಷ್ಟು ಮಹತ್ವದ್ದಾಗಿತ್ತೆಂದರೆ ಆತ ಸೀದಾ ಪೋಪ್ ಜಾನರ ಬಳಿಗೇ ಹೋಗಿ ವರದಿಯನ್ನೊಪ್ಪಿಸಿದ. ರಶಿಯದ ಪರಮಾಣು ಪ್ರಯೋಗಗಳಿಂದ [illegible] ದೇಶದ ಆಹಾರೋತ್ಪಾದನೆಯ ಮೇಲೆ ಯಾವ ರೀತಿಯಲ್ಲಿ ಪರಿಣಾಮವಾಗಿದೆಯೆಂಬ ಬಗೆಗಿನ ವಿಸ್ತೃತವಾದ ವಿವರಣೆಯನ್ನು ಅವನ ವರದಿ ಒಳಗೊಂಡಿತ್ತು. ಇದರಿಂದಾಗಿ ಬಂಡವಾಳಶಾಹಿ ರಾಷ್ಟ್ರಗಳು ಹೇರಳವಾಗಿ ಲಾಭ ಮಾಡಿಕೊಂಡವೆಂದು ಹೇಳುವುದೇ ಬೇಡ.

ಈ ಪಾದ್ರಿ ಎರಡು ವರ್ಷಗಳವರೆಗೆ ರಶಿಯದಲ್ಲಿದ್ದ. ಈ ಅವಧಿಯಲ್ಲಿ ಆತ ರಶಿಯದ ಪಶ್ಚಿಮ ಗಡಿಯಿಂದ ಪೂರ್ವ ಗಡಿಯಲ್ಲಿ ಶಾಂತ ಸಾಗರದ ತಲೆಮೇಲಿರುವ ವ್ಲಾಡಿವೊಸ್ಟಾಕಿನ ವರೆಗಿನ ವಿಸ್ತೃತವಾದ ಪ್ರದೇಶವೆಲ್ಲವನ್ನೂ ಕ್ರಮಿಸಿ ತನಗೆ ಅವಶ್ಯವಿದ್ದ ವಿವರಗಳನ್ನು ಸಂಗ್ರಹಿಸಿದ. ಅನಂತರ ೧೯೬೧ ರ ಗ್ರೀಷ್ಮಋತುವಿನಲ್ಲಿ ರಶಿಯವನ್ನು ಪ್ರವೇಶಿಸಿ

ದ್ದಷ್ಟೇ ಸುಲಭವಾಗಿ ರಶಿಯದಿಂದ ಹೊರ ಬಿದ್ದು ಹೋದ.

ಆತ ಕೊನೆಯ ಸಲ ಕಾಣಿಸಿಕೊಂಡದ್ದು ರಶಿಯ—ತುರ್ಕಸ್ಥಾನದ ಗಡಿಪ್ರದೇಶದಲ್ಲಿ. ರೂಪದಲ್ಲಾಗಲಿ ವೇಷಭೂಷಣದಲ್ಲಾಗಲಿ ಆತ ರಶಿಯನ್ನನ ಹಾಗೆಯೇ ಕಾಣುತ್ತಿದ್ದ. ರಶಿಯದಲ್ಲಿದ್ದಾಗ ಅಲ್ಲಿನ ಪೋಲೀಸರು ಅನೇಕ ಸಲ ಆ ಪಾದ್ರಿಯನ್ನು ತನಿಖೆಗೊಳಪಡಿಸಿದ್ದರು, ಕಾಗದಪತ್ರಗಳನ್ನು ಕೂಲಂಕುಷವಾಗಿ ಪರೀಕ್ಷಿಸಿದ್ದರು. ಆದರೆ ಪ್ರತಿಸಲವೂ ಆತ ಪೋಲೀ-ಸರ ಕಣ್ಣಿಗೆ ಮಣ್ಣೆರಚಿ ಪಾರಾಗುತ್ತಿದ್ದ. ರಶಿಯನ್ ಭಾಷೆಯನ್ನು ರಶಿಯನ್ನರಷ್ಟೆ ಸರಾಗವಾಗಿ ಮಾತಾಡುತ್ತಿದ್ದ. ಅವನು ಹೊರ ನೋಟಕ್ಕೆ ಯುಕ್ರೇನಿಯನ್ (ರಶಿಯದ ಒಂದು ಗಣರಾಜ್ಯ) ಮನುಷ್ಯನ ಹಾಗೆ ಕಾಣುತ್ತಿದ್ದ. ಅವನ ಪಾಸ್‌ಪೋರ್ಟ್‌ವನ್ನಾಗಲಿ ಇನ್ನಿತರ ಕಾಗದಪತ್ರಗಳನ್ನಾಗಲಿ ರಶಿಯದ ಅನೇಕ ಸ್ಥಳಗಳಲ್ಲಿ ಪರೀಕ್ಷಿಸಲಾಯಿತಾದರೂ ಅವು ಖೊಟ್ಟಿಯಾಗಿವೆಯೆಂದಾಗಲಿ ಆತ ರಶಿಯನ್ನನಲ್ಲವೆಂದಾಗಲಿ ಅಲ್ಲಿನ ಅಧಿಕಾರಿಗಳಿಗೆ ತೋರಲೇ ಇಲ್ಲ.

ಆತ ಒಂದು ರಾತ್ರಿ ರಶಿಯದ ಗಡಿಯನ್ನು ದಾಟಿ ತುರ್ಕಸ್ತಾನವನ್ನು ಪ್ರವೇಶಿಸಿ ಅಲ್ಲಿ ಎರಡು ವರ್ಷಗಳ ಹಿಂದೆ ಹೂಳಿದ್ದ ಪ್ಲಾಸ್ಟಿಕ್ ಕವರನ್ನು ಹೊರತೆಗೆದ. ಒಳಗೆ ಹಳೆಯ ಪಾಸ್‌ಪೋರ್ಟ್ ಸುರಕ್ಷಿತವಾಗಿತ್ತು. ಅದನ್ನು ನಿರಾಂತಕವಾಗಿ ತನ್ನ ಕಿಸೆಗಿಳಿಸಿ ರಶಿಯನ್ ಪಾಸ್‌ಪೋರ್ಟನ್ನು ಪ್ಲಾಸ್ಟಿಕ್ ಕವರಿನಲ್ಲಿಟ್ಟು ಮತ್ತೆ ನೆಲದಲ್ಲಿ ಆಳವಾಗಿ ಹೂಳಿದ. ಈ ಸಲದ ಪಾಸ್‌ಪೋರ್ಟಿನಲ್ಲಿ ಆ ಪಾದ್ರಿಯನ್ನು ತುರ್ಕಸ್ತಾನದ ನಿವಾಸಿಯೆಂದು ತೋರಿಸಲಾಗಿತ್ತು. ತುರ್ಕಸ್ತಾನದಿಂದ ವ್ಯಾಟಿಕನ್ ತಲುಪಲು ಅವನಿಗೆ ಕಷ್ಟವಾಗಲಿಲ್ಲ.

ವ್ಯಾಟಿಕನ್ನಿಗೆ ಬಂದವನೆ ಪೋಪರನ್ನು ಭೇಟಿಯಾಗಿ ಅಲ್ಲಿನ ಪುಸ್ತಕಾಲಯದ ನಿಸ್ತಬ್ಧ ವಾತಾವರಣದಲ್ಲಿ ಸಂಪೂರ್ಣವಾಗಿ ವರದಿಯನ್ನೊಪ್ಪಿಸಿದ. ಆತ ತನ್ನೊಂದಿಗೆ ತಂದ ಧಾನ್ಯಗಳನ್ನು ವ್ಯಾಟಿಕನ್ನಿನ ಪ್ರಯೋಗಾಲಯಗಳಲ್ಲಿ ಪರೀಕ್ಷಿಸಿದಾಗ ಅವು ಅಲ್ಲಿನ ಪರಮಾಣು ಪ್ರಯೋಗಗಳಿಂದ ಪ್ರಭಾವಿತವಾದದ್ದು ಕಂಡುಬಂತು. ಆಹಾರೋತ್ಪಾದನೆಯ ಮೇಲೆ ಇವರ ಪರಿಣಾಮ ಅಮೇರಿಕ ಹಾಗೂ ಇನ್ನಿತರ ರಾಷ್ಟ್ರಗಳ ಆಹಾರೋತ್ಪಾದನೆಯ ಮೇಲಾದದ್ದಕ್ಕಿಂತ ಆರು ಪಟ್ಟು ಹೆಚ್ಚಾಗುವುದೆಂಬುದೂ ಈ ಪ್ರಯೋಗಗಳಿಂದ ಸ್ಪಷ್ಟವಾಯಿತು. ವ್ಯಾಟಿಕನ್ ಕೂಡಲೇ ಪಶ್ಚಿಮ ಬಣದ ರಾಷ್ಟ್ರಗಳಿಗೆ ಈ ಬಗ್ಗೆ ಸೂಚನೆ ಕೊಟ್ಟಿತು. ಇದರಿಂದಾಗಿ ರಶಿಯದ ವಿರುದ್ಧ ಪ್ರಚಾರಮಾಡಲು ಆ ದೇಶದ ಪತ್ರಿಕೆಗಳಿಗೆ ಆಹಾರವು ದೊರೆತಂತಾಯಿತು. ರಶಿಯದ ಪರಮಾಣು ಪ್ರಯೋಗಗಳಿಂದ ಅಲ್ಲಿನ ಆಹಾರಧಾನ್ಯ ವಿಷಾಕ್ತವಾಗಿದೆಯೆಂದು ಅಮೇರಿಕನ್ ಹಾಗೂ ಬ್ರಿಟಿಶ್ ಪತ್ರಿಕೆಗಳು ದಪ್ಪಕ್ಷರಗಳಲ್ಲಿ ಪ್ರಕಟಿಸಿದವು.

ತಮ್ಮ ಕೆಲಸ ಪೂರೈಸಿದ ನಂತರ ಈ ಗೂಢಚಾರ ಪಾದ್ರಿಗಳು ಸಾಮಾನ್ಯವಾಗಿ ರಶಿಯನ್ ಭಾಷಾತಜ್ಞರೆಂದು ಪ್ರಪಂಚದಾದ್ಯಂತ ಹರಡಿಕೊಳ್ಳುತ್ತಾರೆ. ಅನೇಕರು ಕಾಲೇಜು, ವಿಶ್ವವಿದ್ಯಾಲಯಗಳನ್ನು ಸೇರಿಕೊಂಡು ರಶಿಯನ್ ಭಾಷೆಯ ವಿಷಯದಲ್ಲಿ ಪಾಠ ಪ್ರವಚನಗಳನ್ನು ನಡೆಸತೊಡಗುತ್ತಾರೆ. ಆದರೆ ಕೊಲಾಜಿನೊ ರೆಕೆಕೊ (ರೆಕೆಕವ್)ದ ಪ್ರಥಮ ರೆಕ್ಟರನು ಮಾತ್ರ ಹೀಗೆ ಮಾಡಲಿಲ್ಲ. ಜೀವನದ ಕೊನೆಯ ದಿನಗಳನ್ನು ತಾಯ್ನಾಡಾದ ಝೆಕೋಸ್ಲೋವಾಕಿಯದಲ್ಲಿ ಕಳೆಯಬೇಕೆಂದು ನಿಶ್ಚಯಿಸಿದ ಆತ ಒಂದು ದಿನ ಖೊಟ್ಟಿ ಪಾಸ್‌ಪೋರ್ಟಿನೊಂದಿಗೆ ವ್ಯಾಟಿಕನ್ನಿನಿಂದ ಕಣ್ಮರೆಯಾದ.

ದ್ವಿತೀಯ ಮಹಾಯುದ್ಧದ ಕೊನೆ ದಿನಗಳಲ್ಲಿ ರೆವ್ಹರೆಂಡ್ ಜಾವರಕಾ ಎಂಬ ಪಾದ್ರಿಯನ್ನು ಗೂಢಚರ್ಯೆಯ ಆರೋಪದ ಮೇಲೆ ಸ್ಟಾಲಿನ್ ಸರಕಾರ ಬಂಧಿಸಿ ಹತ್ತು ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿ ಶ್ರಮ ಶಿಬಿರಕ್ಕೆ ಕಳಿಸಿಕೊಟ್ಟಿತು. ಜಾವರಕಾನ ಜೀವ ಗಟ್ಟಿಯಾಗಿತ್ತು. ಸ್ಟಾಲಿನ್ ಸತ್ತು ಎರಡು ವರ್ಷಗಳ ನಂತರ ಅವನ ಬಿಡುಗಡೆಯಾಗುವ ವರೆಗೂ ಜೀವ ಹಿಡಿದುಕೊಂಡಿದ್ದ. ವ್ಯಾಟಿಕನ್ನಿನಿಂದ ತರಬೇತಾದ ಈ ಪಾದ್ರಿಯು ನಿಜವಾದ

ಉದ್ದೇಶ, ಚಟುವಟಿಕೆಗಳ ಬಗೆಗೆ ರಶಿಯಕ್ಕೇನಾದರೂ ಸುಳಿವು ದೊರೆತಿದ್ದರೆ ಜಾವರಕಿಾನ ಜೀವ ಉಳಿಯುತ್ತಿರಲಿಲ್ಲ.

ಆದರೆ ಪೋಪರ ಎಲ್ಲ ಗೂಢಚಾರರ ದೈವವೂ ಜಾವರಕಿಾನ ದೈವದಷ್ಟು ಚೆನ್ನಾಗಿರುವುದಿಲ್ಲ. ಎಷ್ಟೋ ರೆಷ್ಯಾಕ್, ಹಂಗೇರಿಯನ್, ಪೋಲಿಷ್ ಹಾಗೂ ರಶಿಯನ್ ಪಾದ್ರಿಗಳು ತಮ್ಮ ಪಾಲಿನ 'ಸೇವೆ'ಯನ್ನು ಸಲ್ಲಿಸುತ್ತಾ, ನಿಧನರಾದ ಬಗ್ಗೆ ಕೊಲಾಜಿಯೊ ರೆಶಿಕೊದಲ್ಲಿ ದಾಖಲೆಗಳಿವೆ.

ಫಾದರ್ ಜಾನ್‌ಕೀಜ್ ರಶಿಯದ ಯುಕ್ರೇನಿನಲ್ಲಿ ಸತ್ತ. ಆತನನ್ನು ರಶಿಯದ ಗುಪ್ತಚಾರ ಪೋಲೀಸರು ಬಂಧಿಸಿ ಫಾಸಿ ವಿಧಿಸಿದರು. ರೆವ್ಹರೆಂಡ್ ರಾಫಲ್ ಚೋವೇನ್ ಎಂಬ ಇನ್ನೊಬ್ಬ ಪಾದ್ರಿಯೂ ರಶಿಯದಲ್ಲಿ ಗಲ್ಲಿಗೇರಿದ. ಹಾಲೆಂಡಿನ ಫಾದರ್ ಹಾಲ್-ವ್ಯಾಗನ್ ನಾಝಿ ಜರ್ಮನಿಯ ಕುಪ್ರಸಿದ್ಧ ಕೂಟ ಶಿಬಿರವಾದ ಬುಕೆನ್‌ವಾಲ್ಡ್‌ನಲ್ಲಿ ಕೊಲ್ಲಲ್ಪಟ್ಟ. ಜರ್ಮನಿ- ರಶಿಯಗಳಲ್ಲಿ ಪರಸ್ಪರ ಅನಾಕ್ರಮಣದ ಒಪ್ಪಂದವಾದಾಗ ನಡೆದ ಘಟನೆಯಿದು. ನಾಝಿಗಳನ್ನು ವಿರೋಧಿಸಿದ್ದ ಅಪವಾದದ ಮೇಲೆ ರಶಿಯನ್ ಸರಕಾರ ಹಾಲ್ ವ್ಯಾಗನ್ನನನ್ನೂ ಬಂಧಿಸಿ ಜರ್ಮನ್ ಸರಕಾರಕ್ಕೆ ಒಪ್ಪಿಸಿತು.

ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ರೆಶಿಕಮ್‌ದ ಗುಪ್ತಚಾರರು ನಡೆಸಿದ ಚಟುವಟಿಕೆಗಳಿಂದ ಜಗತ್ತಿನ ಇನ್ನಾವುದೆ ಗೂಢಚಾರ ಸಂಸ್ಥೆ ಪಾಠ ಕಲಿಯಬಹುದು. ಈ ಗೂಢಚಾರರು ಎಸಗಿದ ಎಷ್ಟೋ ಸಾಹಸಕಾರ್ಯಗಳು ವಿಶ್ವಾಸವಾಗದಷ್ಟು ವಿಸ್ಮಯಕರವಾಗಿವೆ. ರೆಶಿಕಮ್‌ದ ಒಬ್ಬ ಗೂಢಚಾರನನ್ನು ಕಳೆದ ಹತ್ತು ವರ್ಷಗಳಿಂದಲೂ ರಶಿಯದಲ್ಲಿ ನಜರಬಂದಿಯಲ್ಲಿಡಲಾಗಿದೆ. ಸುದೈವದಿಂದ ಅವನು ಅಲ್ಲಿ ಒಂದು ಮಹತ್ವದ ಸ್ಥಾನದಲ್ಲಿ ನಿಯುಕ್ತನಾದದ್ದರಿಂದ ಅವನು ಸೋವಿಯತ್ ರಶಿಯವನ್ನು ಬಿಟ್ಟು ಹೊರಬರುವಂತಿಲ್ಲ. ಆ ವ್ಯಕ್ತಿ ಅಲ್ಲಿ ಸಾಕಷ್ಟು ಪ್ರಸಿದ್ಧನಾಗಿದ್ದಾನಲ್ಲದೆ ಬಹು ಮಹತ್ವದ ಸ್ಥಾನದಲ್ಲಿರುವುದರಿಂದ ಅವನ ಮೇಲೆ ಸದಾ ಕಣ್ಣಿಡಲು ಸೋವಿಯತ್ ಸರಕಾರ ಅವನ ಸುತ್ತಲೂ ರಕ್ಷಕರ ಜಾಲವನ್ನೇ ನಿರ್ಮಿಸಿದೆ.

ಉಳಿದ ಗೂಢಚಾರರಂತೆ ಇವನೂ ಕೃತ್ರಿಮ ವ್ಯಕ್ತಿತ್ವದ ಆವರಣವನ್ನು ಧರಿಸಿದ್ದಾನೆ. ಹೀಗಾಗಿ ತನ್ನ ನಿಜನಾಮಧೇಯವನ್ನುಪಯೋಗಿಸುವುದು ಅವನಿಗೆ ಸಾಧ್ಯವಿಲ್ಲ. ಆದರೂ ಆ ಹೆಸರಿನ ಮೊದಲಕ್ಷರವನ್ನು ಉಪಯೋಗಿಸುವ ಸಂದರ್ಭ ವರ್ಷದಲ್ಲೆರಡು ಬಾರಿ ಮಾತ್ರ ಒದಗಿಬರುತ್ತದೆ. 'ದೇವರು ನಿಮ್ಮನ್ನು ಕ್ಷೇಮವಾಗಿಡಲಿ' ಎಂಬ ವಾಕ್ಯವನ್ನು ಮಾತ್ರ ಒಳಗೊಂಡ ಪತ್ರವನ್ನು ನ್ಯೂಯಾರ್ಕಿನಲ್ಲಿದ್ದ ತನ್ನ ಇಬ್ಬರು ಸಹೋದರಿಯರಿಗೆ ಬರೆದು ಅದರಡಿಯಲ್ಲಿ ತನ್ನ ನಿಜವಾದ ಹೆಸರಿನ ಮೊದಲ ಅಕ್ಷರವನ್ನು ಸಹಿಮಾಡುತ್ತಾನೆ. ಸಾಮಾನ್ಯವಾಗಿ ರಶಿಯನ್ ಸ್ಟ್ಯಾಂಪುಗಳನ್ನೇ ಲಕೋಟೆಗೆ ಅಂಟಿಸಲಾಗಿದ್ದರೂ ಕೆಲವೊಮ್ಮೆ ಪೋಲಂಡಿನಲ್ಲಿ, ಕೆಲವೊಮ್ಮೆ ಝೆಕೊಸ್ಲೋವಾಕಿಯದಲ್ಲಿ ಲಕೋಟೆಯನ್ನು ಅಂಚೆಗೆ ಹಾಕಿದ್ದರಿಂದ ಆ ದೇಶಗಳ ಸ್ಟ್ಯಾಂಪುಗಳನ್ನು ಲಕೋಟೆ ಹೊತ್ತಿರುವುದುಂಟು. ಹೀಗೆ ಪತ್ರ ಬಂದಾಗ ಮಾತ್ರ ತಮ್ಮ ಅಣ್ಣ ಇನ್ನೂ ಜೀವಂತವಾಗಿರುವುದು ಆ ಸಹೋದರಿಯರಿಗೆ ಖಚಿತವಾಗುತ್ತದೆ. ಮುಂದೆ ಒಂದು ವರ್ಷದವರೆಗೆ ಅವರಿಗೆ ತಮ್ಮ ಸಹೋದರನ ಬಗೆಗೆ ಏನೂ ಗೊತ್ತಾಗುವುದಿಲ್ಲ. ✡

'ನವನೀತ' ಹಿಂದಿ ಡೈಜೆಸ್ಟಿನ ಅನುಮತಿಯಿಂದ



ರೆಕ್ಕೆ ಮುರುಕ

ಶಶಿಧರ
ವಿಶ್ವಾಮಿತ್ರ

ಅರುಣೋದಯಕ್ಕೆ ಮುಂಚೆಯೇ ಸುರುವಾಗಿತ್ತು ವಾಯಸ ಕುಲದ ಗಲಭೆ. ಮೊದಲೆದ್ದ ಕಾಗೆ ಕಾಕ್ಕಾಆ ಎನ್ನುವುದಕ್ಕಿಲ್ಲ, ತಂತಮ್ಮ ಗೊತ್ತುಗಳಲ್ಲಿ ವಿರಮಿಸಿದ್ದ ಕಾಗೆಗಳೆಲ್ಲವೂ ಥಟ್ಟನೆದ್ದು ನಾ ಮುಂಚೆ ಎದ್ದೆ ನಾ ಮುಂಚೆ ಎದ್ದೆ ಎಂದು ಜಂಭ ಕೊಚ್ಚಿಕೊಳ್ಳಲು ಪ್ರಾರಂಭಿಸಿದ್ದವು. ರೆಕ್ಕೆಯುಗಲಿಸಿ ಮೈ ನೀಡಿ, ಮಲವಿಸರ್ಜನೆ ಮಾಡಿ ರೆಂಬೆಗಳ ಮೇಲೆ ಕುಪ್ಪಿ ಮೈಯಲ್ಲಿ ಕೊಕ್ಕಾಡಿಸಿ ರೆಕ್ಕೆ ತಿಪ್ಪುಳಗಳನ್ನು ನೀಟು ಮಾಡಿಕೊಂಡು ಕೊರಳೆಬ್ಬಿಸಿ ಕಿವಿ ಗಡಚಿಕ್ಕುವಂತೆ ಗುಲ್ಲೆಬ್ಬಿಸಿದ್ದ ಕಾಗೆಗಳ ಕ್ರಂದನ ತಾರಕ್ಕೇರಿ, ಇನ್ನು ಕೂಗಿ ಪ್ರಯೋಜನವಿಲ್ಲವೆಂಬುದನ್ನು ಅರಿತ ಕ್ಷಣ ಹಠಾತ್ತನೆ ನಿಂತಿದ್ದಿತು. ಆದರೆ ಮೌನ ಅರೆಕ್ಷಣ ಮಾತ್ರದ್ದು.

ಕೂಗಾಡುವವರು ಕೂಗಾಡಲಿ; ನಮ್ಮ ಕೆಲಸಗಳನ್ನು ನಾವು ಮಾಡಿಕೊಳ್ಳೋಣ ಎಂಬ ಅನುಕೂಲಸಿಂಧು ನಾಯಕ ಜಾಣ ಆ ಗಲಾಟೆಯ ಸಭೆಯಲ್ಲಿಯೂ ಹೇಗೋ ತನಗೆ ಪ್ರಿಯವಾದ ನಿರ್ಣಯವನ್ನು ನುಸುಳಿಸಿ ಅಂಗೀಕಾರ ಪಡೆದುಕೊಳ್ಳುವಂತೆ ಗಲಿಬಿಲಿಯೆಬ್ಬಿಸಿ ಕೂಗುತ್ತಿದ್ದ ಕಾಗೆಗಳೂ, ನಾಯಕ ಕಾಗೆ ಹೊರಹೊರಡುವುದೆಂದು ನಿರ್ಧರಿಸಿಕೊಂಡು ಹಾಗೆಂದು ಕಾಗುಟ್ಟಿ ಚಿಮ್ಮಿ ನೆಗೆದು ರೆಕ್ಕೆಗಳನ್ನೊತ್ತಿ ಹಾರಿ ಹೋಗಲು, ತಾವೂ ಅಸಾಧುವಾದ ಅವಸರದಿಂದ ನಾಯಕ ಕಾಗೆಯ ಹಿಂದೆ ಹಾರಿ ಹೋಗಿದ್ದುವು. ಅನಿಶ್ಚಿತ ಮನವೇ ಆಡುವ ಜನಸಭೆಯಲ್ಲಿ ಏರಿದ್ದ ಕಾವು ನಿಷ್ಪ್ರಯೋಜಕವೆಂದು ತಿಳಿದ ಕ್ಷಣ ಹಠಾತ್ ಇಳಿಯುವಂತೆ ಆಗಿದ್ದಿತು, ವಿನಾಕಾರಣ ಗಲಭೆಯೆಬ್ಬಿಸಿದ್ದ ಕಾಗೆಗಳ ಸ್ಥಿತಿ ಕೂಡ. ಈ ಸಲದ ತಳಿಯಾಗಿ ಹೊಸದಾಗಿ ಹಾರಲು ಕಲಿತಿದ್ದ ಪಡ್ಡೆಗಳಂತೂ ಕೂಗುತ್ತಿದ್ದ ಗಂಟಲಿಗೆ ವಾತವ್ಯಾಪವನ್ನು ಒತ್ತಿ ಒತ್ತಿ ಬೀಸುತ್ತಿದ್ದ ರೆಕ್ಕೆಗಳಿಗೆ ಪ್ರಾಣತ್ರಾಣಗಳನ್ನು ಅಮಿತ ಸಂಭ್ರಮದಿಂದ ಕೊಟ್ಟು ಕೂಗಿ ಕಿರಿಚುತ್ತ ತಂತಮ್ಮ ಹಿರಿಯರನ್ನು ಅನುಸರಿಸಿದ್ದುವು. ಕ್ಷಣ ಕ್ಷಿಪ್ರದಲ್ಲಿಯೇ ಒಂದೆಂಬಂತೆ ಹೊರಟಿದ್ದ ಕಾಗೆಗಳ ಗುಂಪು ದಿಕ್ಕುಗಳನ್ನು ಬದಲಾಯಿಸಿದ್ದಿತು.

ಎಲ್ಲ ಕಾಗೆಗಳೂ ಗೊತ್ತು ಬಿಟ್ಟು ಹಾರಿ ಹೋಗಿದ್ದರೂ ತಾಯಿ ಕಾಗೆಯೊಂದು ಮರ ಬಿಟ್ಟು ಕದಲಿರಲಿಲ್ಲ. ಬೆಳಗಾಗ ಕೂಗಿ ಕಿರಿಚಿ ಮೈ ಹಗುರ ಮಾಡಿಕೊಂಡು ಹಾರಿ ಹೋಗುವುದು ಜೀವಕ್ಕೇ ಅಂಟಿಕೊಂಡು ಬಂದ ಪರಿಪಾಠವಾಗಿದ್ದರೂ ಸಂಗಡಿಗರೆಲ್ಲ ಒಬ್ಬೊಬ್ಬರಾಗಿ ಸಂಭ್ರಮದಿಂದ ಕೂಗಿ ಕಿರಿಚಿ ಹಾರಿಹೋಗುತ್ತಿದ್ದುದನ್ನು ನೋಡಿಯೂ, ತಾಯಿ ಕಾಗೆ ತನ್ನ ಸ್ವಭಾವ ಪರಿಪಾಠವನ್ನು ನಿರ್ಲಕ್ಷಿಸಿ, ಮರದ ಬುಡಕ್ಕೆ ಅಷ್ಟು ದೂರ ಬೆಳೆದಿದ್ದ ಲಂಟಾನ ಪೊದರಿನತ್ತ, ಮೌನದಳಕುಗಳಿಂದ ದೃಷ್ಟಿಸುತ್ತಿತ್ತು. ಹಾಗೆ ದೃಷ್ಟಿಸುತ್ತಾ ಕಾತುರಗಳಿಂದ ತನ್ನ ಕಂದನನ್ನು ಕಾಗುಟ್ಟಿ ಕರೆದಿತ್ತು. ತಟ್ಟನೆ ಬಂದಿತ್ತು, ಕ್ಷೀಣವಾಗಿದ್ದರೂ ಸ್ಪಷ್ಟವಾದ ಉತ್ಸುಕವಾದ ಮಾರುಲಿ. ಕ್‌ಕ್ಕಾವ್ ಕ್‌ಕ್ಕಾವ್ ಕ್‌ಕ್‌ಕ್ಕಾವ್‌…

ತಾಯಿ ಕಾಗೆ ಮರದಿಂದ ಹಾರಿಳಿದು ಕುಪ್ಪುತ್ತಾ, ತನ್ನ ಕಂದನನ್ನು ಕೂಗುತ್ತಾ ಪೊದೆಯ ಬಳಿ ಬಂದಂತೆ, ಪೊದೆಗರ್ಭದಲ್ಲಿ ನಿನ್ನಿನ ಅವಘಡದಿಂದಾದ ಗಾಯಗಳ

ನೋವನ್ನು ಅನುಭವಿಸುತ್ತಾ, ಆ ನೋವಿಗಿಂತ ಹೆಚ್ಚಾಗಿ ರಾತ್ರಿಯೆಲ್ಲಾ ಬಾಳಬೇಕಾಗಿ ಬಂದಿದ್ದ ಬೇಸರದ ಭಯದ ಎಂದೂ ಬಾಳದ ಒಂಟಿ ಬಾಳಿನ ಆಕರಾಳ ವಿಕರಾಳ ಕಂಕರಾಳ ರಾತ್ರಿಯಲ್ಲಿ ಗತ್ಯಂತರವಿಲ್ಲದೆ ಕಳೆದಿದ್ದ ಮರಿ ಕಾಗೆ ಬಹು ಕಷ್ಟದಿಂದ ಮೈಯೆಳೆದುಕೊಂಡು ನಡೆಯುತ್ತಾ ಹೊರಬಂದಿದ್ದಿತು. ಮುರಿದಿದ್ದ ರೆಕ್ಕೆಯನ್ನು ಬಹು ಕಷ್ಟ ಸಂಕಟಗಳಿಂದ ಎಳೆದುಕೊಂಡು ಪೊದೆಯ ರೆಂಬೆಕೊಂಬೆಗಳನ್ನು ದಾಟುತ್ತಾ ತನ್ನ ಬಳಿಗೆ ಬರುತ್ತಿದ್ದ ಮರಿಯನ್ನು ಹಿಡಿದ ಹೃದಯದಿಂದ ನೋಡುತ್ತಿದ್ದ ತಾಯಿ ಕಾಗೆ, ಮರಿ ತನ್ನ ಹತ್ತಿರ ಬಂದದ್ದೇ, ದೇಹಾದ್ಯಂತ ಕೊಕ್ಕಾಡಿಸಿ ತನ್ನ ಅಕ್ಕರೆಯನ್ನು ತೋರಿಸಿದ್ದಿತು. ನೋವಿನ ಭಾಗಗಳಿಗೆ ಕೊಕ್ಕು ತಾಕಿದಂತೆ ಮರಿ ಮೈ ಸೆಟೆದಾಗ ತಾಯಿ ಸ್ವತಃ ತನ್ನ ಕಂದನ ನೋವನ್ನು ಅನುಭವಿಸಿದ್ದಂತೆ ದುಗುಡಪಟ್ಟಿತು. ನಂತರ ಅಭಯ ಹೇಳಿ ನೊಂದಿದ್ದ ಮರಿಗಿಷ್ಟು ಆಹಾರ ಹೊಂಚಲು ಸುಯ್ಯನೆ ಮೇಲೆ ಹಾರಿದ್ದಿತು.

ಮೇಲೆ ಹಾರಿದ್ದ ತಾಯಿ ಕಾಗೆಯ ವಕ್ರದೃಷ್ಟಿ ಅಲ್ಲೇ ರೆಕ್ಕೆಗಳನ್ನು ಹರಡಿ ವಾತಪ್ರೋದ ಬೆನ್ನೇರಿ ಲೀಲ ಸರಾಗವಾಗಿ ಗಗನದಲ್ಲಿ ನಿರಿಚ್ಛೆಯಿಂದ ವರ್ತುಲ ಸುತ್ತುತ್ತಿದ್ದ ಹದ್ದಿನ ಮೇಲೆ ಬಿದ್ದಿದ್ದಿತು. ಪೊದೆ ಗರ್ಭದಲ್ಲಿರುವ ತನ್ನ ಮರಿಯನ್ನು ಈ ಹದ್ದು ಏನೂ ಮಾಡಲಾರದು ಎಂಬ ಅರಿವು ತಾಯಿ ಕಾಗೆಗೆ ಇದ್ದರೂ, ಪ್ರಾಯಶಃ ನಿನ್ನೆ ತಾನೇ ತನ್ನ ಕಂದ ಅನುಭವಿಸಿದ್ದ ಅವಘಡದಿಂದ ನೊಂದಿದ್ದ ಅದರ ಮನ, ತನ್ನ ಕಂದ ಕೂಳಿಲ್ಲದೆ ಕೆಳಗೆಲ್ಲೋ ಭಯ ಭೀತಿಯಿಂದ ಕಳೆದಿದೆ ಎಂದರಿತೂ ಅದನ್ನು ವಿಚಾರಿಸಿಕೊಳ್ಳದೆಯೇ ಹಾರಿಹೋಗಿದ್ದ ತನ್ನ ಸಂಗಡಿಗರ ಉಪೇಕ್ಷೆಯ ಮೇಲೆ ವ್ಯಗ್ರಗೊಂಡು ವಿನಾಕಾರಣ ಗಗನದಲ್ಲಿ ತನ್ನಂತೆ ಗಸ್ತು ಹೊಡೆಯುತ್ತಿದ್ದ ಹದ್ದಿನ ಮೇಲೆ ಕ್ರೋಧ ತಪ್ತವಾಗಿದ್ದಿತು; ಏನೋ ಅನಾಹುತ ಘಟಿಸಿ ಹೋಗಿದೆ ಎಂಬಂತೆ ಕ್ರೂರವಾಗಿ ಕೂಗುತ್ತಾ ತಾಯಿ ಕಾಗೆ ಹದ್ದಿನ ಮೇಲೆ ಎರಗಿದ್ದಿತು. ಅರೆ ಕ್ಷಣ ಅಚ್ಚರಿಯಿಂದ ಕಾಗೆಯತ್ತ ದಿಟ್ಟಿಸಿದ್ದ ಹದ್ದು, ಪ್ರಯಾಸದಿಂದ ರೆಕ್ಕೆ ಮುದುಡಿ ಮೈ ಹೊರಳಿಸಿ ಬಂದಿದ್ದ ಕುತ್ತಿನಿಂದ ಪಾರಾಗಿದ್ದಿತು. ಸತ್ವಯುತ ರೆಕ್ಕೆಗಳನ್ನೂ ವಜ್ರನಖಗಳನ್ನೂ ಹೊಂದಿ ಕಾಗೆಗಿಂತ ಬಹುಪಾಲು ದೊಡ್ಡದಾಗಿದ್ದು ಬಹು ಬಲಿಷ್ಠವಾಗಿದ್ದರೂ ಧೈರ್ಯದಲ್ಲಿ, ಗಗನಸಮರದ ಹೂಟವ್ಯೂಹಗಳಾದ ಏರಿಳಿತ ತಿರುಗುಗಳಲ್ಲಿ, ಬೇಕೆನಿಸಿದ ಕ್ಷಣ ನೂರು ಸಮರಬಂಧುಗಳನ್ನು ಹೊಂಚಿಕೊಳ್ಳುವುದರಲ್ಲಿ ಕಾಗೆಗೆ ಯಾವ ಸಾಟಿಯೂ ಆಗಲಾರದ ಹದ್ದು ಎಷ್ಟೇ ಕೊಡಕಿಕೊಂಡರೂ ಎಡಬಿಡದೆ ಬೆಂಬತ್ತಿದ್ದ ತಾಯಿ ಕಾಗೆಯಿಂದ ತಪ್ಪಿಸಿಕೊಳ್ಳಲು ಅದು ಬವಣೆಪಟ್ಟಿತು.

ಬೇಕೆನಿಸಿದ್ದರೆ ತನ್ನ ಸಂಗಡಿಗರನ್ನು ಕರೆದು ಈ ಹೇಡಿ ಹದ್ದನ್ನು ಕೂರಲೂ ಬಿಡದಂತೆ ಸರದಿ ಹಿಡಿದು ಅಟ್ಟಾಡಿ ಸತಾಯಿಸಿ ಬಿಡಬಹುದಾಗಿದ್ದರೂ, ಏಕೋ, ಅರೆನಿಮಿಷದ ಹಿಂದೆ ಏರಿದ್ದ ಕೋಪ ಹಠಾತ್ತಾಗಿ ಇಳಿದು ತಾಯಿ ಕಾಗೆ ಹದ್ದಿನ ಬೆಂಬತ್ತುವುದನ್ನು ಬಿಟ್ಟುಕೊಟ್ಟಿದ್ದಿತು. ತುಂಟನ ಕೈಯಲ್ಲಿ ಕಲ್ಲನ್ನು ಕಂಡೊಡನೆಯೇ ಅದರೆತ್ತ ಓಡುವ ನಾಯಿಯಂತೆ ದಿಕ್ಕೆಟ್ಟಂತೆ ಉಲಿಯುತ್ತಾ, ಹಾರಲು ಏರಲು ತಿರುಗಲು ಉಬ್ಬಸಪಡುತ್ತಿದ್ದ ಹದ್ದು ತನ್ನಂತೆ ಹಾರಿಹೋಯಿತು.

ಹದ್ದನ್ನು ಬಿಟ್ಟು ಕೊಟ್ಟಿದ್ದ ತಾಯಿ ಕಾಗೆ ತನ್ನ ನಿತ್ಯ ಯಾತ್ರೆಯ ಮನೆಯೊಂದರ ಅಂಗಳದ ಕರಿಬೇವಿನ ಮರವೊಂದರ ಮೇಲೆ ಇಳಿದಿದ್ದಿತು. ಅಲ್ಲಿ, ಆಗಲೇ ಮುಸುರೆಯಗಳುಗಳನ್ನು ಕೆದಕುತ್ತಿದ್ದ ತನ್ನ ಸಂಗಡಿಗರಲ್ಲಿ ಕೆಲವರನ್ನು, ಅದರಲ್ಲೂ ತನ್ನ ಗಂಡನನ್ನು ಕಂಡು ಆಶ್ಚರ್ಯದಿಂದ ಕಿರಿಚಿದ್ದೇ, ಅವುಗಳ ಮಧ್ಯ ತಾನೂ ಇಳಿದು ಕೆಲಸಗಿತ್ತಿ ಮುಸುರೆ ತಿಕ್ಕುವಾಗ ಹೊರಚೆಲ್ಲಿದ್ದ ಅನ್ನ ಸಾರಿನ ಮೆಣಸಿನಕಾಯಿ ಕರಿಬೇವಿನ ರೊಟ್ಟಿ ಪಲ್ಯಗಳ ತುಣುಕುಗಳನ್ನು ನುಂಗಲು ಶುರುಮಾಡಿತ್ತು. ನುಂಗುತ್ತಾ, ಹೆದಕುತ್ತಾ ಅಲ್ಲಲ್ಲಿ ಪಪ್ಪಿ ಕೂಗಾಡಿ ತನ್ನ ಕಂದನಿಗಾಗಿದ್ದ ಅವಘಡದ ನೆನಪನ್ನು ಸಂಗಡಿಗರ ಅವಗಾಹನೆಗೆ ತಂದು, ಅಂತಹ ಸ್ಥಿತಿಯಲ್ಲಿಯು

ಮರಿಯನ್ನು ಉಪೇಕ್ಷಿಸಿ ಬಂದಿದ್ದ ಅವುಗಳೆಲ್ಲವನ್ನೂ, ಅದರಲ್ಲೂ ವಿಶೇಷವಾಗಿ ಗಂಡನನ್ನು ಜರೆದಿದ್ದಿತು. ಗಂಟಲುಬ್ಬಿಸಿ ಮರಿಗಾಗಿ ಅಷ್ಟು ಉಣಿಸನ್ನು ಗಂಟಲ ತಿತ್ತಿಯಲ್ಲಿ ಇರಿಸಿಕೊಂಡಿತು. ತನ್ನ ಜರೆತ ಒದರಾಟಗಳಿಗೆ ಬೆದರಿ ತನ್ನ ಗಂಡನೂ ಮರಿಗಾಗಿ ಒಂದಿಷ್ಟು ಆಹಾರವನ್ನು ಗಂಟಲ ತಿತ್ತಿಯಲ್ಲಿ ಇರಿಸಿಕೊಂಡುದುದನ್ನು ಕತ್ತು ಕೊಂಕಿಸಿ ನೋಡಿ ಸಮಾಧಾನಪಟ್ಟುಕೊಂಡಿತು.

ತಾಯಿ ತಂದೆ ಕಾಗೆಗಳು ಪೊದೆಯ ಬಳಿಸಾರಿ ಮರಿಯನ್ನು ಕರೆದು ಉಣಿಸಣಿಸುವ–ಉಣುವ ಸಂಭ್ರಮೋದ್ಗಾರಗಳಿಂದ ಉಣಿಸಣಿಸಿದ್ದುವು. ಹಸಿದ ಹೊಟ್ಟೆ ಉಣಿಸುಂಡು ತೃಪ್ತವಾಗಿದ್ದರೂ ಮುರಿದು ಜೋಲುತ್ತಿದ್ದ ರೆಕ್ಕೆಯನ್ನು ಎಳೆದುಕೊಂಡು ಯಾತನೆ ಪಡುತ್ತಾ ವಿಚಿತ್ರ ಭಂಗಿಯಲ್ಲಿ ನಡೆಯುತ್ತಿದ್ದ ಮರಿಯ ಬವಣೆ ತಂದೆ ತಾಯಿಗಳ ಹೃದಯವನ್ನು ಹಿಂಡಿದ್ದಿತು. ಹಾಗೆಂದು ಅವುಗಳಿಗೆ ಚಿಂತಿಸುತ್ತಾ ಮರಿಯಬಳಿಯೇ ಕುಳಿತಿರಲು ಅವಕಾಶವೆಲ್ಲಿ ?

ಆಷಾಢದ ದಿನವೊಂದರಲ್ಲಿ ಮೈಯೆಲ್ಲ ಕುಂಬಾಯಿಯಾಗಿ ಬದುಕಿದಂತಿದ್ದ ಗುಬ್ಬಚ್ಚಿ ಗಾತ್ರದ ಮರಿ, ತಂದೆ ತಾಯಿಗಳು ತರುತ್ತಿದ್ದ ಉಣಿಸುಂಡು ಕೆಲವೇ ವಾರಗಳಲ್ಲಿಯೇ ತಂದೆ ತಾಯಿಗಳ ಗಾತ್ರಕ್ಕೇರಿದ್ದಿತು. ದಿನ ಕಳೆದಂತೆ ಮರಿಯ ಚಟುವಟಿಕೆಗಳು ಹೆಚ್ಚತೊಡಗಿ ಚೇಷ್ಟೆಗಳು ಹೆಚ್ಚಿದಂತೆ ಹೊರು ಮೈಯೂ ಕರಗಿ ಮಾಸಲವಾಗ ತೊಡಗಿದ್ದಿತು. ಮೊದಲ ವಾರಗಳಲ್ಲಿ ರೆಕ್ಕೆಗಳು ಬಲಿತು ಬಡಿಯುವಂತಾದಾಗ, ಕೊನೆಗೊಂದು ದಿನ ಹಾರುವಂತಾದಾಗ ಮರಿಯ ಸಂತಸ ಅದೆಷ್ಟು! ಅಲ್ಲಲ್ಲಿ ಹಾರಿ ಕುಪ್ಪಳಿಸಿ ರೆಕ್ಕೆಪುಕ್ಕಗಳನ್ನು ಕಾಲುಗುಚ್ಚಗಳನ್ನು ಬಲಪಡಿಸಿಕೊಂಡು ಅವುಗಳ ನಾನಾ ಉಪಯೋಗಗಳನ್ನು ಕಂಡುಕೊಳ್ಳತೊಡಗಿತು– ಗುಂಪಿನ ಯಜಮಾನನ ಅಂಕೆಯಲ್ಲಿ, ತಂದೆ ತಾಯಿಗಳ ಶಿಕ್ಷಣದಲ್ಲಿ ಅನುಜರ ಜೀವನಕ್ರಮದ ಅನುಕರಣೆಯಲ್ಲಿ.

ಎಲ್ಲ ಶಿಕ್ಷಣಗಳನ್ನೂ ಮರಿಯು ಜೀವರೂಢಿಸಿಕೊಂಡಿದ್ದರೂ, ಅನುಭವ ಹಾಗೂ ವಯಸ್ಸುಗಳು ನೀಡಬಲ್ಲದಾಗಿದ್ದ ಯುಕ್ತಾಯುಕ್ತ ನಿರ್ಧಾರ ಪ್ರಜ್ಞೆ ಆರೆಂಟು ತಿಂಗಳ ಪಡ್ಡೆಯಾಗಿದ್ದ ಮರಿಗೆ ಇನ್ನೂ ಮೂಡಿರಲಿಲ್ಲ. ಪರಿಣಾಮವಾಗಿ ತನ್ನ ಅಂಕೆಗೆ ಮೀರಿದ ಸಾಹಸದಲ್ಲಿ, ಶಕ್ತಿಗೆ ಮೀರಿದ್ದ ಹಾರುವಿಕೆಯಲ್ಲಿ, ಯುಕ್ತಿಗೆ ಮೀರಿದ ಪೊಂಚಿನಲ್ಲಿ ಇತಿಮಿತಿಯಲ್ಲಿನ ಕುತೂಹಲ ಚೇಷ್ಟೆಗಳಲ್ಲಿ ಮುಗ್ಧ ಮರಿ ತೊಡಗುತ್ತಿತ್ತು.

ಒಂದು ದಿನ ಸಾಹಸದ ಹಾದಿಯಲ್ಲಿ ನಡೆಯುಲಿಚ್ಛಿಸಿ ತಂದೆ ತಾಯಿ ಕೋಮುಗಳ ಹಂಗು ತೊಡೆದು ಮರಿ ತನ್ನಂತೆ ಹಾರಿ ಅತ್ತಿಯ ಮರವೊಂದರ ಮೇಲೆ ಕುಳಿತಿತು, ಕುಳಿತು ನಿರಿಚ್ಛೆಯಿಂದ ಕಣ್ಣಾಡಿಸಿದ್ದಾಗ ಮರದ ಬೊಂಕದ ಪೊಟರೆಯೊಂದರ ಹುಲ್ಲು ಹಾಸಿನ ಮೆತ್ತೆಯಲ್ಲಿ ಬೆಳ್ಳನ್ನ ಬೆಳ್ಳಿ ಮೊಟ್ಟೆಗಳು ಕಾಣಿಸಿದುವು. ಕಾಣಿಸಿದ್ದೇ, ತಾನೇ ಕಂಡುಕೊಂಡ ಮೊದಲ ಮೊಟ್ಟೆ ಬೇಟೆಯ ಪೊಂಚಿಕೆಯಲ್ಲಿ ಮರಿಯ ಎದೆ ಸಂಭ್ರಮದಿಂದ ತುಯ್ಯತೊಡಗಿತು. ಸುತ್ತಮುತ್ತ ಕಾವಲು ಕಾಚದ ಬಗೆಗೆ ನೋಡಿ ಕಾಲಾನುಕೂಲತೆಗಳನ್ನು ಕಂಡುಕೊಳ್ಳುವುದರಲ್ಲೂ ಮರಿಗೆ ಸೈರಣೆಯಿರಲಿಲ್ಲ. ದೃಷ್ಟಿಯನ್ನು ಪೊಟರೆಯ ಮೇಲೆ ನೆಟ್ಟು ಮರಿ ರೆಂಬೆಯ ಮೇಲೆ ಮೆಲ್ಲನೆ ಚಲಿಸಿದ್ದಿತು.

ಹಠಾತ್ತನೆ ಕೇಳಿಬಂದಿತ್ತು ತಾಯಿ ಗಿಣಿಯೊಂದರ ಆಕ್ರೋಶ. ವಿಚಿತ್ರವೇನೆಂದು



ಮರಿ ಕತ್ತು ಹೊರಳಿಸಿ ನೋಡುವುದಕ್ಕಿಲ್ಲ, ಕ್ರೋಧಾಕ್ರೋಶಗಳಿಂದ ಉರಿಯುತ್ತಾ ತಾಯಿ ಗಿಣಿ ಸಿಡಿಲಿನಂತೆ ಬಂದೆರಗಿತ್ತು. ಅದರ ಬೆನ್ನ ಹಿಂದೆಯೇ ಬಂದಿತು ಗಂಡು ಗಿಣಿ! ಭಯಭೀತ ಮರಿ ದಿಕ್ಕೆಟ್ಟು ಗಗನಕ್ಕಡರಿದ್ದಿತು. ಕೊರಳುಬ್ಬಿಸಿ ತನ್ನವರಿಗಾಗಿ ಚೀರಿದ್ದಿತು. ಚೀರುತ್ತಾ ಸಾಧ್ಯವಾದಷ್ಟು ಬೇಗನೆ ಹಾರೋಡತೊಡಗಿದ್ದಿತು. ಅದೆಷ್ಟೋ ಜೋರಾಗಿ ಹಾರೋಡತೊಡಗಿದ್ದರೂ, ಗಿಣಿಗಳ ಆಕ್ರೋಶಾಕ್ರಮಣದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ತಮ್ಮ ಚುಂಚು ಘಾತಕ್ಕೆ ಕೂಗು ಬೆದರಿಕೆಗೆ ಬೆದರಿ ಬಸವಳಿದು ಕಂಗಾಲಾಗಿ ಮರದೊಳಗಿನಿಂದ ಮರದೊಳಕ್ಕೆ ಹಾರಿ ತೂರಿ ತಪ್ಪಿಸಿಕೊಳ್ಳಲೆಣಿಸಿ ಸಾಧ್ಯವಾಗದೆ, ಪ್ರತಿಭಟಿಸಲೂ ಆಗದೆ ಇನ್ನೇನೂ ತೋರದೆ ಹಾರುತ್ತಿದ್ದ ಮರಿಯ ಸ್ಥಿತಿಯನ್ನು ಕಂಡ ಗಿಣಿಗಳ ಅರಿಮರ್ದನೋತ್ಸಾಹ ಉಕ್ಕೇರಿತು.

ಜೀವಭಯದಿಂದ ಎಳೆ ರೆಕ್ಕೆಗಳು ಕೊಂಡೊಯ್ಯುವಷ್ಟು ತ್ವರೆಯಿಂದ ಹಾರುತ್ತಿದ್ದ ಮರಿ ಪುಣ್ಯವಶದಿಂದ ಗೊತ್ತಿನ ದಿಕ್ಕಿನತ್ತಲೇ ಹಾರುತ್ತಿತ್ತು. ಅಲೆಯ ಮೇಲೆ ಅಲೆಯಂತೆ ಒಂದಾದ ಮೇಲೊಂದು ಬಂದು ಬಾಲವನ್ನು ಕತ್ತನ್ನು ಬೆನ್ನನ್ನು ಕಚ್ಚಲೆಣಿಸಿ ಎರಗುತ್ತಿದ್ದ ಗಿಣಿಗಳಿಂದ ತಪ್ಪಿಸಿಕೊಳ್ಳಲು ಮಾರ್ಗ ಕಾಣದೆ ತನ್ನ ತಾಯಿ, ತಂದೆ ಹಾಗೂ ಅನುಜರು ಇರಬಹುದಾದ ತಾಣಗಳನ್ನು ಕಂಡುಕೊಳ್ಳುವ ಪ್ರಜ್ಞೆಯೂ ತೋರದೆ ಮರಿ ಹಾರಿದ್ದಿತು. ಮಾರಣಾಂತಿಕವಾದ ಭಯದಲ್ಲಿಯೂ ತನ್ನ ಗೊತ್ತು ಸಮೀಪಗತವಾಗಿರುವುದು ಮರಿಯ ಪ್ರಜ್ಞೆಗೆ ಬಂದು, ಗೊತ್ತು ಸೇರಿದರೆ ಈ ಅಪಘಡದಿಂದ ಹೇಗೋ ಪಾರಾಗಬಹುದೆಂಬ ಧೈರ್ಯ ಒಡಮೂಡಿ ಮರಿ ಮುನ್ನುಗ್ಗಿದ್ದಿತು.

ಮರದ ಸನಿಹಕ್ಕೆ ಬಂದಿದ್ದರೂ ಗಿಣಿಗಳು ಬೆಂಬತ್ತುತ್ತಲೇ ಇದ್ದುದನ್ನು ಕಂಡು ಮರಿಯ ಧೈರ್ಯ ರೆಕ್ಕೆಬಲಗಳು ಹಠಾತ್ ಉಡುಗಿದ್ದುವು. ಮೇಲೇರಿ ಬಂದು ಕೊಕ್ಕಿನಿಂದ ಕುಟುಕಲೆತ್ನಿಸಿದ್ದ ಗಿಣಿಯ ಘಾತದಿಂದ ತಪ್ಪಿಸಿಕೊಳ್ಳಲೆತ್ನಿಸಿದ್ದ ಮರಿ ತಟ್ಟನೆ ಮುಂಭಾಗ ಹೋಗಿ ರೆಕ್ಕೆ ಸತ್ತ್ವವುಡುಗಿ ಆಯ ತಪ್ಪಿ ಎತ್ತರವನ್ನು ಕ್ಷಣ ಕ್ಷಿಪ್ರದಲ್ಲಿ ಕಳೆದುಕೊಂಡು ಕೆಳಗೆ ಹಾಯ್ದಿದ್ದ ದೂರವಾಣಿ ತಂತಿಗಳ ಜಾಲರಿಗೆ ಸಿಕ್ಕಿಕೊಂಡಿದ್ದಿತು. ಬಿದ್ದ ರಭಸದಿಂದ ಮುನ್ನುಗ್ಗುತ್ತಿದ್ದ ಮೈ ಹಾಗೂ ತಂತಿಗೆ ಅಡ್ಡವಾಗಿ ಬೀಸುತ್ತಿದ್ದ ಎಡ ರೆಕ್ಕೆ ಸಿಕ್ಕಿ ಪಟ್ಟನೆ ಮುರಿದು ಹೋಗಿದ್ದಿತು.

ಮರುಕ್ಷಣದಲ್ಲಿಯೇ ಮರಿಯ ಬಂಧು ಬಳಗವೆಲ್ಲವೂ ಅಲ್ಲಿ ನೆರೆದಿದ್ದಿತು. ನೆರೆದು ಮರಿಯ ಬವಣೆಯನ್ನು ಅಸಹಾಯಕವಾಗಿ ನೋಡುತ್ತಾ, ಅಲ್ಲಲ್ಲಿ ಕುಳಿತು ಕುಪ್ಪಳಿಸಿ ಕೂಗಿ ಗಲಭೆಯೆಬ್ಬಿಸಿದ್ದುವು. ಮರಿಯ ತಂದೆ ತಾಯಿಯರಂತೂ ತಂತಿಯ ಮೇಲೆ ಮರಿಯ ಹತ್ತಿರವೇ ಬಂದು ಕುಳಿತು ಮರಿಗೆ ನೂರೆಂಟು ಉಪಾಯಗಳನ್ನು ಸೂಚಿಸಹೋಗಿ ಸಾಗದೆ ತಾವೂ ಕೊರಲಿಟ್ಟು ಕ್ರಂದಿಸಿದ್ದುವು.

ಇದ್ದಲ್ಲಿ ಇರಲಾಗದ ವಿಚಿತ್ರ ಪರಿಸ್ಥಿತಿಯಿಂದ ಆತಂಕಗೊಂಡಿದ್ದ ಮರಿ ಭೀತಿಯಿಂದ ನೋವು ಅಸಹನೀಯ ಮಟ್ಟಕ್ಕೇರಿದ್ದರೂ ಲೆಕ್ಕಿಸದೆ ಮೈ ಕೈ ರಭಾಡಿಸತೊಡಗಿದ್ದಿತು. ಯತ್ನವಾದಾಗ ಸಾಧ್ಯವಾದಷ್ಟು ಮೈ ರಭಾಡಿಸಿ, ಮೈ ಸೋತಾಗ ಸುಮ್ಮನಿರುತ್ತಾ ಹಲವು ಘಂಟೆಗಳ ಯಾತನಾಮಯ ಪ್ರಯತ್ನಗಳಿಂದಾಗಿ ಕಡೆಗೊಮ್ಮೆ ತಂತಿಯ ಜಾಲರಿಯಿಂದ ಬಿಡಿಸಿಕೊಂಡು ಧೊಪ್ಪನೆ ನೆಲದ ಮೇಲೆ ಬಿದ್ದಿದ್ದಿತು. ಬಿದ್ದದ್ದೇ ಇನ್ನೂ ಅಲ್ಲಿಯೇ ನೆರೆದಿದ್ದ ತನ್ನ ಕುಲದ ಒಕ್ಕೊರಲ ಪೂಚಣಿಕೆಯಂತೆ ಮರದ ಮೇಲೇರಲು ಹಾರಹೋಗಿ ಸಾಧ್ಯವಾಗದೆ, ಜನಗಳು ಓಡಿಯಾಡುವ ಆ ಮೈದಾನದಲ್ಲೂ ಇರಲಾರದೆ ತನ್ನ ಮುರಿದ ರೆಕ್ಕೆಯನ್ನು ಎಳೆದುಕೊಂಡು ಅತ್ಯಂತ ವೇದನೆಯಿಂದ ಕುಂಟುಂಗಾಲು ಹಾಕುತ್ತಾ ಸನಿಹದ ಗುತ್ತಿಗರ್ಭವನ್ನು ಹೊಕ್ಕಿದ್ದಿತು.

ತಾಯಿ ತಂದೆ ಹಾಗೂ ಕೆಲ ಸಮಯ ತನ್ನ ಸಂಗಡಿಗರು ತಂದೀಯುತ್ತಿದ್ದ ಆಹಾರದಿಂದ ಮರಿ ಬದುಕುಳಿದು ಕ್ರಮೇಣ ಸಂಧಾರಿಸಿಕೊಂಡಿದ್ದರೂ ತಿರುಚಿ ಮುರಿದು ದೇಹಕ್ಕಂಟಿ

ಹೊರೆಯಾಗಿ ಜೋತುಬಿದ್ದು ನೆಲ ಗುಡಿಸುತ್ತಿದ್ದ ಎಡ ರೆಕ್ಕೆ ನೇರ್ಪಾಗಿರಲಿಲ್ಲ. ರೆಕ್ಕೆಯ ತೋಳೇ ಮುರಿದು ತಿರಿಚಿಹೋಗಿ, ಅದು ಸ್ವಸ್ಥಾನದಲ್ಲಿ ಇರಲಾಗದೆ ಹೋದಂತಾದ ಮೇಲೆ ಅದು ಕೂಡುವುದೆಲ್ಲಿಂದ ಬಂತು? ಹೆಚ್ಚೆಂದರೆ ರೆಕ್ಕೆಯ ಪುಕ್ಕ-ತಿಪ್ಪಳೆಗಳು ಉದುರಿದಾಗ ಪ್ರಕೃತಿ ನಿಯಮದಂತೆ ಹೊಸವು ಹುಟ್ಟಿಕೊಂಡಾವು, ಅಷ್ಟೆ. ಹಾರುವದಿರಲಿ, ಈಗ ವಾಸಮಾಡಿದ್ದ ಪೊದೆಗರ್ಭದಿಂದ ಹೊರ ಬಂದು ಉಣಿಸುಂಡು ಹಗಲ ಹೊತ್ತು ಅಲ್ಲಲ್ಲಿ ಸುಳಿದಾಡಿ ಕಳೆದು ಒಳ ಹೋಗಲೂ ರೆಕ್ಕೆ ಮುರಿದ ಮೊದಲ ದಿನಗಳಲ್ಲಿ ಮರಿಗೆ ವಿಪರೀತ ಕಷ್ಟವೆನಿಸುತ್ತಿತ್ತು.

ಕ್ರಮೇಣ ಮುರಿದ ಭಾಗ ಜಿಡ್ಡು ಕಟ್ಟಿ ನೋವೇ ಕಾಣದಂತಾದ ಮೇಲೆ ಹಾರಲಾಗದ್ದರಿಂದ ಮುರಿದ ರೆಕ್ಕೆಯನ್ನು ಎಳೆದಾಡಿಕೊಂಡು ಪೊದೆಯಿಂದ ಅಷ್ಟಿಷ್ಟು ದೂರ ನಡೆದಾಡತೊಡಗಿದ್ದಿತು. ಎಡ ರೆಕ್ಕೆಯನ್ನೆಳೆದುಕೊಂಡು ನಡೆಯಬೇಕಾದ ವಿಶೇಷ ಶ್ರಮದಿಂದ ಪ್ರತಿ ನಡೆಗೂ ಕತ್ತನ್ನು ಬಲಕ್ಕೆ ಕೊಂಕಿಸಿ ಕೊಂಕಿಸಿ ಶ್ರಮದಿಂದ ನಡೆಯುತ್ತಿದ್ದ ಮರಿಯ ನಡಿಗೆಯಲ್ಲಿ ಆಯಸಮನಾದ ಲೀವಿ ಬಿಂಕಗಳಿಲ್ಲದೆ ಕುಪ್ಪುಗಳೇ ಹೆಚ್ಚಾಗಿದ್ದಿತು. ಕುಪ್ಪುವಾಗ ಮರಿ ಬಲ ರೆಕ್ಕೆಯನ್ನು ಬೀಸುತ್ತ ತನ್ನ ವೇಗವನ್ನು ವರ್ಧಿಸಿಕೊಳ್ಳಲೆಣಿಸುತ್ತಿತ್ತು. ಮರಿಯ ಈ ವಿಚಿತ್ರ ನಡಿಗೆ ಮರದ ಮೇಲಿನ ಸಂಗಡಿಗ ಸರಿದಾರರ ಗೇಲಿಗೆ ಪಾತ್ರವಾಗಿದ್ದಿತು. ಅವು-ಗಳೆಲ್ಲವೂ ಮರಿಯನ್ನು ರೆಕ್ಕೆಮುರಿಕಾ—ರೆಕ್ಕೆಮುರಿಕಾ ಎಂದು ಹೆಸರಿಟ್ಟು ಕೂಗಿ ಜರೆದಾಡತೊಡಗಿದ್ದುವು.

ಅಪಘಾತದ ಮೊದಲ ದಿನಗಳಲ್ಲಿ ಈ ಮರದ ವಾಯಸ ಬಂಧುವರ್ಗವೇ ರೆಕ್ಕೆಮುರಿಕನ ಬಗೆಗೆ ಆಸ್ಥೆ ತೋರಿ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದ ದಿನ ಕಳೆದು ಆ ಅಕ್ಕರೆ ಕೇವಲ ತಂದೆ ತಾಯಿಗೇ ಮೀಸಲಾಗಿ ಕೊನೆಗೊಂದು ದಿನ ತಾನು ತಂದೆ ತಾಯಿಗೂ ಭಾರವಾದೆನೆಂಬ ಅಂಶ ತೋರಿದ ದಿನವೇ ರೆಕ್ಕೆಮುರಿಕ ತನ್ನ ಸ್ವಂತ ಬಾಳನ್ನು ಬಾಳಲು ನಿಶ್ಚಯಿಸಿತು. ತಂದೆ ತಾಯಿಗಳಾಗಲೀ ಅನುಜರಾಗಲೀ ತನ್ನನ್ನು ಎಷ್ಟು ಕಾಲ ಬಾಳಿಸಲು ಸಾಧ್ಯ?

ಹಾರಲಾಗದೆ ನೆಲದಲ್ಲಿಯೇ ಚರಿಸಬೇಕಾಗಿ ಬಂದು ತನ್ನ ಬಂಧುವರ್ಗ ಶೋಧಿಸಿ ತಡಕುವ ದೂರ ದೂರದ ಆಹಾರ ತಾಣಗಳಿಗೆ ಭೇಟಿ ನೀಡಲಾಗದ ರೆಕ್ಕೆಮುರಿಕ ಆಹಾರದ ಹೊಂಚಿಕೆಯಲ್ಲಿ ಬುದ್ಧಿಯನ್ನು ತೀಕ್ಷ್ಣ ಮಾಡಿಕೊಳ್ಳತೊಡಗಿತು. ತನ್ನ ಸನಿಹದಲ್ಲಿಯೇ ಎಂದೂ ಇರುತ್ತಿದ್ದರೂ ಅವಸರಕ್ಕೆ ಕಾಣದ ಕ್ರಿಮಿಕೀಟಗಳನ್ನು, ಮಳೆ ಹುಳಗಳನ್ನು ರೆಕ್ಕೆ ಮುರಿಕ ಕಂಡುಕೊಂಡಿತು. ನಿಧಾನವಾಗಿ ಎಚ್ಚರದಿಂದ ತನ್ನ ಆಹಾರದ ಎಲ್ಲೆಯನ್ನು ವಿಸ್ತರಿಸಿಕೊಳ್ಳುತ್ತಾ ನಡೆದು, ಹಾಗೆ ವಿಸ್ತೃತಗೊಳ್ಳುತ್ತಾ ನಡೆದ ಎಲ್ಲೆಯಲ್ಲಿ ದಕ್ಕುವ ಆಹಾರವಸ್ತು ವಿಶೇಷಗಳನ್ನು ಸೂಕ್ಷ್ಮವಾಗಿ ಅಭ್ಯಸಿಸತೊಡಗಿತು. ತನ್ನ ಹಾರುವ ಸಂಗಡಿಗರಂತೆ ಸುಲಭಸಾಧ್ಯವಾಗಿ ಸಿಗುವ ಆಹಾರಕ್ಕೆ ಬಾಯಿ ಬಿಟ್ಟು ಹಿತ್ತಲಿನಿಂದ ಹಿತ್ತಲಿಗೆ, ಎಂಜಲ ಹಾಳೆಯಿಂದ ಎಂಜಲ ಹಾಳೆಗೆ, ಗಟಾರದಿಂದ ಗಟಾರಕ್ಕೆ ಹಾರುವ ಹುಂಬಾಟವನ್ನು ಬಿಟ್ಟುಕೊಟ್ಟು ಹೊಂಚಾಣಿಕೆಗೆ ಹೊಂದಬೇಕೆಂದು ಸ್ಥೈರಣಿಗೆಯನ್ನು ಸೂಕ್ಷ್ಮ ದೃಷ್ಟಿಯನ್ನು ಅಳವಡಿಸಿಕೊಂಡು ಉದರಂಭರಣ ಮಾಡಿಕೊಳ್ಳತೊಡಗಿತು.

ಇಲ್ಲಿ ಸಾಮಾನ್ಯವಾಗಿ ಮೆಲಕು ಹಾಕುತ್ತಾ ಮಲಗುವ ದನದ ಮೈಗಂಟಿದ್ದ ಉಣ್ಣೆಗಳಾಗಬಹುದು. ಅಲ್ಲಿ ಗಟಾರದ ಸಂದಿನಿಂದ ಬಂದು ಹೊತ್ತಿನಲ್ಲಿ ಯಾತ್ರೆಗೆ ಹೊರ ಹೊರಡುವ ಇಲಿಯಾಗಬಹುದು. ಮತ್ತೊಂದೆಡೆಯಲ್ಲಿ ಉಂಡೆಸೆದ ಎಂಜಲೆಯ ತುಣುಕುಗಳಾಗಬಹುದು. ಅಕೋ ಅಲ್ಲಿ, ರಸ್ತೆ ಹಳ್ಳವಾಗಿರುವ ಕಡೆ ಗಾಡಿಗಳು ಕುಲುಕಿ ಕುಲುಕಿ ಮೂಟೆಗಳಿಂದ ಬೀಳುವ ಧಾನ್ಯ-ತಿನಿಸಾಗಬಹುದು,

ಹೌದು, ಆ ಮನೆಯಲ್ಲಿ ಶಾಲೆಗೆ ಹುಡುಗರು ಹೊರಡುವ ಸಮಯದಲ್ಲಿ ಮನೆಯಾಕೆ ಕಾಂಪೌಂಡಿನ ಮೇಲೆ ಕಾಕಪಿಂಡವನ್ನಿಡುತ್ತಾಳೆ. ಈಗ ಆ ಪಿಂಡಭಾಗಿಗಳಾಗಿ ಅಳಿಲೊಂದು,

ಅನ್ಯ ಮರದ ವಾಯಸ ಕುಟುಂಬವೊಂದು ದಿನ ದಿನವೂ ಹೋರಾಡುತ್ತಿವೆ. ಯತ್ನಿಸಿದರೆ ತಾನೂ ಪಿಂಡಭಾಗಿಯಾಗಬಹುದು; ಅನುದಿನ ಸಂಜೆ ಪೊಟ್ಟಣ ಹಿಡಿದ ಮುದುಕರೊಬ್ಬರು ಪಾರ್ಕಿನತ್ತ ಚಲಿಸುತ್ತಾರೆ. ಅವರ ಹಿಂದೆ ಹಿಂದೆ ನಡೆದು ಕಾಗರೆದು ಬೇಡಿದರೆ ಅಷ್ಟಿಷ್ಟು ಬ್ರೆಡ್ಡೋ ಕಡಲೇಕಾಯಿಯೋ ಖಂಡಿತ ಸಿಗುತ್ತದೆ.

*

ಮುಂದೊಂದು ದಿನ ಕಾಂಪೌಂಡಿನಿಂದ ಕುಪ್ಪಳಿದು ಸರ್ಕೀಟು ಹೊರಬಿದ್ದ ರೆಕ್ಕೆಮುದುಕನಿಗೆ ಅನಿರೀಕ್ಷಿತವಾಗಿ ಬಡಪಾಯಿ ಗೋಸುಂಬೆಯೊಂದು ಎದುರಾಗಿದ್ದಿತು. ಕೀಟಗಳನ್ನು ಹಿಡಿಯುವಾಗ ಹೊರತು ಸಾಮಾನ್ಯವಾಗಿ ಸೋಮಾರಿ ಚಕ್ರವರ್ತಿಯಾಗಿರಬೇಕಾಗಿದ್ದ ಗೋಸುಂಬೆ, ಈ ಕಾಗೆ ತನ್ನ ಮೇಲೆ ಆಕ್ರಮಣ ಸನ್ನದ್ಧವಾಗಿ ಬಂದಿದೆ ಎಂಬ ಭ್ರಮೆಯಿಂದ ತನ್ನ ಜೀವವುಳಿಸಿಕೊಳ್ಳಲು ಮುಂಗಾಲ ಮೇಲೆ ನೀಟಾನಿಂತು ಎದೆಯುಬ್ಬಿಸಿ ಬಾಯಗಲಿಸಿ ತನ್ನ ದಂಷ್ಟ್ರಗಳನ್ನು ಪ್ರದರ್ಶಿಸಿತ್ತು. ಅನಿರೀಕ್ಷಿತವಾಗಿ ಎದುರಾದುದೇ ಅಲ್ಲದೆ ತನ್ನ ಮೇಲೆ ಮುಖಾಮುಖಿ ಯುದ್ಧ ಹೂಡುವ ನಿಲುವನ್ನು ತಳೆಯುವ ಧಾರ್ಷ್ಟ್ಯ ತೋರಿದ್ದ ಈ ಕ್ಷುದ್ರ ಗೋಸುಂಬೆಗೆ ಗತಿಗಾಣಬೇಕೆಂಬ ಛಲ ರೆಕ್ಕೆಮುದುಕನಲ್ಲಿ ಮೂಡಿ, ತಾನೂ ಎದೆಯುಬ್ಬಿಸಿ ಬಾಯ್ದೆರೆದು ತನ್ನ ಬಲ ರೆಕ್ಕೆಯನ್ನೆತ್ತಿ ಗೋಸುಂಬೆಯತ್ತ ಕುಪ್ಪಿದ್ದಿತು. ಆದರೇಕೋ, ಆ ತೆರೆದ ಬಾಯಿಯೊಳಗೆ ಕಂಡಿದ್ದ ಕಂದು ನಾಲಿಗೆ–ಗಂಟಲುಗಳು ರೆಕ್ಕೆಮುದುಕನ ಎದೆಯನ್ನು ಕೊನೆಯ ಗಳಿಗೆಯಲ್ಲಿ ನಡುಗಿಸಿ, ಅದು ದಿಕ್ಕು ಬದಲಿಸಿ ಗೋಸುಂಬೆಯ ಬಾಲದತ್ತ ಕುಪ್ಪಿದ್ದಿತು. ವಾಯಸದ ಈ ಆಟ ಚಿರಪರಿಚಿತವಾಗಿದ್ದಂತೆ ಗೋಸುಂಬೆಯೂ ತಿರ್ರನೆ ತಿರುಗಿ ರೆಕ್ಕೆಮುದುಕನತ್ತ ತನ್ನ ತೆರೆದ ಬಾಯನ್ನು ಪ್ರದರ್ಶಿಸಿದ್ದಿತು. ರೆಕ್ಕೆಮುದುಕ ಪುನಃ ಬಾಲದತ್ತ ಕುಪ್ಪಿದ್ದಿತು. ಪುನಃ ಗೋಸುಂಬೆ ತಿರ್ರನೆ ತಿರುಗಿ ರೆಕ್ಕೆಮುದುಕನ ಮುಖಕ್ಕೆ ಮುಖ ಕೊಟ್ಟಿದ್ದಿತು. ಮಾರಣಾಂತಿಕ ಸಮರದಲ್ಲಿ ತೊಡಗಿದ್ದಂತೆ ಅರಿ ಭಯಂಕರ ನಿಲುವಿನಲ್ಲಿ ನಿಂತು ಚಕ್ರವ್ಯೂಹದಲ್ಲಿ ಸುತ್ತುತ್ತಿದ್ದ ಎರಡೂ ಪ್ರಾಣಿಗಳಲ್ಲಿ ಯಾವುದೂ ಬಹು ಹೊತ್ತು ಹಿಮ್ಮೆಟ್ಟಿರಲಿಲ್ಲ. ಗೋಸುಂಬೆ ಆ ನಿಲುವಿನಲ್ಲಿ ಗತ್ಯಂತರವಿಲ್ಲದೆ ಪ್ರಾಣಭಯದಿಂದ ನಿಂತಿದ್ದರೆ, ಬೇಕೆನಿಸಿದರೆ ಈ ಗೋಸುಂಬೆಯನ್ನು ಬಿಟ್ಟು ತನ್ನಂತೆ ಹೊರಟುಹೋಗಿಬಿಡಬಹುದಾಗಿದ್ದರೂ ಛಲದ ಹೂಟ ರೆಕ್ಕೆಮುದುಕನನ್ನು ಕಾಡುತ್ತಿತ್ತು. ಇವುಗಳ ನಿಶ್ಶಬ್ದ ಸಮರಕ್ಕೆ ಅಡ್ಡಿ ಅನಿರೀಕ್ಷಿತವಾಗಿ ಎಂಜಲೆಲೆ ಹೆರಕುತ್ತಾ ಓಡಿಬಂದಿದ್ದ ನಾಯಿಯೊಂದರಿಂದ ಬಂದಿದ್ದಿತು. ಹಠಾತ್ತಾಗಿ ಓಡಿಬಂದಿದ್ದ ನಾಯಿ ಇವುಗಳ ಸಮರವನ್ನು ಅಚ್ಚರಿಯ ಕಣ್ಣುಗಳಿಂದ ನೋಡಿ ನಿರಿಚ್ಛೆಯಿಂದ ಬಗುಳಿದ್ದಿತು. ನಾಯಿಯ ಬೊಗುಳುವಿಕೆಯಿಂದ ದೃಷ್ಟಿವಿಕಾರಗೊಂಡ ರೆಕ್ಕೆಮುದುಕ ಕತ್ತನ್ನು ಅದರತ್ತ ತಿರುಗಿಸಿದ್ದುದನ್ನು ಕಂಡಿದ್ದೇ, ಸತ್ತೆನೋ ಕೆಟ್ಟೆನೋ ಎಂದು ಗೋಸುಂಬೆ ಸರ್ರನೋಡಿ ಮಾಯವಾಗಿದ್ದಿತು.



ನಡೆದಿದ್ದ ಸಮರದಲ್ಲಿ ಗೆದ್ದೇಗೆಲ್ಲುತ್ತೇನೆಂಬ ದರ್ಪ ದೀವಿಗೆಗಳು ಅಯಾಚಿತವಾಗಿ ಬಂದಿದ್ದ ಈ ಹಾಳು ನಾಯಿಯಿಂದಲ್ಲವೇ ನಷ್ಟವಾಗಿದ್ದುದು? ಗೋಸುಂಬೆಯೊಡನೆ ಸಮರಕ್ಕಾಗಿ ಕಾಲು ಕೆರೆದು ಎದೆ ಹುರಿಮಾಡಿಕೊಂಡಿದ್ದ ರೆಕ್ಕೆಮುರುಕನ ಮನಸ್ಸೀಗ ನಾಯಿಯ ಮೇಲೆ ವ್ಯಗ್ರಗೊಂಡಿದ್ದಿತು. ಬಲ ರೆಕ್ಕೆಯನ್ನು ಅಗಲಿಸಿ ರೋಷದಿಂದ ಕಾಗುಟ್ಟಿದ್ದೇ ತನ್ನಷ್ಟಕ್ಕೆ ಬೊಗಳುತ್ತಾ ಆರಾಮವಾಗಿ ನಿಂತಿದ್ದ ನಾಯಿಯ ಮೇಲೆ ಕುಪ್ಪಿ ಅದರ ಬೆನ್ನನ್ನು ಕುಟುಕಿ ಅಷ್ಟು ದೂರ ಚಿಮ್ಮಿದ್ದಿತು. ಕಾಗೆಯ ಕೂಗು ಆದರ ಕುಟುಕುಗಳು ನಾಯಿಯನ್ನೂ ರೊಚ್ಚಿಗೆಬ್ಬಿಸಿದ್ದಿತು. ತುಟಿ ಬಿರಿಸಿ ನಾಲಿಗೆ ಹೊರಹಾಕಿ ಹಲ್ಲುಗಳನ್ನು ಪ್ರದರ್ಶಿಸಿ ಮೈ ಬಿರಿಬಿಸಿ ಗುರುಗುಟ್ಟುತ್ತಾ ನಾಯಿ ರೆಕ್ಕೆಮುರುಕನ ಮೇಲ್ವಾಯ್ದಿದ್ದಿತು. ಆದರೆ ನಾಯಿಯ ದೈಘೋರಿನ ಆಕ್ರಮಣವನ್ನು ಕೊನೆಯ ಘಳಿಗೆಯ ಕುಪ್ಪಿನಿಂದ ಬಲು ಸುಲಭವಾಗಿ ತಪ್ಪಿಸಿಕೊಂಡ ರೆಕ್ಕೆಮುರುಕ ಬೆದರದೆ ಅಸೀಮ ಧೈರ್ಯ ತಳೆದು ಗುರುಗುಟ್ಟುತ್ತಾ ತನ್ನನ್ನು ಕ್ರೂರವಾಗಿ ದೃಷ್ಟಿಸುತ್ತಿದ್ದ ನಾಯಿಯ ಮೇಲೆ ಇನ್ನೊಮ್ಮೆ ಹಾಯ್ದು ಕುಟುಕಿದ್ದಿತು. ಹೀಗೆ ಕುಟುಕುತ್ತಾ, ನಾಯಿಯಿಂದಾಘಾತವನ್ನೂ ಅನುಭವಿಸದೆ ತನ್ನ ಗುಂಡಿಗೆಯ ಬಲವನ್ನು ಕ್ಷಣಕ್ಷಣಕ್ಕೆ ಹೆಚ್ಚಿಸಿಕೊಳ್ಳತೊಡಗಿದ್ದಿತು. ರೋಸಿಗೆದ್ದ ನಾಯಿ ಕಡೆಗೊಮ್ಮೆ ಕಡೆಯ ಹತಾಶ ಆಕ್ರಮಣವನ್ನು ಮಾಡಿ ಅದಕ್ಕೂ ಆ ಕ್ಷುದ್ರ ಜಂತು ದಕ್ಕದಿರಲು ರೆಕ್ಕೆಮುರುಕನನ್ನು ನೆಲದ ಮೇಲೆ ಧೀರ ಗಂಡಿನಂತೆ ತನ್ನನ್ನು ಎದುರಿಸಿ ನಿಲ್ಲದೆ ಪುರ್ರನೆ ಹಾರಿ ತಪ್ಪಿಸಿಕೊಳ್ಳುವ ಅವನ ಹೇಡಿ ಕುಲವನ್ನು ಹಳಿಯುತ್ತಾ ಓಡಿ ಹೋಗಿದ್ದಿತು. ನಾಯಿಯಂತಹ ದೊಡ್ಡ ಜಂತುವನ್ನೂ ಎದುರಿಸಿ ಪೀಡಿಸಬಲ್ಲೆನೆಂಬ ತಿಳುವಳಿಕೆ ರೆಕ್ಕೆಮುರುಕನ ಭವಿಷ್ಯ ಜೀವನದ ನಾನಾ ರಂಗಗಳ ಧೈರ್ಯಸ್ಥೈರ್ಯಗಳಿಗೆ, ಸಮರೋಪಾಯಗಳಿಗೆ ನಾಂದಿಯಾಗಿದ್ದಿತು.

ಹುಡುಗರು ಶಾಲೆಗೆ ಹೋಗುವ ಸಮಯಕ್ಕೆ, ಸರಿಯಾಗಿ ಆ ಮನೆಯಾಕೆ ಕಾಂಪೌಂಡು ಗೋಡೆಯ ಮೇಲೆ ಒಂದು ಮುತ್ತುಗ ಎಲೆಯ ಮೇಲೆ ದಿನದಿನವೂ ಮುಷ್ಟಿಗಾತ್ರದ ಅನ್ನವನ್ನು ಇಡುತ್ತಿದ್ದುದನ್ನೂ ಆ ಮುಷ್ಟಿಪಿಂಡಕ್ಕೆ ಅಳಿಲೊಂದು, ಬೇರೆ ಮರದ ವಾಯಸ ಕುಟುಂಬವೊಂದು ಧಾಳಿಯಿಡುತ್ತಾ ತಮ್ಮದೇ ಮಾಡಿಕೊಂಡಿದ್ದುದನ್ನೂ ಬಹು ದಿನದಿಂದ ರೆಕ್ಕೆಮುರುಕ ನೋಡುತ್ತಿತ್ತು. ಮನೆಯಾಕೆ ಅನ್ನವಿಟ್ಟು ಒಳಗೆ ಹೋಗುವುದೇ ತಡ, ಕಾಂಪೌಂಡು ಗೋಡೆಗೆ ಹೊಂದಿಕೊಂಡಂತಿದ್ದ ಕರಿಬೇವಿನ ಮರದಲ್ಲಿ ಕಾದು ಕುಳಿತಿದ್ದ—ಅಳಿಲು ಪುಣಕ್ಕನೆ ಕಾಂಪೌಂಡಿಗೆ ಜಿಗಿದು, ಅನುದಿನದ ಪರಿಪಾಠದಂತೆ ಇನ್ನೇನು ಬರಲಿದ್ದ ಕಾಗೆ ಕುಟುಂಬದ ಧಾಳಿ ಕಾದು ಸುತ್ತತ್ತ ಭೀತಿಯಿಂದ ನೋಡುತ್ತಾ, ತನ್ನ ಬಾಯಿಗೆ ಸಾಧ್ಯವಾದಷ್ಟು ದೊಡ್ಡ ಗುಕ್ಕನ್ನು ಗಬರುವುದು. ಅದೇ ಹೊತ್ತಿಗೆ ಕಾಂಪೌಂಡು ಎದುರಿಗಿನ ರಸ್ತೆಮರವೊಂದರಲ್ಲಿ ಸಂಯಮದಿಂದ ಕಾದು ಕುಳಿತಿದ್ದ ವಾಯಸ ಕುಟುಂಬ ಕಾಗುಡುತ್ತಾ ಸುಯ್ಯನಿಳಿದು ಬಂದು ಕಾಂಪೌಂಡು ಗೋಡೆಯ ಮೇಲೆ ಕೂರುವುದು. ಕಾಂಪೌಂಡು ಗೋಡೆಯ ಮೇಲೆ ಕುಪ್ಪಿ ಅನ್ನದ ಬಳಿಸಾರುವಷ್ಟರಲ್ಲಿಯೇ ಅಳಿಲು ಕರಿಬೇವಿನ ಮರಕ್ಕೆ ಜಿಗಿಯುವುದು. ನಂತರ ತಿರ್ರನೆ ತಿರುಗಿ ಕಾಂಪೌಂಡಿಗೆ ಪುನಃ ಹಾರಲು ಸನ್ನದ್ಧವಾಗುವುದು. ಕಾಗೆಗಳು ಬಂದು ತುತ್ತು ಅನ್ನವನ್ನೂ ಗೆಟಕುವುದಕ್ಕಿಲ್ಲ ಹಾರಲು ತಯಾರಾಗಿದ್ದ ಅಳಿಲು ಅಸೀಮ ಧೈರ್ಯದಿಂದ ಎರಡೂ ಕಾಗೆಗಳ ನಡುವೆ ಜಿಗಿಯುವುದು. ಸಾಮಾನ್ಯವಾಗಿ ಕಾಗೆಗಳು ಅಳಿಲನ್ನು ಕುಕ್ಕಿಬಿಟ್ಟು ಓಡಿಸಿಬಿಡುವಷ್ಟು ಧೈರ್ಯಶಾಲಿಗಳಾಗಿದ್ದರೂ, ತಾವೆಂದರೆ ಭಯಪಡದೆ ತಮ್ಮ ನಡುವೆಯೇ ನೆಗೆಯುತ್ತಿದ್ದ ಈ ಅಳಿಲಿನ ಜಿಗಿತಗಳು ಕಾಗೆಗಳ ಗುಂಡಿಗೆಯಲ್ಲಿ ಹೇಳಸಲ್ಲದ ಅಧೈರ್ಯವನ್ನು ತಂದೊಡ್ಡುತ್ತಿತ್ತು. ಅವುಗಳೆರಡೂ ಒಂದು ದಾಪು ಹಿಂದೆ ಕುಪ್ಪುತ್ತಿದ್ದುವು. ಹಿಮ್ಮೆಟ್ಟಿದ್ದ ಕಾಗೆಗಳು ಪುನಃ ಮುಂದೆ ಕುಪ್ಪುವಷ್ಟರಲ್ಲಿ ಅಳಿಲು ಮತ್ತೊಂದು ಗು

ಗೆಬಕಿ ಕರಿಬೇವಿನ ಮರಕ್ಕೆ ಪುನಃ ಜಿಗಿಯುತ್ತಿತ್ತು. ಈ ಎಗರಾಟಗಳು ಅನ್ನ ಮುಗಿಯುವವರೆವಿಗೂ ನಡೆದ ನಂತರ ಅಳಿಲೂ ಕಾಗೆಗಳೂ ತಂತಮ್ಮ ದಾರಿ ಹಿಡಿದು ಹೋಗುತ್ತಿದ್ದುವು.

ಕಾಕಪಿಂಡ ಮುಗಿಯುವವರೆಗೂ ನಡೆಯುತ್ತಿದ್ದ ಈ ಅನ್ನಸಮರವನ್ನು ಆಸಕ್ತಿಯಿಂದ ಬಹುದಿನ ನಿರೀಕ್ಷಿಸಿದ್ದ ರೆಕ್ಕೆಮುರುಕ ಒಂದು ದಿನ ತಾನು ಮಧ್ಯ ಪ್ರವೇಶ ಮಾಡಲು ಹಠಾತ್ತಾಗಿ ನಿರ್ಧರಿಸಿತು. ಕಾಡಿ ಬೇಡಿ ಕದ್ದು ಒದ್ದು ನಾನಾ ವಿಧಗಳಿಂದ ಅನ್ನ ಸಂಪಾದನೆ ಮಾಡಿಕೊಂಡು ತಿಂದು ಕೊಬ್ಬಿದ್ದ ಮೈ. ಸೋಲನ್ನೇ ಕಾಣದ ಯೌವನದ ಮದ ರೆಕ್ಕೆಮುರುಕನ ಧಾರ್ಷ್ಟ್ಯಕ್ಕೆ ಪುಟಕೊಟ್ಟಿದ್ದಿತು.

ಕಾಂಪೌಂಡಿನ ಸಮರಾಂಗಣಕ್ಕೆ ರಸ್ತೆಯ ಮರದಿಂದ ನೇರವಾಗಿ ಹಾರಿ ಇಳಿಯಲಾರೆನೆಂಬ ಅರಿವಿದ್ದುದರಿಂದ ರೆಕ್ಕೆಮುರುಕ ಒಂದು ದಿನ ಶಾಲೆಗೆ ಹುಡುಗರು ತಯಾರಾಗಿ ಹೊರಡುವ ಸಮಯಕ್ಕೆ ಬಂದು ಕಾಂಪೌಂಡಿನ ಮೇಲೇರಿ ಅಲ್ಲಿಂದ ಕರಿಬೇವಿನ ಮರದ ಸೊಂಟಕ್ಕೆ ಜಿಗಿದು ಮೆಲ್ಲನೆ ಮೇಲೇರಿ ಸ್ಥೈರಣೆಯಿಂದ ಕಾಯುತ್ತಾ ಕುಳಿತಿತು.

ಯಾವುದೋ ದೇವರ ನಾಮಗಳನ್ನು ಹಾಡುತ್ತಾ ಮನೆಯಾಕೆ ಹೊರಗೆ ಬಂದು ಕಾಂಪೌಂಡಿನ ಮೇಲೆ ಕಾಕಪಿಂಡವನ್ನು ಇಡುವುದಕ್ಕಿಲ್ಲ; ಅದನ್ನೇ ಕಾದಿದ್ದ ಅಳಿಲು ಕರಿಬೇವಿನ ಮರದ ಸೊಂಟದಿಂದ ಅನ್ನಕ್ಕಾಗಿ ಕಾಂಪೌಂಡಿನ ಮೇಲೆ ಜಿಗಿಯುವುದಕ್ಕಿಲ್ಲ; ರಸ್ತೆಯ ಮರದ ಮೇಲೆ ಕಾದು ಕುಳಿತಿದ್ದ ವಾಯಸ ಕುಟುಂಬ ಕಾಗುಡುತ್ತಾ ಹಾರಿಳಿಯುವುದಕ್ಕಿಲ್ಲ; ಎಂಜಲೆಲೆಗಳನ್ನು ಮೂಸುತ್ತಿದ್ದ ಕಂತ್ರಿ ನಾಯಿಗಳ ಗುಂಪನ್ನು ಗಡವ ನಾಯಿಯೊಂದು ಬಾಯುಗಲಿಸಿ ಹಲ್ಲು ಕಿಸಿದು ಭೋರ್ಗುಡುತ್ತಾ ಹೊಕ್ಕು ದಿಕ್ಕಾಪಾಲು ಮಾಡುವಂತೆ, ಕರಿಬೇವಿನ ಮರದಲ್ಲಿ ನಿಶ್ಚಲ ಕುಳಿತಿದ್ದ ರೆಕ್ಕೆಮುರುಕ ಎದೆಯುಬ್ಬಿಸಿ ಅಸಾಧುವಾದ ರೋಷದಿಂದ ಕಾಗುಡುತ್ತಾ ತನ್ನ ಬಲಿಷ್ಠ ರೆಕ್ಕೆಯನ್ನು ಬೀಸಾಬೀಸುತ್ತಾ ಪಿಂಡದ ನೇರಕ್ಕೇ ನೆಗೆದಿಳಿದಿತ್ತು. ನೆಗೆದಿಳಿದದ್ದೇ ತನ್ನದೇ ಸ್ವತ್ತೆಂಬಂತೆ ಪಿಂಡಕ್ಕೆ ಬಾಯಿ ಹಾಕಿ ಒಂದು ಗುಕ್ಕು ಅನ್ನವುಂಡಿದ್ದಿತು.

ಪಿಶಾಚಿಯೋಪಾದಿಯಲ್ಲಿ ಅನಿರೀಕ್ಷಿತವಾಗಿ ಎರಗಿಬಂದಿದ್ದ ಹೊಸ ಕಾಗೆಯೊಂದರ ಅಬ್ಬರ ಆಪಾಟಗಳನ್ನು ಕಂಡು ಅಳಿಲು ಬೆದರಿ ಕರಿಬೇವಿನ ಮರವೊಂದಕ್ಕೆ ನೆಗೆದದ್ದೇ, ಮೊದಲು ಭಯದಿಂದ, ನಂತರ ಏರಿಬಂದಿದ್ದ ರೋಷದಿಂದ, ನಂತರ ಎರಗಿ ಬಂದಿದ್ದ ಈ ಹೊಸ ಕಾಗೆಯ ಆಕಾರ ವೈಖರಿಗಳನ್ನು ಕಂಡು ಏನೂ ಮಾಡಲಾಗದ ಅಸಹಾಯಕತೆಯಿಂದ ಎದೆಯುಬ್ಬಿಸಿ ಇಳಿಸಿ ಕೂಗತೊಡಗಿದ್ದಿತು.

ಮರದಿಂದಿಳಿದಿದ್ದ ಕಾಗೆಗಳೆರಡೂ ಮೊದಲ ಕ್ಷಣ ಅನಿರೀಕ್ಷಿತವಾಗಿದ್ದ ಧಾಳಿಗೆ ಬೆದರಿದ್ದರೂ ಕ್ಷಿಪ್ರದಲ್ಲಿಯೇ ತಮ್ಮದೇ ಆದ ಕುಲದ ಕಾಗೆಯೊಂದು ಹೆರವರ ಹೆರತು ತಾಣಕ್ಕೆ ಕೂಳಿಗಾಗಿ ಬರುವ ಲಂಪಟತನವನ್ನು ತೋರಿದ್ದುದಷ್ಟೇ ಅಲ್ಲದೆ ಹೆದರಿಸಿ ಆಕ್ರಮಣ ಹೂಡಿ ತಮ್ಮಿಂದ ಅನ್ನವನ್ನು ಕಿತ್ತುಕೊಳ್ಳುವಂತಹ ಕುಲಘಾತುಕತನವನ್ನು ಪ್ರದರ್ಶಿಸಿದ್ದ ಪಾಪಿ ಕಾಗೆಯ ಮೇಲೆರಗಿದ್ದುವು. ಈ ಆಕ್ರಮಣವನ್ನು ಮೊದಲೇ ನಿರೀಕ್ಷಿಸಿದ್ದ ರೆಕ್ಕೆಮುರುಕ ಟಣ್ಣನೆ ಕಾಂಪೌಂಡಿನಿಂದ ನೆಲಕ್ಕೆ ಜಿಗಿದಿದ್ದಿತು. ಸಾಮಾನ್ಯವಾಗಿ ಪಕ್ಷಿಕುಲದ ಪದ್ಧತಿಯಂತೆ ಯುದ್ಧದ ಪೂರ್ವಭಾವಿಯೆಲ್ಲವೂ ಆ ಕಾಗೆಯ ರಭಸಾಟ್ಟಹಾಸದಲ್ಲಿಯೇ ನಡೆಯಬೇಕಾಗಿದ್ದು



ಹಾಗೆ ಈ ಕಾಗೆಯೂ ಗಗನಕ್ಕೇರುವುದೆಂದು ನಿರೀಕ್ಷಿಸಿ ಅದರ ಬೆಂಬೀಳಲು ತಯಾರಾಗಿದ್ದ ಆ ಎರಡೂ ಕಾಗೆಗಳೂ ಅರೆಘಳಿಗೆ ವಿಸ್ಮಯ ಖೇದಗಳಿಂದ ತಮ್ಮ ಕುಲಕ್ಕೆ ಅಪವಾದಕರವಾದ ರೀತಿಯಲ್ಲಿ ನೆಲಕ್ಕೆ ಹೇಡಿಯಂತೆ ಕುಪ್ಪಳಿಸಿದ್ದ ಪಾಪಿ ಕಾಗೆಯತ್ತ ದೃಷ್ಟಿಸಿದ್ದುವು. ನಂತರ ಏನು ತೋರಿತೋ, ಅದರ ಮೇಲೆ ಬೀಳುವುದನ್ನು ಬಿಟ್ಟುಕೊಟ್ಟು ತಮ್ಮ ಗಮನವನ್ನು ಕೂಳಿನತ್ತ ಹರಿಸಿದ್ದುವು. ಆದರೆ ಆ ಕ್ಷಣವೇ ರೆಕ್ಕೆಮುರುಕ ನೆಲದಿಂದ ಕಾಂಪೌಂಡಿನ ಮೇಲೆ ರೋಷದಿಂದ ಕುಪ್ಪಿದ್ದಿತು. ಕುಪ್ಪಿ, ಇನ್ನೇನು ಕೂಳಿಗೆ ಕೊಕ್ಕು ಹಾಕಲಿದ್ದ ಎರಡೂ ಕಾಗೆ-ಗಳನ್ನೂ ಹಿಮ್ಮೆಟ್ಟಿಸಿ, ಕೂಳಿಗೆ ತಾನೇ ಬಾಯಿ ಹಾಕಿದ್ದಿತು. ಇದೇನಿದು ವಿಚಿತ್ರ! ಹೇಡಿಯಂತೆ ಕೆಳಗಿಳಿದಿದ್ದ ಈ ಕುಲಘಾತಕ ಮತ್ತೆ ಮೇಲೆ ಬಂದಿದೆ! ಕಾಗೆಗಳೆರಡೂ ಸಂದೇಹಾಶ್ಚರ್ಯಗಳಿಂದ ದೃಷ್ಟಿಸುತ್ತಿರುವಂತೆಯೇ ರೆಕ್ಕೆಮುರುಕ ಒಂದು ಗುಕ್ಕು ಅನ್ನವನ್ನುಂಡು ತಾನೇ ಬಾಯಿ ಜೋರು ಮಾಡುತ್ತಾ ಕಡಿಯ ಹೋಗುವಂತೆ ಹತ್ತಿರವಿದ್ದ ಕಾಗೆಯ ಮೇಲ್ವಾಗ್ಬಿದ್ದಿತು. ಕಾಗೆಯ ಬಗೆಗೇ ವಿಚಿತ್ರವೆನಿಸುವಂತೆ ಬಲ ರೆಕ್ಕೆ ಬೀಸಾ ಬೀಸುತ್ತಾ, ವಿಚಿತ್ರವಾಗಿ ಕತ್ತು ಕೊಂಕಿಸಿ ಪರರು ಬಂದು ನಿಷ್ಪಾಪಿಯಾದ ತನ್ನನ್ನು ಹಿಂಸಿಸುತ್ತಿರುವರೇ ಎನ್ನುವಂತೆ ಅಬ್ಬರ ಮಾಡುತ್ತಾ ನುಗ್ಗಿ ಬರುತ್ತಿದ್ದ ಹೊಸ ಕಾಗೆಯ ಹೀನ ಪರಿಗೆ ಬೆಸತ್ತ ಆ ಕಾಗೆಗಳೆರಡೂ ಭ್ರಮೆ ಹಿಡಿದಂತೆ ಓಟ ಕಿತ್ತಿದ್ದುವು. ಕಾಗೆಗಳೆರಡೂ ಪುಕ್ಕಲಾಗಿ ಓಟ ಕಿತ್ತುದನ್ನು ಕತ್ತು ಕೊಂಕಿಸಿ ಅರೆಘಳಿಗೆ ನೋಡಿದ್ದ ರೆಕ್ಕೆಮುರುಕನಿಗೆ ಅನ್ನದರಿವು ಮೂಡಿ ಅನ್ನಕ್ಕೆ ಕೊಕ್ಕು ಹಾಕಿದ್ದಿತು.

ಏನೋ ಶಬ್ದವಾದಂತಾಗಿ ತಿರುಗಿ ನೋಡಿದ್ದರೆ ಅಳಿಲು! ಆ ಭಂಡ ಅಳಿಲು ಈಗ ತನಗೇ ಕೊಕ್ಕೊಟ್ಟು ಓಡಿಸಲು ಹವಣಿಸಿ ಕಾಂಪೌಂಡಿನ ಮೇಲೆ ಟಣ್ಣನೆ ಜಿಗಿದಿದ್ದಾಗ ಅಳಿಲಿನಾ ಧೈರ್ಯಕ್ಕೆ ರೆಕ್ಕೆಮುರುಕನೂ ಸಮಂತ ಹೊಡೆದು ಒಂದು ಹೆಜ್ಜೆ ಹಿಮ್ಮೆಟ್ಟಬೇಕಾಯಿತು!

ಹೆರ ಕಂಟಕಂಬದ ಎರಡು ಬಲಿಷ್ಠ ಕಾಗೆಗಳನ್ನು ಓಡಿಸಿದ್ದ ಸಂತಸದಲ್ಲಿ ತನ್ನ ಅನ್ನದ ಮಧ್ಯೆ ಈ ಕ್ಷುದ್ರ ಅಳಿಲು ಬಾಯಿ ಹಾಕುತ್ತಿದೆಯಲ್ಲ ಎಂಬ ದುಃಖವನ್ನು ರೆಕ್ಕೆಮುರುಕ ಮರೆಯಲೆಣಿಸಿದ್ದಿತು.

*

ಹಿಂದೆಂದೂ ಕಾಣದ ಅಬ್ಬರ ಕೇಳಿಸಿಕೊಂಡ ಮನೆಯಾಕೆ ಒಳ ಹೋಗಿದ್ದವರು ಹೊರ ಬಂದು ನಡೆದಿದ್ದ ಪ್ರಕರಣವನ್ನು ವಿಸ್ಮಯದಿಂದ ನೋಡಿದ್ದರು. ಎಡ ರೆಕ್ಕೆ ಮುರಿದು ಜೋತಾಡುತ್ತಿದ್ದ ಕಾಗೆಯೊಂದು ಅಷ್ಟು ಧೈರ್ಯದಿಂದ ಎರಡು ಬಲಿಷ್ಠ ಕಾಗೆಗಳನ್ನು ಸೋಲಿಸಿ ಓಡಿಸಿತೇ ಎಂಬ ಅಚ್ಚರಿ ರೆಕ್ಕೆಮುರುಕನ ಬಗೆಗೆ ಅಭಿಮಾನವನ್ನು ತಳೆಯುವಂತೆ ಪ್ರೇರೇಪಿಸಿತು. ದೇವರ ಹಾಗೂ ಅಳಿದ ಪತಿಯ ಹೆಸರಿನಲ್ಲಿ ಇಡುತ್ತಿದ್ದ ಮಯಾಸಂಪಾದಿತಾನ್ನಕ್ಕೆ ಯಾವ ಕಾಗೆ ಬಂದರೇನು ಎಂಬ ನಿರಭಿಮಾನವನು ಇಷ್ಟು ದಿನವೂ ತಳೆದಿದ್ದ ಆಕೆಯ ಮನವೀಗ ಈ ಕಾಗೆಯೇ ತನ್ನ ಅನ್ನಕ್ಕೆ ಬರಲಿ ಎಂದು ಅನಿಸಿತು.

ಅಂದಿನಿಂದ ಅನುದಿನ ಬರುತ್ತಿದ್ದ ರೆಕ್ಕೆಮುರುಕನನ್ನು ಮನೆಯಾಕೆ ತಪ್ಪದೆ ನೋಡುತ್ತಿದ್ದರು. ಅದಷ್ಟೇ ಅಲ್ಲ, ಅಲ್ಲಲ್ಲಿ ಓಡಿ-ಯಾಡುವಾಗ ಕಾಣಿಸುತ್ತಿದ್ದ ರೆಕ್ಕೆಮುರುಕನನ್ನು ಗುರುತುಹಿಡಿಯುವಷ್ಟು, ಗುರುತು ಹಿಡಿದು ವಿಧವೆಯಾದ ತನ್ನಂತೆ ಈ ಹಕ್ಕಿಯೂ ಒಂಟಿ ಬಾಳುತ್ತಿದೆ ಎಂದು ಊಹಿಸುವಷ್ಟು ಪರಿಚಯವನ್ನು ಬೆಳೆಸಿಕೊಂಡರು. ಇಹಕ್ಕೆ ಪರಕ್ಕೆ ಸರ್ವಾಧಾರವೆಂಬಂತಿದ್ದ ಪತಿಯನ್ನು ಕಳೆದುಕೊಂಡು ಅಟ್ಟ ಕುಟ್ಟ ಊಳಿಗ ಮಾಡಿ ಹೇಗೋ ತಮ್ಮ ಬಾಳನ್ನು ಸಾಗಿಸುತ್ತಿದ್ದ ಆಕೆಯ ಮನ ಹಕ್ಕಿಯ ಬಾಳಿನ ಸರ್ವಾಧಾರವೆಂಬಂತಿದ್ದ ರೆಕ್ಕೆಗಳಲ್ಲಿ ಒಂದನ್ನು ಕಳೆದುಕೊಂಡೂ ಹೇಗೋ ಬಾಳುತ್ತಿದ್ದ ಕಾಗೆಯ ಬಗೆಗೆ ಆರ್ದ್ರಗೊಂಡಿತು. ಆರ್ದ್ರಗೊಂಡ ಮನ ಆತ್ಮೀಯ ಬಂಧುವೊಬ್ಬನಿಗೆ ಹಾರೈಸುವಂತೆ ರೆಕ್ಕೆಮುರುಕನ ಅವಿರತ ಸುಖಕ್ಕಾಗಿ ಹಾರೈಸಿದ್ದಿತು. ✡

ಈ ಪ್ರಾಚೀನ
ರೋಗೆ ವೈರಸ್
ಮೂಲದ್ದೆಂದು
ಇದೀಗ
ಗೊತ್ತಾಗಿದೆ !

(ವೈದ್ಯರಾಜ) ಸಂಜನೂರು ಹಾವಯ್ಯ

ಬಂದಿದೆ ಹೊಸ ರೋಗ.....

ಜಗತ್ತಿನಲ್ಲೀಗ ಅತ್ಯಂತ ಭರದಿಂದ ಹಬ್ಬುತ್ತಿರುವ ರೋಗ ಯಾವುದು? ಆಧುನಿಕ ವೈದ್ಯಶಾಸ್ತ್ರ ಎಷ್ಟೊಂದು ಮುಂದುವರೆದಿದೆಯೆಂದರೆ ಇರುವ ರೋಗಗಳು ಸಾಲದೆ ಹೊಸ ರೋಗಗಳನ್ನೂ ಹುಟ್ಟಿಸುತ್ತಲಿದೆ. ಆದರೆ ಯಾವ ವೈದ್ಯಕೀಯ ನೆರವೂ ಇಲ್ಲದೇ ಇನ್ನೊಂದು ರೋಗ ತಂತಾನೇ ಜಗತ್ತಿನಲ್ಲೆಲ್ಲ ಹಬ್ಬುತ್ತಲಿದೆ. ಇದೇನೂ ನಿನ್ನೆ ಮೊನ್ನೆ ಹುಟ್ಟಿಕೊಂಡು ನಾಳೆ ನಾಡಿದ್ದು ಸಾಯುವಂಥ ರೋಗವಲ್ಲ. ಈ ರೋಗ ಪ್ರಾಚೀನ ಕಾಲದಿಂದಲೂ ನಮ್ಮಲ್ಲಿ ಇದೆ. ರೋಗದ ಹೆಸರು 'ಆಪಾದನಾ ವ್ಯಾಧಿ' ಅರ್ಥಾತ್ accusation mania.

ಈ ರೋಗದ ಮೊಟ್ಟಮೊದಲ ಉಲ್ಲೇಖ ರಾಮಾಯಣದಲ್ಲಿ ದೊರಕಿದೆ. ಆ ಕಾಲದ ಅಗಸನೊಬ್ಬನಲ್ಲಿ ಈ ವ್ಯಾಧಿ ತೀವ್ರವಾಗಿದ್ದುದು ತಿಳಿದುಬಂದಿದೆ. ಬರೀ ಒಬ್ಬ ಅಗಸನಲ್ಲಿ ಆ ರೋಗವಿತ್ತೋ ಅಥವಾ ಎಲ್ಲ ಅಗಸರಲ್ಲೂ ಇದ್ದಿತೋ ಎಂಬುದು ತಿಳಿದುಬಂದಿಲ್ಲ. ಈಗಿನ ಲಕ್ಷಣಗಳನ್ನು ನೋಡುವಾಗ ಎಲ್ಲಾ ಅಗಸರಲ್ಲಷ್ಟೇ ಅಲ್ಲ ಎಲ್ಲ ಕ್ಷೌರಿಕರಲ್ಲೂ ಅದು ಇದ್ದಿರಬೇಕೆಂದೆನಿಸುತ್ತದೆ. ಇತಿಹಾಸದ ತುಂಬೆಲ್ಲ ಆಪಾದನಾ ವ್ಯಾಧಿಗ್ರಸ್ತರ ಉದಾಹರಣೆಗಳು ದೊರಕುತ್ತವೆ.

ರೋಗದ ನಿಜವಾದ ಉತ್ಕರ್ಷವಾದದ್ದು ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ. ಮೊದಲೆಲ್ಲ ಅಪ್ರತ್ಯಕ್ಷವಾಗಿ ಪೀಡಿಸುತ್ತಿದ್ದ ರೋಗ ಈಗ ತನ್ನ ಬಾಹ್ಯ ಸ್ವರೂಪವನ್ನು ಪ್ರಕಟಿಸುತ್ತಲಿದೆ. ಈ ವ್ಯಾಧಿ ಉಲ್ಬಣವಾಗಲು ಇಂಥದೇ ಕಾರಣವೇನೂ ಇಲ್ಲ. ಉದಾಹರಣೆಗೆ ವಾಚಾಳಿತನದ ವ್ಯಾಧಿ ಕೆಲವೊಮ್ಮೆ ಈ ರೋಗಕ್ಕೆ ಕಾರಣವಾಗಬಹುದು. ಭೈರಿಗೆಗಳು ಬಕರಾಗಳನ್ನು ಆಕರ್ಷಿಸಲು ಹೊಸ ಹೊಸ ಉಪಾಯಗಳನ್ನು ಹುಡುಕುತ್ತಿರುತ್ತಾರೆ. ಇನ್ನೊಬ್ಬರ ಮೇಲಿನ ಆಪಾದನೆಗಳನ್ನು ಕೇಳಲು ಎಂದಿಗೂ ಬೇಸರ ಬರಲಿಕ್ಕಿಲ್ಲ. ಆದ್ದರಿಂದ ಭೈರಿಗೆಗಳು ತಮ್ಮ ವಾಚಾಳಿತನದ ವ್ಯಾಧಿಯನ್ನು ಪರಿಹರಿಸಲು ಇತರರಲ್ಲಿರುವ ಆಪಾದನಾ (ಶ್ರವಣ) ವ್ಯಾಧಿಯ ಉಪಯೋಗ ಪಡೆಯಲೆತ್ನಿಸುತ್ತಾರೆ. ಪರಿಣಾಮವಾಗಿ ತಾವೇ ಆಪಾದನಾ ರೋಗಕ್ಕೆ ಬಲಿ ಬೀಳುತ್ತಾರೆ. ಏನಿದ್ದರೂ ಈ ರೋಗ ಹರಡುವುದು ಮುಖ್ಯವಾಗಿ ಅತೃಪ್ತಿ ಮತ್ತು ಸ್ವಾರ್ಥ ಎಂಬೆರಡು ವೈರಸ್‌ಗಳಿಂದ. ಇವೆರಡೂ ನಮ್ಮ ದೇಶದಲ್ಲಿ ಧಾರಾಳವಾಗಿವೆ. ನಮ್ಮಲ್ಲಿರುವಷ್ಟು ಈ ವ್ಯಾಧಿಗ್ರಸ್ತರು ಬಹುಶಃ ಮತ್ತೆ ಯಾವ ದೇಶದಲ್ಲೂ ಇರಲಿಕ್ಕಿಲ್ಲ. ಎಷ್ಟೆಂದರೂ ರೋಗದ ಮೊಟ್ಟಮೊದಲ ಉಲ್ಲೇಖ ನಮ್ಮ ದೇಶದ ಇತಿಹಾಸದಲ್ಲಿಯೇ ಸಿಗುತ್ತದಲ್ಲವೇ!

ರೋಗದ ಮುಖ್ಯ ಲಕ್ಷಣವೆಂದರೆ ಯಾವಾಗಲೂ ಇನ್ನೊಬ್ಬರನ್ನು ಬೈಯುತ್ತಿರಬೇಕು, ಅಪಾದನೆಗಳನ್ನು ಹೊರಿಸಬೇಕು ಎಂದು ಮನಸ್ಸಿಗೆ ಅನಿಸುತ್ತಿರುತ್ತದೆ. ಕೆಲವರಿಗಂತೂ ದಿನಕ್ಕೆ ಕನಿಷ್ಠ ಹತ್ತು ಆಪಾದನೆಗಳನ್ನು ಹೊರಿಸದಿದ್ದರೆ ನಿದ್ರೆಯೇ ಬರುವುದಿಲ್ಲ. ರೋಗ ಉಲ್ಬಣಾವಸ್ಥೆಗೇರಿದಂತೆಲ್ಲ ಈ ಸಂಖ್ಯೆಯೂ ಹೆಚ್ಚಾಗುತ್ತದೆ. ರೋಗಿಗಳು ಜಗತ್ತಿನಲ್ಲಿ ಯಾವ್ಯಾವುದರ ಮೇಲೆ ಆಪಾದಿಸಲು ಸಾಧ್ಯವೋ ಅವೆಲ್ಲವುಗಳ ಮೇಲೆ ಆಪಾದನೆಗಳನ್ನು ಹೊರಿಸುತ್ತಾರೆ. ಮುಂದೊಂದು ದಿನ ಅವೇ ಅವೇ ಆಪಾದನೆಗಳನ್ನು ಹೊರಿಸಿ ಅವರಿಗೂ ಬೇಸರವಾಗುತ್ತದೆ. ಆಗ ಅವರು ಆಪಾದನೆ ಮಾಡಲೆಂದೇ ಹೊಸ ಹೊಸ ವಿಷಯಗಳನ್ನು ಸೃಷ್ಟಿಸುತ್ತಾರೆ. ಇದು ರೋಗವು ಉಲ್ಬಣಾವಸ್ಥೆಗೇರಿರುವ ಸಂಕೇತ.

ಆಪಾದನಾ ವ್ಯಾಧಿಯು ತೀವ್ರವಾಗಿರುವ ಇನ್ನೊಂದು ಲಕ್ಷಣವೆಂದರೆ ತಮ್ಮ ಶೋಷಣೆ ಆಗುತ್ತಿದೆಯೆಂಬ ಬೊಬ್ಬೆ. ಬೇರೆಲ್ಲಿಗಿಂತಲೂ ನಮ್ಮ ದೇಶದಲ್ಲಿ, ವಿಶೇಷತಃ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದು ಹೆಚ್ಚಾಗಿದೆ. ಅವರಿವರ ಮಾತು ಹೋಗಲಿ, ನಮ್ಮಲ್ಲಿನ ಹಿರಿಯ–ಕ್ಷಮಿಸಿ–ಹಿರಿಯರೆಂದೆನಿಸಿಕೊಳ್ಳುವ ಲೇಖಕರೂ ಇದಕ್ಕೆ ಬಲಿ ಬಿದ್ದಿದ್ದಾರೆ. ಶೋಷಣೆಯ ಬೊಬ್ಬೆ ಯಾವಾಗಲೂ ಇದ್ದದ್ದೇ, ನಿಜವಾದ ಶೋಷಣೆ ಮಾಡುವವರು ಮಾತ್ರ ಬೇರೆಯೇ ಇದ್ದಾರೆ.

ಆಪಾದನೆಗಳನ್ನು ಮಾಡಲು ಒಂದು ಸಾಧು ಪ್ರಾಣಿ ಬೇಕು. ಅದಲ್ಲದೇ ಆಪಾದನಾಗ್ರಸ್ತರಲ್ಲಿ ಇನ್ನೊಂದು ಅಪಾಯಕಾರಿ ಮನೋವೃತ್ತಿ ಇರುತ್ತದೆ. ತಾವು ಯಾರ ಮೇಲೆ ಆಪಾದನೆಗಳನ್ನು ಮಾಡುತ್ತಾರೋ ಅವರು ಅದಕ್ಕೆ ಹುಂಬತನದಿಂದ ಅಥವಾ ಅತ್ಯಂತ ಸೌಮ್ಯವಾಗಿ ಉತ್ತರಿಸಬೇಕು, ಆಗ ಅವರಿಗೆ ಪರಮಾನಂದವಾಗುತ್ತದೆ. ಏಕೆಂದರೆ ಆಗ ಮತ್ತಷ್ಟು ಆಪಾದನೆಗಳನ್ನು ಹೊರಿಸಲು ಅವಕಾಶ ದೊರಕುತ್ತದೆ!

ಕಳವಳವನ್ನುಂಟುಮಾಡುವ ಅಂಶವೆಂದರೆ ಈ ರೋಗ ಅತ್ಯಂತ ಸಾಂಕ್ರಾಮಿಕವಾಗಿದೆ. ಅತೃಪ್ತಿ, ಸ್ವಾರ್ಥ, ವಾಚಾಳಿತನಗಳೆಂಬ ವೈರಸ್‌ಗಳು ದೇಶದ ಪ್ರತಿಯೊಂದು ಮೂಲೆಯಲ್ಲಿಯೂ ಹಬ್ಬಿರುವುದರಿಂದ ಇದರಲ್ಲಿ ಆಶ್ಚರ್ಯ ಪಡುವಂಥದೇನೂ ಇಲ್ಲ. ಈ ವೈರಸ್‌ಗಳ ಕಾರ್ಯವಿಧಾನವೂ ಗಮನಿಸುವಂಥದ್ದಾಗಿದೆ. ಇವು ದೇಹದಲ್ಲಿ ತಲೆಯ ಮೇಲಷ್ಟೇ ಆಕ್ರಮಣ ಮಾಡುತ್ತವೆ. ತಲೆಯಲ್ಲಿ ಏನೂ ಇಲ್ಲದಿದ್ದರಂತೂ ಇವುಗಳಿಗೆ ಮತ್ತಷ್ಟು ಅನುಕೂಲ. ತಲೆಯಲ್ಲಿ ಈ ವೈರಸ್‌ಗಳು ನಿಧಾನವಾಗಿ ಸಂಗ್ರಹವಾಗುತ್ತವೆ. ಬೇರೆ ಯಾವ ವೈರಸ್‌ಗಿಂತಲೂ ಶೀಘ್ರವಾಗಿ ಸಂತಾನಾಭಿವೃದ್ಧಿಯನ್ನು ಮಾಡಿಕೊಳ್ಳುತ್ತವೆ. ಆಗ ಒಮ್ಮೆಲೇ ತಲೆ ಬಿಸಿಯಾಗತೊಡಗುತ್ತದೆ. ವೈರಸ್‌ಗಳ ಸಂಖ್ಯೆ ಅತಿ ಹೆಚ್ಚಾದಾಗ ಅವು ಹೊರಗೆ ಹೋಗಲೆತ್ನಿಸುತ್ತವೆ ಅವುಗಳಿಗಿರುವ ಒಂದೇ ದಾರಿಯೆಂದರೆ ಆಪಾದನೆ. ಆದರೆ ದುರ್ದೈವದಿಂದ ಆಪಾದನಾ ಮಾರ್ಗದಿಂದ ಹೊರಕ್ಕೆ ಹೋದ ಪ್ರತಿ ವೈರಸ್‌ಗೆ ಎರಡು ವೈರಸ್‌ಗಳು ತಲೆಯಲ್ಲಿ ಹುಟ್ಟಿಕೊಳ್ಳುತ್ತವೆ. ಹೀಗಾಗಿ ಒಮ್ಮೆ ತಲೆಯಲ್ಲಿ ಈ ವೈರಸ್ಸುಗಳು ಹೊಕ್ಕರೆ ಅವು ಹೊರ ಬರುವುದು ಅತ್ಯಂತ ಕಠಿಣ. (ಈ ವಿಶ್ಲೇಷಣೆ ವಾಚಾಳಿತನದ ಮೂಲಕ ಉಂಟಾದ ವ್ಯಾಧಿಗೆ ಅನ್ವಯಿಸುವುದಿಲ್ಲ.)

ಅಂತೂ ಈ ರೋಗ ಜನರಲ್ಲಿ ಅತ್ಯಂತ ವೇಗವಾಗಿ ಹಬ್ಬುತ್ತಿದೆ. ಉದಾಹರಣೆಗೆ ಮುಂಜಾನೆ ಪೇಪರ್ ತೆಗೆದ ತಕ್ಷಣ ನೀವು ಯಾವ ಸುದ್ದಿಯನ್ನು ಓದುತ್ತೀರಿ? ಇನ್ನೊಬ್ಬರ ಪ್ರಶಂಸೆ ಮಾಡಿ ಈಗ ಯಾರೂ ಹೇಳಿಕೆಗಳನ್ನು ಕೊಡುವುದಿಲ್ಲ. ಒಂದು ವೇಳೆ ಅಂಥ ಹೇಳಿಕೆಗಳು ಬಂದರೆ ನೀವು ಅವುಗಳನ್ನೆಂದಾದರೂ ಓದುತ್ತೀರಾ? ಖಂಡಿತ ಇಲ್ಲ. ನೀವು ಮೊದಲು ನೋಡುವುದು ಯಾರ ಯಾರ ಮೇಲೆ ಯಾವ ಯಾವ ಆಪಾದನೆಗಳು ಹೊರಿಸಲ್ಪಟ್ಟಿವೆಯೆಂಬುದನ್ನು. ಕೆಲವರಲ್ಲಿ ಆಪಾದನಾ ಪಠಣದ ವ್ಯಾಧಿ ಎಷ್ಟರಮಟ್ಟಿಗಿರುತ್ತದೆಂದರೆ "ನೀನು ನನ್ನ ಲಗ್ನದ ಹೆಂಡತಿಯಿದ್ದು..." ಎಂಬ ಸೋಡಚೀಟಿಗಳನ್ನೂ ಅವರು ಬಿಡು-

ವುದಿಲ್ಲ. ಸೋಡಚೀಟಿ ಆಪಾದನೆಗಳು ಸ್ವಾರಸ್ಯಕರವಾಗಿರುತ್ತವೆಂದು ನಾನೂ ಒಪ್ಪುತ್ತೇನೆ. ಆದರೆ ಅವು ಖಾಸಗೀ ತೀಟೆಗಾಗಿ. ಸಾರ್ವಜನಿಕವಾಗಿ ಉಪಯೋಗಕ್ಕೆ ಬರುವಂಥವು ಅಧಿಕಾರ ಸ್ಥಾನದಲ್ಲಿರುವವರ ಮೇಲಿನ ಆಪಾದನೆಗಳು. ಪೇಪರಿನಲ್ಲಿ ಮಂತ್ರಿಗಳ ಮೇಲೆ, ರಾಜಕಾರಣಿಗಳ ಮೇಲೆ ಬಂದ ಆಪಾದನೆಗಳನ್ನೆಲ್ಲ ನೀವು ನಿಮ್ಮ ಮಿತ್ರರ ಎದುರಿಗೆ ಪುನರುಚ್ಚರಿಸಿ ನಿಮ್ಮ ತೀಟೆಯನ್ನು ತೀರಿಸಿಕೊಳ್ಳುತ್ತೀರೆಂದು ಹೇಳುವ ಕಾರಣವಿಲ್ಲವಷ್ಟೆ.

ಬ್ರಿಟಿಶರು ಎಲ್ಲವನ್ನೂ ವ್ಯವಸ್ಥಿತವಾಗಿ ಮಾಡುವವರು. ಆಪಾದನೆಗಳನ್ನು ಮಾಡಲಿಕ್ಕೆಂದೇ ವಿರೋಧೀ ಪಕ್ಷ ಎಂಬುದರ ಮೂಲಕ ಅವರು ರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಪ್ರತಿಯೊಂದು ಪ್ರದೇಶದಿಂದಲೂ ಅಂಥ ಒಬ್ಬ ವ್ಯಕ್ತಿಯನ್ನು ಚುನಾಯಿಸಿ ಅವನಿಗೆ ಆ ಪ್ರದೇಶದವರ ಪರವಾಗಿ ಆಪಾದನೆಗಳನ್ನು ಮಾಡುವ ಕೆಲಸವನ್ನು ಕೊಟ್ಟಿದ್ದಾರೆ. ಅವರ (ವಿರೋಧಿ ಪಕ್ಷದ) ನಾಯಕನಿಗೆ ಸರಕಾರದ ಬೊಕ್ಕಸದಿಂದಲೇ ಸಂಬಳ ಕೊಡುತ್ತಾರೆ. ಆಪಾದನೆಗಳನ್ನು ಸ್ವೀಕರಿಸಿ ಪ್ರತ್ಯಾಪಾದನೆಗಳನ್ನು ಮಾಡಲು ಸರಕಾರವೆಂಬ ಸಂಸ್ಥೆಯನ್ನು ನಿರ್ಮಿಸಿದ್ದಾರೆ. ಜನತಾ ಪ್ರತಿನಿಧಿಗಳು ಸರಕಾರದ ಮೇಲೆ ಆಪಾದನೆಗಳನ್ನು ಮಾಡಲು ಸೇರುವ ಅವರ ಸಭೆಗೆ ಪಾರ್ಲಿಮೆಂಟ' ಎಂದು ಹೆಸರು. ಭಾರತೀಯ ಸಂವಿಧಾನಕರ್ತರಿಗೆ ಇಂಥ ಆಪಾದನಾ ಸಭೆಗಳಿಂದಾಗುವ ಲಾಭ ಚೆನ್ನಾಗಿ ಮನದಟ್ಟಾಗಿತ್ತು. ತಮ್ಮ ಪರವಾಗಿ ಆಪಾದನೆಗಳನ್ನು ಒಬ್ಬರು ಮಾಡಲೆಲ್ಲರೆಂದು ಗೊತ್ತಿದ್ದ ಜನತೆ ಕುರಿಯಂತೆ ವರ್ತಿಸುತ್ತದೆಂಬುದೂ ಅವರಿಗೆ ತಿಳಿದಿತ್ತು. ಈ ಕಾರಣದಿಂದ ಅವರು ಒಂದಲ್ಲ ಸುಮಾರು ಮೂವತ್ತು ಆಪಾದನಾ ಸಭೆಗಳನ್ನು ದೇಶದಲ್ಲಿ ಸ್ಥಾಪಿಸಿದರು.

ಭಾರತವಷ್ಟೇ ಅಲ್ಲ, ಪಾಕಿಸ್ತಾನವೂ ರಾಷ್ಟ್ರೀಯ ಮಟ್ಟದ ಆಪಾದನೆಗಳಿಂದ ಜನತೆಯ ಮೇಲಾಗುವ ಪರಿಣಾಮವನ್ನು ಅರಿತುಕೊಂಡಿದೆ. ಅಲ್ಲಿ ಆಪಾದನಾ ವ್ಯಾಧಿ ಹೆಚ್ಚಾದಾಗಲೆಲ್ಲ, ಭಾರತವನ್ನು ಏನಾದರೊಂದು ನೆವದಿಂದ ದೂಷಿಸಿ ಜನರ ಆಪಾದನೆಗಳನ್ನು ಈ ಕಡೆಗೆ ತಿರುಗಿಸಿ ಬಿಡಲಾಗುತ್ತದೆ. ಅಂತೂ ಒಬ್ಬರ ಮೇಲೆಯಾದರೂ ಆಪಾದನೆಗಳನ್ನು ಮಾಡಿದ್ದೇವಲ್ಲ ಎಂದು ಸಮಾಧಾನ ಹೊಂದಿ, ಜನತೆ ಮೂಕ ಕುರಿಯಂತೆ ತೆಪ್ಪಗಾಗಿ ಬಿಡುತ್ತದೆ. ಆದರೆ ತಮ್ಮವರ ಮೇಲಿನ ಆಪಾದನೆ ಹೊರಿಸುವುದರಲ್ಲಿನ ಸ್ವಾರಸ್ಯ ಬೇರೆಯೇ ಇರುತ್ತದೆ. ಆದ್ದರಿಂದ ಈಗ ಅಲ್ಲಿಯೂ ಒಂದು ಆಪಾದನಾ ಸಭೆಯನ್ನು ಅನಿವಾರ್ಯವಾಗಿ ಸ್ಥಾಪಿಸಬೇಕಾಗಿ ಬಂದಿದೆ.

ಒಟ್ಟಿನಲ್ಲಿ ಇಡೀ ಜಗತ್ತಿನಲ್ಲಿ ರಾಜಕಾರಣವೆನ್ನುವುದು ಆಪಾದನಾಖೋರರ ಸ್ವರ್ಗವಾಗಿದೆ ಆಪಾದನೆ ಮಾಡುವುದು ನಮ್ಮ ರಾಜಕಾರಣಿಗಳ ಜನ್ಮಸಿದ್ಧ ಹಕ್ಕು ಆಗಿಬಿಟ್ಟಿದೆ. ಮೊದಲೆಲ್ಲ ಬೇರೆ ಬೇರೆ ಪಕ್ಷಗಳ



"ಸ್ವಲ್ಪ ದೊಡ್ಡ ವ್ಯಾನಿಟಿಬ್ಯಾಗನ್ನೇ ತಗೊಂಡು ಬಿಡು. ನನ್ನ ಜೇಬನ್ನೂ ನಿನ್ನಲ್ಲೇ ಸೇರಿಕೊಂಡಿದೆಯಲ್ಲಾ."

ವರು ಒಬ್ಬರೊಬ್ಬರ ಮೇಲೆ ಅಪಾದನೆಗಳನ್ನು ಹೊರಿಸಿ ಕಚ್ಚಾಡುತ್ತಿದ್ದರು. ಆದರೆ ಮೊದಲೆ ಹೇಳಿದಂತೆ ರೋಗ ಹೆಚ್ಚಾದಂತೆಲ್ಲ ತಮ್ಮವರನ್ನು ಬೈಯುವ ತೀಟೆಯೂ ಹೆಚ್ಚಾಗುತ್ತದೆ. ಆದ್ದರಿಂದ ಈ ಪ್ರತಿಯೊಂದು ಪಕ್ಷದಲ್ಲಿ ಬೇರೆ ಬೇರೆ ಭಾಗಗಳಾಗಿದ್ದು ಆಂತರಿಕವಾಗಿ ಆಪಾದನೆ ಹಾಗೂ ಪ್ರತ್ಯಾಪಾದನೆಗಳ ಸುರಿಮಳೆಯಾಗುತ್ತಿದೆ. ಉಪದೇಶದಷ್ಟು ಧಾರಾಳವಾಗಿ, ನಾವು ಮತ್ತೇನನ್ನೂ ಮಾಡುವುದಿಲ್ಲವೆಂದು ಪ್ರತೀತಿಯಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಅಪಾದನೆ ಹೊರಿಸುವಷ್ಟು ಧಾರಾಳವಾಗಿ ನಾವು ಬೇರೆ ಯಾವುದನ್ನೂ ಮಾಡುತ್ತಿಲ್ಲ.

ರಾಜಕಾರಣವೊಂದೇ ಅಲ್ಲ, ಬೇರೆ ಯಾವ ಕ್ಷೇತ್ರವನ್ನೇ ತೆಗೆದುಕೊಳ್ಳಿ. ಬೇಕಾದರೆ ಕ್ರೀಡಾ ವಿಮರ್ಶಕರನ್ನೇ ನೋಡೋಣ. ಭಾರತದ ಕ್ರಿಕೆಟ್ ತಂಡ ಮೂರು ಪಂದ್ಯಮಾಲಿಕೆಗಳನ್ನು ಗೆದ್ದಾಗ, "ನಮ್ಮ ಸ್ಪಿನ್ನರುಗಳ ಎದುರು ಅವರ ವಿಕೆಟ್ಟುಗಳು ರಟ್ಟಿನ ಮನೆಗಳಂತೆ ಉದುರಿದವು." "ನಮ್ಮ ಬ್ಯಾಟ್ಸ್‌ಮನ್ನರು ಅವರ ಬೌಲರುಗಳ ತಿಥಿ ಮಾಡಿದರು" ಎಂದೇನೇನೋ ಬರೆದರು. ಅರ್ಥಾತ್ ನಮ್ಮ ಆಟಗಾರರನ್ನು ಹೊಗಳುವುದಕ್ಕಿಂತ ಎದುರು ಪಕ್ಷದವರನ್ನು ತೆಗಳಿಯೇ ಗೇಲಿ ಮಾಡಿದರು. ಅದೇ, ನಮ್ಮ ತಂಡ ಸೋತಾಗ? ನಮ್ಮವರ ದೋಷಗಳ ಕುರಿತು ಪುಟಗಟ್ಟಲೇ ಬರೆದರೇ ವಿನಾ ಇಂಗ್ಲೆಂಡ್ ತಂಡದ ಕುರಿತು ಹೊಗಳಿಕೆಯ ಚಕಾರವಿಲ್ಲ. ವಿಮರ್ಶಕರಿಗೆ ತೆಗಳುವುದೊಂದೇ ಗೊತ್ತು. ಆ ದೃಷ್ಟಿಯಿಂದ ಅವರನ್ನು ವಿಮರ್ಶಕರೆಂದು ಕರೆಯದೇ ನಿಂದಕರೆಂದು ಕರೆಯುವುದೇ ಹೆಚ್ಚು ಸೂಕ್ತವಾದೀತು.

ಈ ರೋಗದ ಪರಿಹಾರ ನಿಜಕ್ಕೂ ಕಠಿಣವೆಂದು ಮೊದಲೇ ಹೇಳಿದ್ದೇನೆ. ಏಕೆಂದರೆ, ರೋಗಕ್ಕೆ ಕಾರಣವಾದ ವೈರಸ್‌ಗಳಿಗೇ ಔಷಧಿ ಸಿಕ್ಕಿಲ್ಲ. ಆದರೂ ಸ್ವದೋಷ ಪರಿಜ್ಞಾನವೆಂಬ ಔಷಧಿಯನ್ನು ಅಧಿಕಪ್ರಸಂಗ – ನಿವಾರಣಾ ಗುಳಿಗೆಗಳೊಡನೆ ಸೇವಿಸಿದರೆ ಈ ರೋಗವನ್ನು ಸಾಕಷ್ಟು ಹಿಡಿತದಲ್ಲಿಡಬಹುದು. ✡

ಯಾರು ಈ ಬೇಂದ್ರೆ?

ಕಳೆದ ನವಂಬರ್ ಎಂಟರಂದು ಕವಿ ಬೇಂದ್ರೆಯವರು ಜ್ಞಾನಪೀಠ ಪ್ರಶಸ್ತಿಯನ್ನು ಸ್ವೀಕರಿಸಲೆಂದು ದಿಲ್ಲಿಗೆ ಬಂದಿದ್ದರು. ಅವರನ್ನು ಕಾಣಬೇಕೆಂದುಕೊಂಡು ಇಲ್ಲಿರುವ ಕರ್ನಾಟಕ ಸರಕಾರದ ಕರ್ನಾಟಕ ಭವನಕ್ಕೆ ಫೋನ್ ಮಾಡಿದೆ. ಇದು ಇಲ್ಲಿ ಕರ್ನಾಟಕ ಸರಕಾರದ ವಿಶ್ರಾಂತಿ ಗೃಹ. ಹಿಂದೊಮ್ಮೆ ಇಲ್ಲಿಗೆ ಫೋನ್ ಮಾಡಿದಾಗ ನಾನು ಕನ್ನಡದಲ್ಲಿ ಮಾತಾಡಿದ್ದರೂ ಇಂಗ್ಲೀಷಿನಲ್ಲೇ ಉತ್ತರ ಬಂದಿತ್ತು. ಆದ್ದರಿಂದ ನಾನು ಈ ಬಾರಿ ಇಂಗ್ಲೀಷಿನಲ್ಲೇ ಕೇಳಿದೆ, "ಡಾ. ಬೇಂದ್ರೆಯವರು ನಿಮ್ಮಲ್ಲಿ ತಂಗಿದ್ದಾರೆಯೆ?" ಎಂದು.

"ಬೇಂದ್ರೆ? ಯಾವ ಬೇಂದ್ರೆ?" ಇಂಗ್ಲೀಷಿನಲ್ಲೇ ಉತ್ತರರೂಪದಲ್ಲಿ ನನಗೆ ಬಂತು ಈ ಮರು ಪ್ರಶ್ನೆ.

"ಏನು ನಿಮಗಿಷ್ಟೂ ತಿಳಿಯದೆ! ಕರ್ನಾಟಕದ ಪ್ರಖ್ಯಾತ ಕವಿ ಬೇಂದ್ರೆ, ಈ ಸಲ ಜ್ಞಾನಪೀಠ ಪ್ರಶಸ್ತಿವಿಜೇತ ಬೇಂದ್ರೆ''- ನಾನು ತುಸು ಸಿಟ್ಟಿನಿಂದಲೇ ಹೇಳಿದೆ.

ಆ ತುದಿಯಲ್ಲಿಯ ವ್ಯಕ್ತಿ ನನ್ನ ಈ ಮಾತಿಗೆ ಪ್ರತಿಕ್ರಿಯೆಯೆಂಬಂತೆ ಟೆಲಿಫೋನನ್ನು 'ಕಟ್' ಎಂದು ಕೆಳಗಿಟ್ಟದ್ದು ಕೇಳಿಸಿತು.

-(ಡಾ) ಎಸ್. ಶ್ರೀನಿವಾಸಮೂರ್ತಿ

ಚಮ್ಮಾರನಾಗಿ ಹುಟ್ಟಿದ ಸಂತನಾಗಿ ಸತ್ತ

ಎಂ. ಆರ್. ಎಸ್. ರಾವ್

ಮೀರಾಬಾಯಿಯ ಭಕ್ತಿಗೀತಗಳಲ್ಲಿ ಸದ್ಗುರುವಿನ ಉಲ್ಲೇಖ ಅನೇಕ ಕಡೆ ಬರುತ್ತದೆ. ಹದಿನಾಲ್ಕನೆಯ ಶತಮಾನದ ಮಹಾ ಭಗವದ್ಭಕ್ತರೂ ತತ್ವಜ್ಞಾನಿಗಳೂ ಆದ ಸ್ವಾಮಿ ರಮಾನಂದರ ಶಿಷ್ಯೋತ್ತಮ ರೈದಾಸನೇ ಆ ಸದ್ಗುರು ಎಂಬುದು ಅನೇಕರಿಗೆ ತಿಳಿದಂತಿಲ್ಲ. ಈತ ಕಬೀರನ ಸಮಕಾಲೀನ; ಜೀವನದ ಬಹುಭಾಗವನ್ನು ಕಾಶಿಯಲ್ಲಿ ಕಳೆದ; ಜಾತಿಯಿಂದ ಶೂದ್ರ. ಚರ್ಮಕಾರರ ಕುಲದಲ್ಲಿ ಹುಟ್ಟಿದ ಎನ್ನುವುದರ ಹೊರತು ಹೆಚ್ಚಿನ ವಿಷಯ ಲಭ್ಯವಾಗಿಲ್ಲ.

ರೈದಾಸನ ಬಗೆಗೆ ಅನೇಕ ಕಥೆಗಳು ಪ್ರಚಲಿತವಾಗಿವೆ. ಪೂರ್ವಜನ್ಮದಲ್ಲಿ ರಮಾನಂದರ ಶಿಷ್ಯನಾಗಿದ್ದ ಆತ ಏನೋ ಒಂದು ತಪ್ಪು ಮಾಡಿದಾಗ ಗುರುಗಳು ಶೂದ್ರನಾಗಿ ಹುಟ್ಟು ಎಂದು ಶಾಪ ಕೊಟ್ಟದ್ದರಿಂದಲೇ ಆತ ಚಪ್ಪಲಿಗಳನ್ನು ತಯಾರಿಸುವವನ ಕುಲದಲ್ಲಿ ಹುಟ್ಟಿದನಂತೆ. ಜನಿಸಿದಾಗ ಅವನಿಗೆ ಪೂರ್ವಜನ್ಮದ ಸ್ಮರಣೆಯಿತ್ತು. ಆದ್ದರಿಂದಲೇ ಶೂದ್ರಳಾದ ತಾಯಿಯ ಹಾಲನ್ನು ಮಗು ಕುಡಿಯುತ್ತಿರಲಿಲ್ಲವಂತೆ. ರಮಾನಂದರಿಗೆ ಇದು ಗೊತ್ತಾಗಿ ಅವರು ಶಿಷ್ಯರ ಮೂಲಕ ರೈದಾಸನ ತಾಯಿಯನ್ನು ಕರೆಕಳುಹಿಸಿದರು. ರೈದಾಸನ ಪೂರ್ವಾಪರಗಳನ್ನೆಲ್ಲ ಅರಿತಿದ್ದ ಅವರು, "ದೇವರ ಇಚ್ಛೆಯಂತೆ ನೀನು ಶೂದ್ರನಾಗಿ ಜನಿಸಿದ್ದೀ. ದೈವೇಚ್ಛೆಯನ್ನು ಮನ್ನಿಸುವುದೇ ವಿಹಿತ. ಶ್ರೀಹರಿಯನ್ನು ಯಾವಾಗಲೂ ಆರಾಧಿಸುತ್ತಿರು," ಎಂದು ಮಗುವಿಗೆ ಉಪದೇಶಿಸಿದರು. ಅಂದಿನಿಂದ ಮಗು ತಾಯಿಯ ಹಾಲನ್ನು ಕುಡಿಯಹತ್ತಿತು ಎಂದು ಒಂದು ಕಥೆ ಹೇಳುತ್ತದೆ. ಇದರಲ್ಲಡಗಿದ ಸತ್ಯವೆಷ್ಟು ಎಂಬುದು ಗೊತ್ತಾಗದಿದ್ದರೂ ಶೂದ್ರನಾಗಿ ಜನಿಸಿದರೂ ವಿಷ್ಣುವನ್ನು ಭಜಿಸುವುದಕ್ಕೆ ಹಿಂದಿನ ಜನ್ಮದಲ್ಲಿ ಆತ ಬ್ರಾಹ್ಮಣನಾಗಿಯೇ ಜನ್ಮ ತಾಳಿರಬೇಕು ಎಂದು ಭಾವಿಸಿ ಈ ಕಥೆಯನ್ನು ಯಾರೋ ಸೃಜಿಸಿರಬೇಕು ಎಂದು ಊಹಿಸಬಹುದು.

ಬಾಲ್ಯದಿಂದಲೂ ಆತ ಮಹಾ ಭಗವದ್ಭಕ್ತನಾಗಿದ್ದ. ಒಂದು ಪರ್ಣಕುಟಿಯನ್ನು ನಿರ್ಮಿಸಿ, ಅಲ್ಲಿ ಭಗವಧ್ಯಾನದಲ್ಲಿ ನಿರತನಾಗಿರುತ್ತಿದ್ದ. ಗೋಮಯದಿಂದ ಗುಡಿಸಲನ್ನು ಸಾರಿಸಿ ಅದನ್ನು ಸದಾ ಸ್ವಚ್ಛವಾಗಿಟ್ಟಿರುತ್ತಿದ್ದ. ಮುಂಜಾನೆ ಸ್ನಾನಮಾಡದೆ ನೀರನ್ನು ಸಹ ಕುಡಿಯುತ್ತಿರಲಿಲ್ಲ. ಶಾಲಾ ಶಿಕ್ಷಣವನ್ನು ಪಡೆಯಲಾಗದಿದ್ದುದರಿಂದ ಶಾಸ್ತ್ರಾಭ್ಯಾಸ ಸಾಧ್ಯವಾಗಲಿಲ್ಲ. ಆದರೂ ಆತ ಭಗವನ್ನಾಮ ಸ್ಮರಣೆಯಲ್ಲಿಯೇ ನಿರತನಾಗಿರುತ್ತಿದ್ದ. ವೈಷ್ಣವರು ಮನೆಗೆ ಬಂದಾಗ ಅಡುಗೆ ಮಾಡಿಕೊಳ್ಳಲು ಪಾತ್ರೆಗಳನ್ನೂ ಧಾನ್ಯಗಳನ್ನೂ

ಕೊಟ್ಟು ಅವರನ್ನು ಪಚರಿಸುತ್ತಿದ್ದ. ರೈದಾಸನು ಭಕ್ತಿಗೀತಗಳನ್ನು ಎಷ್ಟು ಭಾವಪೂರ್ಣವಾಗಿ ಹಾಡುತ್ತಿದ್ದನೆಂದರೆ ಶ್ರೋತೃಗಳ ಕಣ್ಣುಗಳಲ್ಲಿ ನೀರು ತಾನಾನೇ ಬರುತ್ತಿತ್ತು.

ಈ 'ನಿರುಪಯೋಗಿ' ಜೀವನವನ್ನು ನೋಡಿ ರೈದಾಸನ ತಂದೆ ಸಿಟ್ಟಿಗೆದ್ದ. ಆತನ ಆದೇಶದಂತೆ ರೈದಾಸ ಚರ್ಮಕಾರನ ವೃತ್ತಿಯನ್ನು ಕೈಕೊಂಡ. ಧನಾಭಿಲಾಷೆಯಿಲ್ಲದ ಆತ ತನ್ನ ಸಂಪಾದನೆಯಲ್ಲಿಯೇ ತೃಪ್ತನಾಗಿರುತ್ತಿದ್ದ. ಬಡಬಗ್ಗರ, ದೀನದಲಿತರ, ಸಾಧು ಸಂನ್ಯಾಸಿಗಳ ಪಾದರಕ್ಷೆಗಳನ್ನು ಆತ ವಿನಾಶುಲ್ಕ ರಿಪೇರಿ ಮಾಡುತ್ತಿದ್ದುದರಿಂದ ರೈದಾಸನ ಹೃದಯವೈಶಾಲ್ಯದ ಪ್ರಭಾವ ಸುತ್ತಲೂ ಹಬ್ಬಿತ್ತು. ಪಾದರಕ್ಷೆಗಳನ್ನು ಕೊಳ್ಳಲು ಶಕ್ತಿಯಿಲ್ಲದ ಬಡ ಬಗ್ಗರಿಗೆ ಪ್ರತಿ ದಿನ ಒಂದು ಜೋಡು ಪಾದರಕ್ಷೆಯನ್ನಾದರೂ ಮಾಡಿಕೊಡಬೇಕೆಂದು ಆತ ನಿಯಮವನ್ನೇ ಹಾಕಿಕೊಂಡಿದ್ದ.

ಒಂದು ದಿನ ಕಾಶೀಯಾತ್ರೆಗಾಗಿ ಹೊರಟ ಯಾತ್ರಿಕನೊಬ್ಬ ಪಾದರಕ್ಷೆಯನ್ನು ಸರಿಪಡಿಸಿಕೊಳ್ಳಲು ರೈದಾಸನ ಬಳಿ ಬಂದ. ರೈದಾಸ ಯಾತ್ರಿಕನ ದೀನಾವಸ್ಥೆಯನ್ನು ನೋಡಿ ವಿನಾಶುಲ್ಕ ಪಾದರಕ್ಷೆಗಳನ್ನು ಸರಿಪಡಿಸಿಕೊಟ್ಟ. ಅಷ್ಟೇ ಅಲ್ಲ, ಒಂದು ಜೊತೆ ಹೊಸ ಪಾದರಕ್ಷೆಗಳನ್ನೂ ಆ ಯಾತ್ರಿಕನಿಗೆ ದಾನವಾಗಿ ಕೊಟ್ಟ. ಪಾದರಕ್ಷೆಗಳನ್ನು ಸರಿಪಡಿಸಿದ್ದಕ್ಕಾದರೂ ಸ್ವಲ್ಪ ಹಣ ತೆಗೆದುಕೊಳ್ಳಬೇಕೆಂದು ಯಾತ್ರಿಕ ಒತ್ತಾಯಪಡಿಸಿದ. ಆಗ ರೈದಾಸನು, "ಹಣ ಕೊಡುವ ಬದಲು ನನ್ನ ಒಂದು ಕೆಲಸಮಾಡಿಕೊಡಿ. ಅದೆಂದರೆ ಕಾಶಿಗೆ ಹೋದಾಗ ಈ ಎಲೆ ಹಾಗೂ ಅಡಿಕೆಯನ್ನು ಗಂಗೆಗೆ ಅರ್ಪಿಸಿರಿ," ಎಂದು ಹೇಳಿ ಎಲೆ–ಅಡಿಕೆಯನ್ನು ಯಾತ್ರಿಕನಿಗಿತ್ತ.

ಯಾತ್ರಿಕ ಗಂಗಾನದಿಯಲ್ಲಿ ಆ ಎಲೆ–ಅಡಿಕೆಯನ್ನು ಅರ್ಪಿಸಿದಾಗ, ಗಂಗಾಮಾತೆ ಪ್ರತ್ಯಕ್ಷಳಾಗಿ ಒಂದು ಬಂಗಾರದ ಬಳೆಯನ್ನು ಯಾತ್ರಿಕನಿಗೆ ಕೊಟ್ಟು ರೈದಾಸನಿಗೆ ಮುಟ್ಟಿಸುವಂತೆ ಹೇಳಿದಳು. ಯಾತ್ರಿಕ ರೈದಾಸನ ಭಗವದ್ಭಕ್ತಿಯ ಬಗೆಗೆ ಆಚ್ಚರಿಪಡುತ್ತಾ, ಕಾಶಿಯಿಂದ ಮರಳಿ ಬರುತ್ತಿರುವಾಗ ರೈದಾಸನನ್ನು ಕಂಡು ನಡೆದ ಎಲ್ಲ ಸಂಗತಿಯನ್ನೂ ವಿವರಿಸಿದ. ಆಗ ರೈದಾಸ, "ಈ ಬಂಗಾರದ ಬಳೆಯಿಂದ ನನಗೇನು ಪ್ರಯೋಜನ? ಗಂಗಾಜಲವಷ್ಟೇ ಸಾಕು," ಎಂದ. ಆದರೆ ಯಾತ್ರಿಕನ ಒತ್ತಾಯದಿಂದಾಗಿ ಆ ಬಂಗಾರದ ಬಳೆಯನ್ನು ಸ್ವೀಕರಿಸಿ ಚರ್ಮದ ಚೀಲವೊಂದರಲ್ಲಿ ಇಟ್ಟ.

ಒಂದು ದಿನ ಅಕಸ್ಮಾತ್ತಾಗಿ ಸಾಧುಗಳು ರೈದಾಸನಲ್ಲಿ ಆಗಮಿಸಿದರು. ಅತಿಥಿ ಸತ್ಕಾರಕ್ಕಾಗಿ ಸಾಕಷ್ಟು ಹಣವಿಲ್ಲದ್ದರಿಂದ ರೈದಾಸ ತನ್ನ ಊರಿನ ಅಕ್ಕಸಾಲಿಗನಿಗೆ ಬಂಗಾರದ ಬಳೆ ಕೊಟ್ಟು ತನಗೆ ಅವಶ್ಯವಿದ್ದಷ್ಟೇ ಹಣ ಪಡೆದ. ಬಹು ಸುಂದರವಾದ ಆ ಬಳೆಯನ್ನು ಸ್ವರ್ಣಕಾರ ಅರಸನಿಗೆ ಮಾರಿ ಹೇರಳವಾಗಿ ಹಣ ಪಡೆದ. ರಾಜ ಅದನ್ನು ರಾಣಿಗೆ ಕೊಟ್ಟಾಗ ಅವಳು, "ಇದೊಂದೇ ಬಳೆಯಿದ್ದರೇನು ಪ್ರಯೋಜನ ? ಇಂತಹದೇ ಇನ್ನೊಂದು ಬಳೆಯಿದ್ದರೆ ಎರಡೂ ಕೈಗಳಲ್ಲಿಯೂ ಹಾಕಬಹುದಿತ್ತಲ್ಲ" ಎಂದಳು. ಅರಸ ರಾಜ್ಯದ ಸುಪ್ರಸಿದ್ಧ ಸ್ವರ್ಣಕಾರರನ್ನು ಕರೆಸಿ ಆ ಬಂಗಾರದ ಬಳೆಯ ಪ್ರತಿಕೃತಿಯನ್ನು ತಯಾರಿಸುವಂತೆ ಆಜ್ಞಾಪಿಸಿದ. ಗಂಗಾಮಾತೆಯಿತ್ತ ಬಳೆಯ ಕಲಾಕುಸುರಿಗಳು ನಯನ ಮನೋಹರವಾಗಿದ್ದರೂ ಅಂತಹ ಬಳೆಯನ್ನು ತಯಾರಿಸುವುದು ಯಾರಿಂದಲೂ ಸಾಧ್ಯವಾಗಲಿಲ್ಲ. ಕೊನೆಗೆ ರಾಜ ತನಗೆ ಅದನ್ನು ಮಾರಿದ ಅಕ್ಕಸಾಲಿಗನನ್ನು ಪತ್ತೆ ಹಚ್ಚಿ ಕರೆಸಿದಾಗ, ಆತ ಇದು ರೈದಾಸನಿಂದ ಬಂದದ್ದೆಂದು ಹೇಳಿದ. ಅರಸ ರೈದಾಸನನ್ನು ಆಸ್ಥಾನಕ್ಕೆ ಕರೆಸಿದ.

ಗಂಗಾಮಾತೆಯಿಂದ ಅದು ದೊರೆತುದುದನ್ನು ರೈದಾಸ ವಿವರಿಸಿದಾಗ ರಾಜ ಅದನ್ನು ನಂಬಲಿಲ್ಲ. ಬದಲು, ಸಿಟ್ಟಿಗೆದ್ದು, ಇದರ ಜೊತೆಯದನ್ನು ಕೊಡದಿದ್ದರೆ ಶಿಕ್ಷಿಸುವುದಾಗಿ ಬೆದರಿಸಿದ. ರೈದಾಸ ಎಷ್ಟು ತಿಳಿಹೇಳಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ, "ಪ್ರಭು, ತಾವೇ ಬಂದು ನನ್ನ ಮನೆಯನ್ನು ಶೋಧಿಸಬಹುದು." ಎಂದು ಬೇಡಿಕೊಂಡಾಗ ಅರಸ

ಅದಕ್ಕೆ ಒಪ್ಪಿದ.

ರೈದಾಸನ ಮನೆಯಲ್ಲಿ ಶೋಧಿಸಲಾಯಿತು. ಬಂಗಾರದ ಬಳೆ ದೊರೆಯಲಿಲ್ಲ. ರೈದಾಸ ಭಕ್ತಿಪರವಶನಾಗಿ ಗಂಗೆಯನ್ನು ಸ್ತುತಿಸ ತೊಡಗಿದ. ಆಗ ಗಂಗೆ ಪ್ರತ್ಯಕ್ಷಳಾದಳು. ಅವಳ ಕೈತುಂಬ ಬಂಗಾರದ ಬಳೆಗಳಿದ್ದವು. ಅರಸ ಗಂಗೆಯನ್ನು ಕಾಣುತ್ತಲೆ ಪರಮಾಶ್ಚರ್ಯಗೊಂಡ. ಅಷ್ಟರಲ್ಲಿ ಅರಸನ ಬಳಿಯಿದ್ದ ಬಳೆಯೂ ಹಾರಿ ಹೋಗಿ ಗಂಗೆಯ ಕೈಯಲ್ಲಿ ಕುಳಿತುಕೊಂಡಿತು. ಅರಸನ ಇಚ್ಛೆಯನ್ನು ಮನ್ನಿಸಬೇಕೆಂದು ರೈದಾಸ ಗಂಗೆಯನ್ನು ಬೇಡಿಕೊಂಡ ಕೂಡಲೇ, ಆಕೆ ಅನೇಕ ಬಳೆಗಳನ್ನು ಸುರಿಸಿ ಅಂತರ್ಧಾನಳಾದಳು. ಅರಸ ರೈದಾಸನ ಕಾಲುಗಳಿಗೆ ಬಿದ್ದು, ಮಹಾಭಕ್ತನಾದ ಅವನು ತನ್ನನ್ನು ಕ್ಷಮಿಸಬೇಕೆಂದು ಬೇಡಿಕೊಂಡ.

ಇಷ್ಟು ರೈದಾಸನ ಮಹಿಮೆಯನ್ನು ಕೇಳಿ ಬ್ರಾಹ್ಮಣನೊಬ್ಬ ಬಂದ. ಆಗ ರೈದಾಸ ದೇವರ ಪೂಜೆ ಮಾಡುತ್ತಿದ್ದ. ರೈದಾಸನ ಭಕ್ತಿಯನ್ನು ಆ ಬ್ರಾಹ್ಮಣ ಮೆಚ್ಚಿದ. ಅಷ್ಟರಲ್ಲಿ ಅವನ ದೃಷ್ಟಿ ದೇವರ ಮೂರ್ತಿಗಳತ್ತ ಹೋದಾಗ ಬ್ರಾಹ್ಮಣನಿಗೆ ಆಘಾತವೇ ಆಯಿತು. ಏಕೆಂದರೆ ಮೂರ್ತಿ ಚರ್ಮದಿಂದ ಮಾಡಿದುದಾಗಿತ್ತು. ಗಂಗಾಜಲವನ್ನು ಚರ್ಮದ ಥಾಲಿಯಲ್ಲಿಯೇ ಇಡಲಾಗಿತ್ತು. ಸಾಲದ್ದಕ್ಕೆ ಶಾಲಿಗ್ರಾಮವೂ ಚರ್ಮದ ಪೆಟ್ಟಿಗೆಯಲ್ಲಿಯೇ ಇತ್ತು. ಬ್ರಾಹ್ಮಣನ ರೋಷ ನೆತ್ತಿಗೇರಿತು. ರೈದಾಸನನ್ನು ಆತ ಬಾಯಿಗೆ ಬಂದಂತೆ ಬಯ್ಯತೊಡಗಿದ. ಆಗ ರೈದಾಸ ಶಾಂತಚಿತ್ತದಿಂದ ಹೇಳಿದ, "ಸ್ವಾಮೀ, ಹಸುವಿನ ಹಾಲು ಬರುವುದೆಲ್ಲಿಂದ ? ಮಾಂಸಮಯವಾದ ಮೊಲೆಯಿಂದಲ್ಲವೇ ? ದೇವಾಲಯದಲ್ಲಿ ಪೂಜೆ ನಡೆದಾಗ ನಗಾರಿ ಬಾರಿಸುತ್ತಾರಲ್ಲ, ಅದನ್ನು ಚರ್ಮದಿಂದ ತಯಾರಿಸುತ್ತಿಲ್ಲವೇ ? ವೇದ ಮಂತ್ರಗಳನ್ನು ಉಚ್ಚರಿಸುವ ನಮ್ಮ ಬಾಯಿಗಳನ್ನು ಭಗವಂತ ಚರ್ಮದಿಂದಲೇ ಮಾಡಿಲ್ಲವೇ ?"

"ಒಣ ತತ್ವಜ್ಞಾನ ಹೇಳಬೇಡ, ನೀನೋ ಶೂದ್ರ. ಜನಿವಾರ ಧರಿಸಿದ ನಾವು ಮಾತ್ರ ಪೂಜೆ ಮಾಡಲು ಯೋಗ್ಯರು." ಎಂದ ಬ್ರಾಹ್ಮಣ.

"ಹಾಗಾದರೆ ದೇವರನ್ನು ಪೂಜಿಸುವ ಯೋಗ್ಯತೆ ನನಗೆ ಇಲ್ಲವೇ" ಎನ್ನುತ್ತ ರೈದಾಸ ಚೂರಿಯಿಂದ ಎದೆ ಸೀಳಿಕೊಂಡ. ಒಳಗೆ ಬಂಗಾರದ ಜನಿವಾರ ಥಳಥಳಿಸುತ್ತಿತ್ತು. ಬ್ರಾಹ್ಮಣನಿಗೆ ತನ್ನ ಅಜ್ಞಾನದ ಅರಿವಾಗಿ ರೈದಾಸನ ಕ್ಷಮೆ ಬೇಡಿದ.

ಬರಬರುತ್ತ ರೈದಾಸ ಭಗವಧ್ಯಾನದಲ್ಲಿಯೇ ಕಾಲ ಕಳೆಯತೊಡಗಿದ. ಹೀಗಾಗಿ ಸಂಪಾದನೆ ಕಡಿಮೆಯಾಗತೊಡಗಿತು. ಬಡತನದ ಭವಣೆ ಕಾಡುತ್ತಿದ್ದರೂ ಆತ ದೇವರ ಧ್ಯಾನದಿಂದ ವಿಮುಖನಾಗಲಿಲ್ಲ. ರೈದಾಸನ ಭಕ್ತಿಯನ್ನು ಮೆಚ್ಚಿ ಒಂದು ದಿನ ದೇವರು ಪ್ರತ್ಯಕ್ಷನಾಗಿ ಪರುಷ ಶಿಲೆಯನ್ನು ಕೊಟ್ಟ. ಅದನ್ನು ಯಾವ ವಸ್ತುವಿಗೆ ಮುಟ್ಟಿಸಿದರೂ ಅದು ಬಂಗಾರದ್ದಾಗಿಬಿಡುತ್ತಿತ್ತು. ಆದರೆ ಆತ ಅದನ್ನುಪಯೋಗಿಸದೆ ಗುಡಿಸಲಿನ ಛಾವಣಿಯಲ್ಲಿಟ್ಟ. ದೇವರು ಮತ್ತೊಮ್ಮೆ ಪ್ರತ್ಯಕ್ಷನಾಗಿ, "ಬಡತನವನ್ನೇಕೆ ಅನುಭವಿಸುತ್ತೀ? ನಾನು ಕೊಟ್ಟ ಪರುಷ ಶಿಲೆಯನ್ನೇಕೆ ಉಪಯೋಗಿಸಿಕೊಳ್ಳುವುದಿಲ್ಲ?" ಎಂದು ಕೇಳಿದಾಗ, ಹರಿಯ ಸ್ಮರಣೆಯೊಂದನ್ನು ಬಿಟ್ಟು ಉಳಿದದ್ದೇನೂ ಬೇಡ ಎಂದು ಹೇಳಿದ.

ಭಕ್ತ ಬಡತನದಲ್ಲಿರುವುದು ದೇವರಿಗೆ ಬೇಡವಾಗಿತ್ತು. ಆದ್ದರಿಂದ ಆತ, ಒಮ್ಮೆ ದೇವರ ಪೆಟ್ಟಿಗೆಯಲ್ಲಿ ಬಂಗಾರದ ನಾಣ್ಯಗಳನ್ನಿರಿಸಿದ. ಪೂಜೆ ಮಾಡುವಾಗ ಇವು ರೈದಾಸನ ಕಣ್ಣುಗಳಿಗೆ ಬಿದ್ದವು. ಬಂಗಾರದ ಮೋಹ ತನ್ನಲ್ಲಿ ಉತ್ಪನ್ನವಾಗಬಹುದೆಂದು ರೈದಾಸ ಅದನ್ನು ದೂರ ಸರಿಸಿದ. ಈ ಕ್ರಮ ಎಷ್ಟೋ ದಿನಗಳವರೆಗೆ ನಡೆದು ಸ್ವರ್ಣ ನಾಣ್ಯಗಳ ರಾಶಿಯೇ ಅಲ್ಲಿ ತಯಾರಾಯಿತು. ಆಗ ರೈದಾಸ ಅದರಿಂದ ಒಂದು ದೇವಮಂದಿರವನ್ನು ಕಟ್ಟಿಸಿದ.

ರೈದಾಸನ ದೇವಭಕ್ತಿಯನ್ನು ನೋಡಿ ಸ್ವಾಮಿ ರಮಾನಂದರು ಆತನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಅವರ ಹನ್ನ-

ರಡು ಜನ ಶಿಷ್ಯೋತ್ತಮರಲ್ಲಿ ಈತ ಅಗ್ರಗಣ್ಯನಾದ. ರೈದಾಸನ ಕೀರ್ತಿ ದಿನದಿನಕ್ಕೆ ಹಬ್ಬತೊಡಗಿತು.

ಚಿತ್ತೂರಿನ ಮಹಾರಾಣಿ ಮೀರಾಳೂ ರೈದಾಸನಿಂದ ಪ್ರಭಾವಿತಳಾದಳು. ಒಂದು ದಿನ ಅವಳು ಆತನನ್ನು ಔತಣಕ್ಕೆ ಆಹ್ವಾನಿಸಿದಳು. ಆಗ ಆತ ಪುಣ್ಯಕ್ಷೇತ್ರಗಳ ಯಾತ್ರೆಗಾಗಿ ಅಲ್ಲಿ ಸಂಚರಿಸುತ್ತಿದ್ದ. ಮೀರಾಬಾಯಿ ಆ ಔತಣಕ್ಕೆ ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ಆಮಂತ್ರಿಸಿದ್ದಳು. ಶೂದ್ರನಾದ ರೈದಾಸ ತಮ್ಮೊಡನೆ ಭೋಜನ ಮಾಡಲಿರುವುದನ್ನು ತಿಳಿದು ಅವರೆಲ್ಲ ಸಿಟ್ಟಿಗೆದ್ದರು. ಅವರು, ರೈದಾಸನಿಗಾಗಿ ಪ್ರತ್ಯೇಕ ಅಡುಗೆಯ ವ್ಯವಸ್ಥೆಯನ್ನು ಮಾಡಿಸಿದರೆ ಮಾತ್ರ ತಾವು ಭೋಜನ ಸಮಾರಂಭದಲ್ಲಿ ಭಾಗವಹಿಸುವುದಾಗಿ ಹೇಳಿ ಕಳಿಸಿದರು. ರಾಣಿ ದಿಗಿಲುಗೊಂಡು ಈ ವಿಷಯವನ್ನು ರೈದಾಸನಿಗೆ ತಿಳಿಸಿದಾಗ ಅವನು ತನಗಾಗಿ ಪ್ರತ್ಯೇಕ ವ್ಯವಸ್ಥೆಯನ್ನೇ ಮಾಡಿಕೊಡುವಂತೆ ರಾಣಿಯನ್ನು ಕೇಳಿಕೊಂಡ. ಸಮಸ್ಯೆ ಸುಸೂತ್ರವಾಗಿ ಬಗೆಹರಿಯಿತು. ಆದರೆ ಎಲ್ಲರೂ ಊಟಕ್ಕೆ ಕುಳಿತಾಗ ಒಂದು ಅದ್ಭುತ ನಡೆಯಿತು. ಎಲ್ಲರಿಗೂ ತಮ್ಮ ಬದಿಯಲ್ಲಿ ರೈದಾಸ ಕುಳಿತದ್ದು ಕಾಣಿಸಿತು. "ಎಲಾ! ಇಷ್ಟು 'ರೈದಾಸರು' ಅದೆಂತು ಬಂದರು!" ಎಂದು ಅವರೆಲ್ಲ ತಲೆ ಕೆರೆದುಕೊಂಡರು. ರೈದಾಸನ ಭಗವದ್ಭಕ್ತಿಯ ಬಗೆಗೆ ಜ್ಞಾನೋದಯವಾಗಿ ಅವರೆಲ್ಲರೂ ಆತನ ಕ್ಷಮೆ ಕೇಳಿದರು.

ಈ ರೀತಿಯಾಗಿ ಆತನ ಬಗೆಗೆ ಅನೇಕ ಕಥೆಗಳು ಹೆಣೆದುಕೊಂಡಿವೆ. ರೈದಾಸ ರಚಿಸಿದ ಭಕ್ತಿಗೀತಗಳು ಇಂದಿಗೂ ಜನಪ್ರಿಯವಾಗಿವೆ. ಗುರು ನಾನಕರು ಆತನ ನಾಲ್ವತ್ತೊಂದು ಭಕ್ತಿಗೀತಗಳನ್ನು 'ಆದಿ ಗ್ರಂಥ'ದಲ್ಲಿ ಸೇರಿಸಿಕೊಂಡಿದ್ದಾರೆ. ರೈದಾಸನ ಜೀವನದ ಬಗೆಗೆ ಹೆಚ್ಚಿನ ಅಂಶಗಳು ತಿಳಿದುಬಾರದಿದ್ದರೂ ಆತ ಜಾತಿ ವೈಷಮ್ಯವನ್ನು ನಿವಾರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ ಹಾಗೂ ಜನರಲ್ಲಿ ಭಕ್ತಿ ಭಾವನೆಯನ್ನುಂಟುಮಾಡಿದ ಎಂಬುದು ಸ್ಪಷ್ಟವಾಗಿದೆ. ಆತನ ತತ್ವ, ವಿಚಾರಗಳನ್ನು ಒಳಗೊಂಡ ಒಂದು ವೈಷ್ಣವ ಪಂಥ ಉತ್ತರ ಭಾರತದಲ್ಲಿ ಇನ್ನೂ ಇದೆ. ರೈದಾಸರು ಅಥವಾ ರವಿದಾಸರು ಎಂದು ಕರೆದುಕೊಳ್ಳುವ ಜನ ರೈದಾಸನ ತತ್ವಗಳನ್ನು ಜೀವಂತವಾಗಿರಿಸಿದ್ದಾರೆ. ಚಿತ್ತೂರಿನ ಅರಮನೆಯಲ್ಲಿನ ಮೀರಾಳ ದೇವಾಲಯದ ಸಮೀಪವೇ ರೈದಾಸನ ಸಮಾಧಿಯಿದೆ. ರವಿದಾಸರಿಗೆ ಅದು ಯಾತ್ರಾಸ್ಥಳವಾಗಿದೆ. ✡

ನಾವು ಜೀವನದ ಮೊದಲ ಅರ್ಧಭಾಗವನ್ನು ಹಳೆ ತಲೆಮಾರಿನವರನ್ನು ಅರ್ಥಮಾಡಿಕೊಳ್ಳುವುದರಲ್ಲಿ ಕಳೆಯುತ್ತೇವೆ. ಉಳಿದ ಅರ್ಧಭಾಗವನ್ನು ಹೊಸ ತಲೆಮಾರಿನವರನ್ನು ಅರ್ಥಮಾಡಿಕೊಳ್ಳುವುದರಲ್ಲಿ ಕಳೆಯುತ್ತೇವೆ

—ಆಲ್ಸ್ ವಿಲ್ಸನ್

•

ಕಾರ್ಮಿಕರಿಗೆ ಸಂಬಳ ಕೊಡುವವನು ಮಾಲಕನಲ್ಲ, ಕಾರ್ಮಿಕರು ತಯಾರಿಸಿದ ಸಿದ್ಧವಸ್ತುಗಳು ಅವರಿಗೆ ಸಂಬಳವೊದಗಿಸುತ್ತವೆ. ಮಾಲಕ ಹಣದ ವ್ಯವಹಾರವನ್ನು ನಿರ್ವಹಿಸುತ್ತಾನಷ್ಟೆ.

—ಹೆನ್ರಿ ಫೋರ್ಡ್

ನೆರುದಾ ಪ್ರಸಂಗಗಳು

ಎನ್. ಕೆ. ನರಸಿಂಹಮೂರ್ತಿ

ಮೋಜು

ಚಿಲಿಯ ವಿಶ್ವವಿಖ್ಯಾತ ಕವಿ ಪಾಬ್ಲೊ ನೆರುದಾ ಒಮ್ಮೆ ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಅವರಿಗೆ ನೋಬೆಲ್ ಪಾರಿತೋಷಕ ದೊರೆಯಬಹುದೆಂಬ ವಾರ್ತೆಯೂ ಆಗ ದಟ್ಟವಾಗಿ ಹರಡಿಕೊಂಡಿತ್ತು.

ಹೀಗಿರುವಾಗ ಒಮ್ಮೆ ಯಾರೋ ಒಬ್ಬರು, "ರಾಷ್ಟ್ರಪತಿ ಸ್ಥಾನ ಹಾಗೂ ನೋಬೆಲ್ ಪುರಸ್ಕಾರಗಳ ಪೈಕಿ ಒಂದನ್ನು ಆರಿಸಿಕೊಳ್ಳುವ ಪ್ರಮೇಯವಿದೆಯೆಂದು ಭಾವಿಸಿದರೆ ಯಾವುದನ್ನು ಆರಿಸಿಕೊಳ್ಳುತ್ತೀರಿ?" ಎಂದು ಕೇಳಿದರು.

"ಛೇ, ಛೇ, ಕಾಲ್ಪನಿಕ ಪ್ರಪಂಚಕ್ಕೆ ಸೇರಿದ ವಿಷಯಗಳ ಬಗ್ಗೆ ನಾನೇಕೆ ತಲೆ ಕೆಡಿಸಿಕೊಳ್ಳಬೇಕು?" ನೆರುದಾ ಉತ್ತರಿಸಿದರು.

"ವಾಸ್ತವಿಕವಾಗಿ ಇವೆರಡೂ ನಿಮ್ಮೆದುರಿನಲ್ಲೇ ಇವೆಯೆಂದು ಭಾವಿಸಿದರೆ?"

"ಮೋಜು ಬದಲಿಸಿ ಬೇರೆಡೆ ಕೂತುಕೊಳ್ಳುತ್ತೇನೆ." ನೆರುದಾ ಉತ್ತರಿಸಿದರು.

ವಿಗ್ರಹ

ಪಾಬ್ಲೊ ನೆರುದಾ ಪ್ಯಾರಿಸ್ಸಿನ ಕಲಾವಸ್ತುಗಳ ಅಂಗಡಿಯೊಂದರಲ್ಲಿ ವಿಗ್ರಹಗಳನ್ನು ವೀಕ್ಷಿಸುತ್ತಿದ್ದಾಗ ಲೆನಿನ್ನನ ಒಂದು ಭಗ್ನವಾದ ಸುಂದರ ವಿಗ್ರಹ ಕಣ್ಣಿಗೆ ಬಿತ್ತು. ಬೆಲೆ ಎಷ್ಟೆಂದು ಅವರು ಅಂಗಡಿಯ ಮಾಲಿಕನನ್ನು ಕೇಳಿದಾಗ, "ಬೆಲೆ ಎಷ್ಟಾದರೇನು ಸ್ವಾಮಿ? ಅದು ನನ್ನ ಸ್ವಂತದ್ದು. ಮಾರಲು ಇಷ್ಟಪಡುವುದಿಲ್ಲ." ಎಂದು ಉತ್ತರಿಸಿದ.

ನೆರುದಾ ಅವನೊಡನೆ ಆ ಮಾತು ಈ ಮಾತು ಆಡುತ್ತಿದ್ದಾಗ ಅಂಗಡಿಯವನಿಗೆ ಈ ಮನುಷ್ಯ ಚಿಲಿ ದೇಶದವ ಎಂಬುದು ಗೊತ್ತಾಯಿತು.

"ಏನು ಸ್ವಾಮಿ, ನಿಮಗೆ ಪಾಬ್ಲೊ ನೆರುದಾ ಗೊತ್ತಾ?" ಆತ ಪ್ರಶ್ನಿಸಿದ.

"ಓ? ಗೊತ್ತಿರದೆ ಏನು? ಆತ ನನ್ನ ಬಾಲ್ಯ ಸ್ನೇಹಿತ." ನೆರುದಾ ಉತ್ತರಿಸಿದರು.

ಆ ವಿಗ್ರಹ ಅವರಿಗೆ ಮುಫತ್ತಾಗಿ ದೊರಕಲು ತಡವಾಗಲಿಲ್ಲ.


ಬೆಂಕಿ

ತಮ್ಮ ಪುಸ್ತಕಾಲಯಕ್ಕೆ "ಇದ್ದಕಿದ್ದಂತೆ ಬೆಂಕಿ ಬಿದ್ದರೆ ತಾವು ಬರೆದ ಪುಸ್ತಕಗಳ ಪೈಕಿ ಯಾವ ಪುಸ್ತಕವನ್ನು ಮೊದಲು ರಕ್ಷಿಸುವಿರಿ?' ಎಂದು ಪಾಬ್ಲೊ ನೆರುದಾರನ್ನು ಅಭಿಮಾನಿಯೊಬ್ಬ ಕೇಳಿದ.

"ಯಾವುದನ್ನೂ ರಕ್ಷಿಸುವುದಿಲ್ಲ."

"ಏಕೆ?"

"ಏಕೆಂದರೆ ನನಗೆ ಅವುಗಳ ಆವಶ್ಯಕತೆಯಿಲ್ಲ. ಆದರ ಬದಲು ನಾನೊಬ್ಬ ಹುಡುಗಿಯನ್ನೊ ಸಾಕುಪ್ರಾಣಿಯನ್ನೊ ಕೊನೆಗೆ ನನಗೆ ಇಷ್ಟವಾದ ಯಾವುದಾದರೂ ಒಂದು ಪತ್ತೇದಾರಿ ಕಾದಂಬರಿಯನ್ನೊ ರಕ್ಷಿಸಿದರೆ ಮನಸ್ಸಿಗೆ ಆಹ್ಲಾದವೆನಿಸುವುದು" ನೆರುದಾ ಉತ್ತರಿಸಿದರು. ✡



ಕರ್ನಾಟಕ ರಾಜ್ಯ ಲಾಟರಿ
ಯುಗಾದಿ
ಬಂಪರ್ ಡ್ರಾ
13-4-1975
ರೂ.18,77,160 ಮೊತ್ತದ
8601 ಆಕರ್ಷಕ ಬಹುಮಾನಗಳು
ವಿಶೇಷ ಬಹುಮಾನ
ರೂ.5,00,000
2 ಸಮಾಧಾನ ಬಹುಮಾನಗಳು
6 ಮೊದಲನೆಯ ಬಹುಮಾನಗಳು
ರೂ.1,00,000
12 ಸಮಾಧಾನ ಬಹುಮಾನಗಳು
6 ಎರಡನೆಯ ಬಹುಮಾನಗಳು
12 ಸಮಾಧಾನ ಬಹುಮಾನಗಳು
ರೂ.10,000
6 ಮೂರನೆಯ ಬಹುಮಾನಗಳು
12 ಸಮಾಧಾನ ಬಹುಮಾನಗಳು
ರೂ.5,000
96 ನಾಲ್ಕನೆಯ ಬಹುಮಾನಗಳು
192 ಸಮಾಧಾನ ಬಹುಮಾನಗಳು
ರೂ.1,000
192 ಐದನೆಯ ಬಹುಮಾನಗಳು
384 ಸಮಾಧಾನ ಬಹುಮಾನಗಳು
ರೂ.500
960 ಆರನೆಯ ಬಹುಮಾನಗಳು
1920 ಸಮಾಧಾನ ಬಹುಮಾನಗಳು
ರೂ.100
4800 ಏಳನೆಯ ಬಹುಮಾನಗಳು
ರೂ.50
ಬಂಪರ್ ಮತ್ತು ಮೊದಲ ಆರು ಬಹುಮಾನಗಳನ್ನು ಪಡೆದ ಟಿಕೇಟುಗಳ ಹಿಂದಿನ ಹಾಗೂ ಮುಂದಿನ ಸಂಖ್ಯೆಯ ಟಿಕೇಟುಗಳಿಗೆ ಸಮಾಧಾನ ಬಹುಮಾನಗಳನ್ನು ನೀಡಲಾಗುವುದು.
ಮೈಸೂರು ಸೇಲ್ಸ್
ಇಂಟರ್‌ನ್ಯಾಷನಲ್ ಲಿಮಿಟೆಡ್
(ಲಾಟರಿ ವಿಭಾಗ)
ಬೆಂಗಳೂರು-560 052. ಫೋನ್ 26713

ಮಾರ್ಚ 1975



ಔರಂಗಜೇಬ

ಔರಂಗಜೇಬ

[ದಿ. ಕೆರೂರ ವಾಸುದೇವಾಚಾರ್ಯರು ಹೊಸಗನ್ನಡದ ಆದ್ಯ ಕಾದಂಬರಿಕಾರರಲ್ಲಿ ಪ್ರಮುಖರು. ಅರ್ಹತೆಯಿಂದ ವಕೀಲರಾಗಿದ್ದರೂ ಪತ್ರಿಕಾ ವ್ಯವಸಾಯವನ್ನೇ ಆಯ್ದುಕೊಂಡು ಕನ್ನಡ ಸಾಹಿತ್ಯಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕಥೆ, ಪ್ರಬಂಧ, ಕಾದಂಬರಿ-ನಾಟಕಗಳನ್ನು ನೀಡಿ ತಾವೊಬ್ಬ ಪ್ರತಿಭಾಸಂಪನ್ನ ಸಾಹಿತಿ ಎಂಬುದನ್ನು ಸಿದ್ಧಪಡಿಸಿ ತೋರಿಸಿದ್ದಾರೆ. 'ಸಚಿತ್ರ ಭಾರತ' ಮತ್ತು 'ಶುಭೋದಯ' ಪತ್ರಿಕೆಗಳ ಸಂಪಾದಕರಾಗಿದ್ದಾಗ ಅವನ್ನು ತಮ್ಮ ಈ ಸಾಹಿತ್ಯ ಸಿರಿಯನ್ನು ಸಂಪನ್ನವಾಗಿಸಿದರು. ಅವರ ಪ್ರಥಮ ಕಾದಂಬರಿ 'ಇಂದಿರೆ'ಯು ಆಗ ಲೋಕಪ್ರಿಯತೆಯ ಶಿಖರಕ್ಕೇರಿತು. 'ವಾಲ್ಮೀಕಿವಿಜಯ'- 'ಯದುಮಹಾರಾಜ,' ಯವನಸ್ವೈರಂಧ್ರಿ' 'ಭ್ರಾತೃಘಾತಕನಾದ ಔರಂಗಜೇಬ' ಇವು ವಾಸು-ದೇವಾಚಾರ್ಯರ ಐತಿಹಾಸಿಕ ಕಾದಂಬರಿಗಳು. 'ಯವನಸ್ವೈರಂಧ್ರಿ'ಯ ಸವಿಯನ್ನು ಕಸ್ತೂರಿಯ ವಾಚಕರು ಈಗಾಗಲೇ ಸವಿದಿದ್ದಾರೆ (೧೯೬೮ ಡಿಸೆಂಬರ). ಅದು ಅಕಬರನ ಕಾಲದ ಕಥೆಯಾಗಿದ್ದರೆ ಇದು ಮೊಗಲ ಚಕ್ರವರ್ತಿಗಳಲ್ಲಿ ಪ್ರಾಯಶಃ ಕೊನೆಯವನಾದ 'ಭ್ರಾತೃಘಾತಕ ಔರಂಗಜೇನ' ಕುಟಿಲ ಕಾರಸ್ಥಾನಗಳ ಕುರಿತಾದ ಕಥಾನಕ. ತುಟಿಯಲ್ಲಿ ಜೇನು, ಒಡಲಲ್ಲಿ ಹಾಲಾಹಲ ಇದ್ದವನಾದ ಈ ಕಾರ್ಯಸಾಧುವು ತನ್ನ ಮೂವರು ಸೋದರರನ್ನು ಬಗ್ಗು ಬಡೆದು ತಾನೇ ಹೇಗೆ ದಿಲ್ಲಿ ಸಿಂಹಾಸನವನ್ನೇರಿದ ಎಂಬುದನ್ನು ವಾಸುದೇವಾಚಾರ್ಯರು ಚಿತ್ತವೇಧಕವಾಗಿ ಇಲ್ಲಿ ಚಿತ್ರಿಸಿದ್ದಾರೆ.]

ಮೊಗಲ ಚಕ್ರವರ್ತಿ ಶಹಾಜಹಾನನ ಕಾಲಕ್ಕೆ ದಿಲ್ಲಿ ಸಾಮ್ರಾಜ್ಯವೆಂದರೆ ಸಕಲಾರ್ಥಗಳನ್ನೀವ ಕಲ್ಪವೃಕ್ಷವೇ ಆಗಿತ್ತು. ಸುವರ್ಣಭೂಮಿಯೆಂದೆನ್ನಿಸಿಕೊಳ್ಳುವ ನಮ್ಮ ಹಿಂದುಸ್ತಾನ ದೇಶವು ಕಂದಾಯದ ರೂಪದಿಂದ ಬಾದಶಹನ ಮೇಲೆ ಸುವರ್ಣವೃಷ್ಟಿ ಕರೆಯುತ್ತಿತ್ತೆಂದು ಹೇಳಿದರೆ ವಿಪರೀತವಾಗಿ ಕಾಣಲಿಕ್ಕಿಲ್ಲ. ಗೋವಳಕೊಂಡ ಮುಂತಾದ ಗಣಿಗಳಲ್ಲಿ ಸಿಕ್ಕುವ ಅನರ್ಘ್ಯ ರತ್ನರಾಶಿಗಳೆಲ್ಲ ದಿಲ್ಲೀಶ್ವರನ ಸ್ವಾಧೀನವಾಗುತ್ತಿದ್ದವು. ದ್ವೀಪಾಂತರಗಳ ವ್ಯಾಪಾರಸ್ಥರು ಇಲ್ಲಿಯ ಸರಕುಗಳ ಆಶೆಯಿಂದ ತಮ್ಮಲ್ಲಿಯ ಸುಖೋಪಭೋಗದ ವಸ್ತುಗಳನ್ನು ತಂದು ಸುರಿಯುತ್ತಿದ್ದರು.

ಇಂಥ ಸಮೃದ್ಧ ಸಾಮ್ರಾಜ್ಯವನ್ನು ಉಪಭೋಗಿಸುತ್ತಿದ್ದ ಶಹಾಜಹಾನನು ಸುಖೋಪಭೋಗ ಪ್ರಿಯನು. ಅಲ್ಲದೆ ಆ ದೈವಶಾಲಿಯ ಆಡಳಿತದಲ್ಲಿ ಮಂತ್ರಿಗಳು ಚತುರರೂ, ಸೇನಾನಾಯಕರು ಚಂಡವಿಕ್ರಮರೂ, ವೈಶ್ಯರು ಸಾಹಸಿಗಳೂ ಆಗಿದ್ದರು. ತಾಜ ಮಹಾಲನಂಥ ವಿಶ್ವವಿಖ್ಯಾತ ಕಟ್ಟಡಗಳು ನಿರ್ಮಾಣವಾದವು. ಮಯೂರ ಸಿಂಹಾಸನವೂ ದಿಲ್ಲೀ

ಶ್ವರನ ವೈಭವವನ್ನು ಸಾರುತ್ತ ಜನರನ್ನು ಆಕರ್ಷಿಸುತ್ತಿದ್ದಿತು.

ಶಹಾಜಹಾನನಿಗೆ ಆರು ಜನ ಮಕ್ಕಳು, ದಾರಾ, ಸುಜಾ, ಔರಂಗಜೇಬ, ಮುರಾದ ನಾಲ್ವರು ಗಂಡು ಮಕ್ಕಳಾದರೆ ಬೇಗಮ ಮತ್ತು ರೋಶನಾರಾ ಪುತ್ರಿಯರು. ಚಕ್ರವರ್ತಿ ಕನ್ಯೆಯರನ್ನು ವಿವಾಹವಾಗುವ ಅಂತಸ್ತಿನ ಯೋಗ್ಯರು ದೊರೆಯದ್ದರಿಂದ ಬೇಗಮ ಮತ್ತು ರೋಶನಾರ ಇಬ್ಬರಿಗೂ ವಿವಾಹವಾಗಿರಲಿಲ್ಲ. ಅವರ-ಪ್ರಣಯ ಪ್ರಕರಣಗಳು ಬಯಲಿಗೆ ಬಂದರೆ ಅವರ ಪ್ರೇಮಿಂಗಳು ಸಾವನ್ನಪ್ಪಬೇಕಾಗುತ್ತಿತ್ತು. ಹೀಗಾಗಿ ಈ ಕನ್ಯೆಯರಿಬ್ಬರ ಜೀವನ ಅಂತಃಪುರದಲ್ಲಿ ಹಾಗೂ ಹೀಗೂ ಸವೆಯುತ್ತಿತ್ತು.

ವಜೀರ ಸಾದುಲ್ಲಾಖಾನನು ಅತ್ಯಂತ ದಕ್ಷನಾಗಿದ್ದುದರಿಂದ ಶಹಾಜಹಾನನು ತನ್ನ ಸಾಮ್ರಾಜ್ಯದ ಆಡಳಿತದ ಕಡೆಗೆ ಅಷ್ಟೊಂದು ಲಕ್ಷ್ಯ ಹಾಕುತ್ತಿರಲಿಲ್ಲ. ಆದರೂ ತನ್ನನ್ನು ಕೇಳದೆ ಯಾವ ಕೆಲಸ ಆಗಕೂಡದು ಎಂಬ ಹಟ ಆತನಿಗೆ. ಹಿರಿಯವನಾದ ದಾರಾ ಯವನ-ಹಿಂದೂ ಧರ್ಮಗಳನ್ನು ಅಭ್ಯಾಸದಿಂದ ತಿಳಿದವನಾಗಿದ್ದು ತಂದೆಯ ಪ್ರೀತಿ ಪಾತ್ರನಾಗಿದ್ದನು. ಎರಡನೆಯವನಾದ ಸುಜಾ ಬರಿ ವೀರ ಯೋಧ, ಮೂರನೆಯವನಾದ ಔರಂಗಜೇಬ ಕಪಟಿ, ಕುತಂತ್ರಿ, ಇಸ್ಲಾಂ ಧರ್ಮದ ಅಭಿಮಾನಿ, ಜೊತೆಗೆ ಶೂರನೂ ಆಗಿದ್ದ. ಕೊನೆಯವನಾದ ಮುರಾದ ತಂದೆಯಂತೆ ಸುಖೋಪಭೋಗಿ ಅಲ್ಲದೆ ವೀರನೂ ಆಗಿದ್ದ. ಶಹಾಜಹಾನನ ಆಳಿಕೆಯ ಕೊನೆಯ ಭಾಗದಲ್ಲಿ ಈ ನಾಲ್ವರೂ ಪ್ರಬುದ್ಧರಾಗಿದ್ದು ನಾಲ್ವರೂ ದಿಲ್ಲಿ ಸಿಂಹಾಸನದ ಮೇಲೆ ಕಣ್ಣಿಟ್ಟಿದ್ದರು. ಶಹಾಜಹಾನನು ಆಗ್ರಾದಲ್ಲಿ ತನ್ನ ರಾಜಧಾನಿಯನ್ನಿಟ್ಟುಕೊಂಡಿದ್ದರಿಂದ ಆಗ ದಿಲ್ಲಿಗೆ ಅಷ್ಟೊಂದು ಮಹತ್ವ ಇರಲಿಲ್ಲ.

ಜಹಾಂಗೀರನು ತನ್ನ ತಂದೆಯನ್ನು ಎದುರು ಹಾಕಿಕೊಂಡಂತೆ ತನ್ನ ನಾಲ್ವರು ಮಕ್ಕಳೂ ಸಿಂಹಾಸನದ ಆಶೆಯಿಂದ ತನ್ನ ವಿರುದ್ಧ ಬಂಡೆದ್ದು ಮೇಲೆತ್ತು ನಿಂತರೆ ಏನು ಗತಿ ಎಂದು ಶಹಾಜಹಾನನು ಯಾವಾಗಲೂ ಚಿಂತಾಕ್ರಾಂತನಾಗಿರುತ್ತಿದ್ದನು. ಪತ್ನಿ ಮುಮತಾಜಳ ವಿಯೋಗದಿಂದ ಜರ್ಜರಿತನಾದ ಈತನನ್ನು ಈ ಚಿಂತೆ ಹೃದ್ರೋಗದಂತೆ ಕಾಡುತ್ತಿತ್ತು. ಹಿರಿಮಗಳಾದ ಬೇಗಮಳು ಶಹಾಜಹಾನನ ಯೋಗ-ಕ್ಷೇಮವನ್ನು ನೋಡಿಕೊಳ್ಳುತ್ತಿದ್ದಳು, ಶಹಾಜಹಾನನಂತೆ ಆಕೆಯೂ ಪಂಡಿತವರ್ಯನೂ ಶೂರ ಸೇನಾನಿಯೂ ಆದ ದಾರಾನ ಪಕ್ಷಪಾತಿ.

ಅಕ್ಕತಂಗಿಯರಾಗಿದ್ದರೂ ಬೇಗಮ-ರೋಶನಾರೆಯರ ಸ್ವಭಾವದಲ್ಲಿ ಅಜಗಜಾಂತರ ವ್ಯತ್ಯಾಸ. ಬೇಗಮ ಎಷ್ಟು ಸರಳ ಅಷ್ಟೇ ರೋಶನಾರೆ ಕಪಟಿ. ಅಂತೇ ಆಕೆಯು ಔರಂಗಜೇಬನ ಬೆನ್ನುಕಟ್ಟುತ್ತಿದ್ದಳು. ತಾನು ಚಕ್ರವರ್ತಿಯಾದರೆ ರೋಶನಾರೆಗೆ ಅವಳಿಚ್ಛಿಸಿದವನನ್ನು ವಿವಾಹವಾಗಲು ಅನುಮತಿ ನೀಡುವದಾಗಿ ಔರಂಗಜೇಬ ಆಕೆಗೆ ಭರವಸೆ ನೀಡಿದ್ದ. ಇದೂ ಆಕೆಯನ್ನು ಅವನತ್ತ ಸೆಳೆದಿದ್ದಿತು. ಅಲ್ಲದೆ ಔರಂಗಜೇಬನು ತನ್ನ ಸವಿ ಮಾತುಗಳಿಂದ ತಂದೆಯ ಪ್ರೀತಿಯನ್ನೂ ಗಳಿಸಿದ್ದ. ದಾರಾ ಹಿಂದೂ ಧರ್ಮ ಪಕ್ಷಪಾತಿಯಾಗಿ 'ಕಾಫರ'ನಾಗಿ ಇದ್ದಾನೆ. ಆತನಿಗೆ ಸಿಂಹಾಸನ ದೊರೆಯಬಾರದು ಎಂದೂ ಔರಂಗಜೇಬನ ವಾದ. ಸುಜಾ ಮುರಾದರೂ ತಮ್ಮ ತಮ್ಮ ಕೈಲಾದ ರೀತಿಯಲ್ಲಿ ಸಿಂಹಾಸನ ಆಕ್ರಮಿಸಲು ಆಲೋಚನೆ ನಡೆಸಿದ್ದರು. ಆದರೆ ದಿಲ್ಲಿ ಸಿಂಹಾಸನಕ್ಕಾಗಿ ನಿಜವಾದ ಸ್ಪರ್ಧೆ ನಡೆದುದು ದಾರಾ-ಔರಂಗಜೇಬರಲ್ಲಿ ಎಂದು ಹೇಳಬೇಕು.

ಮೂವತ್ತೆರಡು ವರ್ಷದ ಔರಂಗಜೇಬನು ದೃಢಕಾಯದವನಾಗಿ ಉತ್ಸಾಹಿಯಾಗಿದ್ದನು. ಡಾಂಭಿಕತನಕ್ಕಾಗಿ ತೊಟ್ಟ ಸಾಧುವೇಷದಿಂದ, ಮೇಲುಪಚಾರಗಳಿಂದ ವಂಚಕರನ್ನು ಕೂಡ ವಂಚಿಸಿ ತನ್ನ ಕಪಟವನ್ನು ಅಡಗಿಸಿಕೊಳ್ಳಬಲ್ಲವನಾಗಿದ್ದನು.

ತನ್ನ ಅಂತಃಪುರಕ್ಕೆ ಬಂದ ಔರಂಗಜೇಬನನ್ನು ರೋಶನಾರೆ ಆದರದಿಂದಲೇ ಸ್ವಾಗತಿಸಿದಳು. ಕ್ಷೇಮ ಸಮಾಚಾರದ ಮಾತುಗಳಾದ ನಂತರ,

"ತಂದೆಯವರ ಪಶ್ಚಾತ್ ನೀನು ದಿಲ್ಲಿ

ಬಾದಶಹನಾಗಬೇಕೆಂದು ಹವಣಿಸುತ್ತಿರುವಿಯಲ್ಲವೆ" ಎಂದು ಅಣ್ಣನನ್ನು ಕೇಳಿದಳು.

"ಮನಸ್ಸಿನಲ್ಲಿ ಮಂಡಿಗೆ ತಿಂದರೆ ಗೋದಿ ಲೆಕ್ಕ ಕೊಡುವವರಾರು? ದಾರಾ ಹಿರಿಯ. ಬಾದಶಹರ ಪ್ರೇಮ ಅವನ ಮೇಲೆ ಬಹಳ. ಅವನೇ ಮುಂದಾಗತಕ್ಕ ಸಾರ್ವಭೌಮ ಎಂದು ತಂದೆಯವರು ಈಗಿನಿಂದಲೇ ಸಾರುತ್ತಿರುವರು."

"ಅಣ್ಣಾ, ನಿನ್ನಂಥ ಸಾಹಸಿಯೂ ಪರಾಕ್ರಮಿಯೂ ದೀರ್ಘೋದ್ಯೋಗಿಯೂ ಆಗಿರುವ ರಾಜಕುಮಾರನು ಹಿಂದುಸ್ತಾನದ ಚಕ್ರವರ್ತಿ ಆಗಲಿಕ್ಕೇ ಹುಟ್ಟಿರುವನೆಂದು ನಾನು ದೃಢವಾಗಿ ನಂಬುತ್ತೇನೆ."

"ಈ ಗುಣಗಳಿಲ್ಲದೇ ತಂದೆಯವರು ದಿಲ್ಲಿ ಬಾದಶಹರಾಗಲಿಲ್ಲವೆ? ದಾರಾ ವೀರನೂ ಪಂಡಿತನೂ ಆಗಿರುವನಲ್ಲದೆ ಅಕಬರ ಬಾದಶಹನ ಅವತಾರವೇ ಎಂದು ಎಲ್ಲರೂ ತರ್ಕಿಸುತ್ತಿರುವರು. ಇಂಥವನನ್ನು ನಾನು ಹಿಂದೆ ನೂಕಿ ಬಾದಶಹನಾಗುವೆವೆಂಬ ವಿಚಾರ ಮೂರ್ಖತನದ್ದು."

"ಅಣ್ಣಯ್ಯಾ, ನಾನು ನಿನ್ನ ತಂಗಿಯೇ ಇರುವೆನು. ನನ್ನ ಮುಂದೆ ನಿನ್ನ ಆಟವೇ?"

"ರೋಶನ್, ನಿನ್ನ ಅಭಿಪ್ರಾಯವಾದರೂ ಏನು ?

"ದಾರಾವೇನು ಗುಣಿಯೋ? ಅವನಂಥ ಕ್ರೂರ ಕೊಲೆಗಡಕ ಇನ್ನಾರೂ ಇಲ್ಲ. ಪಂಡಿತನೆಂದು ರಾಜನಾಗಬೇಕಾದರೆ ದೇಶದ ಕಾಜಿ ಮುಲ್ಲಾಗಳೇ ರಾಜರಾಗಬೇಕು. ನನಗಂತೂ ಆತನನ್ನು ಕಂಡರಾಗದು."

"ತಂಗಿ, ನಿನ್ನ ರಹಸ್ಯ ಬಯಲಿಗೆಳೆದ ದಾರಾ ದೋಷಿ. ಆದರೆ ಪ್ರೀತಿಯ ಯುವರಾಜನನ್ನು ಶಿಕ್ಷಿಸುವದು ಹೇಗೆ ? ಆತ ತಂದೆಯ ಪ್ರೀತಿ ಕಳೆದುಕೊಳ್ಳುವಂತೆ ಮಾಡಬೇಕು. ನಿನಗೆ ಸಾಧ್ಯವೆ?"

"ಅದೇನು ನನಗೆ ಅಸಾಧ್ಯವೆ ? ನನಗಿಂತ ನೀವು ನಿಶ್ಚಯಿಗಳಾಗುವದು ಶ್ರೇಯಸ್ಕರ"

"ಶಹಬ್ಬಾಸ ಶಹಜಾದಿ, ಇಂದಿನಿಂದ ನೀನು ನನ್ನ ಗುರು. ನಿನ್ನ ಸಹಾಯದಿಂದಲೇ ನನ್ನ ಇಷ್ಟಾರ್ಥ ಸಾಧಿಸಬೇಕೆಂದು ಅಲ್ಲಾನ ಇಚ್ಛೆಯಿರುವದಾಗಿ ಕಾಣುತ್ತದೆ."

"ನೀನು ಚಿಂತಿಸಬೇಡ. ನೀನು ದಕ್ಷಿಣಕ್ಕೆ ಹೋದರೂ ಇಲ್ಲಿಯ ರಹಸ್ಯಗಳನ್ನೆಲ್ಲ ನಾನು ನಿನಗೆ ತಿಳಿಸುತ್ತಲೇ ಇರುತ್ತೇನೆ. ದಾರಾನ ವಿಚಾರ ನನಗೆ ಬಿಟ್ಟುಬಿಡು.

"ಹಿಂದುಗಳ ಬೆನ್ನು ಕಟ್ಟುವ ಕಾಫರ ದಾರಾ ನನ್ನು ಚಕ್ರವರ್ತಿಯಾಗಿ ಆಳಗೊಡುವದಕ್ಕಿಂತ ಆತನನ್ನು ಸಂಹರಿಸುವದೇ ಪುಣ್ಯದ ಕೆಲಸವಾದೀತು."

"ಹೀಗೆ ಮಾತಾಡಬಾರದೇ ಬಹದ್ದುರನೆ"

ರೋಶನಾರಾ ತನ್ನ ಪಕ್ಷಕ್ಕೆ ಸಂಪೂರ್ಣವಾಗಿ ಸೇರಿದಳೆಂದು ಔರಂಗಜೇಬ ಅಲ್ಲಿಂದ ಹೊರ ಹೊರಟ.

*

ದಿಲ್ಲಿಯ ಜುಮ್ಮಾಮಸೀದೆಯಲ್ಲಿ ರಾಜಮನೆತನದವರೆಲ್ಲ ನಮಾಜಿಗಾಗಿ ಸೇರಿದ್ದಾಗ ಅಲ್ಲಿಯ ಮುಲ್ಲಾ ಅಕಬರ ಬಾದಶಹರ ದೀನ ಇಲಾಹಿ ಪಂಥದ ಟೀಕೆ ಮಾಡಿದರು. ಅವನ ದುರಭಿಮಾನ ಕಂಡು ದಾರಾ ನಕ್ಕನು. ಶಹಾಜಹಾನನಿಗೆ ಇದರಿಂದ ನೋವಾಯಿತು. ಮಗ ಹಿಂದೂ ಧರ್ಮದ ಬೆನ್ನುಕಟ್ಟುತ್ತಿದ್ದಾನೆ ಎಂದು ಪರಿತಪಿಸಿದ.

ಮಧ್ಯಾಹ್ನ ವಿಶ್ರಾಂತಿ ಸಮಯದಲ್ಲಿ ರೋಶನಾರಾಳನ್ನು ಶಹಾಜಹಾನ ಕೇಳಿದ.

"ದಾರಾಶಹಾನ ಧರ್ಮ ವಿಚಾರಗಳು ಹೇಗಿವೆ ನಿನಗೆ ಗೊತ್ತೆ?

"ನನಗೇನು ತಿಳಿಯಬೇಕು."

"ಹಿಂದೂ ಧರ್ಮ ಪಕ್ಷಪಾತಿಯಾದ ಆತನನ್ನು ಜನ ಆದರಿಸುವುದೊ ಇಲ್ಲವೊ ಎಂಬ ಶಂಕೆ."

"ನೀವು ಇಲ್ಲದಂತಾದ ಬಳಿಕ ರಾಜ್ಯಕ್ಕೆ ಏನಾದರೇನು ? ದಾರಾಶಹಾ ಮುಸಲ್ಮಾನ ಧರ್ಮಕ್ಕೆ ಪ್ರತಿಕೂಲನಾದರೆ ತನ್ನ ಫಲಭೋಗ ತಾನುಣ್ಣುವನು."

"ಹೀಗೇಕೆ ಆಡುತ್ತಿ, ಮಗಳೆ ?"

"ಇನ್ನೇನು ಮಾಡಲಿ, ಆತನನ್ನು ಬಿಟ್ಟು ಕಿರಿಯವನೊಬ್ಬನಿಗೆ ನೀವು ಪಟ್ಟಗಟ್ಟಲಿಕ್ಕಾಗುವದಿಲ್ಲವಷ್ಟೆ?"

"ಹಾಗೂ ಮಾಡಬಹುದು."

"ಹಾಗಾದರೆ ಔರಂಗಜೇಬನೇ ಸಾರ್ವಭೌಮನಾಗಲಿಕ್ಕೆ ಯೋಗ್ಯ ಎಂದು ನನ್ನ ಅಭಿಪ್ರಾಯ"

ಈ ಚರ್ಚೆಗೆ ಬೇಸತ್ತ ಶಹಾಜಹಾನ ಅಲ್ಲಿಗೇ ಮಾತು ಮುಗಿಸಿದ. ರಾಜ ಪರಿವಾರ ಮರುದಿನ ಆಗ್ರಾಕ್ಕೆ ಬಂದಿತು.

ಆಗ್ರಾದಲ್ಲಿ ಶಹಾಜಹಾನನು ದಾರಾನ ಮಗ ಸುಲೇಮಾನನನ್ನು ಕರೆಸಿಕೊಂಡು ಆತನ ಅಭಿಪ್ರಾಯ ತಿಳಿದುಕೊಳ್ಳ ಬಯಸಿದ.

"ಸಿಂಹಾಸನಕ್ಕಾಗಿ ನಿನ್ನ ತಂದೆ ಚಿಕ್ಕಂದಿರಲ್ಲಿ ವ್ಯಾಜ್ಯ ಪ್ರಾರಂಭವಾಗಿದೆಯಲ್ಲ"

"ನ್ಯಾಯವಾದ ವಾರಸದಾರರಾದ ನಮ್ಮ ತಂದೆಯವರು ಜಗಳಾಡಲು ಕಾರಣವೇ ಇಲ್ಲ" ಎಂದು ಸುಲೇಮಾನ ಸಮರ್ಥಿಸಿಕೊಂಡ.

"ನಿಮ್ಮ ತಂದೆ ಹಿಂದೂ ಪಂಡಿತರೊಡನೆ ಚರ್ಚೆ ಮಾಡುತ್ತಾನೆ ಎಂದು ಆಕ್ಷೇಪಗಳು ಬಂದಿವೆ."

"ಅವರ ವಿಚಾರಗಳನ್ನು ತಿಳಿದುಕೊಳ್ಳದೆ ಅವನ್ನು ಹೇಗೆ ಖಂಡಿಸಲು ಬಂದೀತು. ವೃಥಾಭಿಮಾನಿಗಳಿಗಿಂತಲೂ ನನ್ನ ತಂದೆಯ ಮಾರ್ಗವೆ ಶ್ರೇಯಸ್ಕರ. ಅದು ಅಲ್ಲದೆ ತಂದೆಯವರೇ ನನಗೆ ಕುರಾಣದ ತತ್ವಗಳನ್ನು ಬೋಧಿಸುತ್ತಾರೆ. ಅಂದ ಮೇಲೆ ಅಪನಂಬಿಕೆಗೆ ಎಡೆ ಎಲ್ಲಿದೆ ?"

"ನನ್ನ ಚಿಂತೆ ಪರಿಹಾರವಾಯಿತು. ಇಲ್ಲದಿದ್ದರೆ ನಿನ್ನನ್ನೇ ನನ್ನ ಉತ್ತರಾಧಿಕಾರಿಯನ್ನಾಗಿ ಮಾಡುತ್ತಿದ್ದೆ."

"ಹಾಗೆ ಆಕ್ರಮವಾಗಿ ಬಂದ ಸಿಂಹಾಸನವನ್ನು ಎಂದಿಗೂ ಮುಟ್ಟುತ್ತಿದ್ದಿಲ್ಲ."

"ಈಗ ಆ ಮಾತೇ ಉಳಿದಿಲ್ಲವಲ್ಲ" ಎಂದು

ಶಹಾಜಹಾನನು ಸಮಾಧಾನದ ನಿಟ್ಟುಸಿರಿಟ್ಟ.

ಶಹಾಜಹಾನನು ವಜೀರ ಸಾದುಲ್ಲಾಖಾನನೊಡನೆ ಆಪ್ತಾಲೋಚನೆ ನಡೆಸಿ ರಾಜಪುತ್ರರಲ್ಲಿಯ ಜಗಳ ಬಗೆಹರಿಸಲು ಒಂದು ಉಪಾಯ ಹುಡುಕಿದನು. ನಾಲ್ವರೂ ರಾಜಕುಮಾರರು ದಿಲ್ಲಿ ಆಗ್ರಾ ಪಟ್ಟಣಗಳಲ್ಲಿಯೆ ತಳವೂರಿ ಕುಳಿತು ಬಿಟ್ಟರೆ ಅವರ ಕಾರಸ್ಥಾನಗಳಿಗೆ ಭರತಿ ಬಂದು ತಾಗುವದು. ಆದ್ದರಿಂದ ಹಿರಿಯುವನಾದ ದಾರಾ ಶಹಾನನ್ನು ತನ್ನ ಹತ್ತರ ಉಳಿಸಿಕೊಂಡು ಸುಜಾನನ್ನು ಬಂಗಾಲಕ್ಕೂ ಔರಂಗಜೇಬನನ್ನು ದಕ್ಷಿಣದ ದೌಲತಾಬಾದಕ್ಕೂ ಮುರಾದನನ್ನು ಗುಜರಾಥದ ಅಹಮ್ಮದಾಬಾದಿಗೂ ಸುಭೇದಾರರನ್ನಾಗಿ ಕಳಿಸಿಬಿಡಬೇಕೆಂದು ಆತ ನಿರ್ಣಯಿಸಿ ಆ ಪ್ರಕಾರ ಆಜ್ಞೆ ಹೊರಡಿಸಿ ಅವರಿಗೆ ತಲುಪಿಸಿದ. ಸುಜಾ ಮುರಾದರು ಬಂಗಾಲ ಗುಜರಾತಗಳಿಗೆ ಕೂಡಲೇ ಸರಂಜಾಮು ಸಹಿತ ಹೊರಟು ಹೋದರು. ಅಲ್ಲಿ ತಮ್ಮ ಶಕ್ತಿ ಸಂಚಯನ ಮಾಡಿಕೊಂಡು ಸಕಾಲದಲ್ಲಿ ದಿಲ್ಲಿ ಸಿಂಹಾಸನಕ್ಕಾಗಿ ಪ್ರಯತ್ನಿಸಬೇಕು ಎಂದು ಅವರ ವಿಚಾರ. ಆದರೆ ಔರಂಗಜೇಬ ಆಗ್ರಾದಿಂದ ಹೊರಡಲೇ ಇಲ್ಲ. ಆತನಿಗೆ ಅಲ್ಲಿ ತನ್ನ ರಹಸ್ಯಜಾಲಗಳನ್ನು ಭದ್ರಪಡಿಸಬೇಕಾಗಿದ್ದಿತು.

ಅಂತಃಪುರದ ರಹಸ್ಯವನ್ನೆಲ್ಲ ಬಲ್ಲವಳಾದ ರೋಶನಾರೆಯಂತೂ ಔರಂಗಜೇಬನ ಬೆಂಬಲಕ್ಕಿದ್ದಳು. ಸೋದರಮಾವನಾದ ಶಾಯಿಸ್ತೆಖಾನನೂ ಔರಂಗಜೇಬನ ಬೆನ್ನುಕಟ್ಟಿದ. ಸಾಮ್ರಾಜ್ಯದ ಮುಖ್ಯಬಕ್ಷಿ ದಾನಿಶ ಮುಂದ, ಮುಖ್ಯ ಸೇನಾಪತಿ ಖಲಿಲುಲ್ಲಾಖಾನ. ಸರದಾರ ಮುಸಜಿದಮಿಯಾ ಹೀಗೆ ಶಹಾಜಹಾನನ ಬೆಂಬಲಿಗರೆಲ್ಲರನ್ನೂ ಔರಂಗಜೇಬನು ಒಂದಿನ ತನ್ನ ಅರಮನೆಗೆ ಆಮಂತ್ರಿಸಿದ. ಫಕೀರನಾದ ತನಗೆ ಸಾಮ್ರಾಜ್ಯದ ಆಮಿಷ ಎಳ್ಳಷ್ಟೂ ಇಲ್ಲ. ಆದರೆ ಕಾಫರ ದಾರಾ ಚಕ್ರವರ್ತಿಯಾದರೆ ಮುಸ್ಲಿಂ ಸಾಮ್ರಾಜ್ಯವೇ ಹಾಳಾಗಿ ಹೋಗುವದು ಎಂದು ಅವನು ಸವಿಮಾತುಗಳಿಂದ ಅವರಿಗೆ ಬಿಂಬಿಸಿ ಅವರನ್ನೆಲ್ಲ ತನ್ನತ್ತ ಒಲಿಸಿಕೊಂಡನು. ಇವರೆಲ್ಲ ರೋಶನಾರಾ, ಶಾಯಿಸ್ತೇಖಾನರ ಮಾರ್ಗದರ್ಶನದಲ್ಲಿ ನಡೆಯಬೇಕೆಂದು ಗೊತ್ತಾಯಿತು. ಔರಂಗಜೇಬನ ಪ್ರಣಯಿನಿ ಹಿರಾ ಸುಲ್ತಾನಾ ಆತನ ಗೂಢಚರಳಾಗಿ ಆಗ್ರಾದಲ್ಲಿಯೆ ಉಳಿಯಬೇಕೆಂದು ಅನುಮತಿಸಲ್ಪಟ್ಟಿತು.

ಔರಂಗಜೇಬನು ಬಳಿಕ ಶಹಾಜಹಾನನ ಆಶೀರ್ವಾದ ಪಡೆದುಕೊಂಡು ದಕ್ಷಿಣದ ದೌಲತ್ತಾಬಾದಕ್ಕೆ ಹೊರಟನು.

ಮರುದಿನವೇ ಆಗ್ರಾದಲ್ಲಿ ವಜೀರ ಸಾದುಲ್ಲಾಖಾನರ ಕೊಲೆಯಾಗಿದ್ದಿತು. ಮದ್ಯದಲ್ಲಿ ಆತನಿಗೆ ವಿಷಪ್ರಯೋಗವಾಗಿತ್ತು. ಈ ಕೊಲೆಯಾದ ದಿನವೇ ಸಾದುಲ್ಲಾಖಾನರ ಅಡಿಗೆಯ ಅಬ್ದುಲ್ ಮಜೀದ ನೌಕರಿ ಬಿಟ್ಟು ಹೋಗಿದ್ದ. ಆತನ ಕೋಣೆಯಲ್ಲಿ ರೋಶನಾರೆಯ ಹಮ್ಮಿಣಿ ಹಾಗೂ ವಿಷದ ಪುಡಿ ಅಂಟಿದ ಕಾಗದ ದೊರೆತವು. ಹೀಗೆ ಔರಂಗಜೇಬ ಒಂದು ಮುಳ್ಳಿನಿಂದಲೇ ತನ್ನ ಮುಳ್ಳನ್ನು ಕಿತ್ತಿಹಾಕಿದ್ದ.

ಸಾದುಲ್ಲಾಖಾನರ ಮಗ ಮುಹಬೂಬ, ದಾರಾಶಹನ ಮಗ ಸುಲೇಮಾನನ ಮಿತ್ರ. ಅಲ್ಲದೆ ಮುಹಬೂಬನ ತಂಗಿ ಶಹರಜಾದೆಯನ್ನು ಸುಲೇಮಾನನಿಗೆ ಕೊಡಬೇಕು ಎಂದು ಮಾತುಕತೆಗಳಾಗಿ ಅವರಲ್ಲಿ ಪ್ರೇಮ ಅಂಕುರಿಸಿತ್ತು. ಸಾದುಲ್ಲಾಖಾನರ ಕೊಲೆಯ ನಂತರ ಇವರ ಸ್ನೇಹ ಇನ್ನಷ್ಟು ಗಾಢವಾಯಿತು. ಸಾದುಲ್ಲಾಖಾನರ ಕೊಲೆಯ ಆರೋಪವನ್ನು ದಾರಾನ ತಲೆಗೆ ಕಟ್ಟಬೇಕೆಂದು ಧೂರ್ತೆ ರೋಶನಾರೆಯು ಪ್ರಯತ್ನಿಸಿದಳು. ಆದರೆ ದಾರಾನ ಮಗ ಸುಲೇಮಾನ ಸ್ವತಃ ಮುಹಬೂಬನಲ್ಲಿಗೆ ಬಂದು ವಿಚಾರಣೆ ನಡೆಸಲಾಗಿ ಈ ಕೊಲೆಯಲ್ಲಿ ತನ್ನ ಸೋದರತ್ತೆಯ ಕೈವಾಡ ಇರುವದನ್ನು ಅರಿತುಕೊಂಡ. ಇದರಿಂದ ಸುಲೇಮಾನ-ಮುಹಬೂಬ ಇನ್ನಷ್ಟು ನಿಕಟವರ್ತಿಗಳಾದರು. ಈ ಘಟನೆ ಔರಂಗಜೇಬನ ಕಾರಸ್ಥಾನವೆಂದು ಅವರಿಗೂ ಹೊಳೆಯದಿರಲಿಲ್ಲ.

ಆದರೆ ಸಾದುಲ್ಲಾಖಾನನ ಕೊಲೆಯು ಕುರಿತು ಶಹಾಜಹಾನನ ಮನಸ್ಸಿನಲ್ಲಿ ದಾರಾನ ಮೇಲೆ ಸಂದೇಹ ಉಂಟಾಗಿತ್ತು. ಬೇಗಮಳು ಬಾದಶಹಾನೆದುರು ಶಹರಜಾದೆಯ ಸಾಕ್ಷಿ ನುಡಿಸಿ

ದಾರಾನ ಬಗೆಗಿನ ಸಂದೇಹವನ್ನು ನಿವಾರಿಸಿದಳು. ಅಲ್ಲದೆ ಔರಂಗಜೇಬನು ರಾಜಧಾನಿಯಲ್ಲೆಲ್ಲ ತನ್ನ ಹಸ್ತಕರನ್ನು ಹಬ್ಬಿಸಿಟ್ಟಿರುವುದನ್ನೂ ಆಕೆ ಬಾದಶಹನಿಗೆ ತಿಳಿಸಿದಳು. ದಾರಾಶಹಾನನ್ನು ನೀವು ಉತ್ತರಾಧಿಕಾರಿ ಎಂದು ಸಾರದಿದ್ದರೆ ಸಾಮ್ರಾಜ್ಯಕ್ಕೆ ಗಂಡಾಂತರ ತಪ್ಪಿದ್ದಲ್ಲ ಎಂದೂ ಸ್ಪಷ್ಟೋಕ್ತಿಗಳಿಂದ ತಿಳಿಸಿದಳು.

ಶಹಾಜಹಾನನೂ ಒಪ್ಪಿದ. ಆದರೆ ಬೇಗಮಳಿಗೆ ಆತನ ಮಾತಿನಲ್ಲಿ ನಂಬಿಕೆ ಹುಟ್ಟಲಿಲ್ಲ.

*

"ಗೋವಳಕೊಂಡದ ಸುಲ್ತಾನನ ಚಿಟಣವೀಸ ರಘುನಾಥ ಪಂಡಿತನು ಬರೆದ ಪತ್ರ ನೋಡಿದೆಯಾ ದಾರಾಶಹಾ" ಎಂದು ಬೇಗಮ ತನ್ನ ಸೋದರನನ್ನು ವಿಚಾರಿಸಿದಳು.

"ಆ ಸುಲ್ತಾನ ದಿಲ್ಲೀಶ್ವರರ ಸ್ನೇಹಿತನಾಗಿದ್ದು ಆತನೊಡನೆ ಕಾಲುಕೆದರಿ ಜಗಳ ತೆಗೆಯುವುದು ಸರಿಯಲ್ಲ" ಎಂದ ಸುಲೇಮಾನ.

"ಔರಂಗಜೇಬ ಎನ್ನ ಆಜ್ಞೆ ಕೇಳದೆ ಗೋವಳಕೊಂಡದ ಮೇಲೆ ದಾಳಿ ನಡೆಸಿದ್ದು ತಪ್ಪಲ್ಲವೆ ?"

"ನನ್ನ ಅಪ್ಪಣೆ ಕೇಳಿದ್ದರೆ ನಾನು ಕೊಡುತ್ತಿದ್ದೆ" ಎಂದ ದಾರಾ.

"ದಾಳಿಯ ಕಾರಣವನ್ನಾದರೂ ನೀನು ವಿಚಾರಿಸಿರುವೆಯಾ ?"

"ನನಗೆ ಚನ್ನಾಗಿ ತಿಳಿದಿಲ್ಲ"

"ಡಂಭೇಕನಾಗಿ ಔರಂಗಜೇಬನು ತೊಡುವ ಫಕೀರವೇಷ ನಿನಗೇ ಚನ್ನಾಗಿ ಒಪ್ಪುತ್ತಿತ್ತು. ಗೋವಳಕೊಂಡದ ಸುಲ್ತಾನನ ವಜೀರ ಮೀರ ಜುಮ್ಲಾನು ಅಲ್ಲಿಯ ರಾಜಮಾತೆಯೊಂದಿಗೆ ಸರಸಕ್ಕಿಳಿದದ್ದರಿಂದ ಸುಲ್ತಾನನು ಆತನನ್ನು ದಂಡಿಸಬಯಸಿದ. ಆ ಕುಲಾಂಗಾರನು ಔರಂಗಜೇಬನ ಕಡೆಗೆ ಹೋಗಿ ಆಶ್ರಯ ಕೇಳಿದ್ದಾನೆ. ಅಲ್ಲದೆ ಗೋವಳಕೊಂಡದ ಸುಲ್ತಾನ ಶಾಹಿಯನ್ನೂ ಔರಂಗಜೇಬನಿಗೆ ಒಪ್ಪಿಸುವ ಸನ್ನಾಹ ನಡೆಸಿರುವಂತೆ ತಿಳಿದಿದೆ. ಆತನ ಹೇಳಿಕೆಯಂತೇ ಈಗ ಔರಂಗಜೇಬ ಗೋವಳಕೊಂಡಕ್ಕೆ ಮುತ್ತಿಗೆ ಹಾಕಿದ್ದಾನೆ."

"ಹಾಗಾದರೆ ಈಗೇನು ಮಾಡಬೇಕು ?"

"ಗೋವಳಕೊಂಡ ಸುಲ್ತಾನನು ದಿಲ್ಲಿಯ ಮಿತ್ರನಾಗಿರುವದರಿಂದ ಆ ಮುತ್ತಿಗೆ ತಕ್ಷಣ ಹಿಂತೆಗೆದುಕೊಳ್ಳಬೇಕು ಎಂದು ಔರಂಗಜೇಬನಿಗೆ ಆಜ್ಞಾಪತ್ರ ಕಳಿಸು" ಎಂದು ಬೇಗಮು ಸಲಹೆ ನೀಡಿದಳು.

ಆಗ್ರಾದಿಂದ ದಕ್ಷಿಣಕ್ಕೆ ಬಂದ ಔರಂಗಜೇಬ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಬಂಗಾಲಕ್ಕೆ ಹೋದ ಸುಜಾ, ಗುಜರಾತಕ್ಕೆ ತೆರಳಿದ ಮುರಾದ ಆ ಸಮೃದ್ಧ ಸುಭೆಗಳಲ್ಲಿ ತಮ್ಮ ವರ್ಚಸ್ಸು ಬೀರಿ ಧನಕನಕ ಸಂಗ್ರಹದಲ್ಲಿ ತೊಡಗಿದ್ದರು. ಮೊದಲು ತಮ್ಮ ಬಲ ಹೆಚ್ಚಿಸಿಕೊಂಡು ನಂತರ ಸಮಯ ಸಾಧಿಸಿ ಆಗ್ರಾದ ಮೇಲೆ ದಾಳಿ ಮಾಡಿ ಮೊಗಲ ಸಿಂಹಾಸನ ವಶಪಡಿಸಿಕೊಳ್ಳಬೇಕು ಎಂಬ ಹೊಂಚು ಅವರದು. ಔರಂಗಜೇಬನೂ ಇದೇ ವಿಚಾರದವನೇ ಆಗಿದ್ದ. ದಕ್ಷಿಣದ ಸರದಾರರನ್ನೆಲ್ಲ ಅಂಜಿಸಿ ಅವರಿಂದ

ಆದಷ್ಟು ಹಣ ಸಂಗ್ರಹಿಸುತ್ತಿದ್ದ; ಆಗ್ರಾದಲ್ಲಿ ಶಹಾಜಹಾನನು ರೋಗಗ್ರಸ್ತನಾಗಿ ಹಾಸಿಗೆ ಹಿಡಿದಿರುವಾಗ ದಾರಾಶಹಾನೇ ಆಡಳಿತ ಸೂತ್ರಗಳನ್ನು ವಹಿಸಿಕೊಂಡು ಪ್ರಬಲನಾಗಿದ್ದನು. ದಿಲ್ಲೀಶ್ವರನ ಬಲಿಷ್ಠ ಸೇನೆ ದಾರಾನ ವಶವರ್ತಿಯಾಗಿದ್ದಿತು. ಇನ್ನು ತಾನು ದಿಲ್ಲಿಗೆ ಹೋಗಬೇಕಾದರೆ ಪ್ರಚಂಡ ಸೇನೆಯೊಂದಿಗೇ ಹೋಗಬೇಕು, ಇಲ್ಲದಿದ್ದರೆ ದಾರಾನು ತನಗೆ ಜೀವಂತ ಸಮಾಧಿ ಮಾಡಿಯಾನು ಎಂದು ಔರಂಗಜೇಬನು ತನ್ನ ಸೆರಗಿಗೆ ಗಂಟು ಹಾಕಿಕೊಂಡಿದ್ದನು.

ಇಂಥ ಸಂದರ್ಭದಲ್ಲಿ ಮೀರಜುಮ್ಲಾ ಬಂದು ಔರಂಗಜೇಬನನ್ನು ಕೂಡಿಕೊಂಡನು. ಗೋವಳಕೊಂಡದ ಸುಲ್ತಾನ ಅಬ್ದುಲನು ಬಾಲಕನಿದ್ದಾಗ ರಾಜ್ಯಸೂತ್ರಗಳನ್ನೆಲ್ಲ ವಹಿಸಿಕೊಂಡಿದ್ದ ಚಾಣಾಕ್ಷ ಮೀರಜುಮ್ಲಾ ಅಂತಃಪುರದಲ್ಲಿಯೂ ತನ್ನ ಕಾಲು ಚಾಚಲು ಯತ್ನಿಸಿದ್ದನು; ಸುಲ್ತಾನ ಅಬ್ದುಲ್ಲಾ ವಯಸ್ಸಿಗೆ ಬಂದ ಕೂಡಲೆ ಮೀರಜುಮ್ಲಾನನ್ನು ಗಡೀಪಾರ ಮಾಡಿದಂತೆ ಮಾಡಿದ್ದನು, ಮೀರಜುಮ್ಲಾನ ಕುಟುಂಬದವರು ಮಾತ್ರ ಗೋವಳಕೊಂಡದಲ್ಲಿಯೆ ಉಳಿದುಕೊಂಡಿದ್ದರು. ಹೀಗೆ ನಿರ್ಗತಿಕನಾಗಿದ್ದ ಮೀರಜುಮ್ಲಾ ಔರಂಗಜೇಬನನ್ನು ಕೂಡಿಕೊಂಡ. ಏಕಜೀವಗಳು ಒಂದಾದವು.

ಮೀರಜುಮ್ಲಾನ ಉಪಾಯದಂತೆ ಔರಂಗಜೇಬನು ದಿಲ್ಲಿಯ ರಾಯಭಾರಿ ಎಂಬಂತೆ ವೇಶ ಪಲ್ಲಟಿಸಿ ಎಂಟು ಸಾವಿರ ರಾವುತರೊಡನೆ ಭಾಗಾವರಗದಲ್ಲಿ ಸುಲ್ತಾನನನ್ನು ಕಂಡನು; ಪ್ರಮಾಣಪತ್ರ ಒಪ್ಪಿಸಲು ಹೋಗಿ ಆತನ ದರ್ಬಾರದಲ್ಲಿಯೆ ಆತನನ್ನು ಬಂಧಿಸಬೇಕು ಎಂದು ಔರಂಗಜೇಬ ಯೋಚಿಸಿದ್ದ. ಆದರೆ ದರ್ಬಾರದಲ್ಲಿ ಸುಲ್ತಾನನ ಚಿಟಣವೀಸನು ಔರಂಗಜೇಬನನ್ನು ಗುರುತಿಸಿದ್ದರಿಂದ ಮತ್ತು ಸುಲ್ತಾನನಿಗೆ ಪಲಾಯನ ಸೂಕ್ತಪರಿಸಲು ಹೇಳಿದ್ದರಿಂದ ಸುಲ್ತಾನನು ಆ ಒಳಸಂಚಿನಿಂದ ಪಾರಾದನು. ಔರಂಗಜೇಬನು ರೊಚ್ಚಿಗೆದ್ದು ಎಂಟು ಸಾವಿರ ರಾವುತರ ಸಹಾಯದಿಂದ ಭಾಗಾನಗರವನ್ನು ಉಧ್ವಸ್ತಮಾಡಿದನು.

ಸುಲ್ತಾನನು ತನ್ನ ಅಳಿದುಳಿದ ಪರಿವಾರದೊಡನೆ ಗೋವಳಕೊಂಡ ಕಿಲ್ಲೆಯಲ್ಲಿ ಆಶ್ರಯ ಪಡೆದನು. ಔರಂಗಜೇಬನು ಅಲ್ಲಿಗೇ ಹೋಗಿ ಮುತ್ತಿಗೆಹಾಕಿ ಕುಳಿತನು; ಒಳಗಿನವರಿಗೆ ಹೊರಗಿನ ಸಂಪರ್ಕ ಇಲ್ಲದಂತಾಯಿತು.

ಔರಂಗಜೇಬನು ಹೀಗೆ ಮುತ್ತಿಗೆ ಹಾಕಿಕೊಂಡು ಕುಳಿತು ಎಂಟು ಹತ್ತು ದಿನಗಳಾಗಿದ್ದವು. ಅಂದು ರಾತ್ರಿ ಔರಂಗಜೇಬನು ತನ್ನ ಡೇರೆಯಲ್ಲಿ ನಿದ್ರಿಸಿದಾಗ ಕಾಲಂದುಗೆಯ ಕಿಂಕಿಣಿರವ ಕೇಳಿಬಂತು. ತಟ್ಟನೆ ಎಚ್ಚತ್ತ ಔರಂಗಜೇಬ ಕಣ್ಣಿಟ್ಟು ನೋಡಲಾಗಿ ಸುಂದರಿಯೊಬ್ಬಳು ನಿಂತದ್ದು ಕಂಡಿತು

"ಯಾರು ನೀನು ? ಇಲ್ಲಿಗೆ ಹೇಗೆ ಬಂದೆ ? ಏತಕ್ಕೆ ಬಂದೆ ?"

ಆ ಸುಂದರಿ ಕಿಲಕಿಲನೆ ನಕ್ಕಳು;

"ಬೊಗಳು, ಯಾರು ನೀನು ?" ಎಂದ ಔರಂಗಜೇಬ ಕ್ರುದ್ಧನಾಗಿ.

"ನಿಮ್ಮ ಪ್ರೀತಿಪಾತ್ರಳನ್ನು ಗುರುತಿಸದೆ ಹೋದಿರಾ ? ಯಾರು ನನ್ನನ್ನು ಇಲ್ಲಿ-ತಡೆಯುವವರು ?"

"ಹೀರಾಸುಲ್ತಾನಾ ! ಹೇಗೆ ಬಂದೆ" ಎಂದು ಆಕೆಯ ಗದ್ದ ಹಿಡಿದು ಕೇಳಿದ.

"ಭಾರಿ ರಹಸ್ಯವನ್ನು ತಿಳಿಸಲು ಬಂದೆ"

"ಏನದು ?"

"ಗೋವಳಕೊಂಡವು ನಿಮ್ಮ ವಶವಾದರೆ ನಿಮ್ಮ ಬಲ ಹೆಚ್ಚುವುದು, ತಮಗೆ ಅಪಾಯವಾಗುವದು ಎಂದು ದಾರಾಶಹಾ ಈ ಮುತ್ತಿಗೆ ಹಿಂತೆಗೆದುಕೊಳ್ಳಲು ನಿಮಗೊಂದು ಆಜ್ಞಾಪತ್ರ—ಕಳಿಸಿದ್ದಾರೆ. ನೀವು ಅದನ್ನು ಪಾಲಿಸದಿದ್ದರೆ ಮುರ್ಶಿದ ಕುಲಿಖಾನ ದೊಡ್ಡ ಸೈನ್ಯದೊಂದಿಗೆ ಬಂದು ನಿಮ್ಮ ಪಾರುಪತ್ಯ ಮಾಡುವನು."

"ಹೀಗೇನು?"

"ಹೌದು, ಕುಲಿಖಾನರು ನಿಮ್ಮ ಬಲ ಮುರಿದರೆ ಮುಂದಿನ ಕೆಲಸಗಳೆಲ್ಲ ಕೆಟ್ಟು ಹೋಗುವವೆಂದು ಶಾಯಿಸ್ತೆಖಾನ ಮುಂತಾದವರ ಅಭಿಪ್ರಾಯ."

"ಒಳ್ಳೆ ಸಮಯಕ್ಕೆ ಸುದ್ದಿ ತಂದೆ ಪ್ರಿಯೆ"

SISTA'S DFL 404 K



ಎಂದು ಆಕೆಯನ್ನು ಮುಂದೊಡ್ಡಿದ.

ಮರು ನಸುಕಿನಲ್ಲಿಯೇ ಔರಂಗಜೇಬ ಮೀರಜುಮ್ಲಾನನ್ನು ಕರೆಸಿದ. ಇಬ್ಬರೂ ಸಾಕಷ್ಟು ಆಪ್ತಾಲೋಚನೆ ಮಾಡಿದರು. ಅಂದು ಸಂಜೆಯೊಳಗೆ ಶರಣು ಬರದಿದ್ದರೆ ಗೋವಳಕೊಂಡ ಕೋಟೆ ನೆಲಸಮಮಾಡಿ ರಾಜ್ಯವನ್ನು ದಿಲ್ಲಿ ಆಧಿಪತ್ಯಕ್ಕೆ ಸೇರಿಸಿಬಿಡುವೆವು ಎಂದು ಔರಂಗಜೇಬ ಪತ್ರವೊಂದನ್ನು ಸುಲ್ತಾನ ಅಬ್ದುಲ್ಲಾನಿಗೆ ಕಳಿಸಿದ. ಕೋಟೆಯೊಳಗಿನ ಜನರೂ ಅನ್ನ ನೀರಿಲ್ಲದೆ ಹೈರಾಣಾಗಿದ್ದುದರಿಂದ ಸುಲ್ತಾನನು ಶರಣಾಗತನಾದನು.

ಆಗ ಆದ ಒಪ್ಪಂದದ ಪ್ರಕಾರ ಗೋವಳಕೊಂಡದ ಖಜಾನೆಯು ಧನಕನಕವೆಲ್ಲ ಔರಂಗಜೇಬನ ಪಾಲಾಯಿತು. ಔರಂಗಜೇಬನ ಮಗ ಮುಹಮ್ಮದನು ಅಬ್ದುಲ್ಲಾನ ಅಳಿಯನಾದನಲ್ಲದೇ ಗೋವಳಕೊಂಡದ ಉತ್ತರಾಧಿಕಾರಿಯೂ ಆದ. ಮೀರಜುಮ್ಲಾ ತನ್ನ ಕುಟುಂಬ, ಆಸ್ತಿ ಸಮೇತ ಬೇಕಾದಲ್ಲಿಗೆ ಹೋಗಲು ಸ್ವತಂತ್ರನಾದ.

ದಿಲ್ಲೀಶ್ವರನ ಆಜ್ಞೆ ಕೈಸೇರುವದರೊಳಗಾಗಿ ಇಷ್ಟೆಲ್ಲ ನಡೆದುಹೋಗಿತ್ತು. ಗೋವಳಕೊಂಡವನ್ನು ಔರಂಗಜೇಬನು ವಶಪಡಿಸಿಕೊಂಡ ಸುದ್ದಿ ಕೇಳಿ ದಾರಾಶಹಾನು ಆತನಿಗೆ ಬೇರೊಂದು ಆಜ್ಞಾಪತ್ರ ಕಳಿಸಿ ಮೀರಜುಮ್ಲಾನನ್ನು ದಿಲ್ಲಿ ಸಿಂಹಾಸನಕ್ಕೆ ಒಪ್ಪಿಸಬೇಕು ಎಂದು ತಿಳಿಸಿದನು.

ಔರಂಗಜೇಬನ ಹಿಡಿತದಿಂದ ಪಾರಾದರೆ ಸಾಕು ಎಂದುಕೊಂಡಿದ್ದ ಮೀರಜುಮ್ಲಾ ತನ್ನ ಸೈನ್ಯದೊಂದಿಗೆ ದಿಲ್ಲಿ ಮಾರ್ಗ ಹಿಡಿದ. ಔರಂಗಜೇಬನು ಎಷ್ಟು ತಡೆದರೂ ಕೇಳಲಿಲ್ಲ.

ಸವಿಮಾತುಗಾರನಾದ ಮೀರಜುಮ್ಲಾ ಆಗ್ರಾ ತಲುಪಿದೊಡನೆ ಶಹಾಜಹಾನನನ್ನು ಕಂಡು ಆತನ ಮುಂದೆ ಗೋವಳಕೊಂಡದ ಗಣಿಗಳ ಮಣಿ ಸಂಪತ್ತನ್ನು ಮನದಣಿ ವರ್ಣಿಸಿದ.



ಆ ರಾಜ್ಯ ದಿಲ್ಲಿ ಆಧಿಪತ್ಯಕ್ಕೆ ಒಳಪಡಬೇಕು ಎಂದು ಪ್ರತಿಪಾದಿಸಿದ. ಶಹಾಜಹಾನನಿಗೆ ವಿಜಾಪುರದ ಆದಿಲಶಾಹಿಯ ಮೇಲೆ ಕಣ್ಣಿತ್ತು. ಹೀಗಾಗಿ ಶಹಾಜಹಾನನು ಮೀರಜುಮ್ಲಾನ ಕೈಕೆಳಗೆ ದೊಡ್ಡ ಸೈನ್ಯ ಕೊಟ್ಟು ದಕ್ಷಿಣಕ್ಕೆ ಕಳಿಸಿದನು. ಈತನು ಪುನಃ ಔರಂಗಜೇಬನನ್ನು ಸಂಧಿಸಿದರೆ ದಿಲ್ಲಿ ಸಾಮ್ರಾಜ್ಯಕ್ಕೇ ಗಂಡಾಂತರ ಎಂದು ದಾರಾನು ಪರಿಪರಿಯಿಂದ ಶಹಾಜಹಾನನಿಗೆ ತಿಳಿಸಿ ಹೇಳಿದ ಮೇಲೆ ಮೀರಜುಮ್ಲಾನಿಗೆ ಔರಂಗಜೇಬನನ್ನು ಯಾವ ಕಾರಣಕ್ಕಾಗಿಯೂ ಕಾಣಬಾರದು ಎಂದು ಕರಾರು ಹಾಕಲಾಯಿತು.

ತನ್ನ ಅಳವಿಗೆ ಬಂದ ಬೇಟೆಯನ್ನು ಬಲಿಗೆ ಕೆಡವಬೇಕು ಎಂಬುದನ್ನು ಔರಂಗಜೇಬನಿಗೆ ಯಾರೂ ಹೇಳಿಕೊಡಬೇಕಾಗಿರಲಿಲ್ಲ. ಮೀರಜುಮ್ಲಾ ವಿಜಾಪುರಕ್ಕೆ ಸೇರಿದ್ದ ಕಲ್ಯಾಣ ದುರ್ಗಕ್ಕೆ ದಾಳಿಯಿಟ್ಟಾಗ ಔರಂಗಜೇಬ ತನ್ನ ಮಗ ಮುಹಮ್ಮದನನ್ನು ಆತನ ಕಡೆಗೆ ಕಳಿಸಿದನು. ಆದರೆ ಮೀರ ಜುಮ್ಲಾ ಆ ಆಮಂತ್ರಣ ತಿರಸ್ಕರಿಸಿದ. ನಂತರ ಧೂರ್ತ ಔರಂಗಜೇಬನು ತನ್ನ ಕಿರಿಮಗ ಮುಅಜ್ಜಮನನ್ನು ಹೇರಳ ಕಾಣಿಕೆಯೊಡನೆ ಮೀರಜುಮ್ಲಾನ ಬಳಿಗೆ ಕಳಿಸಿದ. ಈತನು ನಯವಿನಯದಿಂದ ಮೀರಜುಮ್ಲಾನ ಮನವೊಲಿಸಿ ಉಭಯತರ ಭೆಟ್ಟಿಗೆ ಅಣಿ ಮಾಡಿದನು.

ಮೀರಜುಮ್ಲಾ ಭೆಟ್ಟಿಗೆ ಬಂದಾಗ ಔರಂಗಜೇಬನು ಆತನನ್ನು ಅತ್ಯಾದರದಿಂದಲೇ ಸ್ವಾಗತಿಸಿದ.

"ಬಾಬಾಜಿ, ಪರಸ್ಪರರಿಗೆ ಸಹಾಯ ಮಾಡಬೇಕೆಂದು ಹಿಂದೆ ನಾವೂ ನೀವೂ ಆಣೆ ಮಾಡಿರುವೆವಷ್ಟೇ. ಈಗ ಆಗ್ರಾದ ಮೇಲೆ ನಾನು ಸಾಗಿ ಹೋಗದಿದ್ದರೆ ಮುಂದೆ ನನಗೆ ಆಶೆಯೇ ಇಲ್ಲ. ನೀವೂ ನಿಮ್ಮ ಸೈನ್ಯ ನನಗೆ ಅನುಕೂಲರಾಗಬೇಕು."

"ನಿಜ, ಆದರೆ ನಾನು ನಿಮ್ಮ ಮುಖ ಕೂಡ ನೋಡುವುದಿಲ್ಲ ಎಂದು ಬಾದಶಹರಿಗೆ ವಚನವಿತ್ತು ಬಂದಿದ್ದೇನೆ. ನನ್ನ ಕುಟುಂಬದವರನ್ನು ದಾರಾಶಹಾ ಬಳಿ ಹೊಣೆಯಾಗಿ ಇಟ್ಟು ಬಂದಿದ್ದೇವೆ"

"ಹಾಗಾದರೆ ಹೀಗೆ ಮಾಡಬಹುದಲ್ಲ. ನಾವಿಬ್ಬರೂ ವೈರಿಗಳಂತೆ ನಟಿಸೋಣ. ಔರಂಗಜೇಬನು ವಿಶ್ವಾಸಘಾತದಿಂದ ಮೀರಜುಮ್ಲಾನನ್ನು ಬಂಧಿಸಿದ ಎಂದು ಸುದ್ದಿ ಹಬ್ಬಿಸೋಣ. ನೀವು ನಿಮ್ಮ ಸೈನ್ಯ ನನ್ನ ಸ್ವಾಧೀನ ಮಾಡಿ ನನ್ನ ಅರಮನೆಯಲ್ಲಿ ಆರಾಮವಾಗಿ ಇದ್ದುಬಿಡಿ" ಎಂದು ಮಂದಹಾಸಗೈದ.

"ನಾಳೆ ಏನೆಂಬುದನ್ನು ಹೇಳುವೆ."

"ಇದಕ್ಕೇಕೆ ವಿಚಾರ ಮೀರಜುಮ್ಲಾರೇ. ಕಾಲಹರಣ ತಕ್ಕದ್ದಲ್ಲ."

"ಒಳ್ಳೆಯದು"

"ಬಾಬಾಜಿ, ನಾನು ಕೃತಾರ್ಥ." ಎಂದು ಹೇಳಿದವನೇ ಔರಂಗಜೇಬನು ತನ್ನ ಅರಮನೆ ತೋರಿಸುವ ನೆಪದಲ್ಲಿ ಮೀರಜುಮ್ಲಾನನ್ನು ಒಳಗೆ ಕರೆದೊಯ್ದು ಬಂದಿಯಾಗಿಸಿಬಿಟ್ಟನು. ಆತನ ಸೇನೆ ಔರಂಗಜೇಬನ ಅಧೀನವಾಯಿತು.

ಮೀರಜುಮ್ಲಾ ತಾನಾಗಿ ಔರಂಗಜೇಬನ ಕೈದಿಯಾದಂತಾಯಿತು. ಈತನು ದಿಲ್ಲಿ ಬಾದಶಹನನ್ನು ಕಂಡು ಹಿಂತಿರುಗಿ ದಕ್ಷಿಣಕ್ಕೆ ಬರುವವರೆಗಿನ ಅವಧಿಯಲ್ಲಿ ಔರಂಗಜೇಬನು ಅಹಮ್ಮದಾಬಾದದಲ್ಲಿ ಇದ್ದ ತಮ್ಮ ಮುರಾದನಿಗೆ ಅನುನಯದ ಪತ್ರಗಳನ್ನು ಬರೆಯುತ್ತಲೇ ಇದ್ದನು. ತಾನು ಫಕೀರ, ತನಗೆ ದಿಲ್ಲಿ ಸಿಂಹಾಸನದ ಆಸೆ ಎಳ್ಳಷ್ಟೂ ಇಲ್ಲ, ವೀರ ವಿಲಾಸಿಯಾದ ನೀವೇ ಬಾದಶಹನಾಗಲು ಸರ್ವಥಾಯೋಗ್ಯ, ನಿನಗಾಗಿ ನಾನು ಪರಿಶ್ರಮಿಸುತ್ತಿದ್ದೇನೆ ಎಂದು ಮುಂತಾಗಿ ಓಲೆಗಳ ಮೇಲೆ ಓಲೆಗಳನ್ನು ಮುರಾದನಿಗೆ ಅಟ್ಟಿ ತನ್ನ ಬಗೆಗೆ ಆತನಲ್ಲಿ ಅನುಕೂಲ ಅಭಿಪ್ರಾಯವನ್ನು ಔರಂಗಜೇಬನು ಉಂಟು ಮಾಡಿಕೊಂಡಿದ್ದನು. ತಮ್ಮಿಬ್ಬರ ಸೇನೆಗಳು ಕಲೆತು ಆಗ್ರಾದ ಮೇಲೆ ದಾಳಿ ಮಾಡಿದರೆ ದಾರಾಶಹಾನನ್ನು ಧೂಳೀಪಟ ಮಾಡಲು ಮೇಳೆ ಹಿಡಿಯಲಾರದು ಎಂದೂ ಆತನಿಗೆ ಬಿಂಬಿಸಿದ್ದನು. ರಣಧೀರನಾದರೂ ವಿಲಾಸಿಯಾಗಿದ್ದ ಮುರಾದನಿಗೆ ಅಣ್ಣನ ಈ ಕಳಕಳಿಯ ಬಗ್ಗೆ ಸಂತೋಷವೇ ಆಯಿತೇ ಹೊರತು ಆತ ಔರಂಗಜೇಬನ ಕಾರಸ್ಥಾನವನ್ನು ಕುರಿತು

ಶಂಕಿಸಲೂ ಇಲ್ಲ. ತಾನು ದಿಲ್ಲಿ ಸಿಂಹಾಸನಾಧಿಪತಿಯಾಗುವ ಕನಸನ್ನು ಮುರಾದನು ಇನ್ನಷ್ಟು ತೀವ್ರತೆಯಿಂದ ಕಾಣ ಹತ್ತಿದನು.

•

ಬಂಗಾಲಕ್ಕೆ ಸುಭೇದಾರನಾಗಿ ಹೋಗಿದ್ದ ಸುಜಾ ತಾನು ಸಾಕಷ್ಟು ಬಲಿಷ್ಠನಾಗಿರುವೆನೆಂದು ಭಾವಿಸಿಕೊಂಡಿದ್ದ. ಒಮ್ಮೆ ಆಗ್ರಾದ ಮೇಲೆ ಕೈ ಮಾಡಿ ತನ್ನ ದೈವ ಪರೀಕ್ಷೆ ಮಾಡಿ ಬಿಡಬೇಕೆಂದು ಸೇನಾಸುಸಜ್ಜಿತನಾಗಿ ಆಗ್ರಾಕ್ಕೆ ಅಭಿಮುಖನಾಗಿ ಹೊರಟಿದ್ದ. ಇನ್ನು ನಾಲ್ಕಾರು ದಿನಗಳಲ್ಲಿ ಆತನು ಆಗ್ರಾಕ್ಕೆ ಬಂದು ತಲುಪಬಹುದೆಂದು ಗೂಢಚಾರರು ವಾರ್ತೆ ತಂದಿದ್ದರು.

ಆಗ್ರಾದಲ್ಲಿ ಎಲ್ಲೆಲ್ಲಿಯೂ ರಣೋತ್ಸಾಹ. ಅನೇಕಾನೇಕ ರಾಜಪುತ್ರ-ಮೊಗಲ ಸೇನಾಪತಿಗಳು ತಮ್ಮ ಸೇನೆಗಳನ್ನು ಸುಸಜ್ಜಿತವಾಗಿಟ್ಟುಕೊಂಡು ಬಾದಶಹನ ಅಪ್ಪಣೆಯ ದಾರಿ ಕಾಯುತ್ತಿದ್ದರು. ಅವರಲ್ಲಿಯೇ ಶಾಹಿಸ್ತೇಖಾನ, ದಾನಿಶಮಂದ ಖಾನರಂಥವರು ಔರಂಗಜೇಬನ ಪರವಾಗಿ ಆಲೋಚಿಸುತ್ತ ಇದ್ದರು. ಸ್ವಕೀಯನೊಡನೆ ಯುದ್ಧ ಎಂದು ಹಲವು ಸರದಾರರು ತಟಸ್ಥರಾಗಿದ್ದರು.

ಸುಜಾನ ವಿರುದ್ಧ ಸಾಗಿ ಹೋಗುವ ಅಪಾರ ಮೊಗಲ ಸೇನೆಗೆ ದಾರಾಶಹಾನನ್ನೇ ಮುಖ್ಯ ಸೇನಾಪತಿಯನ್ನಾಗಿ ಬಾದಶಹನು ನೇಮಿಸಿದನು. ಹೀಗೆ ಶಹಾಜಹಾನನ ಮನ ವೊಲಿಸುವಲ್ಲಿ ಬೇಗಮಳ ಕೈವಾಡವೂ ಸಾಕಷ್ಟಿತ್ತು.

“ನೀನು ವೀರನೇ ಸರಿ, ಆದರೆ ಯುದ್ಧಗಳು ನಿನ್ನೊಬ್ಬನ ಪರಾಕ್ರಮವನ್ನು ಅವಲಂಬಿಸಿರುವದಿಲ್ಲ. ನಿನ್ನ ಸರದಾರರಿಗೆಲ್ಲ ಸಂತೋಷವಾಗುವಂತೆ ನಡೆದುಕೊಳ್ಳು” ಎಂದು ಬೇಗಮಳು ದಾರಾಶಹಾನಿಗೆ ಸಲಹೆ ನೀಡಿದಳು.

ಮರುದಿನ ಸುಲೇಮಾನನು ಸರ್‌ಲಷ್ಕರ (ಮುಖ್ಯ ಸೇನಾಪತಿ)ನ ಪೋಷಾಕು ಧರಿಸಿ, ಸುಜಾನ ವಿರುದ್ಧ ಯುದ್ಧಕ್ಕೆ ಹೋಗಲು ತಂದೆಯ ಅನುಮತಿ ಕೇಳಲೆಂದು ಬಂದನು.

“ಇದೇನು ಸುಲೇಮಾನ್, ನೀನು ಈ ವೇಷದಲ್ಲಿ ?”

“ರಾಜಾ ಜಯಸಿಂಗರೂ ನಾನೂ ನಿನ್ನೆ ದಿನ ಮತ್ತೆ ಬಾದಶಹರನ್ನು ಕಂಡು ಸುಜಾನ ಪಾರುಪತ್ಯದ ಹೊಣೆ ನಮಗೆ ಒಪ್ಪಿಸಿಕೊಂಡಿದ್ದೇವೆ.”

“ಇದೇನು ರಾಜಕಾರಣ ?”

“ನಿಮಗೆ ಸಿಂಹಾಸನವಾಗಬೇಕೆಂದು ನಾವೆಲ್ಲ ಬಯಸಿರುವಾಗ, ನೀವು ಯುದ್ಧಕ್ಕೆ ತೆರಳಿದರೆ, ಅಲ್ಲಿ ಅಪಾಯಕ್ಕೀಡಾದರೆ ಸಾಮ್ರಾಜ್ಯದ ಗತಿ ಏನು ? “ಅಂತೇ ನಾನು ಹೊರಟಿದ್ದೇನೆ.”

“ನಿನ್ನ ಜೀವಕ್ಕೇನಾದರೂ ಅಪಾಯ ಸಂಭವಿಸಿದರೆ ನಾನು ಮುಕುಟ ಧರಿಸಿ ಫಲವೇನು ?”

“ನಾವೆಲ್ಲ ಸೇನಾಪತಿಗಳನ್ನು ಸಂಪೂರ್ಣ ವಿಚಾರಿಸಿ ಈ ನಿರ್ಣಯಕ್ಕೆ ಬಂದಿದ್ದೇವೆ. ನಿಮ್ಮ ಅಮೂಲ್ಯ ಜೀವವನ್ನು ಗಂಡಾಂತರಕ್ಕೀಡು ಮಾಡಬಾರದು. ಅಪ್ಪಣೆ ಕೊಡಬೇಕು.”

ದಾರಾಶಹಾನು ನಿರುಪಾಯನಾಗಿ ತನ್ನ ಮಗನನ್ನು ವಿಜಯಿಯಾಗು ಎಂದು ಆಶೀ-ರ್ವದಿಸಿ ಕಳಿಸಿದನು.

ಸುಲೇಮಾನನು ಕೂಡಲೇ ಅಲ್ಲಿಂದ ವಜೀರ ಸಾದುಲ್ಲಾಖಾನರ ಮನೆಗೆ ಬಂದನು. ವಜೀರ ಪುತ್ರ ಮೆಹಬೂಬನು ತನ್ನ ಹದಿನೈದು ಸಾವಿರ ಪಠಾಣರೊಂದಿಗೆ ಸುಲೇಮಾನನ ಬೆಂಬಲಕ್ಕೆ ಬರುವದಾಗಿ ತಿಳಿಸಿದಾಗ ಸುಲೇಮಾನ ಆತನಿಗೆ “ಪಾಂಚ ಹಜಾರಿಯಾ” ಅಧಿಕಾರ–ವಸ್ತ್ರ ಬಾದಶಹರಿಂದ ದಯಪಾಲಿಸುವದಾಗಿ ಹೇಳಿದನು.

ಮೆಹಬೂಬನ ತಂಗಿ ಶಹಜಾದೆಯು ಸುಲೇಮಾನನಿಗೆ ಸ್ವಹಸ್ತದಿಂದ ಶರಬತ್ತು ನೀಡಿ ಸಂತೋಷಿಸಿದಳು.

“ಇಂದೇ ನೀವು ಯುದ್ಧಕ್ಕೆ ಹೊರಡುವದಿಲ್ಲವೇ ?

“ಹೌದು. ಅಂತೇ ನಿನ್ನ ಅಪ್ಪಣೆ ಕೇಳಿಕೊಳ್ಳಲು ಬಂದಿದ್ದೇನೆ.”

“ನನ್ನ ಅಪ್ಪಣೆ ಏಕೆ ?”

“ನೀನು ನನ್ನ ಅರ್ಧಾಂಗಿಯಾಗಲು ಒಪ್ಪಿ-ಲ್ಲವೆ ? ನಿನ್ನ ಅಪ್ಪಣೆ ಇಲ್ಲದೆ ನಾನು ಅಲ್ಲಿ ಹೋಗಿ ಮಾಡುವದಾದರೂ ಏನು ?”

“ವಿಜಯ ಸಂಪಾದಿಸುವದು”

“ನಾನು ನಿನ್ನ ಪ್ರೇಮಕ್ಕೆ ಪಾತ್ರನಾಗಿರುವೆನೆಂದು ಆಶ್ವಾಸನ ಕೊಟ್ಟೆಯಾದರೆ ಅದೇ ಸ್ಫೂರ್ತಿಯಿಂದಲೇ ಯುದ್ಧ ಮಾಡಿ ವಿಜಯಿಯಾಗಿ ಬಂದು ನಿನ್ನ ಪಾಣಿಗ್ರಹಣ ಮಾಡುವೆ” ಎಂದು ಅವಳ ಬಿಂಬಾಧರವನ್ನು ಚುಂಬಿಸ ಹೋದನು.

“ವಿಧಿಯುಕ್ತ ಪಾಣಿಗ್ರಹಣದ ನಂತರವೇ ಅಧರ ರಸಕ್ಕೆ ಮಾಧುರ್ಯ ಬರುವದುಂಟು” ಎಂದು ಶಹಜಾದೆ ತನ್ನ ಮೋರೆ ತಿರುವಿದಳು.

“ಈ ನಿನ್ನ ಒಯ್ಯಾರವೇ ನಿನ್ನ ಸಮ್ಮತಿ ಅಲ್ಲವೇ ಶಹಜಾದೆ ? ನನ್ನ ಜೀವನವು ಸಾರ್ಥಕವಾಯಿತು. ದೈವಾನುಕೂಲವಿದ್ದರೆ ನಿನ್ನೊಡನೆ ಮಯೂರಾಸನವನ್ನೇರಿ ನ್ಯಾಯದಿಂದ ರಾಜ್ಯ ಪರಿಪಾಲನೆ ಮಾಡುವೆನು ?

“ಅದು ದೈವವಿದ್ದರೆ ಆಗುವದು ! ಆದರೆ ನಿಮ್ಮಲ್ಲಿ ನನ್ನ ಪ್ರೇಮ ನಿಶ್ಚಲವಾಗಿರುವದು. ನೀವು ವಿವಾಹವಾಗದಿದ್ದರೆ ನಾನು ಆಜನ್ಮ ಅವಿವಾಹಿತೆಯಾಗಿ ಇರುವೆನು.”

ವ್ಹಾಃ ಎಂದು ಸುಲೇಮಾನ ಉದ್ರೇಕದಿಂದ ಆ ಸುಂದರಿಯನ್ನು ಅಪ್ಪಿ ಚುಂಬಿಸಿದನು.

“ವ್ಯಾಘ್ರನಂಥ ಸುಜಾ ಸುಲ್ತಾನರೊಡನೆ ಯುದ್ಧ. ಎಚ್ಚರವಿರಲಿ. ನಿಮ್ಮ ಖಡ್ಗಕ್ಕೆ ಅಖಂಡ ವಿಜಯವಿರಲಿ” ಎಂದು ನುಡಿಯುತ್ತ ಆ ಲಲನೆ ಚುಂಗನೆ ಒಳಸಾರಿ ಬಿಟ್ಟಳು.

ಎಲ್ಲರಿಗಿಂತಲೂ ಮುಂಚಿತವಾಗಿ ಆಗ್ರಾ ಪಟ್ಟಣವನ್ನು ವಶಪಡಿಸಿಕೊಳ್ಳಬೇಕೆಂದು ಸುಜಾನು ತನ್ನ ಸೈನ್ಯದೊಡನೆ ದ್ರುತಗತಿಯಿಂದ ಆಗ್ರಾದತ್ತ ಸಾಗಿ ಬರುತ್ತಿದ್ದನು. ತಾನು ದಿಲ್ಲಿ ಬಾದಶಹನಾದ ನಂತರ ಸರದಾರರಿಗೆಲ್ಲ ದೊಡ್ಡ ದೊಡ್ಡ ಉಂಬಳಿಗಳನ್ನು ಕೊಡುವದಾಗಿ ಹೇಳಿದ್ದರಿಂದ ಅವರೆಲ್ಲರೂ ಬಹಳೇ ಉತ್ಸಾಹದಿಂದ ಸಾಗಿ ಬಂದಿದ್ದರು. ಯುದ್ಧವಾದರೆ ಆಗ್ರಾ ಪಟ್ಟಣದ ಸಮೀಪ

ಅಲಹಾಬಾದದಿಂದ ಪೂರ್ವಕ್ಕೆ ಎರಡು ಹರದಾರಿ ಪೂರ್ವದಲ್ಲಿ ಸುಜಾ ಬೀಡು ಬಿಟ್ಟಾಗ ದಾರಾಪುತ್ರ ಸುಲೇಮಾನನೂ ಸೈನ್ಯ ಸಮೇತನಾಗಿ ಸಮೀಪದಲ್ಲಿಯೆ ಬೀಡು ಬಿಟ್ಟಿರುವ ಸುದ್ದಿಯು ಆತನಿಗೆ ಗೂಢಚಾರರಿಂದ ತಿಳಿಯಿತು. ಜಯಸಿಂಗ, ದಿಲೇರಖಾನರಂಥ ಪರಾಕ್ರಮಿಗಳು ಆತನ ಸಹಾಯಕ್ಕಿದ್ದಾರೆಂದು ಸುಜಾನಿಗೆ ತಿಳಿದ ಕೂಡಲೆ ಆತನು ಹತಾಶನಾದನು. ಆದರೂ ಒಂದು ಕೈ ನೋಡಿಯೆ ಬಿಡಬೇಕು ಎಂದು ಸುಜಾ ನಿರ್ಧರಿಸಿದ.

ಅಲ್ಲಿ ನಡೆದ ತುಮುಲ ಸಂಗ್ರಾಮದಲ್ಲಿ ಸುಲೇಮಾನನ ಸೈನ್ಯದ ಪ್ರತಾಪದೆದುರು ಸುಜಾನ ಸೈನ್ಯ ದಿಕ್ಕಾಪಾಲಾಗಿ ಹೋಯಿತು. ಆತನೂ ಓಡಿ ಹೋಗಿ ತನ್ನ ಬಂಗಾಲ ಪ್ರಾಂತವನ್ನು ಸೇರಿಕೊಂಡ. ವೈರಿಗಳನ್ನು ಬೆನ್ನಟ್ಟಬೇಕೆಂದು ಸುಲೇಮಾನನು ಜಯಸಿಂಗ, ದಿಲೇರಖಾನರನ್ನು ಒತ್ತಾಯಪಡಿಸಿದರೂ ಅವರು ಸಮ್ಮತಿಸಲಿಲ್ಲ. ರಾಜಧಾನಿಯಲ್ಲಿ ಇದಕ್ಕಿಂತ ಅವಸರದ ಕೆಲಸಗಳು ಕಾದು ಕುಳಿತಿವೆ, ಶತ್ರುವು ಸೋತು ಪಲಾಯನ ಮಾಡಿದ್ದಾನೆ ಎಂದು ಅವರು ಹೇಳಿ ತಮ್ಮ ಸೈನ್ಯಕ್ಕೆ ವಿಶ್ರಾಂತಿ ಬೇಕೆಂದು ಅಲ್ಲಿಗೆ ತಳವೂರಿದರು.

*

ಸುಜಾನ ಪಾರುಪತ್ಯಕ್ಕಾಗಿ ದೊಡ್ಡ ಸೈನ್ಯದೊಂದಿಗೆ ಸುಲೇಮಾನ, ಜಯಸಿಂಗ, ದಿಲೇರಖಾನ ಮುಂತಾದವರು ಅಲಹಾಬಾದದ ಕಡೆಗೆ ತೆರಳಿದ ಸುದ್ದಿ ತಿಳಿದ ಕೂಡಲೆ ಔರಂಗಜೇಬನು ಬರ್ಹಾನಪುರದಲ್ಲಿ ಮುರಾದನನ್ನು ಭೆಟ್ಟಿಯಾಗಿ ದಿಲ್ಲಿಯ ಮೇಲೆ ದಾಳಿಯಿಡಲು ಇದೀಗ ಸುಸಮಯ ಎಂದು ಕಿವಿಯೂದಿದನು. ಆದರೆ ತಾವು ಆಗ್ರಾದತ್ತ ಹೊರಟ ಸುದ್ದಿ ಕೇಳಿ ದಾರಾ–ಸುಜಾ ಒಂದಾದರೆ ತಮಗೇನು ಉಳಿಗಾಲವಿಲ್ಲ ಎಂಬ ಸಂದೇಹ ಔರಂಗಜೇಬನಲ್ಲಿ ಮೂಡದಿರಲಿಲ್ಲ.

ಈ ಚಿಂತೆಯಲ್ಲಿ ಒಂದೆರಡು ದಿನ ಕಳೆಯುವದರೊಳಗಾಗಿ ಒಬ್ಬ ದೂತನು ಸುಜಾನ ಪರಾಜಯದ ಸುದ್ದಿ ತಂದನು. ಆಗ ಔರಂಗಜೇಬನು "ಮುರಾದ, ನೀನು ದಿಲ್ಲಿ ಸಾರ್ವಭೌಮನಾಗುವದು ಖಚಿತವಾದಂತಾಯಿತು" ಎಂದು ಆತನನ್ನು ಉಬ್ಬಿಸಿ ಸುಜಾನ ಪರಾಭವ ವೃತ್ತಾಂತವನ್ನು ಆತನ ಕಿವಿಗೆ ಹಾಕಿದನು. ಅಲ್ಲದೆ ಉತ್ತರಕ್ಕೆ ಸೇನಾಸಮೇತ ಹೊರಟನು.

ಔರಂಗಜೇಬ–ಮುರಾದರ ಸೈನ್ಯಗಳು ಆಗ್ರಾದತ್ತ ಹೊರಟಿವೆ ಎಂಬ ಸಮಾಚಾರ ಶಹಾಜಹಾನನಿಗೆ ತಿಳಿದಾಗ ಅವರನ್ನು ನರ್ಮದೆಯ ದಕ್ಷಿಣದಲ್ಲಿಯೆ ತಡೆಯಲೆಂದು ಜಸವಂತಸಿಂಗ, ಕಾಸಿಮಖಾನರ ನೇತೃತ್ವದಲ್ಲಿ ದೊಡ್ಡ ದಂಡನ್ನು ಕಳಿಸಿದನು. ಅವರು ವಿರಾಮವಿಲ್ಲದೆ ಸಾಗಿ ನರ್ಮದೆಯ ಸಮೀಪ ಬಂದಾಗ ಔರಂಗಜೇಬ ಮುರಾದರು ಆ ನದಿಯನ್ನು ದಾಟುವ ವಿಚಾರದಲ್ಲಿದ್ದದ್ದು ಕಂಡು ಬಂದಿತು. ತಾವಾಗಿಯೆ ಮುಂದಾಗಿ ನದಿ ದಾಟಿ ಔರಂಗಜೇಬನ ಸೈನ್ಯ ಹೊಡೆದೋಡಿಸಬೇಕು ಎಂದು

ಜಸವಂತಸಿಂಗನಿತ್ತ ಸಲಹೆಯನ್ನು ಕಾಸಿಮ್ ಖಾನನು ಒಪ್ಪಿಕೊಳ್ಳದೆ ಅವರನ್ನು ನದಿ ದಾಟದಂತೆ ತಡೆದರೆ ಸಾಕು, ನಮ್ಮ ಕರ್ತವ್ಯ ಮಾಡಿದಂತಾಗುವುದು ಎಂದು ಉತ್ಸಾಹಭಂಗ ಮಾಡಿದನು.

ಯಾರು ಮುಂದಾಗಿ ನದಿ ದಾಟುವರು ಎಂಬ ಮೀನ ಮೇಷದಲ್ಲಿ ಒಂದೆರಡು ದಿನ ಕಳೆಯಲು ಮುರಾದನು ಕ್ರುದ್ಧನಾಗಿ ಇಂದು ನದಿ ದಾಟಿಯೇ ಬಿಡುವದು ಎಂದು ನಿರ್ಧರಿಸಿ ತನ್ನ ಆಯ್ದ ಸೇನೆಯೊಡನೆ ನದಿಯಲ್ಲಿ ಧುಮಕಿ. ಹಾರಿ ಬರುತ್ತಿದ್ದ ಮದ್ದುಗುಂಡುಗಳನ್ನು ಲೆಕ್ಕಿಸದೆ ಆಚೆಯ ದಡ ತಲುಪಿದನು. ಆಗ ಅಲ್ಲಿದ್ದ ಕಾಸಿಮಖಾನನು ಹೇಡಿಯಂತೆ ಪಲಾಯನ ಮಾಡಿದನು. ಜಸವಂತ ಸಿಂಗನ ಸೇನೆಯನ್ನು ಔರಂಗಜೇಬ- ಮುರಾದರು ಕೊಚ್ಚಿ ಹಾಕಿದರು. ಆತನೂ ತನ್ನ ಕಾಲಿಗೆ ಬುದ್ಧಿ ಹೇಳಬೇಕಾಯಿತು.

ಇತ್ತ ಇನ್ನೂ ಅಲಹಾಬಾದದ ಹತ್ತಿರ ಬೀಡು ಬಿಟ್ಟಿದ್ದ ಸುಲೇಮಾನನಿಗೆ ಔರಂಗಜೇಬ- ಮುರಾದರು ನರ್ಮದೆಯನ್ನು ದಾಟಿ ಆಗ್ರಾದತ್ತ ಹೊರಟಿರುವ ಸಂಗತಿ ಮಹಬೂಬನ ಅಪ್ಪನೋರ್ವನಿಂದ ತಿಳಿಯಿತು. "ಇದೇನು ನಿಮ್ಮ ತರುಣ ಅಪ್ಪನು ನಿಮ್ಮ ತಂಗಿಯ ರೂಪವನ್ನೇ ಹೊತ್ತಿದ್ದಾನಲ್ಲ" ಎಂದು ಸುಲೇಮಾನ ಚೇಷ್ಟೆ ಮಾಡಿದಾಗ, "ಮಿತ್ರಾ, ಅದೇನೇ ಇರಲಿ, ಈತ ತಂದ ಸುದ್ದಿ ಮಾತ್ರ ಮಹತ್ವದ್ದಿದೆ. ಸ್ವತಃ ಬೇಗಮ್ ಸಾಹೇಬರೇ ಸಂದೇಶ ಕಳಿಸಿದ್ದಾರೆ. ದಾರಾರಿಗೆ ಈಗ ಸಹಾಯಕ್ಕಾಗಿ ನಾವು ಹೋಗಬೇಕಲ್ಲವೆ ?" ಎಂದು ತಿಳಿಹೇಳಿದ.

ದಾರಾಶಹಾರಿಗೆ ನೆರವಾಗಲು ತಾವೆಲ್ಲ ಕೂಡಲೇ ಆಗ್ರಾಕ್ಕೆ ಹಿಂತಿರುಗಬೇಕೆಂಬ ಸಲಹೆಯನ್ನು ಜಯಸಿಂಗ, ದಿಲೇರಖಾನರೆದುರಿಗೆ ಇಡಲಾಗಿ ಅವರೆಲ್ಲ ಒಪ್ಪಲಿಲ್ಲ. ಸುಜಾನೊಂದಿಗಿನ ಯುದ್ಧದಲ್ಲಿ ನಮ್ಮ ಸೈನ್ಯ ದಣಿದು ಹೋಗಿದೆ, ಅದಕ್ಕೆ ವಿಶ್ರಾಂತಿ ಬೇಕು ಎಂಬ ನೆವ ಹೇಳಿ ಆಗ್ರಾಕ್ಕೆ ಹೊರಡಲು ನಿರಾಕರಿಸಿದರು.

"ಮುಖ್ಯ ಸೇನಾಪತಿಯಾದ ನನ್ನ ಆಜ್ಞೆ ನೀವು ಪಾಲಿಸಬೇಕು" ಎಂದ ಸುಲೇಮಾನ.

"ಇದೋ ರಾಜಕುಮಾರಾ, ಬಾದಶಹರು ನನ್ನನ್ನು ಮುಖ್ಯ ಸೇನಾಪತಿಯನ್ನಾಗಿ ನೇಮಿಸಿದ್ದಾರೆ" ಎಂದು ದಿಲೇರಖಾನ ಬಾದಶಹರ ಆಜ್ಞಾಪತ್ರ ತೋರಿಸಿದ.

"ಇದು ಬಾದಶಹರ ಆಜ್ಞಾಪತ್ರವೇ? ನೀನೂ ಔರಂಗಜೇಬನ ಒಳಸಂಚಿನಲ್ಲಿ ಸೇರಿದೆಯಾ?" ಎಂದು ಸುಲೇಮಾನ ಅದನ್ನು ಕಿತ್ತುಕೊಂಡು ಗದ್ದರಿಸಲಾಗಿ ದಿಲೇರಖಾನ ಅಲ್ಲಿಂದ ಕಾಲ್ಕಿತ್ತ.

ಸುಲೇಮಾನನು ತನ್ನ ವಿಶ್ವಾಸಿಕರನ್ನಷ್ಟು ಕಟ್ಟಿಕೊಂಡು ಗಢವಾಲ ರಾಜ್ಯದಲ್ಲಿ ಹಾಯ್ದು ಆಗ್ರಾದತ್ತ ಸಾಗಿದ. ಆದರೆ ಅಲ್ಲಿಯ ಶ್ರೀನಗರ ಎಂಬಲ್ಲಿಗೆ ಬಂದಾಗ ಸುಲೇಮಾನ ಜ್ವರ ಗ್ರಸ್ತನಾಗಿ ಆ ಸಂಸ್ಥಾನಿಕನ ಆಶ್ರಯದಲ್ಲಿ ಉಳಿದುಕೊಳ್ಳಬೇಕಾಯಿತು. ಮಹಬೂಬನು ಆತನ ಜೊತೆಗೆ ಇದ್ದನು. ಆಗ್ರಾದಿಂದ ಬಂದಿದ್ದ ತರುಣ ಸರದಾರನೂ ಇದ್ದನು. ಆತನೇ ಸುಲೇಮಾನನ ಉಪಚಾರಕ್ಕೆ ನಿಂತಿದ್ದನು. ಆದರೆ ಸುಲೇಮಾನನ ಜ್ವರ ಬಿಡುವದರೊಳಗಾಗಿ ಆತ ಆಕೆಯಾಗಿದ್ದ. ಇಷ್ಟೇ ಅಲ್ಲ ಸುಲೇಮಾನನ ಶಹಜಾದೆಯಾಗಿದ್ದ. ಅಷ್ಟೇ ಸಂತೋಷ ಸುಲೇಮಾನನ ಪಾಲಿಗಿತ್ತು. ಕಾಯಿಲೆಯ ಮೂಲಕ ಆತನ ಕಾರಸ್ಥಾನಗಳೆಲ್ಲ ಸ್ಥಗಿತವಾದಂತಾಗಿದ್ದವು.

ಔರಂಗಜೇಬ- ಮುರಾದರು ವಿರಾಮ ಇಲ್ಲದೆ ಪಯಣಿಸುತ್ತ ಆಗ್ರಾದ ಹತ್ತಿರದ ಶಾಮು ನಗರ ಎಂಬಲ್ಲಿ ಬಂದು ಬೀಡು ಬಿಟ್ಟರು. ದಾರಾನೂ ಮುಂದಾಲೋಚನೆಯಿಂದ ಸೈನ್ಯ ಸಂಗ್ರಹಿಸಿದ್ದನು. ದಾರಾನ ಸೈನ್ಯವು ಬಲಿಷ್ಠವಾಗಿ ಯುದ್ಧಕಲೆಯಲ್ಲಿ ನುರಿತದ್ದಿದ್ದದ್ದರಿಂದ ಆತನಿಗೆ ವಿಜಯ ಸುಲಭವಾಗಿ ದೊರೆಯಬಹುದಾಗಿತ್ತು. ಆದರೆ ಔರಂಗಜೇಬನ ಮೇಲಿನ ಪ್ರೀತಿಯಿಂದ ಶಹಾಜಹಾನನು ಈ ಯುದ್ಧಕ್ಕೆ ಅನುಮತಿ ನೀಡದೆ ಕಾಲಹರಣ ಮಾಡಹತ್ತಿದನು. ಔರಂಗಜೇಬನೆಂದರೆ ಫಕೀರನೆಂದೇ ಬಾದಶಹ ಇನ್ನೂ ನಂಬಿದ್ದನು. ಬೇಗಮಳು

ಆತನ ಕಂಟಿಲ ಕಾರಸ್ಥಾನಗಳನ್ನೆತನ ತಂದೆಗೆ ಎಷ್ಟು ಬಿಡಿಸಿ ಹೇಳಿದರೂ ಆತ ನಂಬಲಿಲ್ಲ. ದೌರ್ಬಲ್ಯವೆಂಬ ಅಪಥ್ಯ ಸೇವಿಸಿದ ಶಹಾಜಹಾನನ ಬುದ್ಧಿ ಕೆಟ್ಟು ಹೋಗಿದ್ದಿತು. ಔರಂಗಜೇಬನಿಗೆ ದೈವವೇ ಅನುಕೂಲವಾಗಿದ್ದಿತು. ತಾನು ಗೋವಳಕೊಂಡದ ಕಾಣಿಕೆ ಒಪ್ಪಿಸಲು ಬಂದಿರುವದಾಗಿ ಔರಂಗಜೇಬನು ಸುದ್ದಿ ಹಬ್ಬಿಸಿ ಬಿಟ್ಟದ್ದರಿಂದ ಶಹಾಜಹಾನನಿಗೆ ಆತನ ಮೇಲೆ ಮೋಹ ಉಂಟಾಗಿದ್ದಿತು.

ಸ್ವತಃ ದಾರಾನೇ ಶಹಾಜಹಾನನ್ನು ಕಂಡು ಇನ್ನೆರಡು ದಿನ ಬಿಟ್ಟರೆ ಔರಂಗಜೇಬನು ಆಗ್ರಾಕ್ಕೆ ಮುತ್ತಿಗೆ ಇಕ್ಕುವನು ಎಂದು ಹೇಳಿದಾಗ,

"ದಾರಾ, ನೀನು ಯುದ್ಧಕ್ಕೆ ಹೋಗುತ್ತಿದ್ದರೆ ಹೋಗು, ಆದರೆ ಸೋತುಬಂದರೆ ನಿನ್ನ ಮುಖಾವಲೋಕನ ಕೂಡ ಮಾಡುವದಿಲ್ಲ" ಎಂದು ಅವಹೇಳನ ಮಾಡಿದನು.

ಯುದ್ಧವೇ ನಿಶ್ಚಿತವಾದಾಗ ಶಹಾಜಹಾನನು ತನ್ನ ಸರದಾರರಿಗೆ "ನೀವು ಯುದ್ಧ ಮಾಡಿರಿ, ಆದರೆ ಔರಂಗಜೇಬನಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಿರಿ" ಎಂದು ಎಚ್ಚರಿಕೆಯಿತ್ತನು.

ದಾರಾನು ವಿಲಂಬ ಮಾಡದೆ ಔರಂಗಜೇಬನನ್ನು ಶಾಮುನಗರದ ಬಳಿಯಲ್ಲಿ ಎದುರಿಸಿದನು. ಇಬ್ಬರ ಸೈನ್ಯಗಳೂ ಸಮಬಲವಾಗಿದ್ದವು. ಇಬ್ಬರೂ ಹುಟ್ಟುಕಲಿಗಳು. ಈ ಯುದ್ಧದಲ್ಲಿ ಜಯಾಪಜಯಗಳು ದೈವಾಧೀನ ಸಂಗತಿಗಳಾಗಿದ್ದವೇ ಹೊರತು ಅವರವರ ಪ್ರಯತ್ನಗಳಲ್ಲಿ ದೋಷವಿರಲಿಲ್ಲ.

ಅಂದಿನ ಘನಘೋರ ಯುದ್ಧವು-ಯಮರಾಯನಿಗೆ ರಸದೌತಣವಾಗಿತ್ತು. ಸ್ವತಃ ದಾರಾಶಿಕೋಹನು ಮುಡ್ಡಾನೆಯನ್ನೇರಿ ತನ್ನ ಸೈನಿಕರನ್ನು ಹುರಿದುಂಬಿಸುತ್ತ ಸಾಗಿದ್ದನು. ದಾರಾನ ರಭಸದ ಮುನ್ನಡೆಗೆ ಔರಂಗಜೇಬನ ಸೈನ್ಯ ತತ್ತರಿಸಿತು. ಖಲಿಲುಲ್ಲಾಖಾನ, ರಾಮಸಿಂಗ ರಾವಳರು ಔರಂಗಜೇಬನ ಸೇನೆಯನ್ನು ಹೊಕ್ಕು ಅವನ್ನು ನುಚ್ಚುನೂರಾಗಿಸಿದರು. ಅದೇ ಹುರುಪಿನಿಂದ ಇನ್ನೊಂದು ಪ್ರಹರ ಯುದ್ಧ ಸಾಗಿದ್ದರೆ ಔರಂಗಜೇಬನ ಇತಿಶ್ರೀಯಾಗಿ ಹೋಗುತ್ತಿತ್ತು.

ಆ ಸಮಯಕ್ಕೆ ಖಲಿಲುಲ್ಲಾಖಾನನು ದಾರಾನ ಹತ್ತಿರಕ್ಕೆ ಬಂದು, "ಖಾವಂದ, ವಿಜಯವು ನಮ್ಮದಾಗಿದೆ. ಇಂಥ ಸಮಯದಲ್ಲಿ ತಾವು ಆನೆಯ ಮೇಲೆ ಎತ್ತರದಲ್ಲಿ ಕುಳಿತಿರುವದು ಕ್ಷೇಮವಲ್ಲ. ಅಕಸ್ಮಾತ್ ಶತ್ರುಗಳ ಗುಂಡಿಗೆ ಆಹುತಿ ಆದೀರಿ. ಕಾರಣ ತಾವು ಈ ಕುದುರೆಯನ್ನೇರಿ ಬಿಡಾರಕ್ಕೆ ಹಿಂತಿರುಗಿರಿ" ಎಂದು ಆಗ್ರಹದಿಂದ ದಾರಾನನ್ನು ಕೆಳಗಿಳಿಸಿದ. ಇಷ್ಟೇ ಅಲ್ಲ, "ಯುವರಾಜರು ಮಡಿದರು" ಘಾತವಾಯಿತು "ಎಂದು ಬೊಬ್ಬೆ ಕುಟ್ಟುತ್ತ ಸೈನ್ಯದಲ್ಲೆಲ್ಲ ಹಾಹಾಕಾರ ಎಬ್ಬಿಸಿದನು; ಮತ್ತು ತನ್ನ ಸೈನ್ಯ ಕಟ್ಟಿಕೊಂಡು ಔರಂಗಜೇಬನ ಕಡೆಗೆ ಹೋಗಿಯೇ ಬಿಟ್ಟನು; ಯುದ್ಧದ ಮುಖವೇ ಬದಲಿಸಿತು. ಹೊಡೆತದಿಂದ ದಾರಾನ ಸೈನ್ಯ ಚಲ್ಲಾಪಿಲ್ಲಿಯಾಯಿತು.

ದಾರಾನೂ ದೈವದುರ್ವಿಪಾಕಕ್ಕೀಡಾಗಿ ಎಲ್ಲಿಗೋ ಪಲಾಯನ ಹೇಳಿದನು. ವಿಜಯಶ್ರೀಯು ಕೈಯಲ್ಲಿಯ ಮಾಲೆಯನ್ನು ಔರಂಗಜೇಬನು ಕಿತ್ತುಕೊಂಡು ತನ್ನ ಕೊರಳಿಗೆ ಹಾಕಿಕೊಂಡು ಮೆರೆದನು.

ವಿಜಯಿ ಔರಂಗಜೇಬನು ಮರುದಿನ ದರ್ಬಾರ ನಡೆಸಿದನು. ಆ ದರ್ಬಾರಕ್ಕೆ ಫಕೀರನ ವೇಷದಲ್ಲಿಯೇ ಬರಲು ಔರಂಗಜೇಬನು ತಪ್ಪಲಿಲ್ಲ. ಸರದಾರರೆಲ್ಲರ ಸಮ್ಮುಖದಲ್ಲಿ ಆ ಕಪಟಿಯು, "ಇಂದಿನಿಂದ ಮುರಾದಶಹರೇ ದಿಲ್ಲಿ ಬಾದಶಹರು. ಫಕೀರನಾದ ನನಗೆ ಯಾವ ಆಶೆಯೂ ಇಲ್ಲ. ಕಾಫರ ದಾರಾಶಹನಿಂದ ಸಾಮ್ರಾಜ್ಯವನ್ನು ಉಳಿಸಿದ ಸಮಾಧಾನ ನನಗೆ ಸಾಕು. ನೀವೆಲ್ಲ ಮುರಾದರನ್ನು ಓಲಗಿಸಬೇಕು" ಎಂದು ಭಾಷಣ ಮಾಡಿ ಮುರಾದನಿಗೆ ಮುಕುಟಧಾರಣ ಮಾಡಿಸಿದನು. ಆಗ ಮುರಾದನಿಗಂತೂ ಸ್ವರ್ಗ ಮೂರೇ ಗೇಣು ಉಳಿದಿತ್ತು!

ವಿಜಯೋನ್ಮಾದದಲ್ಲಿ ಅಂದು ರಾತ್ರಿ ಮುರಾದನು ಮದ್ಯ-ಮಾನಿನಿಯರ ಸಂಗದಲ್ಲಿ ಪ್ರಮತ್ತನಾದಾಗ ಔರಂಗಜೇಬನು ಏಕಾಕಿಯಾಗಿ ಆತನ ಡೇರೆಕ್ಕೆ ಹೋಗಿ ಧುತ್ತೆಂದು ಆತನೆದುರಿಗೆ ನಿಂತನು.

"ಹುಜೂರ, ಔರಂಗಜೇಬ ಸುಲ್ತಾನರು ಬಂದಿದ್ದಾರೆ" ಎಂದು ನರ್ತಕಿ ಮದ್ಯದ ಅಮಲಿನಲ್ಲಿದ್ದ ಮುರಾದನನ್ನು ಎಚ್ಚರಿಸಿದಳು.

"ಔರಂಗಜೇಬ, ಯಾರಾತ? ನನ್ನ ಕೈಕೆಳಗಿನ ಸುಭೇದಾರ. ಒಂದು ಹೂಜಿ ತುಂಬ ಸುರೆ ಸೇವಿಸಿ ಹೋಗಲೆಂದು ಹೇಳು" ಎಂದು ಬಡಬಡಿಸಿದ ಮುರಾದ.

ಔರಂಗಜೇಬನು ಮುಂದೆ ಬಂದವನೇ ಚಡಾವು ಗಾಲಿನಿಂದಲೇ ಆತನನ್ನು ಒದ್ದುಬಿಟ್ಟ.

"ಯಾರು, ಅಣ್ಣ! ಯಾಕೆ ಈ ಅಸಭ್ಯ ವರ್ತನೆ?"

"ಕಾಫರ್, ನೀನು ದಿಲ್ಲಿ ಸಿಂಹಾಸನಕ್ಕೆ ಯೋಗ್ಯನೇ? ಯಾರಲ್ಲಿ, ಸ್ತ್ರೈಣನಾದ ಈ ಹೇಡಿ ಬಾಲಕನನ್ನು ಬಂಧಿಸಿರಿ" ಎಂದು ಔರಂಗಜೇಬ ಗರ್ಜಿಸಿದ. ಸೈನಿಕರು ಬಂದು ಬಂಧಿಸುವದರೊಳಗಾಗಿ ಆತ ಔರಂಗಜೇಬನ ಕೈಯಲ್ಲಿಯ ಶಸ್ತ್ರ ಕಸಿದುಕೊಂಡಿದ್ದ. ಆದರೂ ಆ ದಾಂಡಿಗರು ಆತನನ್ನು ಕಟ್ಟಿ ಹಾಕಿದರು.

"ಔರಂಗಜೇಬ, ನನ್ನನ್ನು ಕೊಲ್ಲುವುದೇ ನಿನ್ನ ಇಚ್ಛೆ ಆಗಿದ್ದರೆ, ನನ್ನೊಡನೆ ಖಡ್ಗ ಯುದ್ಧಕ್ಕೆ ನಿಲ್ಲು"

"ನಾನೂ ಕಾದಾಡಬಲ್ಲೆ ಮುರಾದ. ಆದರೆ ವೃಥಾ ನಿನ್ನ ಜೀವವನ್ನು ಗಂಡಾಂತರಕ್ಕೀಡು ಮಾಡಬೇಡ" ಎಂದಂದು ಸೈನಿಕರಿಗೆ ಆತನನ್ನು ಬಂದೀಖಾನೆಗೆ ಒಯ್ಯಲು ಆಜ್ಞಾಪಿಸಿದ.

"ಔರಂಗಜೇಬ, ಫಕೀರನಂತೆ ನಟಿಸುತ್ತ ವಿಶ್ವಾಸಘಾತ ಮಾಡಿದೆ. ನನ್ನ ತಪ್ಪಾದರೂ ಏನು?"

"ನೀನು ಹುಚ್ಚ ಮುರಾದ. ರಾಜಕಾರಣವು ತಪ್ಪುತಡೆ ಹುಡುಕುವ ಗೋಜಿಗೆ ಹೋಗುವುದಿಲ್ಲ..." ಎಂದು ಅಟ್ಟಹಾಸ ಬೀರಿದ.

ಮುರಾದನ ಗತಿ ಮುಗಿಯಿತು.

ಹೀಗೆ ಯುದ್ಧದಲ್ಲಿ ವಂಚಿತನಾದ ದಾರಾಶಹಾನು ಆಗ್ರಾಕ್ಕೆ ಹಿಂತಿರುಗಿ ತನ್ನ ಪಕ್ಷವನ್ನು ಬಲಪಡಿಸಿಕೊಳ್ಳಬೇಕೆಂದು ಆಲೋಚಿಸಿ ಅತ್ತ ಧಾವಿಸಿದನು. ಆದರೆ ಔರಂಗಜೇಬನ ವಿಜಯ ವಾರ್ತೆಯು ದಾರಾಶಹಾನಿಗಿಂತ ಮುಂಚಿತವಾಗಿಯೆ ಆಗ್ರಾಕ್ಕೆ ಬಂದು ತಲುಪಿತ್ತು. ಆದರಿಂದ ರಾಜಧಾನಿಯಲ್ಲಿದ್ದವರು ಹೆಚ್ಚಾಗಿ ಔರಂಗಜೇಬನ ಕಡೆಗೆ ಒಲಿಯುವಂತಾಯಿತು. ಗೆದ್ದೆತ್ತಿನ ಬಾಲ ಹಿಡಿಯುವವರೇ ಹೆಚ್ಚಾಗಿದ್ದ ಅಂದಿನ ಕಾಲದಲ್ಲಿ ಇದೇನೂ ವಿಶೇಷವಾಗಿರಲಿಲ್ಲ.

ಆಗಿನ ಕಾಲದ ರಾಜ್ಯ ವ್ಯವಸ್ಥೆಯನ್ನು ನಿರೀಕ್ಷಿಸಲಾಗಿ ಇಡೀ ಸಾಮ್ರಾಜ್ಯದಲ್ಲೆಲ್ಲ ಬಾದಶಹನೊಬ್ಬನೇ ಒಬ್ಬನು. ಉಳಿದವರೆಲ್ಲ ಆತನ ಕೇವಲ ಇಚ್ಛಾನುವರ್ತಿಗಳೇ ಹೊರತಾಗಿ ಅವರಿಗೆ ಸ್ವತಂತ್ರ ಅಸ್ತಿತ್ವವಿರಲಿಲ್ಲ. ಪ್ರಜೆಗಳಿಗೆ ಸ್ವತ್ವ, ಅಧಿಕಾರಾದಿಗಳೇನೂ ಇದ್ದಿಲ್ಲ. ರಾಜನು ಸ್ವಾರ್ಥಪರಾಯಣನಾಗಿರುವಂತೆ ಪ್ರಜರೂ ಸ್ವಾರ್ಥಪರಾಯಣರು. ಅಕಬರನು ಗುಣಪಕ್ಷಪಾತಿಯಾಗಿದ್ದರಿಂದ ಆತನ ಪ್ರಜೆಗಳಲ್ಲಿಯೂ ಅವೇ ಗುಣಗಳು ಕೆಲವಂಶದಲ್ಲಿ



ಶೀಘ್ರ ಉಪಶಮನಕ್ಕೆ ಪ್ರಭಾವಶಾಲಿ ಹಾಗೂ ವಿಶ್ವಾಸಾರ್ಹವಾದ ಅನಾಸಿನ್ ತೆಗೆದುಕೊಳ್ಳಿರಿ.

ಪ್ರಭಾವಶಾಲಿ: ಅನಾಸಿನ್ ನೋವನ್ನು ಶೀಘ್ರವಾಗಿ ಉಪಶಮನಗೊಳಿಸುತ್ತದೆ. ಏಕೆಂದರೆ ಅದರಲ್ಲಿ ಜಗತ್ತಿನಾದ್ಯಂತ ಡಾಕ್ಟರರು ಹೆಚ್ಚಾಗಿ ಶಿಫಾರಸು ಮಾಡುವ ವೇದನಾಹಾರಿ ಔಷಧಾಂಶ ಅಧಿಕ ಪ್ರಮಾಣದಲ್ಲಿದೆ.

ವಿಶ್ವಾಸಾರ್ಹ: ಡಾಕ್ಟರರ ವಿಶ್ವಸನೀಯ ಔಷಧದಂತೆ ಅನಾಸಿನ್ ಔಷಧಗಳ ಸಂಯೋಜನೆಯಾಗಿದೆ. ಆದ್ದರಿಂದಲೇ ಲಕ್ಷೋಪಲಕ್ಷ ಜನರು ಅನಾಸಿನ್ ತೆಗೆದುಕೊಳ್ಳುತ್ತಾರೆ ಮತ್ತು ಅದನ್ನು ಶಿಫಾರಸು ಮಾಡುತ್ತಾರೆ.

ಶೀತ ಮತ್ತು ಫ್ಲೂವಿನಿಂದ ಉಂಟಾಗುವ ನೋವು, ತಲೆನೋವು, ಬೆನ್ನುನೋವು, ಸ್ನಾಯುನೋವು ಮತ್ತು ಹಲ್ಲುನೋವುಗಳಿಗೆ ಅನಾಸಿನ್ ಪರಿಣಾಮಕಾರಿಯಾಗಿದೆ.

ಪ್ರಭಾವಶಾಲಿ ಹಾಗೂ ವಿಶ್ವಾಸಾರ್ಹವಾದ

ಅನಾಸಿನ್

ಭಾರತದ ಅತ್ಯಂತ ಜನಪ್ರಿಯ ವೇದನಾಹಾರಿ

ಯಾದರೂ ಕಂಡು ಬಂದವು. ಜಹಾಂಗೀರ, ಶಹಾಜಹಾನರು ದುಂದುಗಾರರಾದರೆ ಅವರ ಪ್ರಜರೂ ಹಾಗೇ ಇದ್ದರು. ಔರಂಗಜೇಬನು ಕಪಟಿಯೂ ಸ್ವಾರ್ಥಿಯೂ ಆಗಿರಲು ಆತನ ಪ್ರಜರಲ್ಲಿಯಾದರೂ ಅವೇ ಗುಣಗಳಿಗೆ ಕೊರತೆ ಇರಲಿಲ್ಲ. ವಿಶೇಷವೇನು, ಆಗಿನ ಕಾಲದಲ್ಲಿ ಭಾರತದಲ್ಲಿ ರಾಷ್ಟ್ರೀಯ ಗುಣವೆಂಬುದು ಅಶ್ರುತವಾದ ಮಾತಾಗಿತ್ತು. ಸಾಮ್ರಾಜ್ಯದ ಉಚ್ಛ್ರಯ ಸುಸ್ಥಿತಿಗಳಿಗಿಂತಲೂ ಆಂತಃಕಲಹ ಅರಾಜಕತೆಗಳೇ ಅನೇಕರಿಗೆ ಇಷ್ಟವಾಗಿದ್ದವೆಂದು ಹೇಳಿದರೂ ವಿಶೇಷವಾದ ತಪ್ಪಾಗಲಿಕ್ಕಿಲ್ಲ.

ಶಹಾಜಹಾನನು ದಾರಾನ ಪಕ್ಷಪಾತಿ ಎಂಬುದನ್ನು ಔರಂಗಜೇಬ ಅರಿತಿದ್ದ. ಅವರ ಭೆಟ್ಟಿಯಾಗಗೊಡಬಾರದೆಂದೂ ಹವಣಿಕೆ ಹಾಕುತ್ತಿದ್ದ. ಔರಂಗಜೇಬ ಪಕ್ಷಪಾತಿಗಳಾದ ಶಾಯಿಸ್ತೇಖಾನ ಮುಂತಾದವರು ಶಹಾಜಹಾನನ ಕಿವಿ ಊದಲಿಕ್ಕೆ ಪ್ರಾರಂಭಿಸಿದ್ದರು. ದಾರಾನನ್ನು ಆಗ್ರಾದಲ್ಲಿ ಇಟ್ಟುಕೊಂಡಿದ್ದೇ ಆದರೆ—ಔರಂಗಜೇಬನು ಆಗ್ರಾಕ್ಕೆ ಮುತ್ತಿಗೆ ಹಾಕಿ ರಾಜಧಾನಿಯನ್ನು ಧೂಳೀಪಟ ಮಾಡುವನು ಎಂದು ಇವರು ಶಹಾಜಹಾನನ್ನು ಹೆದರಿಸಹತ್ತಿದ್ದರು. ಈಗ ದಾರಾನಿಗೆ ಆಶ್ರಯ ಕೊಡದಿದ್ದರೆ ಆತನ ಸರ್ವನಾಶ ಮಾಡಿದಂತಾಗುವದೆಂದು ಬೇಗಮಳು ತನ್ನ ತಂದೆಗೆ ದುಂಬಾಲ ಬಿದ್ದಿದ್ದಳು. ಆ ಸ್ಥಿತಿಯಲ್ಲಿ ಶಹಾಜಹಾನನು ಮುಂಗಾಣದವನಾಗಿದ್ದನು. ಆಗ್ರಾದ ಸಮೀಪಕ್ಕೆ ಬಂದ ದಾರಾನಿಗೆ ತಾನು ತನ್ನ ತಂದೆಯ ಭೆಟ್ಟಿಗೆ ಹೋಗುವದೊ ಬೇಡವೋ ಎಂಬ ಸಂದೇಹವೂ ಕಾಡತೊಡಗಿತ್ತು. ಇಂಥ ಹೊತ್ತಿನಲ್ಲಿ "ಯುದ್ಧದಲ್ಲಿ ಸೋತು ಬಂದದ್ದಕ್ಕೆ ಬಾದಶಹರು ನಿನ್ನ ಮೇಲೆ ಮುನಿದಿದ್ದಾರೆ. ನೀನು ಹೊರಗೇ ಸಹಾಯ ಪಡೆದುಕೊಂಡು ದೈವ ಪರೀಕ್ಷೆ ಮಾಡಿಕೊಳ್ಳುವದು ಉತ್ತಮ" ವೆಂದು ಶಾಯಿಸ್ತೇಖಾನನ ಹಸ್ತಕರು ದಾರಾನಿಗೆ ತಿಳಿಸಿದ್ದರಿಂದ ನಿರಾಶೆಯಿಂದ ಆತ ನಿರುಪಾಯನಾಗಿ ಲಾಹೋರದ ಕಡೆಗೆ ಪ್ರಯಾಣಿಸಿದ.

ಔರಂಗಜೇಬನು ಆಗ್ರಾಕ್ಕೆ ಬಂದ. ಹೊರವಲಯದಲ್ಲಿಯೆ ಬೀಡು ಬಿಟ್ಟ. ದಾರಾ ಆಗ್ರಾದಿಂದ ತೊಲಗಿದ್ದು ಕೇಳಿ ಆತನಿಗೆ ಆನಂದವಾಯಿತು. ಶಾಯಿಸ್ತೇಖಾನ, ರೋಶನಾರಾ, ದಾನಿಶಮಂದ ಮೊದಲಾದವರನ್ನು ಕರೆಸಿಕೊಂಡು ಆಪ್ತಾಲೋಚನೆ ಮಾಡಿದ ಬಳಿಕ ಬಾದಶಹನೊಂದಿಗೆ ತಾನು ಹೇಗೆ ವರ್ತಿಸಬೇಕು ಎಂಬುದನ್ನು ನಿರ್ಣಯಿಸಿಕೊಂಡ. ಬಣಜಿಗನಾಗಲಿ, ಕಾರ್ಯಸಾಧುವಾಗಲಿ ಉದ್ದಾಮನಾಗಿ ವರ್ತಿಸಿದರೆ ಅದರಿಂದ ಹಿತವಾಗದೆ ಹಾನಿಯಾಗುವ ಸಂಭವವಿರುವದು. ಅದಕ್ಕಾಗಿ ಆ ಸ್ವಕಾರ್ಯಸಾಧುವರ್ಯನು ಶಹಾಜಹಾನ


ಓ, ಸಾಠೆ
ಮಾಲ್ಟೆಕ್ಸ್ ಇಷ್ಟು
ರುಚಿಕರವಾಗಿರಲೇ
ಬೇಕು
ಅದರಲ್ಲಿ ಮಾಲ್ಟ್
ಇರುವುದರಿಂದ!
ತಾಜಾ, ಕುರುಕುರು ಅಲ್ಲದೇ ರುಚಿಯಲ್ಲಿ
ಅಪ್ರತಿಮ—ವ್ಹಾ!
ಈ ಬಿಸ್ಕಿಟ್‌ನ ಅಪ್ರತಿಮ ರುಚಿಗೆ ಅದರಲ್ಲಿರುವ
ಮಾಲ್ಟೇ ಕಾರಣ ಪಚನಕ್ಕೆ ಹಗುರ,
ಪೌಷ್ಟಿಕಾಂಶಗಳಿಂದ ತುಂಬಿದ ಮಾಲ್ಟೆಕ್ಸ್ ಬಿಸ್ಕಿಟ್
ಎಷ್ಟು ತಿಂದರೂ ಮತ್ತೆ ಮತ್ತೆ ತಿನ್ನಬೇಕೆನಿಸುತ್ತದೆ.
ಅದಕ್ಕೆ ಆ ಮಾಲ್ಟೇ ಕಾರಣ.
IS:1011
ಐ. ಯಸ್. ಐ. ಗುರುತಿರುವ
ಮಾಲ್ಟೆಕ್ಸ್ ಎಂದರೆ ಶ್ರೇಷ್ಠತೆಯ
ಖಾತ್ರಿ ನೀಡುವ ಬಿಸ್ಕಿಟ್
BISCUITS
ಸಾಠೆ
heros'·SBC-83A KAN

ನಿಗೆ, ತನಗೆ ವಿಜಯದ ಹೆಮ್ಮೆ ಇಲ್ಲವೆಂದೂ, ದಾರಾನ ಬಗೆಗೆ ಮಾತ್ಸರ್ಯ ಇಲ್ಲವೆಂದೂ ಬಾದಶಹರ ಇಚ್ಛೆ ತನಗೆ ಪ್ರಮಾಣವೆಂದೂ ಹೇಳಿ ಕಳಿಸಿದನು. ತನ್ನ ಸೈನ್ಯದ ವ್ಯವಸ್ಥೆ ಮಾಡಬೇಕಾಗಿರುವದರಿಂದ ಬಾದಶಹನ ದರ್ಶನಕ್ಕೆ ಬರಲು ಒಂದೆರಡು ದಿನ ತಡವಾಗಬಹುದು ಎಂದೂ ನಿರೋಪ ಕಳಿಸಲು ಆತ ಮರೆಯಲಿಲ್ಲ.

ಆ ಅವಧಿಯನ್ನು ಔರಂಗಜೇಬನು ಸುಲೇಮಾನನ ಸಹಕಾರಿಗಳಾದ ಜಯಸಿಂಗ, ದಿಲೇರಖಾನರನ್ನು ತನ್ನ ಕಡೆಗೆ ಮಾಡಿಕೊಳ್ಳುವ ಪ್ರಯತ್ನಕ್ಕಾಗಿ ಉಪಯೋಗಿಸಿದರೆ, ಔರಂಗಜೇಬನ ಮಗನಾದ ಶೂರ ಸುಲ್ತಾನ ಮುಹಮ್ಮದನನ್ನು ಬೇಗಮಳು ತನ್ನ ಕಡೆಗೆ ಒಲಿಸಿಕೊಳ್ಳುವ ಪ್ರಯತ್ನದಲ್ಲಿದ್ದಳು. ಔರಂಗಜೇಬನನ್ನು ತಪ್ಪಿಸಿ ಆತನಿಗೆ ಸಿಂಹಾಸನ ಕೊಡಿಸುವದಾಗಿ ಮುಹಮ್ಮದನಿಗೆ ಆಸೆ ತೋರಿಸಿದ್ದಳು. ಅತ್ತ ದಾರಾನಿಗೆ ಸಹಾಯವಾಗಲೆಂದು ಎರಡು ಒಂಟೆ ಭಾರ ಬಂಗಾರವನ್ನೂ ಕೆಲ ಸೈನಿಕರನ್ನೂ ಕಳಿಸಿದ್ದಳು. ಹೀಗೆ ರಾಜಧಾನಿಯಲ್ಲಿ ಗಂಟಿಗೆ ಗಂಟು, ಕುಯುಕ್ತಿಗೆ ಕುಯುಕ್ತಿಗಳು ನಡೆದಿದ್ದವು.

ಮುಹಮ್ಮದನು ಲಂಚರುಷವತ್ತುಗಳಿಂದ ತನ್ನ ಕೆಲಸವನ್ನು — ಅಂದರೆ ತಂದೆ ಔರಂಗಜೇಬನಿಂದ ಆಜ್ಞಾಪ್ತನಾದಂತೆ ಕೋಟೆಯ ಬೀಗದ ಕೈಗಳನ್ನು ವಶಪಡಿಸಿಕೊಳ್ಳುವ ಕೆಲಸವನ್ನು —ಅರ್ಧಕ್ಕರ್ಧ ಸಾಧಿಸಿದ್ದನು. ಬೀಗದ ಕೈಗಳು ಬಾದಶಹನ ವಶದಲ್ಲಿ. ಆದ್ದರಿಂದ ಕೋಟೆ ಕಾವಲುಗಾರರನ್ನು ಒಡಕೊಳ್ಳುವ ಪ್ರಯತ್ನದಲ್ಲಿ ಮುಂದುವರಿದಿದ್ದ. ಆಗಲೇ ಬೇಗಮಳು ಮುಹಮ್ಮದನಿಗೆ ಸಿಂಹಾಸನದ ಆಸೆ ತೋರಿಸಿದ್ದು. ಆತನೂ ವಿಚಾರಕ್ಕೆ ಬಿದ್ದಿದ್ದ.

ಹೀಗಿರಲು ಒಂದು ರಾತ್ರಿ ಔರಂಗಜೇಬನು ಶಸ್ತ್ರಪಾಣಿಯಾಗಿ ಮಗ ಮುಹಮ್ಮದನು ವಿಶ್ರಾಂತದಲ್ಲಿದ್ದಾಗ ಆತನ ಮನೆಯಲ್ಲಿಯೇ ಸಂಧಿಸಿದನು. ಸಿಂಹಾಸನ ಬೇಕಿದ್ದರೆ ತನ್ನನ್ನು ಕೊಂದು ಹಾಕಿ ಮಾರ್ಗ ನಿಷ್ಕಂಟಕ ಮಾಡಿಕೊಳ್ಳೆಂದೂ ಮಗನಿಗೆ ಗದ್ದರಿಸಿದನು. ಮಗನು ತಂದೆಯ ಕಾಲಿಗೆರಗಿ ತನ್ನ ಅಪರಾಧಕ್ಕಾಗಿ ಕ್ಷಮೆ ಕೇಳಿದನು.

ಮರುದಿನ ಮುಂಜಾನೆ ಶಹಾಜಹಾನನು ಸೇವಕನನ್ನು ಕೂಗಲಾಗಿ ಅಪರಿಚಿತ ಕಾವಲುಗಾರನೊಬ್ಬ ಬಂದು ನಿಂತ. 'ಯಾರು ನೀನು' ಎಂದು ಬಾದಶಹ ಕೇಳಲಾಗಿ "ಸುಲ್ತಾನ ಮುಹಮ್ಮದರ ಸೇವಕ" ಎಂದುತ್ತರಿಸಿದನು.

ಬಾದಶಹ ತನ್ನ ಮಗಳಾದ ಬೇಗಮಳನ್ನು ಕರೆದು ಈ ಹೊಸ ಕಾವಲುಗಾರನ ಬಗ್ಗೆ ಕೇಳಲಾಗಿ.

"ಹೌದು. ನಾವೆಲ್ಲ ಬಂದಿಗಳಾಗಿರುವೆವು. ಪಿತೃ ಭಕ್ತ ಔರಂಗಜೇಬನ ಕೃತಿ ಇದು" ಎಂದು ಆಕೆ ನುಡಿದಳು.

ದಾರಾನಿಗೆ ಸಹಾಯ ನೀಡಿದ್ದರೆ ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ ಎಂದು ಬಾದಶಹನ ಮನಸ್ಸಿನಲ್ಲಿ ಸುಳಿಯದೇ ಇರಲಿಲ್ಲ

"ಬೇಗಮ, ವೃದ್ಧಾಪ್ಯದಲ್ಲಿ ಇಂಥ-ಆಪತ್ತು ಪ್ರಾಪ್ತವಾಗಬಹುದೆ ?"

ಮುಕುಟ ಧಾರಣಮಾಡಿ ಸುಖಿಗಳಾದವರನ್ನು ಈ ಜಗತ್ತಿನಲ್ಲಿ ಕಾಣುವದು ದುರ್ಲಭ ಬಾಬರ, ಹುಮಾಯೂನ, ಅಕಬರ ಬಾದಶಹರೂ ಮುಕುಟಧಾರಣ ದೋಷಕ್ಕಾಗಿ ವಿಪರಿತ ಮನಸ್ತಾಪಕ್ಕೆ ಒಳಗಾಗಲಿಲ್ಲವೇ ? ನಿಮಗಿನ್ನು ಬಂದಿವಾಸದಲ್ಲಿಯೆ ಚಿತ್ತಶಾಂತಿ ಲಭಿಸಬೇಕು "

ಅಷ್ಟರಲ್ಲಿ ಸುಲ್ತಾನ ಮುಹಮ್ಮದನು ಬಿಚ್ಚುಗತ್ತಿ ಹಿಡಿದುಕೊಂಡೇ ಧುತ್ತೆಂದು ಅಲ್ಲಿ ಬಂದನು.

"ಏನು ಸಮಾಚಾರ ಸುಲ್ತಾನ ?'' ಎಂದು ಬೇಗಮ ಶುಷ್ಕಳಾಗಿ ಕೇಳಿದಳು.

"ಕೋಟೆಯ ಮಹಾದ್ವಾರದ ಬೀಗದ ಕೈಗಳನ್ನು ಮುತ್ತಾತರಿಂದ ಪಡೆಯಲೆಂದು ಬಂದಿದ್ದೇನೆ."

"ಬಾದಶಹರು ತಮ್ಮ ಮುಕುಟವನ್ನೇ ನಿನಗೆ ಕೊಡುವ ವಿಚಾರವು ನಿನಗೆ ರುಚಿಸಲಿಲ್ಲವೆಂಬುದು ತೋರುತ್ತದೆ ?"

"ನಮ್ಮ ಸಂಧಾನದ ವರ್ತಮಾನವು ಔರಂಗ

ಜೇಬನಿಗೆ ತಿಳಿದಿದೆ. ಈ ದಿನ ಆತನಿಗೆ ಬೇಗದ ಕೈಗಳು ದೊರೆಯದಿದ್ದರೆ ನನ್ನ ರುಂಡವನ್ನೇ ಹಾರಿಸುತ್ತಾನೆ."

"ಹೇಗಾದರೂ ಕಸಿದುಕೊಳ್ಳುವಿರಿ. ತೆಗೆದುಕೊ ಬೇಗದ ಕೈಗಳನ್ನು. ನಿನ್ನ ತಂದೆಯನ್ನು ಕಾಣುವ ಅಪೇಕ್ಷೆ ಅಧಿಕವಾಗಿದೆ. ಆತನಿಗೆ ತಿಳಿಸುವಿಯಾ?" ಎಂದು ಶಹಾಜಹಾನ ಬೇಗದ ಕೈಗಳನ್ನೆಸೆದ.

ಮುಹಮ್ಮದ ಅವನ್ನೆತ್ತಿಕೊಂಡು ಹೊರಟು ಹೋದ.

ಔರಂಗಜೇಬನಂತೂ ಬಾದಶಹನ ಭೆಟ್ಟಿಗೆ ಬರಲೇ ಇಲ್ಲ. ಪತ್ರವೊಂದನ್ನು ಮಾತ್ರ ಕಳಿಸಿದ.

"ದಾರಾಶಹಾನಿಂದಲೇ ಇದುವರೆಗಿನ ಅನರ್ಥಗಳು ಸಂಭವಿಸಿವೆ. ಆದ್ದರಿಂದ ನಾನು ಆತನನ್ನು ನಿಗ್ರಹಿಸಿದರೆ ನಿಮಗೂ ಸಾಮ್ರಾಜ್ಯಕ್ಕೂ ಅನುಕೂಲವೇ ಅಲ್ಲವೆ? ಅಲ್ಲದೆ ನೀವು ಆತನಿಗೆ ಧನಸಹಾಯ ನೀಡಿರುವದಾಗಿಯೂ ತಿಳಿದಿದೆ. ದಾರಾನ ಕಾರಣದಿಂದಲೇ ನಾನು ತಮ್ಮ ಪಾದಸೇವೆಗೆ ಇದುವರೆಗೆ ಎರವಾಗಬೇಕಾಗಿ ಬಂತಲ್ಲವೆ? ಆದ್ದರಿಂದ ದಾರಾನನ್ನು ನಿಗ್ರಹಿಸಿದ ನಂತರವೇ ನಿಮ್ಮ ಭೆಟ್ಟಿಗೆ ಬರುವೆ. ಅಲ್ಲಿಯ ವರೆಗೆ ಕಾರಾವಾಸದ ದುಃಖ ಸೈರಿಸಿಕೊಳ್ಳಬೇಕು" ಎಂಬುದೇ ಆ ಪತ್ರದ ಆಶಯವಾಗಿತ್ತು.

ಆ ಪತ್ರ ಶಹಾಜಹಾನನಿಗೆ ತಲುಪುವದರೊಳಗಾಗಿ ಬೇಗಮುಗಳನ್ನು ಆತನಿಂದ ಬೇರ್ಪಡಿಸಿದ್ದರು. ಔರಂಗಜೇಬನ ಪತ್ರ ಬಂದ ಕೂಡಲೇ ಶಹಾಜಹಾನನು ಅದನ್ನು ಓದಿ ತಪ್ತಾಂಗನಾಗಿ ವಿಷಜಂತುವೇನೊ ಎಂಬಂತೆ ಅದನ್ನು ಕಚಪಚನೆ ತುಳಿದುಬಿಟ್ಟನು.

"ಹಿಂದೂ ಜನರು ಸತ್ತ ಮೇಲಾದರೂ ಅವರ ಮಕ್ಕಳು ಅವರಿಗೆ ನೀರು ಕೊಡುತ್ತಾರೆ. ಅವರಿಗೆ ಕಾಫರ್ ಎನ್ನುವ ನೀನು ನಿನ್ನ ತಂದೆಯನ್ನೇ ನೀರಿಲ್ಲದೆ ಕೊಲ್ಲುವಿಯಾ" ಎಂದು ಸಂಕಟದಿಂದ ಆತ ಚಡಪಡಿಸಿದನು.

ಲಾಹೋರದ ಕಡೆಗೆ ಹೊರಟ ದಾರಾನಿಗೆ ಬೇಗಮುಗಳು ಕಳಿಸಿದ ಸಹಾಯ ತಲುಪಲಿಲ್ಲ. ಔರಂಗಜೇಬನ ಸುಸಜ್ಜಿತ ಸೈನ್ಯ ಮಾತ್ರ ಎದುರಾಯಿತು. ದಾರಾ ಮುಲ್ತಾನಮಾರ್ಗವಾಗಿ ಪಲಾಯನ ಹೇಳಿ ಟಟ್ಟಾಕೋಟೆಯಲ್ಲಿ ತಳವೂರಿದ. ಅಷ್ಟರಲ್ಲಿ ಬಂಗಾಲದಲ್ಲಿ ಮತ್ತೆ ಸುಜಾ ಬಂಡೆದ್ದುದರಿಂದ ಔರಂಗಜೇಬನು ಅತ್ತ ಧಾವಿಸಬೇಕಾಯಿತು. ಇದೇ ಸಮಯ ಎಂದು ದಾರಾನು ದಕ್ಷಿಣಕ್ಕೆ ಸಾಗಿ ಅಹಮ್ಮದಾಬಾದವನ್ನು ಹಿಡಿದುಕೊಂಡ. ಅಹಮ್ಮದಾಬಾದದಲ್ಲಿ ನೆಲೆಯೂರಿ ನಿಂತರೆ ಸುಲೇಮಾನ್ ಮತ್ತು ಜಸವಂತಸಿಂಗರು ನಮ್ಮನ್ನು ಸೇರುವರು. ಆಗ ಔರಂಗಜೇಬನನ್ನು ಎದುರಿಸಲು ಸಾಧ್ಯವಾದೀತು ಎಂದು ದಾರಾನ ಎಣಿಕೆ. ಅವನು ತನ್ನ ಸೈನ್ಯವನ್ನೂ ಬೆಳೆಸಿದನು.

ಔರಂಗಜೇಬನು ಮೀರಜುಮ್ಲಾ, ಮುಹಮ್ಮದ, ಜಯಸಿಂಗರನ್ನು ಕಟ್ಟಿಕೊಂಡು ಸುಜಾನನ್ನು ಎದುರಿಸಿ, ಆತನನ್ನು ಪರಾಭವಗೊಳಿಸಿ ತಳಭ್ರಷ್ಟನನ್ನಾಗಿಸಿದ. ದಿಕ್ಕೇಡಿಯಾಗಿ ಗುಡ್ಡಗಾಡುಗಳಲ್ಲಿ ಅಲೆಯುತ್ತಿದ್ದಾಗ ಆತನೂ ಆತನ–ಕುಟುಂಬದವರೂ ಗುಡ್ಡಗಾಡು ಜನರಿಗೆ ಬಲಿಯಾಗಿ ಹೋದರು.

ಈಗ ಔರಂಗಜೇಬನ ಪಕ್ಷಪಾತಿಯಾಗಿದ ಜಯಸಿಂಗ. ಆತನನ್ನು ಔರಂಗಜೇಬನು ತನ್ನ ಸ್ವಾರ್ಥಕ್ಕಾಗಿ ಚನ್ನಾಗಿಯೆ ಉಪಯೋಗಿಸಿಕೊಂಡ. ದಾರಾನ ಕಡೆಗಾಗಿದ್ದ ಜಸವಂತಸಿಂಗನಿಗೆ ಜಯಸಿಂಗನು ಪತ್ರ ಬರೆದು ವಿಜಯಿ ಔರಂಗಜೇಬನ ಮನಸು ಮುರಿದು ಹತಭಾಗ್ಯ ದಾರಾನ ಬೆನ್ನು ಕಟ್ಟಿ ನೀವೇನು ಸೌಭಾಗ್ಯ ಸೂರಿಯಬೇಕಾಗಿದೆ. ನೀವು ದಾರನ ಬೆನ್ನು ಕಟ್ಟಿದರೆ ನಿಮ್ಮ ನಾಶ ಖಂಡಿತ. ನಾನು ಹೇಳಿದರೆ ಸಾಕು. ಯಾವ ರಜಪೂತರೂ ನಿಮಗೆ ನೆರವಾಗಲಾರರು" ಎಂದು ಬೆದರಿಸಿದ. ಎಲ್ಲ ರಜಪೂತ ರಾಜರಿಗೂ ಆತ ಇದೇ ಆಶಯದ ಪತ್ರಗಳನ್ನು ಬರೆದಿದ್ದ.

ಜಸವಂತಸಿಂಗನನ್ನು ನಂಬಿಕೊಂಡು ದಾರಾಶಹಾ ರಾಜಸ್ಥಾನಕ್ಕೆ ಬಂದಿದ್ದ. ಜಯಸಿಂಗನ ಪತ್ರ ನೋಡಿ ರಜಪೂತ ಅರಸರೆಲ್ಲ ದಾರಾನನ್ನು ತ್ಯಜಿಸಿದರು. ಜಯಸಿಂಗನು ಔರಂಗಜೇಬನನ್ನು ಕರೆದುಕೊಂಡು ಸೈನ್ಯಸಮೇತ ದಾರಾನ ಎದೆಯ ಮೇಲೆ ಬಂದು ನಿಂತ. ಪಾಪ!



Thomas/DCM 15 g/kan

ದಾರಾಶಹನ ಪಕ್ಷದಲ್ಲೆಲ್ಲ ಒಳಗತ್ತರಿಯು. ಹೀಗಾಗಿ ಆ ಯುದ್ಧದಲ್ಲಿ ದಾರಾ ಸೋತು ಪಲಾಯನ ಹೇಳಬೇಕಾಯಿತು. ಅನನ್ಯ-ಗತಿಕನಾಗಿ ಅಲೆದಾಡುತ್ತ ತನ್ನ ಕುಟುಂಬದವರಿದ್ದ ಟಟ್ಟಾಕೋಟೆಗೆ ಬಂದ. ಅಲ್ಲಿಯ ಕಿಲ್ಲೇದಾರನೂ ಈತನಿಗೆ ವೈರಿಯಾಗಿದ್ದರಿಂದ ದಾರಾ ತನ್ನ ಕುಟುಂಬದವರನ್ನು ಕರೆದುಕೊಂಡು ಕಾಬೂಲ ಮಾರ್ಗ ಹಿಡಿದ. ದಾರಿಯಲ್ಲಿ ಔರಂಗಜೇಬನ ಹಸ್ತಕನೊಬ್ಬನ ಕೈಗೆ ಸಿಕ್ಕು ಬಿದ್ದು ಸೆರೆಯಾಳಾಗಿ ಆಗ್ರಾಕ್ಕೆ ತರಲ್ಪಟ್ಟ.

ದಾರಾನನ್ನು ಸೆರೆಮನೆಯಲ್ಲಿಟ್ಟು ಔರಂಗಜೇಬ ದಾರಾನ ವಿಚಾರಣೆಯ ನಾಟಕವನ್ನು ದರ್ಬಾರಿನಲ್ಲಿ ನಡೆಸಿದ. ಪಿತೃದ್ರೋಹಿ, ಪ್ರಜಾಂತಕ, ಕಾಫರ ಎಂದೆಲ್ಲ ಆರೋಪಗಳನ್ನು ಆತನ ಮೇಲೆ ಹೊರಿಸಲಾಯಿತು.

"ದಾರಾಶಹರೆಷ್ಟಾದರೂ ಔರಂಗಜೇಬ ಸುಲ್ತಾನರ ಸಹೋದರರು. ಉದಾರ ಯುವರಾಜ, ಶೂರ ಸೇನಾಪತಿ, ಕವಿ, ಪಂಡಿತ. ಅವರ ಧರ್ಮ ವಿಚಾರಗಳು ಮಾತ್ರ ಕಾಫರರಾದ ಹಿಂದುಗಳಂತೆ ಇದ್ದವು. ಆದರೆ ಕಾಫರರಿಗೆಲ್ಲ ದೇಹಾಂತ ಶಿಕ್ಷೆ ಆಗಬೇಕಾದರೆ ಪ್ರಜಾಜನರಲ್ಲಿ ಹತ್ತರಲ್ಲಿ ಒಂಬತ್ತು ಜನರನ್ನು ಕೊಂದು ಹಾಕಬೇಕಾದೀತು" ಎಂದು ದಾನಿಶಮಂದ ಬಕ್ಷಿ ದರ್ಬಾರದಲ್ಲಿ ನುಡಿದನು.

"ಆ ಕುಲಾಂಗಾರನು ಜೀವಂತ ಉಳಿಯಬೇಕೆ? ತಂದೆ, ತಂಗಿ, ಪ್ರಜರು ಎಲ್ಲರನ್ನು ಆತ ವಂಚಿಸಿದ್ದಾನೆ, ದ್ರೋಹ ಬಗೆದಿದ್ದಾನೆ. ನಿಮ್ಮ ಕೈಲಾಗದಿದ್ದರೆ ಹೇಳಿರಿ, ನಾನೇ ಹೋಗಿ ಆತನ ಶಿರಚ್ಛೇದ ಮಾಡುವೆ" ಎಂದು ರೋಶನಾರಾ ಗರ್ಜಿಸಿದಳು.

ಔರಂಗಜೇಬನಿಗೂ ಇದೇ ಬೇಕಾಗಿತ್ತು. ಕೂಡಲೇ ಆತ ಎದ್ದು ನಿಂತು,

"ಮಹನೀಯರೆ, ನಮ್ಮ ಪ್ರಿಯ ಬಂಧು ದಾರಾಶಹನಿಗೆ ದೇಹಾಂತ ಶಿಕ್ಷೆ ಆಗಬೇಕು ಎಂದು ದರ್ಬಾರದ ಅಭಿಪ್ರಾಯವಾಗಿದೆ. ನಿರುಪಾಯವಾಗಿ ನಾನೂ ಹಾಗೇ ಹೇಳಬೇಕಾಗಿದೆ. ರಾಜಕಾರಣ ಅಂಥದಾದದ್ದು. ತಂದೆ-ತಾಯಿ, ಬಂಧು-ಬಳಗ ಯಾರನ್ನೂ ನೋಡುವದಿಲ್ಲ. ದುಃಖಾರ್ತನಾದ ನಾನು ಹೆಚ್ಚಿಗೆ ಮಾತಾಡಲಾರೆ. ಪರಲೋಕದಲ್ಲಿಯಾದರೂ ನನ್ನ ಬಂಧುವಿಗೆ ಸದ್ಗತಿ ಸಿಗಲಿ" ಎಂದು ತೀರ್ಪನ್ನಿತ್ತ.

ದರ್ಬಾರದಲ್ಲಿಯೇ ದಾರಾಶಹಾನ ಶಿರಚ್ಛೇದ ಮಾಡಿಸಬೇಕೆಂದು ಔರಂಗಜೇಬನ ಮನೀಷೆಯಾಗಿದ್ದಿತು. ಆದರೆ ಆತನು ಮರಣ ದಂಡನೆಯ ತೀರ್ಪನ್ನು ಸಾರಿದ ಕೂಡಲೇ ರೋಶನಾರೆ ಪುಟಿದೆದ್ದು ನಿಂತು ದಾರಾನ ರುಂಡವನ್ನು ತಂದವರಿಗೆ ಈ ಕಂಠಿಯನ್ನು ಕೊಡುತ್ತೇನೆಂದು" ಕೂಗಿದಳು.

ಕ್ಷಣಾರ್ಧದಲ್ಲಿಯೇ ಸರದಾರರೀರ್ವರು ಹೋಗಿ ಬಂದೀಖಾನೆಯಲ್ಲಿ "ದಾರಾನ ಶಿರಚ್ಛೇದ ಮಾಡಿ ರುಂಡವನ್ನು ತಂದು ಔರಂಗಜೇಬನಿಗೆ ದರ್ಬಾರದಲ್ಲಿ ಒಪ್ಪಿಸಿದರು. "ಹಾಯ್, ದುರ್ದೈವಿಯೆ!" ಎಂದು ಔರಂಗಜೇಬನು ಎದ್ದು ಹೋದನು. ಸಭೆ ಅಲ್ಲಿಗೇ ಮುರಿಯಿತು.

ಈ ವಾರ್ತೆ ಕೇಳಿ ಶಹಾಜಹಾನನಂತೂ ಎದೆ ಒಡೆದುಕೊಂಡವನಾಗಿ ಹಾಸಿಗೆ ಹಿಡಿದು ಬಿಟ್ಟನು.

ದಾರಾಪುತ್ರ ಸುಲೇಮಾನನು ಶ್ರೀನಗರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದನಷ್ಟೇ. ಎಂಥ ಪ್ರಸಂಗದಲ್ಲಿಯೂ ಕೈಬಿಡುವದಿಲ್ಲ ಎಂದು ಶ್ರೀನಗರದ ರಾಜನು ಸುಲೇಮಾನನಿಗೆ ವಚನವಿತ್ತಿದ್ದನು. ಔರಂಗಜೇಬನ ಕಟಾಕ್ಷವು ಈಗ ಸುಲೇಮಾನನ ಮೇಲೆ ಬಿತ್ತು. ಶ್ರೀನಗರ ರಾಜ್ಯವು ಗುಡ್ಡಗಾಡು ಪ್ರದೇಶದಲ್ಲಿದ್ದದ್ದರಿಂದ ಇನ್ನೂ ಸ್ವತಂತ್ರವಾಗಿಯೇ ಉಳಿದಿತ್ತು. ಧೂರ್ತನಾದ ಔರಂಗಜೇಬನು ಅಲ್ಲಿಯ ಯುವರಾಜನನ್ನು ಒಲಿಸಿಕೊಳ್ಳಬೇಕು ಎಂದು ಯೋಚಿಸಿದನು ಹೇರಳ ಸಂಪತ್ತನ್ನು ಕೊಡುವದಾಗಿ ಹೇಳಿದನು. ಸುಲೇಮಾನನನ್ನು ಹಿಡಿದೊಪ್ಪಿಸಬೇಕೆಂದು ಅವರಲ್ಲಿ ಮಾತಾಯಿತು.

ಆ ವಂಚಕ ಯುವರಾಜನು ಒಂದು ರಾತ್ರಿ ಸುಲೇಮಾನನು ತಂಗಿದ್ದ ಮನೆಯ ಮೇಲೆ ದಾಳಿ ಮಾಡಿದನು. ವೀರ ಸುಲೇಮಾನನು ತನ್ನ ಹತ್ತೀ

ನೊಡನೆ ಹೋರಾಡಿ ಪಾರಾಗಿ ಆ ರಾಜ್ಯವನ್ನೇ ತ್ಯಜಿಸಿದನು. ಯುವರಾಜನು ತನ್ನ ಸೈನ್ಯ ಸಮೇತ ಆತನ ಬೆನ್ನು ಹತ್ತಿ ಹಿಡಿದು ಔರಂಗಜೇಬನಿಗೆ ಒಪ್ಪಿಸಿದನು.

ಮುಂದೆ ಒಂದಿನ ಸುಲೇಮಾನನ ವಿಚಾರಣೆಯ ನಾಟಕವೂ ನಡೆಯಿತು. ಸುಲೇಮಾನನು ಸಿಂಹ ಗಾಂಭೀರ್ಯದಿಂದ ದರ್ಬಾರದಲ್ಲಿ ನಡೆದು ಬರುತ್ತಿರುವದನ್ನು ಕಂಡು ದ್ರೋಹಿ ಸರದಾರರೆಲ್ಲ ಒಳಗೇ ನಡುಗಿದರು.

"ದಿಲ್ಲಿ ಸಾಮ್ರಾಜ್ಯ ವಿರುದ್ಧ ಬಂಡೆದ್ದದ್ದಕ್ಕಾಗಿ ನಿನ್ನ ವಿಚಾರಣೆಗೆಂದು ಈ ದರ್ಬಾರು ನೆರೆದಿದೆ. ನೀನಗೇನಾದರೂ ಹೇಳತಕ್ಕದ್ದಿದೆಯೇನು?" ಎಂದು ಔರಂಗಜೇಬನು ವಿಚಾರಿಸಿದನು.

"ಔರಂಗಜೇಬ ಕಾಕಾ, ಬಂಡುಗಾರನಿಗೆ ಶಾಸನ ವಿಧಿಸುವದಕ್ಕಾಗಿ ಈ ದರ್ಬಾರ ಕೂಡಿದ್ದರೆ ರಾಜದ್ರೋಹಿಗಳೂ ಪಿತೃದ್ರೋಹಿಗಳೂ ಬಂಡುಗಾರರೂ ಆದ ನಿಮಗೆ ನೂರಾರು ತಲೆಗಳಿದ್ದರೂ, ಅವುಗಳನ್ನೆಲ್ಲ ಚಟಚಟನೆ ಛೇದಿಸಿ ಚೆಂಡಾಡಿದರೂ ಪಾಪವು ತಟ್ಟದು" ಎಂದು ಸುಲೇಮಾನ ಗುಡುಗಿದನು.

"ಖಬರದಾರ ಸುಲೇಮಾನ, ನಿನ್ನ ನಾಲಿಗೆ ಕಡಿದು ಚಲ್ಲೇನು. ಎಚ್ಚರದಿಂದ ಮಾತಾಡು" ಎಂದು ಖಲಿಲುಲ್ಲಾಖಾನ ಬೆದರಿಸಿದನು.

"ಖಲೀಲ್, ಪಂಜರದಲ್ಲಿ ಸಿಕ್ಕ ಸಿಂಹನ ಮುಂದೆ ನಿನ್ನಂಥ ನರಿ ಬಾಲವನ್ನೆತ್ತಿ ಕೂಗಿದರೇನು ?"

ಉನ್ಮತ್ತನೆ." ದಯಾಮಯರಾದ ನಾವು ನಿನ್ನ ಹೇಳಿಕೆ ಕೇಳಿಕೊಂಡು ನಿನ್ನ ಅಪರಾಧದ ನಿರ್ಣಯ ಮಾಡಬೇಕೆಂದಿದ್ದರೆ, ನೀನು ದರ್ಬಾರದ ಅಪಮಾನ ಮಾಡಿರುವಿ ಇದೊಂದೇ ಅಪರಾಧಕ್ಕಾಗಿ ನಿನಗೆ ದೇಹಾಂತ ಶಿಕ್ಷೆ ಆಗಬೇಕು" ಎಂದು ಔರಂಗಜೇಬನು ನುಡಿದಾಗ ಎಲ್ಲ ಸರದಾರರೂ ಅನುಮೋದಿಸಿದರು,

"ನನ್ನ ರಕ್ತಪಾತ ನೋಡಿ ಕೃತಾರ್ಥರಾಗ ಬಯಸಿರುವ ಈ ನಿಮ್ಮ ಸರದಾರರನ್ನು ನಿರಾಶೆಗೊಳಿಸಬೇಡಿರಿ, ಔರಂಗಜೇಬ. ಕೊಲೆಗಡುಕರೂ ಬಂದಿದ್ದಾರೆ. ಇನ್ನು ತಡವೇಕೆ ?"

"ಜೀವದ ಹಂಗು ದೊರೆದು ನೀನು ಹೀಗೆ ಮಾತಾಡುವದು ಸಹಜ. ನಿನ್ನ ಇಚ್ಛೆ ಕೇಳಿಕೊಂಡು ನಾವು ನಿರ್ಣಯ ನೀಡಬೇಕೆಂದಿದ್ದೇವೆ"- ಎಂದು ಶಾಂತನಾಗಿ ನುಡಿದ ಔರಂಗಜೇಬ.

"ದುಶ್ಮನ್. ನನ್ನನ್ನು ಕೊಂದು ನಿನ್ನ ಪಾಪ ಪೂರ್ತಿಮಾಡಿಕೊಳ್ಳಬೇಕು ಎಂಬುದೇ ನನ್ನ ಇಚ್ಛೆ" ಎಂದ ಆತ.

ಔರಂಗಜೇಬನು ಈ ನುಡಿಕೇಳಿ ಸಂತಪ್ತನಾಗಿ, ಕರಕರನೆ ಹಲ್ಲು ಕಟೆದು ತನ್ನ ಖಡ್ಗವನ್ನು ಹಿರಿದು ಸುಲೇಮಾನನನ್ನು ಕೊಂದು ಹಾಕಬೇಕು ಎಂದು ಸಿಂಹಾಸನದಿಂದ ಹಾರಿಬಂದನು. ಆಗ ನಾರೀವೃಂದದಲ್ಲಿ ಯಾರೋ ಚಿಟ್ಟನೆ ಚೀರಿದ ಧ್ವನಿಯಾಗಿ ಓರ್ವ ತರುಣಿಯ ದೇಹವು ಔರಂಗಜೇಬನ ಕಾಲಬಳಿಯೆ ಬಿದ್ದಿತು.

ಸಭೆಯಲ್ಲೆಲ್ಲ ಹಾಹಾಕಾರ ! ಔರಂಗಜೇಬನು ಆ ಲಲನೆಯ ಮುಖಾವರಣವನ್ನು ತೆಗೆದು ನೋಡಿ "ಶಹರ್ಜಾದಾ ಬೇಗಂ" ಎಂದು ಉದ್ಗರಿಸಿದನು. ಆ ರುದ್ರರೂಪಿಯ ಮುಖವು ಭೀತಿಯಿಂದ ಮ್ಲಾನವಾಯಿತು. ಔರಂಗಜೇಬನ ಉದ್ಗಾರ ಕೇಳಿ ಸುಲೇಮಾನನೂ ಧಾವಿಸಿ ಆಕೆಯ ಶರೀರದ ಮೇಲೆ—ಬಿದ್ದು "ಇದೆಂಥ ಸಾಹಸ ಮಾಡಿದೆ ಶಹರ್ಜಾದಾ" ಎಂದು ಶೋಕಿಸುತ್ತ ಮೂರ್ಛೆಹೋದನು.

ಅಂದಿನ ದರ್ಬಾರು ಹೀಗೆ ಗೊಂದಲದಲ್ಲಿಯೇ ಮುರಿದು ಹೋಯಿತು. ಅಂದು ಔರಂಗಜೇಬನ ಇಚ್ಛಾಪೂರ್ತಿ ಆಗಲಿಲ್ಲ.

This magazine owned by the Karnataka Patrika Private Ltd. is printed & published by M. H. Belgaumkar at the Samyukta Karnatak Press, Koppikar Road, Hubli. Representatives: Bombay: V. S. Mani, Phone: 472794; Calcutta: H. Muzamdar: Phone: 46-4238; Madras: P. N. Srinivasan, Phone: 83748; New Delhi: P. R. Chopra, Phone: 224130.

Registered with the Registrar of Newspapers for India under No. 3633/57

